ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಜನವರಿ 16, 2013 ಪುಟ 20 ರೂ. 14/-


ಬೆಳಗಾವಿ ದಲಿತ ಸಾಹಿತ್ಯ ಸಮ್ಮೇಳನ




ಕತ್ತಲ ದಾರಿ ದೂರ




ಶಿರಸಿ ತೋಟಗಾರ್ಸ್ ಎಂಬ ಟೈಟಾನಿಕ್



ಕೆರೆಕಳ್ಳ




ಹೊಸ ಪಕ್ಷದ ಕಷ್ಟಗಳು



ಪಿರಮಿಡ್ ಒಳಗೆ ರೊಮ್ಯಾನ್ಸ್ ಬಾಬಾ

ನುಡೆಸ್ಸಾನ: CPM ಮೇಲೆ ಪೋಲೀಸ್ ಕ್ರೌರ್ಯ



·ಪಾರ್ವತೀಶ· ಬಿಡಿ ಚಿತ್ರಗಳು


ಚಿಮೂ-ಜಿ.ವೆಂಕಟಸುಬ್ಬಯ್ಯ

ಶಬ್ದಮಾಲಿನ್ಯ ಬ್ರಹ್ಮರು

ಶ್ರೀರಂಗಪಟ್ಟಣದಲ್ಲಿ ಟಿಪ್ಪೂ ಸುಲ್ತಾನ್ ಹೆಸರಿನಲ್ಲಿ ಒಂದು ವಿಶ್ವವಿದ್ಯಾಲಯ ಆರಂಭಿಸುವ ತಯಾರಿ ನಡೆದಿದೆ.


ಕೇಂದ್ರ ಸರ್ಕಾರದ, ಬಹಳ ಮುಖ್ಯವಾಗಿ ಸಚಿವ ರೆಹಮಾನ್ ಖಾನರ ಮುಂದೊಡಗಿನಿಂದ ಇದು ರೂಪು ತಳೆಯುತ್ತಿದೆ.

ಈ ಸುದ್ದಿ ಕೇಳಿ ಬಂದಾಗಿನಿಂದ ಚಿದಾನಂದಮೂರ್ತಿ ಇಲಿ ಪಾಷಾಣ ತಿಂದವನಂತೆ ಆಡುತ್ತಿದ್ದಾರೆ.



"ಈ ವಿಶ್ವವಿದ್ಯಾಲಯ ಆಗೇ ಬಿಟ್ಟರೆ ಮುಸ್ಲಿಂ ಭಯೋತ್ಪಾದನೆ ಹೆಚ್ಚಾಗುತ್ತದೆ, ಯುವಕರೆಲ್ಲಾ ಜೀಹಾದಿಗಳಾಗಿ ಬಿಡುತ್ತಾರೆ. ಟಿಪ್ಪು ಒಬ್ಬ ಕನ್ನಡ ದ್ರೋಹಿ... ದೇಶದ್ರೋಹಿ..." ಹೀಗೆ ಥೇಟ್ ತಿಕ್ಕಲನಂತೆ ಚಿಮೂ ಚೀರಿಕೊಂಡಿದ್ದಾರೆ.

ಚಿಮೂ ಬಿಡಿ, ಅದೊಂದು ರೋಗಗ್ರಸ್ತ ಮನಸ್ಸಿನ ಮನುಷ್ಯ. ಆದರೆ ಅದೇ ವೇದಿಕೆಯಲ್ಲಿ ವೆಂಕಟಸುಬ್ಬಯ್ಯ ಕೂಡಾ ಇದ್ದರು. ಜಿ.ವಿ., ಚಿಮೂ ಅಷ್ಟೇ ಅಲ್ಲ, ಎಲ್.ಎಸ್.ಶೇಷಗಿರಿರಾವ್, ಶತಾವಧಾನಿ ಗಣೇಶ್, ಹೆಚ್‌ಎಸ್‌ವಿ, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ನಾಡಿಗ.... ಮುಂತಾದ ಒಂದೇ ಜಾತಿಯವರ ಸಾಂಸ್ಕೃತಿಕ ಗೋಷ್ಠಿಗಳ ಕಾಯಂ ಆಹ್ವಾನಿತರು. ಚಿಮೂ ಮುಸ್ಲಿಮರ ವಿರುದ್ಧ ಕೆಟ್ಟ ಮಾತನಾಡಿದ ಮರುದಿನ ಹೊಸ ವರ್ಷದ ಮೊದಲ ದಿನ ಅದೇ ವೇದಿಕೆಗೆ ಬಂದ ವೆಂಕಟಸುಬ್ಬಯ್ಯ ರಾತ್ರಿ ಹನ್ನೆರಡು ಗಂಟೆಯಲ್ಲಿ ಪುಟ್ಟ ಮಕ್ಕಳಿಗೆ ವಂದೇಮಾತರಂ ಬೋಧಿಸಿ, ಹಿಂದೂ ಸಂಸ್ಕೃತಿ ಉಳಿಸುವ ಬೆಳೆಸುವ ಮಾತನ್ನಾಡಿದ್ದಾರೆ. ಶಬ್ದಬ್ರಹ್ಮ ಜಿ.ವಿ.ಯವರು ಹೀಗೆ ಹಿಂದೂ ಸಂಸ್ಕೃತಿ ಎಂದು vague ಆಗಿ ಹೇಳಿಬಿಟ್ಟರೆ ಅವರ ಬಗ್ಗೆ ಇನ್ನೂ ಸ್ವಲ್ಪ ಮರ್ಯಾದೆ ಇಟ್ಟುಕೊಂಡಿರುವ ನಮಗೆಲ್ಲಾ ಭಯವಾಗುತ್ತದೆ. ಚಿಮೂ ತರದ ವೈರಸ್ ಸೋಂಕಿನಿಂದ ಜಿ.ವಿ. ಹೀಗಾಗಿದ್ದಾರಾ ಏನು?



ಹಿರಿಯ ವಿದ್ವಾಂಸ ವೆಂಕಟಸುಬ್ಬಯ್ಯನವರು 'ಬ್ರಾಹ್ಮಣರ ಹಿರಿಮೆ' ಮೆರೆಸುವ ಕೆಲವು ಕುಬ್ಜ ವ್ಯಕ್ತಿಗಳ ಕೈಗೆ ಸಿಲುಕಿ ಅವರ ಬಗ್ಗೆ ಗೌರವ ಹೊಂದಿರುವವರಿಗೆಲ್ಲಾ ಮುಜುಗರ ಸೃಷ್ಟಿಸುತ್ತಿದ್ದಾರೆ. 'ನಿಘಂಟು ಬ್ರಹ್ಮ' ಎಂದು ಜಿ.ವಿ.ಯವರನ್ನು ಹೊಗಳಿ ಅಟ್ಟಕ್ಕೇರಿಸುತ್ತಿರುವವರ ಗುಂಪು ಅದೇ ನಿಘಂಟು ಶಾಸ್ತ್ರ ಹಾಗೂ ಕನ್ನಡ ಭಾಷಾ ಕ್ಷೇತ್ರದಲ್ಲಿ ಕೊಡುಗೆ ನೀಡಿರುವ ಡಿ.ಎಲ್.ನರಸಿಂಹಾಚಾರ್, ತೀ.ನಂ.ಶ್ರೀ, ಸೇಡಿಯಾಪು ಕೃಷ್ಣಭಟ್, ಶಂ.ಭಾ, ಎಂ.ಎಂ.ಕಲಬುರ್ಗಿ, ಪಾ.ವೆಂ, ಹ.ನಂ.ವಿಜಯಕುಮಾರ್, ಕೊಳಂಬೆ ಪುಟ್ಟಪ್ಪ ಗೌಡ ಮುಂತಾದ ಇನ್ನೂ ಅನೇಕರ ಕೊಡುಗೆಗಳನ್ನು 'ಅದೇನ್ ಮಹಾ' ಎನ್ನುವಂತೆ ಅಸಡ್ಡೆ ಮಾಡುತ್ತಾ ಈ ಕ್ಷೇತ್ರದಲ್ಲಿ ಜಿ.ವಿ.ಯವರೊಬ್ಬರದೇ ಸಾಧನೆ ಎನ್ನುವಂತೆ ವರ್ತಿಸುತ್ತಿದ್ದಾರೆ. ಕೆಲವೊಮ್ಮೆ ಮೈಮರೆತವರಂತೆ ಜಿ.ವಿ. ತಮ್ಮ ಬರಹ-ಮಾತುಗಳಲ್ಲೂ ಹೀಗೇ ಆಡುತ್ತಾರೆ.

ಇತ್ತೀಚಿನ 'ಸಂಕ್ರಮಣ' ಸಾಹಿತ್ಯ ಮಾಸಿಕದಲ್ಲಿ ಲೇಖಕ ಹರಿಹರಪ್ರಿಯರು ಜಿ.ವಿ.ಯವರ ಈ ತರದ ಅಗೋಚರ ಸಮಸ್ಯೆಗಳ ಬಗ್ಗೆ ಒಂದು ದೀರ್ಘ ಲೇಖನವನ್ನೇ ಬರೆದಿದ್ದಾರೆ.

ಜಿವಿಯವರು ಬೇಕಿದ್ದರೆ ವಂದೇ ಮಾತರಂ, ಹಿಂದೂ ಶಬ್ದಗಳ ಮೂಲ, ಅರ್ಥ, ವಿವರಗಳನ್ನು ತಿಳಿಸಿ ಹೇಳಲಿ. ಅದನ್ನು ಬಿಟ್ಟು ಚಿಮೂ ತರದ ರೋಗಿಷ್ಟನ ಜೊತೆ ಸೇರಿ ಅಮಾಯಕ ಮಕ್ಕಳ ಮೇಲೆ ಪುರೋಹಿತರ ಸಂಸ್ಕೃತಿ, ತರಲೆ ಪುರಾಣಗಳನ್ನು ಹೇರುವ ಕ್ಷುಲ್ಲಕ ಕೆಲಸ ಮಾಡುವುದು ಬೇಡ ಅಷ್ಟೆ. ■


ಪ್ರೊ. ಜಿ.ವೆಂಕಟಸುಬ್ಬಯ್ಯ ಈಗಾಗಲೇ ಒಂದು ನೂರು ವರ್ಷ ಬದುಕಿದ್ದಾರೆ ಎಂಬ ಹೆಮ್ಮೆಯ ಮಾತನ್ನು ಅನೇಕ ಪುರೋಹಿತ ಪತ್ರಕರ್ತರು ಪದೇಪದೇ ಹೇಳುತ್ತಿರುತ್ತಾರೆ. ಜಿ.ವಿ.ಯವರ ವಯಸ್ಸಿನ ಬಗ್ಗೆ ಖಚಿತ ದಾಖಲೆಗಳಿಲ್ಲದಿರುವುದೂ ಇವರಿಗೆಲ್ಲಾ ಒಂದು advantage ಕೂಡಾ ಹೌದು. ವೆಂಕಟಸುಬ್ಬಯ್ಯ ಇನ್ನೂ ದೀರ್ಘಕಾಲ ನಮ್ಮೊಂದಿಗಿರಲಿ. ಆದರೆ ಅವರು ಇರುವಷ್ಟು ಕಾಲ ಹೇಗಿರುತ್ತಾರೆ, ಯಾರೊಂದಿಗಿರುತ್ತಾರೆ ಎಂಬುದು ಅಷ್ಟೇ ಮುಖ್ಯ.

ಬಿಟ್ಟೂಬಿಡದೆ ಸಾರ್ವಜನಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿರುವ ಜಿ.ವಿ.ಯವರ ಆದ್ಯತೆಗಳನ್ನು ಗಮನಿಸಿ ಈ ಮಾತು ಹೇಳಬೇಕಾಗಿ ಬಂದಿದೆ. ವೆಂಕಟಸುಬ್ಬಯ್ಯನವರು ಭಾಗವಹಿಸುವ ಯಾವುದೇ ಹತ್ತು ಕಾರ್ಯಕ್ರಮಗಳ ವಿವರ ಚೆಕ್ ಮಾಡಿ ನೋಡಿದರೆ ಅಂತವುಗಳಲ್ಲಿ ಕನಿಷ್ಠ ಎಂಟಾದರೂ ಹಿಂದೂತ್ವವಾದಿಗಳ ಇಲ್ಲವೇ ಬ್ರಾಹ್ಮಣರ ಗುಂಪು ಅರೇಂಜ್ ಮಾಡಿದವುಗಳಾಗಿರುತ್ತವೆ.

ವೆಂಕಟಸುಬ್ಬಯ್ಯನವರಿಗೆ ಈ ಬಗ್ಗೆ ಎಚ್ಚರವಾಗಲಿ ಅಥವಾ ಸಂಕೋಚವಾಗಲಿ ಇದ್ದಂತಿಲ್ಲ.

ಮೊನ್ನೆ ಇಂತದ್ದೇ ಒಂದು ಸಭೆಯಲ್ಲಿ ಚಿದಾನಂದಮೂರ್ತಿ ಒಂದಷ್ಟು ನೀಚತನದ ಮಾತುಗಳಾಡಿದ್ದಾರೆ. ಬಹುಶಃ ನಿಮಗೆಲ್ಲಾ ಗೊತ್ತಿರುವಂತೆ

ಟೋನಿ ಗ್ರೇಗ್



ಮಾತಿನ ಮಲ್ಲ, ಜಗಳಗಂಟ ಕ್ರಿಕೆಟರ್ ಟೋನಿ ಗ್ರೇಗ್ ತೀರಿಕೊಂಡಿದ್ದಾನೆ. ಕ್ರಿಕೆಟ್ ವಿನ್ಯಾಸವನ್ನೇ ಬದಲಿಸಿದ ಕೆರ್ರಿ ಪ್ಯಾಕರ್ ಜೊತೆ ಸೇರಿದ ಮೊದಲ ಆಟಗಾರರ ಸಾಲಿನಲ್ಲಿದ್ದ ಕಾರಣಕ್ಕೆ 1970 ರ ದಶಕದಿಂದಲೂ ಟೋನಿ ಸುದ್ದಿಯಲ್ಲಿದ್ದ. ಆಸ್ಟ್ರೇಲಿಯಾದ ಶ್ರೀಮಂತ ಮೀಡಿಯಾ ಉದ್ಯಮಿ ಕೆರ್ರಿ ಪ್ಯಾಕರ್ ಸಾಂಪ್ರದಾಯಕ ಕ್ರಿಕೆಟ್ ಮ್ಯಾಚ್‌ಗಳ ನಿಯಮಗಳನ್ನು ಧೂಳೀಪಟಗೊಳಿಸಿ world series cricket ಅನ್ನು ಸ್ಫೋಟಕ ರೀತಿಯಲ್ಲಿ ಚಾಲನೆಗೆ ತಂದ. ಆಗ ಇಂಗ್ಲೆಂಡ್ ಕ್ಯಾಪ್ಟನ್ ಆಗಿದ್ದ ಟೋನಿ ಗ್ರೇಗ್ ತನ್ನ ಟೀಂ ಮಾತ್ರವಲ್ಲದೆ ದೇಶವನ್ನೇ ಬಿಟ್ಟು ಆಸ್ಟ್ರೇಲಿಯಾಗೆ ಹೋದ.

ಕ್ರಿಕೆಟ್ ಆಟದಲ್ಲಿ ತಂಡದ ನಿಷ್ಠೆ ಹಾಗೂ ದೇಶದ ನಿಷ್ಠೆಗಿಂತ ಹಣವೇ ಮುಖ್ಯವೆಂದು ನಿರೂಪಿಸಿದ ಮೊದಲ ಆಟಗಾರ ಈ ಟೋನಿ.

ಆಗೊಮ್ಮೆ ಯಾರೊ

"ನೀನ್ಯಾಕೆ ಕನಸಿನ ಹುದ್ದೆಯಂತಿದ್ದ ಇಂಗ್ಲೆಂಡ್ ಟೀಂನ ಕ್ಯಾಪ್ಟನ್ಸಿಯನ್ನೇ ಬಿಟ್ಟು ಕೆರ್ರಿ ಪ್ಯಾಕರ್ ಸರಣಿಗೆ ಸೇರಿದೆ? ಅಂತಾ" ಕೇಳಿದ್ದರು.

ಆಗ ಟೋನಿ

"ಆ ಗೌರವಾನ್ವಿತ ಹುದ್ದೆಯಲ್ಲಿದ್ದಾಗ ನನಗೆ ಟೆಸ್ಟ್ ಮ್ಯಾಚ್ ಒಂದಕ್ಕೆ ದಿನಕ್ಕೆ 210 ಪೌಂಡ್ ಹಣ ಕೊಡುತ್ತಿದ್ದರು. ಆದರೆ ಕೆರ್ರಿ ಪ್ಯಾಕರ್ ಒಂದೇ ಸಾರಿ ವರ್ಷಕ್ಕೆ 50 ಸಾವಿರ ಪೌಂಡ್ ಕೊಡಲು ಒಪ್ಪಿದ. ಅವತ್ತೇ ನನಗೆ ಬೇರೆ ಕನಸು ಬಿತ್ತು."

ಎಂದು ಗೇಲಿಯ ಉತ್ತರ ಕೊಟ್ಟಿದ್ದ.

ಮುಂದಿನ ಎರಡು ದಶಕದಲ್ಲಿ ಈ ಟ್ರೆಂಡ್ ಬೆಳೆದು ಕೊನೆಗೆ ಭಾರತದ ಮಾರ್ವಾಡಿ ಲಲಿತ್ ಮೋದಿಯ ಕೈಗೆ ಸಿಕ್ಕಿ ಇಂಡಿಯನ್ ಪ್ರೀಮಿಯರ್ ಲೀಗ್ ರೂಪ ತಳೆದು ಈಗ ಸಾವಿರಾರು ಕೋಟಿ ರೂಪಾಯಿಗಳ ಕ್ರೀಡಾ ವ್ಯಾಪಾರವಾಗಿ ಆವರಿಸಿಕೊಂಡಿದೆ. ಸಹಜವಾಗಿಯೇ ವಿಶ್ವ ಕ್ರಿಕೆಟ್‌ನಲ್ಲಿ ಈಗ ಇಂಡಿಯಾದೇ ಕಾರುಬಾರು ನಡೆಯುತ್ತಿದೆ. ಟೋನಿ ನಿರ್ಗಮಿಸುವ ಮುನ್ನ ಎಂಸಿಸಿ ಗ್ರೌಂಡ್‌ನ ಕಾಲಿನ ಕೌಡ್ರೆ ಹಾಲ್‌ನಲ್ಲಿ ಒಂದು ಕೊನೆಯ ಭಾಷಣ ಮಾಡಿದ್ದ. ಅಲ್ಲಿ 'ಇಂಡಿಯಾದವರು ವಿಶ್ವ ಕ್ರಿಕೆಟ್‌ನ ಜುಟ್ಟು ಜನಿವಾರ ಹಿಡಿದಿಟ್ಟುಕೊಂಡಿದ್ದಾರೆ. ಕ್ರಿಕೆಟ್‌ನಲ್ಲೀಗ ಹಣದ್ದೇ ಕಾರುಬಾರು ಜಾಸ್ತಿಯಾಗಿ ಹೋಗಿವೆ. ಇದು ಸರಿಯಲ್ಲ ಈಗ ಇಂಗ್ಲೆಂಡ್ ಮಾತಿಗೆ ಬೆಲೆಯೇ ಇಲ್ಲವಾಗಿದೆ' ಅಂತೆಲ್ಲ ಮಾತಾಡಿದ್ದ.

ಮಜಾ ಏನೆಂದರೆ ವಿಶ್ವಸಂಸ್ಥೆಯಲ್ಲಿ ಅಮೆರಿಕಾ, ಚೀನಾಗಳಿಗಿರುವಂತೆ ICC ಯಲ್ಲೂ ಒಂದು ಕಾಲದಲ್ಲಿ ಇಂಗ್ಲೆಂಡ್‌ಗೆ ವಿಟೋ ಪವರ್ ಇತ್ತು. ಈಗ ಅದೆಲ್ಲಾ ಮುಗಿದ ಕತೆ, ICC ಯಲ್ಲಿ ಭಾರತದ ಸರ್ವಾಧಿಕಾರ ನಡೆಯುತ್ತಿದೆ. ಸಹಜವಾಗೇ ಬಿಳಿಯರಿಗೆ ಇದನ್ನು ಅರಗಿಸಿಕೊಳ್ಳಲು ಕಷ್ಟ.

ಟೋನಿಯ arrogence ಬಗ್ಗೆ ಅನೇಕ ಘಟನೆಗಳಿವೆ. ಆಸ್ಟ್ರೇಲಿಯಾದ ಕ್ರಿಕೆಟರ್ ಬಿಲ್ ಲ್ಯಾರಿ ಮೊದಲ ಸಾರಿ ಟೋನಿಯನ್ನು ಭೇಟಿಯಾದಾಗ ಈ ಟೋನಿ "ನೀನು ಆಸ್ಟ್ರೇಲಿಯಾದವನು ತಾನೆ, ಆಫ್ರಿಕಾ ಟೀಂಗೆ 4-0ರಲ್ಲಿ ಸೋತ ಕ್ಯಾಪ್ಟನ್ ನೀನೇ ತಾನೆ?" ಅಂತಾ ಛೇಡಿಸಿದ್ದನಂತೆ.


ಲ್ಯಾರಿ ಏನೂ ಕಡಿಮೆಯಲ್ಲ,

"ಹೌದು ಅದು ತಾನೆ. ಅಂದ ಹಾಗೆ ದುಡ್ಡಿಗೋಸ್ಕರ ಇಂಗ್ಲೆಂಡ್ ಟೀಂನ ನಾಯಕತ್ವ ಬಿಟ್ಟು ಓಡಿಹೋದ ಟೋನಿ ಗ್ರೇಗ್ ನೀನೇ ತಾನೆ?" ಅಂತಾ ತಿರುಗಿಸಿ ಕೊಟ್ಟಿದ್ದ.

ಈ ಕೊಂಕು ಮಾತುಗಳೇನು ನಂತರದ ಅವರ ಸ್ನೇಹಕ್ಕೆ ತಡೆಯಾಗಲಿಲ್ಲ.

ಟೋನಿ ಗ್ರೇಗ್‌ನ ಆಟಕ್ಕಿಂತ ಅವನ ಕಾಮೆಂಟರಿ ನಿಜಕ್ಕೂ ಚೇತೋಹಾರಿಯಾಗಿರುತ್ತಿತ್ತು. ■

ಶೆಟ್ಟರ್‌ರ ಸುಲಭ ಸರ್ಕಾರ



"ಸರ್ಕಾರ ನಡೆಸುವುದು ಇಷ್ಟು ಸುಲಭ ಅಂತ ಅಂದುಕೊಂಡಿರಲಿಲ್ಲ. ಈ ಆರು ತಿಂಗಳಲ್ಲಿ ಸಾಕಷ್ಟು ಅನುಭವ ಆಗಿದೆ. ಉಳಿದ ಅವಧಿಯಲ್ಲೂ ನಾನು ಆರಾಮಾಗಿ ಸರ್ಕಾರ ನಡೆಸಬಲ್ಲೆ" ಎಂದು ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮೊನ್ನೆ ಹೇಳಿಕೊಂಡಿದ್ದಾರೆ.

ನಿಜಕ್ಕೂ ಇದೊಂದು ಆಶ್ಚರ್ಯಕರ ಹೇಳಿಕೆ!

ಏಕೆಂದರೆ ಈ ಹಿಂದೆ ಸಿಎಂ ಆಗಿದ್ದ ಸದಾನಂದಗೌಡ, ಯಡಿಯೂರಪ್ಪ ಹಾಗೂ ಕುಮಾರಸ್ವಾಮಿ ಮುಂತಾದವರೆಲ್ಲಾ ಸದಾ ಟೆನ್ಷನ್‌ನಲ್ಲಿರುತ್ತಾ ನಾನಾ ರಗಳೆಗಳಲ್ಲಿ ಮುಳುಗಿರುತ್ತಾ "ನನಗೆ ನೆಮ್ಮದಿನೇ ಇಲ್ಲವಾಗಿದೆ" ಎನ್ನುತ್ತಾ ಕಾಲ ಹಾಕಿದ್ದರು.


ಆದರೆ ಶೆಟ್ಟರ್ ಮಾತ್ರ ನಾನು ಆರಾಮಾಗಿದ್ದೇನೆ ಎನ್ನುತ್ತಿದ್ದಾರಲ್ಲ... ಇದು ಹೇಗೆ ಸಾಧ್ಯ ಎನ್ನುತ್ತೀರಾ?

"ಸರ್ವ ರೋಗಕ್ಕೂ ಸಾರಾಯಿಯೇ ಮದ್ದು" ಎಂಬ ಕುಡುಕರ ಸ್ಲೋಗನ್‌ನಂತೆಯೇ ಈ ಶೆಟ್ಟರ್ ಕೂಡ 'ಸಕಲ ಸದ್ದುಗಳಿಗೂ ನಿಷ್ಕ್ರಿಯತೆಯೇ ಗುದ್ದು' ಎಂಬ ಪಾಲಿಸಿ ಅಳವಡಿಸಿಕೊಂಡಿದ್ದಾರೆ. ವಾಸ್ತವವಾಗಿ ಕರ್ನಾಟಕದಲ್ಲಿಂದು ಒಂದು ಜೀವಂತ ಸರ್ಕಾರವೇ ಇಲ್ಲ, ಶೆಟ್ಟರ್ ಅದನ್ನು ನಡೆಸುತ್ತಲೂ ಇಲ್ಲ. ಅವರು ಈ ಹಿಂದೆ ರೆವಿನ್ಯೂ ಮಂತ್ರಿಯಾಗಿದ್ದಾಗಲಿ, ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗಲಿ ತೋರಿದ್ದು ಇದೇ ನಿಷ್ಕ್ರಿಯತೆಯನ್ನೇ!


ಸದ್ಯಕ್ಕೀಗ ಸರ್ಕಾರದ ಅಸ್ತಿತ್ವ ಕಾಣುತ್ತಿರುವುದು ದಿನ ಪತ್ರಿಕೆಗಳ ಜಾಹಿರಾತುಗಳಲ್ಲಿ ಮಾತ್ರ. ಪ್ರತಿದಿನ ಎಲ್ಲಾ ಪ್ರಮುಖ ದಿನಪತ್ರಿಕೆಗಳಲ್ಲಿ ತಲಾ ನಾಲ್ಕು ಪುಟಗಳ ಕನಿಷ್ಠ ಹತ್ತು ಲಕ್ಷ ರೂಪಾಯಿಗಳ ಖರ್ಚಿನಲ್ಲಿ ತಮ್ಮ ಸರ್ಕಾರದ ಸಾಧನೆಗಳನ್ನು ಶೆಟ್ಟರ್ ಬಿಂಬಿಸಿಕೊಳ್ಳುತ್ತಿದ್ದಾರೆ. ಇಂತಹ ಚಿಲ್ಲರೆ ಕೆಲಸಗಳಿಂದ ಓಟು ಗಳಿಸಲು ಅಸಾಧ್ಯವೆಂಬುದು ಶೆಟ್ಟರ್‌ಗೆ ಅರ್ಥವಾದಂತಿಲ್ಲ.

ಪ್ರತಿದಿನ ಬೆಳಗ್ಗೆ ಎದ್ದು ರೆಡಿಯಾಗಿ ಪೊಲೀಸ್ ಗೂಢಾಚಾರರು ತಂದೊಪ್ಪಿಸುವ ರಿಪೋರ್ಟ್ ಓದಿ, ನಂತರ ಹುಳ್ಳಗೆ ನಗುತ್ತಾ RSS ಎಲಿಮೆಂಟುಗಳ ಕೈಗೆ ಆಡಳಿತ ಒಪ್ಪಿಸಿಕೊಡುರುತ್ತಾರೆ. ಹೀಗೆ ದಿನಪೂರ್ತಿ ಹೇಗೋ ಕಾಲ ಹಾಕಿ ಮನೆಗೆ ಹೋಗುವ ಶೆಟ್ಟರ್‌ಗಲ್ಲದೆ ಮತ್ಯಾರಿಗೆ ಆರಾಮಾಗಿ ಸರ್ಕಾರ ನಡೆಸುವ ಸಾಮರ್ಥ್ಯವಿರಲು ಸಾಧ್ಯ ಹೇಳಿ? ■

ಖೇಣಿಯ ಮಕ್ಕಳ ಪಕ್ಷ



ಭೂಗಳ್ಳ ಅಶೋಕ್ ಖೇಣಿ 'ಕರ್ನಾಟಕ ಮಕ್ಕಳ ಪಕ್ಷ' ಎಂಬ ರಾಜಕೀಯ ಪಕ್ಷ ಸ್ಥಾಪಿಸಿರುವ ಸಂಗತಿ ನಿಮಗ್ಯಾರಿಗೂ ನೆನಪಿರಲಿಕ್ಕಿಲ್ಲ, ಇರಲು ಸಾಧ್ಯವೂ ಇಲ್ಲ ಬಿಡಿ. ಏಕೆಂದರೆ ಈ ಖೇಣಿ ಈಗ ಯಡಿಯೂರಪ್ಪನ ಕೆಜೆಪಿ ಪಾರ್ಟಿಗೆ ಒಳಗಿಂದೊಳಗೆ ಬೆಂಬಲ ಕೊಡುವ ಅಂದರೆ ಹಣದ ನೆರವು, ಲಿಂಗಾಯತರ ಗುಂಪು ಸೇರಿಸುವುದು ಇತ್ಯಾದಿ 'ಲೋಕೋದ್ಧಾರಕ' ಚಟುವಟಿಕೆಗಳಲ್ಲಿ ತೊಡಗಿರುವ ಸುದ್ದಿಗಳು ಬರುತ್ತಿವೆ. ತನ್ನ ರಾಜಕೀಯ ಪಕ್ಷವನ್ನೇ ಮರೆತು ಖೇಣಿ ಯಡ್ಡಿಯ ಹಿಂದೆ ಓಡಾಡುತ್ತಿರುವಾಗ ಜನಸಾಮಾನ್ಯರಿಗೆಲ್ಲಿ ಆ ಪಾರ್ಟಿಯ ನೆನಪಿರಲು ಸಾಧ್ಯ?




2012 ರ ಮಾರ್ಚ್‌ನಲ್ಲಿ ಹುಬ್ಬಳ್ಳಿಯಲ್ಲಿ 'ಕರ್ನಾಟಕ ಮಕ್ಕಳ ಪಕ್ಷ' ಸ್ಥಾಪಿಸುವಾಗ ಈ ಖೇಣಿಯ ಯೋಚನೆ ಅದೇನಿತ್ತೋ ಏನೊ? ಒಂದು ಮೂಲದ ಪ್ರಕಾರ ಖೇಣಿಯ ಜೊತೆ ಈಗಲೂ ಬಾಲನಟನಂತಿರುವ ಮಾಸ್ಟರ್ ಮಂಜುನಾಥ್ ಐಡಿಯಾ ಇದಾಗಿರಬಹುದು ಎನ್ನಲಾಗಿದೆ.

ಈ ನಮ್ಮ ಕರ್ನಾಟಕ ದೇಶದಲ್ಲಿ ಮಕ್ಕಳ ಸಿನಿಮಾ, ಮಕ್ಕಳ ಸಾಹಿತ್ಯ ಮಕ್ಕಳ ಪಾರ್ಕು, ಮಕ್ಕಳ ಡಾಕ್ಟರ್‌ಗಳು ಈ ತರದ್ದೆಲ್ಲಾ ಇದೆ.

ಆದರೆ ಒಂದು ಮಕ್ಕಳ ರಾಜಕೀಯ ಪಕ್ಷ ಇಲ್ಲವಲ್ಲ ಅಂತೆನಿಸಿ ಹೀಗೆ 'ಕರ್ನಾಟಕ ಮಕ್ಕಳ ಪಕ್ಷ'ವನ್ನು ಖೇಣಿ ಅಸ್ತಿತ್ವಕ್ಕೆ ತಂದಿರಬಹುದು ಎಂಬ ಅನುಮಾನಗಳಿವೆ. ಇದರಿಂದ ಖೇಣಿಗೆ ಒಂದೇ ಒಂದು ಓಟೂ ಬರುವ ಛಾನ್ಸ್ ಇಲ್ಲ ಯಾಕೆ ಗೊತ್ತಾ?

ಹದಿನೆಂಟು ವರ್ಷಕ್ಕಿಂತ ಚಿಕ್ಕವರು ಅಂದರೆ ಮಕ್ಕಳಿಗೆ ಓಟಿನ ಹಕ್ಕೇ ಇಲ್ಲವಲ್ಲ, ಕನಿಷ್ಠ ಇಷ್ಟು ಕಾಮನ್ ಸೆನ್ಸಾದರೂ ಖೇಣಿಗಿರಬೇಕಿತ್ತು! ■

ದೆಹಲಿ ಅತ್ಯಾಚಾರ ಘಟನೆಗೆ ಬಂದ ಒಂದು ಎಸ್ಸೆಮ್ಮೆಸ್ ಪ್ರತಿಕ್ರಿಯೆ...



ಪ್ರೀತಿಯ ಸಹೋದರಿ,
ನಿನ್ನ ದೇಹದ ವಿವಿಧ ಅಂಗಗಳು
ವಿಫಲಗೊಂಡಿದ್ದ ನೀನು ಸಾವನ್ನಪ್ಪಲಿಲ್ಲ,
ಬದಲಾಗಿ
ನಮ್ಮ ದೇಶದ ಕಾನೂನು,
ಪೊಲೀಸರು, ವೈದ್ಯರು
ರಾಜಕಾರಣಿಗಳು, ನ್ಯಾಯಾಲಯಗಳು
ವಿಫಲವಾಗಿರುವುದರಿಂದ
ನೀನು ಕಣ್ಣುಮುಚ್ಚಿದೆ...

ಸಂಗೀತಮಯ ಬದುಕಿನಲ್ಲಿ ಅಪಸ್ವರ

"ಇತ್ತೀಚೆಗೆ ಖ್ಯಾತ ಸಿತಾರ್ ವಾದಕ ಪಂಡಿತ್ ರವಿಶಂಕರ್ ದೂರದ ಅಮೆರಿಕಾದಲ್ಲಿ ಸಾವನ್ನಪ್ಪಿದ ಸುದ್ದಿ ಕೇಳಿ ಮುಂಬೈಯಲ್ಲಿ ತೀವ್ರವಾಗಿ ಮರುಗಿದ್ದು ಅನ್ನಪೂರ್ಣಾದೇವಿ ಎಂಬ 85 ವರ್ಷದ ವೃದ್ಧೆ. ಈಗ ಮುಂಬೈಯ ವಾರ್ಡನ್ ರಸ್ತೆಯಲ್ಲಿನ ಒಂದು ಫ್ಲಾಟಿನಲ್ಲಿ ವಾಸಿಸುತ್ತಿರುವ ಅನ್ನಪೂರ್ಣಾದೇವಿ ಅವತ್ತು ಬಿಕ್ಕಿಬಿಕ್ಕಿ ಅತ್ತರು. ರವಿಶಂಕರ್ ಸಾವಿನೊಂದಿಗೆ ಭಾರತೀಯ ಸಂಗೀತಕ್ಕಾದ ನಷ್ಟಕ್ಕೆ ಮರುಗಿದರು.

ರವಿಶಂಕರರಿಂದಾಗಿ ತಮ್ಮ ಖಾಸಗಿ ಬದುಕಿನಲ್ಲಿ ಅಪಾರ ದುಃಖವನ್ನು ಅನುಭವಿಸಿದ್ದ, ಅವರಿಂದ ತಿರಸ್ಕೃತಗೊಂಡಿದ್ದ, ಅವರಿಂದಾಗಿ ತಮ್ಮ ಏಕೈಕ ಪುತ್ರನನ್ನೂ ಕಳೆದುಕೊಂಡಿದ್ದ ಅನ್ನಪೂರ್ಣಾದೇವಿ ರವಿಶಂಕರ್ ಸತ್ತಾಗ ತನ್ನ ಇಂತಹ ಯಾವ ನೋವನ್ನೂ ವ್ಯಕ್ತಪಡಿಸದೆ ಕೇವಲ ಅಭಿಮಾನವನ್ನು ವ್ಯಕ್ತಪಡಿಸಿದ್ದು ಹಲವರಲ್ಲಿ ಅಚ್ಚರಿ ಮೂಡಿಸಿತ್ತು. ಯಾಕೆಂದರೆ ಈ ಅನ್ನಪೂರ್ಣಾದೇವಿ ಬೇರೆ ಯಾರೂ ಅಲ್ಲ, ರವಿಶಂಕರ್ ಅವರ ಮೊದಲ ಪತ್ನಿ.

ಹಲವರ ಪ್ರಕಾರ ಅನ್ನಪೂರ್ಣಾದೇವಿ ತನ್ನ ಮಾಜಿ ಪತಿ ರವಿಶಂಕರ್‌ಗಿಂತಲೂ ಉತ್ತಮ ಕಲಾವಿದೆ. ಆದರೆ ಆಕೆಯನ್ನು ಕಳೆದ ಹಲವಾರು ದಶಕಗಳಿಂದ ಭೇಟಿ ಮಾಡಿದವರು ತುಂಬಾ ಕಡಿಮೆ. ಇನ್ನು ಆಕೆಯ ಸಂಗೀತವನ್ನು


ರವಿಶಂಕರ್ ಮತ್ತು ಅನ್ನಪೂರ್ಣ

ಕೇಳಿರುವವರು ಬೆರಳೆಣಿಕೆಯಷ್ಟು ಜನ ಮಾತ್ರ. ಆದರೆ ಈಗಲೂ ಅವರಿಂದ ಸಂಗೀತ ಕಲಿಯಲು ಹಾತೊರೆಯುವವರಿಗೆ, ಭೇಟಿ ಆಗಲು ಬಯಸುವವರಿಗೆ ಕೊರತೆಯೇನೂ ಇಲ್ಲ. ಆದರೆ ಆಕೆ ಯಾರನ್ನೂ ಅಷ್ಟು ಸುಲಭವಾಗಿ ಭೇಟಿ ಆಗುವುದಿಲ್ಲ, ಬದಲಾಗಿ ಜಗತ್ತನ್ನು ...ವರಯ ಬೇಕಂತಲೇ ತಮ್ಮಿಂದ ದೂರವಿಟ್ಟಿದ್ದಾರೆ. ಎಷ್ಟರಮಟ್ಟಿಗೆಂದರೆ ಅವರು ವಾಸಿಸುತ್ತಿರುವ ಫ್ಲಾಟ್ ಮುಂದೆ ಎರಡು ಬೋರ್ಡುಗಳನ್ನು ತೂಗುಹಾಕಲಾಗಿದೆ. ಒಂದು ಬೋರ್ಡ್ ಮೇಲೆ 'ಅನ್ನಪೂರ್ಣಾದೇವಿ' ಎಂದು ಬರೆದಿದ್ದರೆ ಇನ್ನೊಂದು ಬೋರ್ಡ್ ಮೇಲೆ ಸುದೀರ್ಘವಾದ ಸೂಚನೆಗಳನ್ನು ನೀಡಲಾಗಿದೆ. ಅವು ಹೀಗಿವೆ: "1. ಈ ಬಾಗಿಲನ್ನು ಸೋಮವಾರ ಮತ್ತು ಶುಕ್ರವಾರ ಮಾತ್ರ ತೆರೆಯಲಾಗುತ್ತದೆ. 2. ದಯವಿಟ್ಟು ಕಾಲಿಂಗ್‌ಬೆಲ್‌ಅನ್ನು ಮೂರು ಬಾರಿ ಮಾತ್ರ ಒತ್ತಿ. 3. ಯಾರೂ ಬಾಗಿಲನ್ನು ತೆರೆಯದಿದ್ದರೆ ನಿಮ್ಮ ಹೆಸರು ಮತ್ತು ವಿಳಾಸವನ್ನು ಬರೆದಿಟ್ಟು ಹೋಗಿ. ಧನ್ಯವಾದಗಳು. ಅನಾನುಕೂಲಕ್ಕೆ ವಿಷಾದ"!

ಯಾರು ಈ ಅನ್ನಪೂರ್ಣಾದೇವಿ? ಆಕೆ ರವಿಶಂಕರ್‌ಗಿಂತಲೂ ಪ್ರತಿಭಾವಂತೆ ಆಗಿದ್ದರೆ ಯಾಕೆ ಆಕೆ ಎಂದೂ ಸಂಗೀತ ಗೋಷ್ಠಿಗಳನ್ನು ನೀಡಿಲ್ಲ? ಯಾಕೆ ಆಕೆಯ ಹೆಸರಲ್ಲಿ ಒಂದೇ ಒಂದು ಸಿಡಿ ಕೂಡ ಇಲ್ಲ? ರವಿಶಂಕರ್ ಆಕೆಗೆ ಅದಿನ್ನೆಂತಹ ಮಾನಸಿಕ ಹಿಂಸೆ ನೀಡಿದ್ದರಿಂದ ಆಕೆ ಜಗತ್ತಿನಿಂದಲೇ ವಿಮುಖಿಯಾದರು? ಎಂಬೆಲ್ಲ ಪ್ರಶ್ನೆಗಳು ನನ್ನನ್ನು ಕಾಡಿದವು.

ವಾಸ್ತವವಾಗಿ ಅನ್ನಪೂರ್ಣಾದೇವಿಯವರ ನಿಜವಾದ ಹೆಸರು ರೊಶನಾರ ಖಾನ್. ಆಕೆ ಖ್ಯಾತ ಸಂಗೀತ ಗುರುಗಳಾಗಿದ್ದ ಅಲ್ಲಾವುದ್ದೀನ್ ಖಾನ್‌ರ ಮಗಳು. ಆಕೆಯ ಬದುಕು ರವಿಶಂಕರ್ ಅವರ ಜೀವನದೊಂದಿಗೆ ಬೆಸೆದುಕೊಂಡಿದ್ದು ಮತ್ತು ಮುರಿದುಬಿದ್ದಿದ್ದೂ ಸಂಗೀತದಿಂದಾಗಿಯೇ ಎಂದರೆ ಅಚ್ಚರಿಯಾಗುತ್ತದೆ.

ಅಲ್ಲಾವುದ್ದೀನ್ ಖಾನರ ಹಿರಿಯ ಪುತ್ರಿಯ ಹೆಸರು ಜಹನಾರ. ಆಕೆಗೆ ಅಲ್ಲಾವುದ್ದೀನ್ ಖಾನರು ತರಬೇತಿ ನೀಡಿ ಆಕೆಯನ್ನು ಉತ್ತಮ ಹಾಡುಗಾರ್ತಿಯನ್ನಾಗಿಸಿದ್ದರು. ಆದರೆ ಜಹನಾರಳ ಬದುಕು ದುರಂತದಲ್ಲಿ ಅಂತ್ಯಗೊಂಡಿತು. ಆಕೆಯನ್ನು ಮದುವೆ ಮಾಡಿಕೊಟ್ಟನಂತರ ಆಕೆಯ ಗಂಡನ ಮನೆಯವರು ಸಂಪ್ರದಾಯಸ್ಥರಾಗಿದ್ದು ಜಹನಾರಾಳ ಸಂಗೀತಕ್ಕೆ ಅಡ್ಡಿಪಡಿಸಿದರು. ಅಷ್ಟೇ ಅಲ್ಲ, ಒಂದು ದಿನ ಜಹನಾರಾಳ ಅತ್ತೆ ಆಕೆಯ ತಂಬೂರಿಯನ್ನೇ ಮುರಿದುಹಾಕಿದಳು. ಇದರಿಂದ ಆಘಾತಗೊಂಡು ತನ್ನ ತವರಿಗೆ ಹಿಂದಿರುಗಿದ ಜಹನಾರ ತನ್ನ ತಾಯಿಯ ತೋಳಿನಲ್ಲಿ ಸಾವನ್ನಪ್ಪಿದಳು. ಆಗ ರೊಶನಾರ ಇನ್ನೂ ಚಿಕ್ಕ ಹುಡುಗಿ. ತನ್ನ ಎರಡನೆ ಮಗಳ ಬದುಕು ಕೂಡಾ ಸಂಗೀತದಿಂದಾಗಿ ನಾಶವಾಗಕೂಡದೆಂದು ನಿರ್ಧರಿಸಿದ ಅಲ್ಲಾವುದ್ದೀನ್ ಖಾನರು ಆಕೆಯನ್ನು ಸಂಗೀತದಿಂದ ದೂರ ಇಟ್ಟರು.

ಆದರೆ ರೊಶನಾರಳಿಗೆ ಸಂಗೀತದಲ್ಲಿ ಅಪಾರ ಆಸಕ್ತಿ. ತಂದೆ ಅಲ್ಲಾವುದ್ದೀನ್ ಖಾನ್ ತನ್ನ ಸಹೋದರ ಅಲಿ ಅಕ್ಬರ್ ಖಾನ್‌ಗೆ ಸರೋದ್ ಹೇಳಿಕೊಡುವುದನ್ನು ಸೂಕ್ಷ್ಮವಾಗಿ ಆ ಹುಡುಗಿ ಗಮನಿಸುತ್ತಿದ್ದಳು. ಒಂದು ದಿನ ತಂದೆ ಮಾರ್ಕೆಟ್‌ಗೆ ಹೋಗಿದ್ದಾಗ ಅಣ್ಣ ಅಲಿ ಅಕ್ಬರ್ ಸರೋದ್ ತಾಲೀಮು ನಡೆಸುತ್ತಿದ್ದ. ಆಗ ರೊಶನಾರಾಳಿಗೆ ಇನ್ನೂ ಹತ್ತು ವರ್ಷ ವಯಸ್ಸು. ತನ್ನ ಪಾಡಿಗೆ ತಾನಿದ್ದ ರೊಶನಾರಾಳಿಗೆ ಅಣ್ಣ ತಾಲೀಮಿನಲ್ಲಿ ಮಾಡಿದ ತಪ್ಪು ಅರಿವಿಗೆ ಬಂತು. ಆಗ ಆಕೆ ಅಲ್ಲೇ ತನ್ನ ಅಣ್ಣನನ್ನು ತಿದ್ದಲಾರಂಭಿಸಿದಳು. ಅದರಲ್ಲಿ ಆಕೆ ಎಷ್ಟು ಮಗ್ನಳಾಗಿದ್ದಳೆಂದರೆ ತಂದೆ ಮಾರ್ಕೆಟ್ಟಿನಿಂದ ಬಂದು ತನ್ನ ಹಿಂದೆಯೇ ನಿಂತಿರುವುದೂ ಬಹಳ ಹೊತ್ತು ಆಕೆಯ ಅರಿವಿಗೆ ಬರಲಿಲ್ಲ.

ತಂದೆ ಅಲ್ಲಿರುವುದು ಗೊತ್ತಾದಾಗ ರೊಶನಾರಳಿಗೆ ತೀವ್ರ ಭಯವಾಯಿತು. ಆದರೆ ಅಲ್ಲಾವುದ್ದೀನ್ ಖಾನರು ರೋಶನಾರಾಳನ್ನು ತಮ್ಮ ಕೊಠಡಿಗೆ ಕರೆದುಕೊಂಡು ಹೋಗಿ ಸರಸ್ವತಿಯ ಪ್ರತಿಮೆಯ ಮುಂದೆ ಆಕೆಯ ಕೈಗೆ ಒಂದು ತಂಬೂರಿಯನ್ನು ಇಟ್ಟರು. ಅಲ್ಲಿಯತನಕ ತಂದೆ ಬೇರೆಯವರಿಗೆ ಪಾಠ ಹೇಳಿಕೊಡುತ್ತಿದ್ದದ್ದನ್ನೇ ಕೇಳಿಸಿಕೊಂಡಿದ್ದ ರೊಶನಾರ ಅವತ್ತು ಅದೆಷ್ಟು ಚೆನ್ನಾಗಿ ಹಾಡಿದಳೆಂದರೆ ತಂದೆ ಅಲ್ಲಾವುದ್ದೀನ್ ಖಾನರು ಕಣ್ಣೀರಿಟ್ಟರು.

ಆರಂಭದಲ್ಲಿ ಅಲ್ಲಾವುದ್ದೀನರು ತಮ್ಮ ಮಗಳಿಗೆ ಹಾಡುವುದರಲ್ಲಿ ತರಬೇತಿ ನೀಡಿದರಾದರೂ ಅವರ ಉದ್ದೇಶವೇ ಬೇರೆ ಆಗಿತ್ತು. ಅದೇ ಹೊತ್ತಿಗೆ ಅವರು ತಮ್ಮ ಶಿಷ್ಯ ರವಿಶಂಕರ್‌ಗೆ ಸಿತಾರ್ ಹೇಳಿಕೊಡುತ್ತಿದ್ದರಿಂದ ತಮ್ಮ ಮಗಳಿಗೆ ಸುರ್‌ಬಹಾರ್ ಎಂಬ ವಾದ್ಯವನ್ನು ಕಲಿಯಲು ಸೂಚಿಸಿದರು. ಕೇವಲ ನಾಲ್ಕು ವರ್ಷಗಳಲ್ಲಿ ಸಿತಾರ್ ಮತ್ತು ವೀಣೆಯ ಮಿಶ್ರಣದಂತಿರುವ ಸುರ್‌ಬಹಾರ್ ವಾದ್ಯವನ್ನು ನುಡಿಸುವುದರಲ್ಲಿ ರೊಶನಾರ ಪಾಂಡಿತ್ಯ ಪಡೆದಳು. ಅಷ್ಟೇ ಅಲ್ಲ, ಮುಂಗೋಪಿಯಾಗಿದ್ದ ತನ್ನ ತಂದೆಗೆ ಹೆದರುತ್ತಿದ್ದ ಇತರೆ ವಿದ್ಯಾರ್ಥಿಗಳಿಗೆ ತಾನೇ ಸಂಗೀತ ಮತ್ತು ವಿವಿಧ ವಾದ್ಯಗಳನ್ನು ಕಲಿಸುತ್ತಿದ್ದಳು.

ರೊಶನಾರಾ ಒಂಭತ್ತು ವರ್ಷದ ಹುಡುಗಿಯಾಗಿದ್ದಾಗ ರವಿ ಶಂಕರ್ ಆಕೆಯ ತಂದೆಯಿಂದ ಸಿತಾರ್ ಕಲಿಯಲು ಬಂದಿದ್ದರು. ಆತ ಅವರ ಪ್ರೀತಿಯ ಶಿಷ್ಯನಾಗಿದ್ದ. ರೊಶನಾರಾಳಿಗೆ 16 ವರ್ಷ ವಯಸ್ಸಾದಾಗ ರವಿಶಂಕರ್‌ಗೆ 21 ವರ್ಷ ವಯಸ್ಸು. ಆಗ ಅವರಿಬ್ಬರನ್ನು ಮದುವೆ ಮಾಡಿಸಿ ಎಂದು ಪ್ರಸ್ತಾಪ ಇಟ್ಟವರು ರವಿಶಂಕರನ ಅಣ್ಣ ನೃತ್ಯ ಕಲಾವಿದರಾಗಿದ್ದ ಉದಯ್ ಶಂಕರ್. ಹುಡುಗ ಹುಡುಗಿ ವಿವಿಧ ಧರ್ಮದವರಾಗಿದ್ದರೂ ಆ ಮದುವೆ ಪ್ರಸ್ತಾಪಕ್ಕೆ ಅಲ್ಲಾವುದ್ದೀನ್ ಖಾನರು ಒಪ್ಪಿಗೆ ನೀಡಿದರು. ಸ್ವತಃ ಅಲ್ಲಾವುದ್ದೀನ್ ಖಾನರು ಮುಸಲ್ಮಾನರಾಗಿದ್ದು ಪ್ರತಿದಿನ ಐದು ಬಾರಿ ನಮಾಜ್ ಮಾಡುತ್ತಿದ್ದರೂ ಶಾರದಾ ಮಾತೆಗೂ ಪೂಜೆ ಸಲ್ಲಿಸುವಷ್ಟು ಜಾತ್ಯತೀತರಾಗಿದ್ದರು.

ವಾಸ್ತವವಾಗಿ ಆಗಿನ್ನೂ ಅನ್ನಪೂರ್ಣಾಗಾಗಲಿ, ರವಿಶಂಕರ್‌ಗಾಗಲಿ ಮದುವೆಯಾಗುವ ವಯಸ್ಸಾಗಿರಲಿಲ್ಲ. ಆದರೆ ರವಿಶಂಕರ್‌ಗೆ ತಮ್ಮ ಗುರುಗಳ ಬಗ್ಗೆ ಅಪಾರ ಭಕ್ತಿ, ಜೊತೆಗೆ ತನ್ನ ಸ್ವಂತ ತಂದೆಯಿಂದಲೂ ಸಿಗದಿದ್ದ ಪ್ರೀತಿಯನ್ನು ಗುರು ತೋರಿದ್ದಕ್ಕೆ ಕೃತಾರ್ಥ ಭಾವನೆ. ಇಂತಹ ಗುರು ತನ್ನ ಪುತ್ರಿಯನ್ನೇ ತನಗೆ ಕೊಡಲು ಒಪ್ಪಿದ್ದರಿಂದ ಸಂತೋಷಗೊಂಡ ರವಿಶಂಕರ್ ದಾಂಪತ್ಯ ಜೀವನದ ಕಷ್ಟಗಳ ಬಗ್ಗೆ ಹೆಚ್ಚು ಯೋಚಿಸಲೇ ಇಲ್ಲ.

ರೊಶನಾರ ಅವರು ಹುಣ್ಣಿಮೆಯ ದಿನದಂದು ಹುಟ್ಟಿದ್ದರಿಂದ ಅವರಿಗೆ ಆಗಿನ ಮೈಹಾರ್ ದೇಶದ ಮಹಾರಾಜ ಅನ್ನಪೂರ್ಣಾ ಎಂದು ನಾಮಕರಣ ಮಾಡಿದ್ದರು. ರವಿಶಂಕರ್‌ರನ್ನು ಮದುವೆಯಾದ ನಂತರ ರೊಶನಾರರ ಹೆಸರು ಅನ್ನಪೂರ್ಣಾ ಎಂದು ಬದಲಾಯಿತು. ಹೊಸ ದಂಪತಿಗಳು ದೆಹಲಿಗೆ ಬಂದು ಹೊಸ ಬದುಕನ್ನು ಕಟ್ಟಿಕೊಳ್ಳಲು ಪ್ರಾರಂಭಿಸಿದರು. ತನ್ನ ಪತಿ ಸಂಗೀತಗಾರನಾಗಿ ಹೆಚ್ಚಿನ ಎತ್ತರಕ್ಕೆ ಬೆಳೆಯಲಿ ಎಂದು ಆಶಿಸಿದ ಅನ್ನಪೂರ್ಣಾ ತನ್ನ ಸಂಗೀತವನ್ನು ನಿರ್ಲಕ್ಷಿಸಿ ಗಂಡನ ಏಳಿಗೆಗೆ ಶ್ರಮಿಸಿದರು. ಪತಿ ರವಿಶಂಕರ್ ಜೊತೆ ಕೆಲವು ಸಂಗೀತ ಗೋಷ್ಠಿಗಳನ್ನೂ ನೀಡಿದರು. ಅವರಿಬ್ಬರಿಗೂ ಒಬ್ಬ ಮಗ ಹುಟ್ಟಿದ.

ಆದರೆ ವರ್ಷಗಳು ಉರುಳಿದಂತೆ ರವಿಶಂಕರ್ ಬದಲಾಗಲಾರಂಭಿಸಿದರು. ಹೆಂಡತಿಯನ್ನು ನಿರ್ಲಕ್ಷಿಸಿ ಕಮಲಾ ಎಂಬಾಕೆಯೊಂದಿಗೆ ಸಂಬಂಧ ಬೆಳೆಸಿಕೊಂಡರು. ಸಂಪ್ರದಾಯದ ದಾಂಪತ್ಯದಲ್ಲಿ ನಂಬಿಕೆ ಇಟ್ಟಿದ್ದ ಅನ್ನಪೂರ್ಣಾರಿಗೆ ಇದರಿಂದ ಆಘಾತವಾಯಿತು. ತನ್ನ ಗಂಡನನ್ನು ತೊರೆದು ತಂದೆಯ ಮನೆಗೆ ಮರಳಿದರು. ಇದಾದ ಕೆಲವರ್ಷಗಳಲ್ಲೇ ಅವರ ಗುರುವೂ ಆಗಿದ್ದ ತಂದೆ ಅಲ್ಲಾವುದ್ದೀನ್ ಖಾನರು ತೀರಿಕೊಂಡಾಗ ಅನ್ನಪೂರ್ಣಾರಿಗೆ ಮತ್ತಷ್ಟು ಆಘಾತವಾಯಿತು. ಆಗ ಅವರು ಸಾರ್ವಜನಿಕ ಬದುಕಿನಿಂದ ಸಂಪೂರ್ಣವಾಗಿ ವಿಮುಖರಾದರು.

ಕಂಡಹಾಗೆ



editorlankesh@gmail.com • ಗೌರಿ ಲಂಕೇಶ್

ಇತ್ತ ರವಿಶಂಕರ್ ಸಂಗೀತ ಕ್ಷೇತ್ರದಲ್ಲಿ ಬೆಳೆಯುತ್ತಾ, ಸಂಬಂಧಗಳನ್ನು ಏರ್ಪಡಿಸಿ ಕೊಳ್ಳುತ್ತಾ ಹೋದರು. ಹಲವಾರು ವರ್ಷಗಳ ಕಾಲ ಕಮಲಾ ಎಂಬುವವರೊಂದಿಗೆ ಜೀವನ ನಡೆಸಿದರು. ಪೆನ್ನಿ ಎಸ್ಟಾಬ್ರೂಕ್ ಎಂಬ ಅಮೆರಿಕದ ಯುವತಿ ಭಾರತಕ್ಕೆ ಬಂದು ಶಿಷ್ಯೆಯಾದಾಗ ಕಮಲಾಗೆ ಕೈಕೊಟ್ಟರು ರವಿಶಂಕರ್. ಪೆನ್ನಿ ಮೂಲಕ ಅಮೆರಿಕಾದಲ್ಲಿ ಸಂಪರ್ಕಗಳನ್ನು ಪಡೆದು ಅಲ್ಲಿ ಸಂಗೀತ ಕಾರ್ಯಕ್ರಮಗಳನ್ನು ನೀಡಲಾರಂಭಿಸಿದರು. ಅಮೆರಿಕದಲ್ಲಿ ಸೂ ಜೋನ್ಸ್ ಎಂಬಾಕೆಯನ್ನು ಭೇಟಿಯಾಗಿ ಪೆನ್ನಿಗೂ ಕೈಕೊಟ್ಟರು. ಸೂ ಜೊತೆ ನೋರಾ ಜೋನ್ಸ್ ಎಂಬ ಮಗಳನ್ನು ಪಡೆದರು. ಇದೆಲ್ಲದರ ಮಧ್ಯೆ ಸುಕನ್ಯಾ ರಾಜನ್ ಎಂಬಾಕೆಯೊಂದಿಗೂ ಸಂಬಂಧ ಇಟ್ಟುಕೊಂಡು ಆಕೆಯೊಂದಿಗೂ ಅನೂಷ್ಕಾ ಎಂಬಾಕೆಗೆ ತಂದೆಯಾದರು.

ಆದರೆ ಅವರು ಅನ್ನಪೂರ್ಣಾರವರಿಗೆ ಮಾತ್ರ ವಿಚ್ಛೇದನೆ ನೀಡಿರಲಿಲ್ಲ, ಅದಕ್ಕೆ ಕಾರಣ ತಾವು ಅಧಿಕೃತವಾಗಿ ವಿಚ್ಛೇದನೆ ಪಡೆದರೆ ಮತ್ತೆ ಮದುವೆ ಎಂಬ ಸಂಕೋಲೆಯಲ್ಲಿ ಸಿಕ್ಕಿಹಾಕಿಕೊಳ್ಳುತ್ತೇನೆ ಎಂಬ ಎಚ್ಚರಿಕೆ. ಆದರೆ ಅನೂಷ್ಕಾಳಿಗೆ ಜನ್ಮ ನೀಡಿದ್ದ ಪ್ರಿಯತಮೆ ಸುಕನ್ಯಾ ರಾಜನ್ ಹಟ ಮಾಡಿದ್ದರಿಂದ ವಿಧಿ ಇಲ್ಲದೆ ಕೊನೆಗೂ ಅನ್ನಪೂರ್ಣಾರಿಗೆ ವಿಚ್ಛೇದನೆ ನೀಡಿ ಆಕೆಯನ್ನು ಮದುವೆಯಾದರು.

ಇತ್ತ ಅನ್ನಪೂರ್ಣಾ ಅವರು ತಾವಾಯಿತು, ತಮ್ಮ ಸಂಗೀತ ಅಭ್ಯಾಸವಾಯಿತು ಎಂದು ಬದುಕುತ್ತಾ ತಮ್ಮ ಮಗ ಶುಭೇಂದ್ರನಿಗೆ ಸಂಗೀತ ತರಬೇತಿ ನೀಡುತ್ತಾ ದಿನಗಳನ್ನು ದೂಡುತ್ತಿದ್ದರು. ಆದರೆ ಅವರ ಅಂತಹ ಸೀಮಿತ ಬದುಕಿಗೂ ರವಿಶಂಕರ್ ಕಲ್ಲು ಹಾಕಿದರು. ತಮ್ಮ ಮಗ ಸುಭೇಂದ್ರ ತಮ್ಮೊಂದಿಗೆ ಅಮೆರಿಕಕ್ಕೆ ಬರಬೇಕೆಂದು ಒತ್ತಾಯ ಮಾಡಿದರು ರವಿಶಂಕರ್. ಆದರೆ ಅನ್ನಪೂರ್ಣಾ "ನೀನು


ತಂದೆ ಅಲ್ಲಾವುದೀನ್ ಖಾನ್ ಮತ್ತು ಅನ್ನಪೂರ್ಣ

ಇನ್ನೂ ಒಂದಿಷ್ಟು ವರ್ಷ ಸರಿಯಾಗಿ ಸಂಗೀತವನ್ನು ಅಭ್ಯಾಸ ಮಾಡುವ ಅವಶ್ಯಕತೆ ಇದೆ. ಈಗಲೇ ಹೋಗಬೇಡ" ಎಂದರೂ ಮಗ ಕೇಳಲಿಲ್ಲ, ತನ್ನ ತಾಯಿಯನ್ನು ತೊರೆದ ಮಗ ತಂದೆ ರವಿಶಂಕರ್ ಜೊತೆ ಹಾರಿಹೋದ. ಆನಂತರ ಆತ ತನ್ನ ತಂದೆಯೊಂದಿಗೆ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರೂ ಆತ ತನ್ನದೇ ಛಾಪನ್ನು ಮೂಡಿಸಲಿಲ್ಲ. ಕೊನೆಗೊಂದು ದಿನ ಆತ ಅನಾರೋಗ್ಯದಿಂದ ಅಮೆರಿಕದಲ್ಲೇ ತೀರಿಕೊಂಡ.

ಅನ್ನಪೂರ್ಣಾ ಅವರು ತಮ್ಮ ಮುಂಬೈ ಫ್ಲಾಟಿನಲ್ಲಿ ಸಂತೆಯಂತೆ ಬದುಕುತ್ತಾ ತಮಗೆ ಇಷ್ಟವಾದ ಶಿಷ್ಯಂದಿರಿಗೆ ಮಾತ್ರ ಸಂಗೀತ ಕಲಿಸಲಾರಂಭಿಸಿದರು. ಖ್ಯಾತ ಕೊಳಲು ವಾದಕ ಹರಿಪ್ರಸಾದ್ ಚೌರಾಸಿಯಾ ಅವರು ಅನ್ನಪೂರ್ಣಾರ ವಿದ್ಯಾರ್ಥಿಗಳಲ್ಲಿ ಒಬ್ಬರು ಎಂದರೆ ಅನ್ನಪೂರ್ಣಾರ ಪಾಂಡಿತ್ಯ ಎಂತಹದ್ದು ಎಂಬುದನ್ನು ಅರ್ಥಮಾಡಿಕೊಳ್ಳಬಹುದು.

ಅನ್ನಪೂರ್ಣಾ ಅವರಿಂದ ಸಂಗೀತ ಕಲಿಯಲು ಬಂದವರಲ್ಲಿ ರೂಶಿ ಕುಮಾರ್ ಪಾಂಡ್ಯ ಎಂಬುವವರು ಒಬ್ಬರು. ಪಾಂಡ್ಯ ಅನ್ನಪೂರ್ಣಾರಿಗಿಂತ ವಯಸ್ಸಿನಲ್ಲಿ 13 ವರ್ಷ ಕಿರಿಯರು. ಅವರು ತಮ್ಮ ಗುರು ಅನ್ನಪೂರ್ಣಾರ ಜೀವನದಲ್ಲಿ ಘಟಿಸಿದ ದುರಂತಗಳಿಗೆ ಸಾಕ್ಷಿಯಾಗಿದ್ದರು. ಕೊನೆಗೊಂದು ದಿನ ತಮ್ಮನ್ನು ಮದುವೆಯಾಗಿ ಎಂದು ತಮ್ಮ ಗುರುವನ್ನೇ ಪಾಂಡ್ಯ ಕೋರಿದರು. ಮೊದಲು ಅನ್ನಪೂರ್ಣಾ ಸಮ್ಮತಿಸಲಿಲ್ಲ. ಆದರೆ ಪಾಂಡ್ಯನ ಶ್ರದ್ಧೆ ಮತ್ತು ಸಮರ್ಪಣೆಯನ್ನು ಗಮನಿಸಿ ಒಪ್ಪಿದರು. 1982ರಲ್ಲಿ ಪಾಂಡ್ಯ ಅವರನ್ನು ಮದುವೆಯಾದಾಗ ಅನ್ನಪೂರ್ಣಾ ಅವರ ವಯಸ್ಸು 55.

ಅನ್ನಪೂರ್ಣಾ ಅವರಿಗೆ ಪದ್ಮಭೂಷಣ, ಸಂಗೀತ ನಾಟಕ ಅಕಾಡಮಿ ಪ್ರಶಸ್ತಿ ಮತ್ತು ಶಾಂತಿನಿಕೇತನ ಕೊಡುವ ಪ್ರತಿಷ್ಠಿತ ದೇಶಿಕೋತ್ತಮ ಪ್ರಶಸ್ತಿಗಳು ಲಭಿಸಿವೆ. ಆದರೆ ಅವರು ಅದ್ಯಾವುದನ್ನೂ ಸ್ವೀಕರಿಸಲು ತಮ್ಮ ಮನೆಯಿಂದ ಹೊರಗೆ ಬಂದದ್ದಿಲ್ಲ, ಬದಲಾಗಿ ಆ ಪ್ರಶಸ್ತಿಗಳನ್ನು ಅವರ ಮನೆಗೆ ತಂದು ಕೊಡಲಾಗಿದೆ. ಹಾಗೆ ಕೊಡುವಾಗ ತಮ್ಮ ಫೋಟೋ ತೆಗೆಯಲೂ ಅವರು ಒಪ್ಪದಿರುವುದರಿಂದ ಅವರು ಈಗ ಹೇಗಿದ್ದಾರೆ ಎಂದು ಹೊರಗಿನವರಿಗೆ ಗೊತ್ತಿಲ್ಲ.

ಅಷ್ಟೇ ಅಲ್ಲ, ಅವರಿಗೆ ಪ್ರತಿ ತಿಂಗಳು ಲಕ್ಷಾಂತರ ರೂಪಾಯಿ ಸಂಭಾವನೆ ತರುವ ಹುದ್ದೆಯನ್ನು ಮಧ್ಯಪ್ರದೇಶದ ಸರ್ಕಾರ ಕೊಡಲು ಮುಂದಾದಾಗ ಅದನ್ನು ಅವರು ತಿರಸ್ಕರಿಸಿದರು. ಅಭಿಮಾನಿಗಳು ಬೇಡಿದರೂ ಅವರು ಕಾರ್ಯಕ್ರಮವನ್ನು ನೀಡಲು ಎಂದೂ ಸಮ್ಮತಿಸಿಲ್ಲ.

ಒಂದಾನೊಂದು ಕಾಲದಲ್ಲಿ ತನ್ನ ಪತಿ ರವಿಶಂಕರ್ ಮತ್ತು ಸಹೋದರ ಅಲಿ ಅಕ್ಬರ್ ಖಾನ್‌ಗಿಂತಲೂ ಪ್ರತಿಭಾವಂತೆ ಎಂದು ಪರಿಗಣಿಸಲಾದ ಅನ್ನಪೂರ್ಣಾ ಎಂಬ ಕಲಾವಿದೆ ಹೀಗೆ ಸಾರ್ವಜನಿಕ ಬದುಕಿನಿಂದ ದೂರ ಉಳಿಯುವುದರಿಂದ ಅವರು ಸಂಗೀತ ಕ್ಷೇತ್ರಕ್ಕೆ ಅನ್ಯಾಯ ಮಾಡುತ್ತಿಲ್ಲವೇ ಎಂದು ಕೇಳಿದರೆ ಅವರು "ಹಾಗೇನಿಲ್ಲವಲ್ಲ, ನಾನು ನನ್ನ ಕಲೆಯನ್ನು ಕೆಲವರಿಗೆ ಹೇಳಿ ಕೊಡುವ ಮೂಲಕ ನನ್ನ ಸೇವೆಯನ್ನು ಸಲ್ಲಿಸಿದ್ದೇನೆ" ಎನ್ನುತ್ತಾರೆ.

ಇವತ್ತಿಗೂ ಅವರು ತಮ್ಮ ಕೆಲವೇ ಕೆಲವು ಶಿಷ್ಯರಿಗೆ ಸಂಗೀತವನ್ನು ಹೇಳಿಕೊಡುತ್ತಾರೆ. ಆದರೆ ತಾವು ಕಲಿತಿದ್ದ ಸುರ್‌ಬಹಾರ್ ಎಂಬ ವಾದ್ಯವನ್ನು ಮಿಡಿಸುವ ಮೂಲಕವಲ್ಲ, ಬದಲಾಗಿ ಹಾಡುವ ಮೂಲಕ. ಅವರನ್ನು ಬಲ್ಲವರು ಹೇಳುವ ಪ್ರಕಾರ ಅವರ ಪಾಠಗಳು ಪ್ರತಿನಿತ್ಯ ಪ್ರಾರಂಭವಾಗುವುದೇ ಮಧ್ಯರಾತ್ರಿಯ ನಂತರ. ಅದು ಮುಂಜಾನೆ ಬೆಳಕು ಹರಿಯುವ ತನಕ ಸಾಗುತ್ತದೆ. . .

ಒಂದು ರೀತಿಯಲ್ಲಿ ಅನ್ನಪೂರ್ಣಾರ ಬದುಕಿನಂತೆ. .

■



ಕತ್ತಲ ದಾರಿ ದೂರ

• ವೈದೇಹಿ

ದೇಶವನ್ನೇ ದಿಗ್ಭ್ರಮೆಗೊಳಿಸಿದ ಘಟನೆಗಳು ಎಷ್ಟು ನಡೆದುಹೋದವೋ. ಮೊನ್ನೆ ದೆಹಲಿಯ ಘಟನೆ ಮಾತ್ರ ಪ್ರಪಂಚಕ್ಕೇ ಮನುಷ್ಯಲೋಕ ತಲುಪಿದ ಒಂದು ಕರಾಳ ದುರ್ದೆಸೆಯನ್ನು ಇನ್ನಿಲ್ಲದಂತೆ ತೋರಿಸಿಬಿಟ್ಟಿತು. ಮನೆಮನೆಗಳ ಮೂಲೆಮೂಲೆಗೂ ತಲುಪಿದ, ಕೋಟಿಕೋಟ್ಯಾರ ಹೊರಡಿಸಿದ, ಮಾತು ಕಸಿದು ಮನಸ್ಸನ್ನು ಬೆಚ್ಚಿಬಡಿಸಿದ ಹೃದಯವಿದ್ರಾವಕ ವಾರ್ತೆ. ನಡೆದದ್ದು ದೆಹಲಿಯಲ್ಲಿ ಎಂದು ಒತ್ತರಿಸಲು ಸಾಧ್ಯವಾಗದಂತೆ ನಮ್ಮೂರಲ್ಲೇ ನಮ್ಮ ಬೀದಿಯಲ್ಲೇ ನಡೆದ ಹಾಗೆ ಎಲ್ಲರ ಗಮನ ಹರಿದು ಛೀಮಾರಿ ಪಡೆದ, ಅತ್ಯಂತಿಕ ವೇದನೆಯಿಂದ ಕಾಣದ ಆ ಹುಡುಗಿಗಾಗಿ ಮಿಡಿದ ಘಟನೆ. ಲಜ್ಜೆ ಲವಲೇಶ ಇದ್ದ ಪುರುಷರೂ ತಲೆತಗ್ಗಿಸುವಂತಹ ಕುರೂಪ ದರ್ಶನವಿದು. ಆದರೆ ಅವರು ತಲೆ ತಗ್ಗಿಸಿದರಷ್ಟೇ ಸಾಕೆ? ಪ್ರಶ್ನೆ ಯುಗಾಂತರಗಳದು.


ಇಷ್ಟಾಗಿಯೂ ಇದು ಮಹಿಳೆಯರ ಅತಂತ್ರ ಅಭದ್ರ ಬದುಕಿನ ಕೇವಲ ಒಂದು ಪುಟವನ್ನಷ್ಟೇ ತೋರಿಸುತ್ತದೆ. ರಾಕ್ಷಸೀಕೃತ್ಯದ ಒಂದು ಮುಖವಷ್ಟೇ ಇಲ್ಲಿದೆ, ಹೊರಬಾರದೆ ಅಲ್ಲಲ್ಲೇ ಮುಚ್ಚಿ ಹೋಗುವ, ಪ್ರಕಟವೇ ಆಗದ, ಬಾಯಲ್ಲಿ ವಿವರಿಸಲೂ ಸಾಧ್ಯವಾಗದಂತಹ ಘಟನೆಗಳು ಈ ದೇಶದ ತುಂಬ ತುಂಬಿವೆ. ಆ ಘಟನೆಯ ನಂತರವಂತೂ ಸರಣಿ ಸರಣಿಯಾಗಿ ಅತ್ಯಾಚಾರ ಪ್ರಕರಣಗಳು ಹೊರಬೀಳುತ್ತಿವೆ. ಕಾರಣ, ಒಂದು ರೀತಿಯಲ್ಲಿ, ತತ್ತರಿಸಿದ ಜನಸಾಗರದ ಪ್ರತಿಕ್ರಿಯೆಯಿಂದ ಉಂಟಾದ ಧೈರ್ಯವೂ ಇರಬಹುದು.

ಯಾರವರು, ರಕ್ಕಸರೋ ಹದ್ದು ಗಿಡುಗಗಳೋ. ಮನುಷ್ಯರಂತೂ ಅಲ್ಲ. ಅವರಲ್ಲಿ ಒಬ್ಬನೇ ಒಬ್ಬನ ಹೃದಯವೂ ಕರಗಲಿಲ್ಲ ಎಂದರೆ ಮಾನವನಲ್ಲಿನ ಸಾತ್ವಿಕತೆ ಸಾಯುತ್ತಿರುವುದು, ಮೃಗೀಯತೆ ಅದರ ಜಾಗದಲ್ಲಿ ಪ್ರತಿಷ್ಠಾಪನೆಯಾಗುತ್ತಿರುವುದು ಎಲ್ಲ ಹೌದೆ ಎಂದು ಹೌಹಾರುವಂತಾಗಿದೆ. ಒಬ್ಬ ತಾಯಿ, ಇವರನ್ನೂ ಪಾಪ, ಹೆತ್ತು ಹಾಲೂಡಿದಳಲ್ಲ; ಸಾಕುತ್ತಿರುವುದು ಇಂಥವರನ್ನು ಎಂದೇ ಅರಿಯದೆ. ಈ ದೇಶದಲ್ಲಿ ಉತ್ತರ ದಕ್ಷಿಣ ಎನ್ನದೆ ಎಲ್ಲೆಲ್ಲಿಯೂ 'ಅಮ್ಮ' 'ಮಾ' 'ಮಾತಾ' ಕಾವ್ಯಾತ್ಮಕವಾಗಿ ಪೂಜಿಸಲ್ಪಡುವವಳು. ಆರಾಧಿಸಲ್ಪಡುವವಳು. 'ಅಮ್ಮನವರ' 'ದೇವಿಯ' 'ಶಕ್ತಿ ದೇವತೆಯ' ದೇವಸ್ಥಾನಗಳೋ ನಮ್ಮಲ್ಲಿ ಹೆಜ್ಜೆಗೊಂದು. ಆ ಹೋಮ ಈ ಹೋಮ ಇತ್ಯಾದಿ ಪವಿತ್ರ ಹೋಮಾಗ್ನಿಯನ್ನು ಒಂದಲ್ಲ ಒಂದು ಕಡೆ ಉರಿಸಿಕೊಂಡೇ ಇರುವ ಉನ್ನತ ಆಧ್ಯಾತ್ಮ ಶಕ್ತಿಯ ದೇಶ ನಮ್ಮದು. ಅಂಥಲ್ಲಿ, ಒಂದೆಡೆ ಎಳ್ಳು ಜೀರಿಗೆ ಬೆಳೆವ ತಾಯಿಯನ್ನೇ ಕೊಲ್ಲುತ್ತಿದ್ದೇವೆ. ಇನ್ನೊಂದೆಡೆ ಹೆಣ್ಣಿನ ಮೇಲೆಯೇ ನಡೆಯುವ ನಂಬಲಸದಳ ಹೇಯ ಪೈಶಾಚಿಕ ಕೃತ್ಯಗಳು, ಆಕ್ರಮಣಗಳು. ರಾತ್ರಿ ಬಿಡಿ, ಮಹಿಳೆಯ ಪಾಲಿಗೆ ಹಗಲುಗಳೂ ಕತ್ತಲಾಗುತ್ತಿವೆ.

ಹಗಲುಗಳು ಕತ್ತಲಾಗುವುದೇ ನಿಜವಾದ ಪ್ರಳಯವಷ್ಟೆ?

'ಮಗೂ ಜೋಪಾನ' ಎನ್ನುವುದು ನಿತ್ಯ ಮಂತ್ರವೀಗ. ಹೆತ್ತವರ ಮಾತ್ರವಲ್ಲ, ಅವಳೊಳಗಿನದೂ. ನಿಜ, ಅವಳಿಗೀಗ ಹೊರಗಿನ ಬಾಗಿಲುಗಳು ತೆರೆದಿವೆ. ಆದರೆ ಅಷ್ಟೇ ಅವು ಮುಚ್ಚಿಕೊಂಡೂ ಇವೆ. ಒಳಹೋದವಳಿಗೆ ದಿಗ್ಬಂಧ ಮಾಡಿದಂತೆ. ಪ್ರತಿಮಾ ದಾಮಿನೀ ಸೌಜನ್ಯ ಸುನೀತಾ, . . ದಿಗ್ಬಂಧನಕ್ಕೊಳಗಾದವರ ಸಾಲು ದೊಡ್ಡದಿದೆ.

ಹೆಣ್ಣು- ಮಾನಮರ್ಯಾದೆ- ಮಾನಭಂಗ ಒಟ್ಟಿಗೇ ಸಾಗಿಕೊಂಡೇ ಉದ್ದಕ್ಕೂ ಬಂದಿವೆ. ಲಾಗಾಯ್ತಿನಿಂದಲೂ, ಹೆಣ್ಣು ಎಂದರೆ ಒಂದು ಜೀವವಲ್ಲ, ಅದೊಂದು ಅಂಗಾಂಗಗಳ ಸಂಕೀರ್ಣ, ಬಳಕೆಯ ವಸ್ತು, ಗಂಡಸರು ಹೇಗೆ ಬೇಕಾದರೂ ಬಳಸಬಹುದಾದ ಒಂದು ಸಾಮಗ್ರಿ! ಶಾಲೆಯಲ್ಲಿ, ಮನೆಯಲ್ಲಿ, ಮೂಲೆ ಕೋಣೆಗಳಲ್ಲಿ, ವಾಹನಗಳಲ್ಲಿ ಹಾದಿಯಲ್ಲಿ, ನಿರ್ಜನ ಬೀದಿಯಲ್ಲಿ ಹಿಂಸ್ರಮೃಗಗಳ ದಾಳಿಗೆ ಆಹುತಿಯಾಗುವ ಮಿಕಗಳು! ಕಾಡದಾರಿಯಲ್ಲಿ ಒಂಟಿ ಹುಡುಗಿ ಶಾಲೆಗೆ ಹೋಗಿ ಬರಲಾರಳು. ಬೆಳಗಿನ ಹೊತ್ತು ಗುಡ್ಡೆಗೂ ಹೋಗಲಾರಳು. ಕತ್ತೆಕಿರುಬಗಳು ಹೊಂಚುತ್ತವೆ, ಎತ್ತಿಕೊಂಡು ಹೋಗುತ್ತವೆ. ಹೆಣ್ಣು ಮಕ್ಕಳೂ ಭೂತಾಯಿಯ ಮಕ್ಕಳಲ್ಲವೆ? ಏನೆಂದರೂ ಆಕೆ ಕೊನೆಗೂ ಕಾಣುವುದು ಅಂಗಾಂಗಗಳಾಗಿ ಮಾತ್ರವೇ ಎಂದಾದರೆ ದೇಹವೇ ಅವರಿಗೆ ಶಾಪ ಅಂತಷ್ಟೆ? ಬದುಕಲು ಬಂದವರಲ್ಲವೆ ಅವರು? ಅವರ ಘನತೆಗೆ ಬೆಲೆಯಿಲ್ಲವೆ?



ಅತ್ಯಾಚಾರಕ್ಕೆ ಬಲಿಯಾದ ಅನಾಮಿಕ ಯುವತಿಯ ಅಂತಿಮ ಯಾತ್ರೆ

ಸಿಂಗಾಪುರದ ಆಸ್ಪತ್ರೆಯಿಂದ 'ಬಿಡುಗಡೆ'



ದೆಹಲಿಯ ಮನೆಯತ್ತ ಕೊನೆಯ ಪಯಣ

ದೆಹಲಿ ಅತ್ಯಾಚಾರಕ್ಕೋ? ಆಡಳಿತಕ್ಕೋ?

ರೇಪ್ ಅಂಡ್ ಮರ್ಡರ್ ಎಂಬುದು ಮಾಮೂಲಿಯಾಗಿಬಿಟ್ಟಿರುವ ಇಂದಿನ ಸನ್ನಿವೇಶದಲ್ಲಿ ಡಿಸೆಂಬರ್ 16ರ ರಾತ್ರಿ 9.30ರ ವೇಳೆಗೆ ರಾಜಧಾನಿ ದೆಹಲಿಯಲ್ಲಿ ಸಂಚರಿಸುತ್ತಿದ್ದ ಬಸ್ಸೊಂದರಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಮತ್ತು ಪೈಶಾಚಿಕ ಹಿಂಸಾಚಾರವನ್ನು ಕಂಡು ಇಡೀ ದೇಶಕ್ಕೆ ದೇಶವೇ ಬೆಚ್ಚಿಬಿದ್ದಿದೆ.

ಆದರೆ ದೆಹಲಿಯ ಪಾಶವಿಕ ಘಟನೆ ಮಾನವೀಯ ಅಂತಃಕರಣವಿರುವ ಎಲ್ಲರನ್ನೂ ಕದಲಿಸಿದೆ. ಈ ದೇಶದಲ್ಲಿ ಯಾವೊಬ್ಬ ಮಹಿಳೆಯೂ ಸುರಕ್ಷಿತವಲ್ಲ ಎಂಬ ಆತಂಕದಿಂದ ದೇಶಾದ್ಯಂತ ಜನರು ಬೀದಿಗಿಳಿಯುವಂತೆ ಮಾಡಿದೆ. ಒಟ್ಟಾರೆ ಈ ವಿದ್ಯಮಾನದ ಹಿನ್ನೆಲೆಯಲ್ಲಿ ನಾವು ಗಮನಿಸಲೇಬೇಕಾದ ಕೆಲವು ಪ್ರಮುಖ ಅಂಶಗಳಿವೆ.

ಈ ಪ್ರತಿಭಟನೆಗಳಲ್ಲಿ ಹೆಚ್ಚಾಗಿ ಭಾಗವಹಿಸಿದವರು ವಿದ್ಯಾರ್ಥಿಗಳು. ಈ ಕಾಲಘಟ್ಟದಲ್ಲಿ ಸಾಮಾನ್ಯವಾಗಿ ಜವಾಬ್ದಾರಿರಾಹಿತ್ಯವಾಗಿ ಕಂಡುಬರುವ ವಿದ್ಯಾರ್ಥಿ ಸಮುದಾಯ ತನ್ನ ಸಾಮಾಜಿಕ ಜವಾಬ್ದಾರಿಯನ್ನು ಪ್ರದರ್ಶಿಸಿದ್ದು ನಮ್ಮ ಸಮಾಜದ ಜೀವಂತಿಕೆಗೆ ಸಾಕ್ಷಿ. ಇಂದಿನ ಯುವಪೀಳಿಗೆಯ ಮೇಲೆ ಅವಿಶ್ವಾಸ ವ್ಯಕ್ತಪಡಿಸುವ ಬುದ್ಧಿಜೀವಿಗಳಿಗೆ ತಮ್ಮ ಕ್ರಿಯಾಶೀಲತೆಯ ಮೂಲಕ ಸರಿಯಾದ ಉತ್ತರ ನೀಡಿದ್ದಾರೆ.

ಆಕ್ರೋಶಭರಿತ ಯುವಜನತೆ ರಾಷ್ಟ್ರಪತಿ ಭವನಕ್ಕೆ ಮುತ್ತಿಗೆ ಹಾಕಿದರು. ಪೊಲೀಸರ ಲಾಠಿ ಏಟುಗಳನ್ನು ಲೆಕ್ಕಿಸದೆ ಬೀದಿ ಕಾಳಗಕ್ಕಿಳಿದರು. ದೆಹಲಿಯ ಜಂತರ್ ಮಂತರ್, ಇಂಡಿಯಾ ಗೇಟ್ ಮುಂತಾದ ಪ್ರದೇಶಗಳು ಅಕ್ಷರಶಃ ರಣರಂಗವಾಗಿ ಮಾರ್ಪಟ್ಟಿದ್ದವು.

ಭ್ರಷ್ಟ ಪೊಲೀಸ್ ವ್ಯವಸ್ಥೆ ಹಾಗೂ ಯಾವುದೇ ಸಾಮಾಜಿಕ ಜವಾಬ್ದಾರಿ ಮತ್ತು ಬದ್ಧತೆಗಳಿಗೆ ವಿಮುಖವಾಗಿರುವ ರಾಜಕೀಯ ವ್ಯವಸ್ಥೆ ಈ ಘೋರಕೃತ್ಯಗಳನ್ನು ಪೋಷಿಸಿ ಬೆಳೆಸುತ್ತಿವೆ ಎಂಬುದು ಸರ್ವವಿದಿತ. ಇನ್ನು ಈ ಬಗ್ಗೆ ಇರುವ ಕಾನೂನು ಏನಿದ್ದರೂ ಪುಸ್ತಕದ ಬದನೆಕಾಯಿ ಮಾತ್ರ!

ಒಟ್ಟಾರೆ ಈ ಘೋರ ಘಟನೆಯಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ರಾಜಕೀಯ ಅಧಿಕಾರ ಕೇಂದ್ರಗಳು ನಡೆದುಕೊಂಡ ರೀತಿ ಮಾತ್ರ ಅತ್ಯಂತ ನಾಚಿಕೆಗೇಡಿನದು. ಪ್ರಾರಂಭದಲ್ಲಿ ಈ ಘಟನೆಯ ಬಗ್ಗೆ ಈ ಅಧಿಕಾರ ಕೇಂದ್ರಗಳ ಧೋರಣೆ ಮಾಮೂಲಿಯಂತೆ 'ದಿನಾ ಸಾಯೋರಿಗೆ ಅಳೋರ್ಯಾರು?' ಎಂಬಂತಿತ್ತು. ಪ್ರತಿಭಟನಾಕಾರರನ್ನು ಅನಗತ್ಯ ಕಿರಿಕಿರಿ ಮಾಡುತ್ತಿರುವ ವ್ಯಕ್ತಿಗಳು ಎಂಬಂತೆ ಟ್ರೀಟ್ ಮಾಡಲು ಶುರು ಮಾಡಿದರು. ಶಾಂತಿಯುತವಾಗಿ ನಡೆಯುತ್ತಿದ್ದ ಪ್ರತಿಭಟನೆಯನ್ನು ಮಟ್ಟಹಾಕಲು ಪೊಲೀಸರು ನಡೆಸಿದ ಹೀನಾತಿಹೀನ ತಂತ್ರಗಳು ಮಾತ್ರ ಪೊಲೀಸರು ಯಾರ ಪರವಾಗಿದ್ದಾರೆ ಎಂಬ ಗಂಭೀರವಾದ ಪ್ರಶ್ನೆಯನ್ನು ಮುಂದೆ ತಂದಿವೆ.

ಈ ಘಟನೆ ನಡೆಯುವುದಕ್ಕೆ ಒಂದೆರಡು ಗಂಟೆಗಳ ಮುಂಚೆ ಇದೇ ಪಾತಕಿ ತಂಡ ಒಬ್ಬ ವ್ಯಕ್ತಿಯನ್ನು ಬಸ್ಸಿಗೆ ಹತ್ತಿಸಿಕೊಂಡು ಆತನ ಬಳಿಯಿದ್ದ 8,000 ರೂಪಾಯಿಗಳನ್ನು ದೋಚಿತ್ತು. ಈ ಬಗ್ಗೆ ಆತ ನೀಡಿದ್ದ ಕಂಪ್ಲೈಂಟನ್ನು ಸ್ಥಳೀಯ ಪೊಲೀಸರು ಗಂಭೀರವಾಗಿ ಪರಿಗಣಿಸಿರಲೇ ಇಲ್ಲ. ಒಂದು ವೇಳೆ ಪೊಲೀಸರು ಕಾರ್ಯಪ್ರವೃತ್ತರಾಗಿದ್ದರೆ ಮುಂದಿನ ದುರಂತವನ್ನು ತಡೆಯಬಹುದಿತ್ತು.

ಪೊಲೀಸರು ಕ್ಷಿಪ್ರವಾಗಿ ಮತ್ತು ಸ್ವಯಂಪ್ರೇರಿತವಾಗಿ ಕಾರ್ಯಾಚರಣೆಗಿಳಿದಿದ್ದು ಮಾತ್ರ ಪ್ರತಿಭಟನಾಕಾರರ ವಿರುದ್ಧ. ಈ ಘಟನೆಯನ್ನು ಖಂಡಿಸಿ ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ಫೇಸ್‌ಬುಕ್‌ನಲ್ಲಿ ಮನವಿ ಮಾಡಿಕೊಂಡ ವ್ಯಕ್ತಿಗಳನ್ನು ದೆಹಲಿಯ ಎಸಿಪಿ ಸಾಹೇಬರು ಬಂಧಿಸಿ ಮೂರುದಿನ ಅಕ್ರಮವಾಗಿ ತಿಲಕ್‌ನಗರ ಪೊಲೀಸ್ ಠಾಣೆಯಲ್ಲಿ ಕೂಡಿಹಾಕಿದರು. ಆದರೆ ವಾಸ್ತವದಲ್ಲಿ ಈ ಫೇಸ್‌ಬುಕ್ ಮನವಿ ಯಾವ ರೀತಿಯಲ್ಲೂ ಕಾನೂನುಬಾಹಿರವಾಗಿರಲಿಲ್ಲ.

ರಾಷ್ಟ್ರಪತಿ ಭವನ ಪ್ರದೇಶದಲ್ಲಿ ಕರ್ಫ್ಯೂ ವಿಧಿಸಿ, ಇಡೀ ದೆಹಲಿಯಲ್ಲಿ ನಿಷೇಧಾಜ್ಞೆ ಜಾರಿ ಮಾಡಿದರು. ದೆಹಲಿಯಾದ್ಯಂತ ಏಳು ಮೆಟ್ರೋ ಸ್ಟೇಷನ್‌ಗಳನ್ನು ಬಂದ್ ಮಾಡಿಸಿ ಜನರಿಗೆ ಸಾರಿಗೆ ವ್ಯವಸ್ಥೆ ಇಲ್ಲದಂತೆ ಮಾಡಲಾಯಿತು. ಶಾಂತಿಯುತವಾಗಿ ನಡೆಯುತ್ತಿದ್ದ ಪ್ರತಿಭಟನೆಯ ಮೇಲೆ ಲಾಠಿ ಚಾರ್ಜ್ ನಡೆಸಿ ಮಹಿಳೆಯರು, ವೃದ್ಧರು ಎಂಬುದನ್ನು ಲೆಕ್ಕಿಸದೆ ಎಲ್ಲರನ್ನೂ ಬಡಿದರು. ಒಟ್ಟು 375 ಅಶ್ರುವಾಯು ಶೆಲ್‌ಗಳನ್ನು ಸಿಡಿಸಲಾಯಿತು. ಹತ್ತಾರು ಜಲಫಿರಂಗಿಗಳನ್ನು ಬಳಸಲಾಯಿತು. ಪೊಲೀಸರು ತೋರ್ಪಡಿಸಿದ ರೋಷಾವೇಶ ಅಮಾನವೀಯ ಪೊಲೀಸ್ ವ್ಯವಸ್ಥೆಗೆ ಹಿಡಿದ ಕನ್ನಡಿ. ಈ ಪೊಲೀಸ್ ದೌರ್ಜನ್ಯದಲ್ಲಿ ನೂರಾರು ಮಂದಿ ಗಾಯಗೊಂಡಿದ್ದಾರೆ.

ಪೊಲೀಸ್ ಕ್ರಮಗಳ ಬಗ್ಗೆ ಸ್ವತಃ ದೆಹಲಿ ಹೈಕೋರ್ಟ್ ಆಕ್ಷೇಪ ವ್ಯಕ್ತಪಡಿಸಿದೆ. "ಶಾಂತಿಯುತ ಪ್ರತಿಭಟನೆಯಲ್ಲಿ ಒಂದುವೇಳೆ ದುಷ್ಕರ್ಮಿಗಳು ನುಸುಳಿದ್ದರೆ ಅಂಥವರನ್ನು ಪತ್ತೆಹಚ್ಚಿ ಕ್ರಮ ಜರುಗಿಸಬೇಕಾದ್ದು ಪೊಲೀಸರ ಕರ್ತವ್ಯ. ಆದರೆ ಪೊಲೀಸರು ಕೈಗೊಂಡಿರುವ ಕ್ರಮಗಳಿಂದಾಗಿ ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಕಸಿಯುವಂತಾಗಿದೆ" ಎಂದಿದೆ ನ್ಯಾಯಾಲಯ.



ಮಹಿಳೆಯರ ಮೇಲೂ ಅಮಾನುಷ ಲಾಠಿ ಚಾರ್ಜ್....

ದೆಹಲಿ ಪೊಲೀಸ್ ಅಧಿಕಾರಿಗಳ ದುರ್ವರ್ತನೆ ಎಷ್ಟೊಂದು ಮೇರೆಮೀರಿತ್ತು ಎಂದರೆ ಬಲಿಪಶು ಯುವತಿಯ ಹೇಳಿಕೆ ಪಡೆದುಕೊಳ್ಳಲು ನಿಯೋಜಿತರಾಗಿದ್ದ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್ ಉಷಾ ಚತುರ್ವೇದಿ ಎಂಬುವವರ ಮೇಲೂ ಒತ್ತಡ ಹೇರಲು ಹಿಂಜರಿಯಲಿಲ್ಲ, ನಿರ್ದಿಷ್ಟ ಪ್ರಶ್ನೆಗಳನ್ನಷ್ಟೇ ಕೇಳಬೇಕು ಎಂದು ಒತ್ತಡ ಹೇರಿದ್ದಲ್ಲದೆ ಈ ನಡಾವಳಿಯ ವಿಡಿಯೋ ಚಿತ್ರೀಕರಣ ಮಾಡದಂತೆ ತಡೆದರು. ಈ ಬಗ್ಗೆ ಸ್ವತಃ ಮ್ಯಾಜಿಸ್ಟ್ರೇಟ್ ಉಷಾ ಅವರೇ ಮುಖ್ಯಮಂತ್ರಿ ಶೀಲಾ ದೀಕ್ಷಿತ್ ಅವರಿಗೆ ದೂರು ನೀಡಬೇಕಾಗಿ ಬಂತು. ಪೊಲೀಸ್ ಅಧಿಕಾರಿಗಳನ್ನು ತರಾಟೆಗೆ

ನಾವು ಸ್ತ್ರೀ ಮಾತ್ರರಲ್ಲ, ಅವರು ಪುರುಷ ಮಾತ್ರರಲ್ಲ, ನಾವೆಲ್ಲರೂ ಅಂತಿಮವಾಗಿ ಮನುಷ್ಯರು ಎಂಬ ಪ್ರಜ್ಞೆ ಅರಳುವವರೆಗೂ-

ಮಲ್ಲಿಗೆ ಹೂವೆ, ಇಲ್ಯಾಕೆ ನಿಂತಿರುವೆ
ಎಲ್ಲಾರ ಕಣ್ಣು ನಿನ ಮ್ಯಾಲೆ
ಎಲ್ಲಾರ ಕಣ್ಣು ನಿನ ಮ್ಯಾಲೆ ಮಗಳೇ
ಇಲ್ಯಾಕೆ ನಿಂತೆ, ಒಳಹೋಗು

ಎಂಬ ಎಚ್ಚರ ಕೇಳುತ್ತಲೇ ಇರುತ್ತದೆ. ಅಂದಹಾಗೆ ಪುರುಷರಿಗೆ ಇದೆಲ್ಲ ತಮಗಾದ ಅವಮಾನವೆಂದು ಅನಿಸುವುದೇ ಇಲ್ಲವೆ, ಹೇಗೆ!

"ಇದಕ್ಕೆಲ್ಲ ಮೂಲ ಹೊಣೆ ಹೆಣ್ಣೇ; ಆಕೆಯ ಉಡುಗೆ, ಆಕೆಯ ಸ್ವಚ್ಛಂದತೆ, ನವಮಹಿಳೆಯ ಆರ್ಥಿಕ ಸ್ವಾತಂತ್ರ್ಯ ಸ್ವಂತ ಅಸ್ತಿತ್ವದ ಆಕೆಯ ಉಡಾಫೆ"-ಹೀಗೆ ನೂರಾರು ಕಾರಣಗಳನ್ನು ಒಡ್ಡಿ ಅಂತಿಮವಾಗಿ "ಮೃಗೀಯತೆಗೆ ಪ್ರಚೋದನೆಯನ್ನು ನೀಡುವವಳು ಮಹಿಳೆಯೇ" ಎಂಬಂಥ ತೀರ್ಮಾನಗಳೆಷ್ಟು ಬೇಕು! ತೀರ್ಮಾನ ನೀಡುವವರು ಟೀಕಾಸ್ತ್ರ ಬೀರುವವರು ಕೇವಲ ಪುರುಷರಷ್ಟೇ ಅಲ್ಲ, ಮಹಿಳೆಯರೂ. ಆ ವೇಷದಲ್ಲಿರುವವರು. ಆದರೆ ದುರಂತಕ್ಕೆ ಬಲಿಯಾದವರಲ್ಲಿ ಹೆಚ್ಚಿನವರು ಎಳೆಗೂಸುಗಳು, ಕಂದಮ್ಮಗಳು, ವೃದ್ಧೆಯರು, ನಾಳಿನ ಕನಸು ಹೊತ್ತು ನನಸನ್ನು ಅರಸುತ್ತ ಹಳ್ಳಿಯಿಂದ ನಗರಕ್ಕೆ ಬಂದ ಭವಿಷ್ಯಮುಖಿ ಗಂಭೀರ ಯುವತಿಯರು. ಇದು ಕೇವಲ ಆರ್ಥಿಕ ಸ್ವಾತಂತ್ರ್ಯ ಯುಗದ ಇವತ್ತಿನದಲ್ಲ, ಭೂಮಿ ಹುಟ್ಟಿದಾಗಿನಿಂದಲೂ ಅನೂಚಾನವಾಗಿ ನಡೆದುಕೊಂಡು ಬಂದದ್ದು, ಪುರಾಣ ಇತಿಹಾಸ, ಐತಿಹ್ಯ ಕತೆ ಕಥಾನಕ ಪ್ರಸಂಗ ಯಾವುದು ಬಿಚ್ಚಿದರೂ ಉದಾಹರಣೆಗಳ ರಾಶಿಯೇ ಸಿಗುವುದು ಎಂದಮೇಲೆ?

ಮರ್ಯಾದಾ ಹತ್ಯೆ, ಕೌಟುಂಬಿಕ ಕ್ರೌರ್ಯ, ಸಾಮಾಜಿಕ ಕ್ರೌರ್ಯ; ಹಿಂಸೆ, ಸರ್ವವ್ಯಾಪಿ ಹಿಂಸೆ ಜಗತ್ತನ್ನು ಆವರಿಸುತ್ತಿದೆ. ಬೆಳಗಿನ ಪತ್ರಿಕೆ ತೆರೆಯುವ ಮುನ್ನವೆ ಕೈನಡುಗುತ್ತದೆ. ಅಂತಹ ಸುದ್ದಿ ಯಾವುದೂ ಇರದೇ ಹೋಗಲಿ ಎಂದು ಹಾರೈಸಿಕೊಳ್ಳುತ್ತ ಪುಟ ತೆರೆದರೆ ಅಲ್ಲಿ ಅದು ಇದ್ದೇ ಇರುತ್ತದೆ. ಅತ್ತ ಟಿ.ವಿ. ಆನ್ ಮಾಡಿದರಂತೂ ಇನ್ನಿಲ್ಲದ ಹುರುಪಿನಲ್ಲಿ ನಡೆಯುವ 'ಸ್ಟೋರಿ'ಗಳು. ಎಲ್ಲವೂ 'ಕತೆ'ಗಳು. ಹೆಣ್ಣಿನ ಮೇಲೆ ಆಗುವ ದಾಳಿಯಂತೂ ಕತೆಯೇ ಆಗಿಬಿಡುವ ಕ್ರೌರ್ಯ. ಕತೆ ಕೇಳಿ ನೋಡಿ ಅದನ್ನು ಒಬ್ಬರಿಂದೊಬ್ಬರಿಗೆ ದಾಟಿಸಿ ಅಲ್ಲೇ ಅದನ್ನು ಬಿಟ್ಟು ಹೊಸಕತೆಗೆ ಕಾಯುವ ಕಾಯಿಲೆಯೊಂದು ಹರಡುತ್ತಿದೆಯೆ. 'ಸಮಾಜದ ಅಂತರ್‌ಸ್ವಾಸ್ಥ್ಯವೇ ಕೆಟ್ಟು ಹೋಗಿದೆ. ಕ್ಯಾನ್ಸರ್ ಅದಕ್ಕೆ ಕ್ಯಾನ್ಸರ್. ಮೂರನೇ ಹಂತದಲ್ಲಿದೆ' ಅಂತಂದರು, ಡಾಕ್ಟರೊಬ್ಬರು ಕೈ ಮೇಲೆತ್ತಿ, ತಮಾಷೆಯ ಮುಖಹೊತ್ತು, . . ಕಳಕಿದ ದನಿಯಲ್ಲಿ.

ಆಧುನಿಕ ಅಲ್ಲ ನಾವು. ನಾಗರಿಕರೂ ಅಲ್ಲ. ಗಂಡು ತನ್ನ ಇತರ ಸಂಬಂಧಗಳನ್ನೆಲ್ಲ ಕಳಚಿಕೊಂಡು ಕೇವಲ ಗಂಡು ಮಾತ್ರವಾಗುತ್ತಿರುವ ಅತಿಅನಾಗರಿಕ ಸಮಾಜಕ್ಕೆ ಕಾಲಿಡುತ್ತಿದ್ದೇವೆ. ನಮ್ಮಲ್ಲಿನ್ನೂ ಶಿಶುಬಲಿ ಇದೆ, ವಾಮಾಚಾರವಿದೆ, ಮಡೆಸ್ನಾನ ಇದೆ, ಹೆಣ್ಣುಭ್ರೂಣ ಹತ್ಯೆ ಇದೆ. ಅತ್ಯಾಚಾರವಂತೂ ಉಲ್ಬಣಾವಸ್ಥೆ ತಲುಪಿದೆ. ಯಾವುದೂ ಪ್ರಭುತ್ವದ ಸಂಕಲ್ಪ ಬಲವಿಲ್ಲದೆ ನಿಯಂತ್ರಣಕ್ಕೆ ಬಾರವು. ಪ್ರಭುತ್ವದ ಸಂಕಲ್ಪ ಶಕ್ತಿ ಜೊತೆಗೆ ವಿವೇಕವಂತರ ಸಹಯೋಗ ಎರಡೂ ಬೇಕೇ ಬೇಕೀಗ.

ಒಂದೇ ಒಂದು ಸಂತೋಷದ ವಿಚಾರವೆಂದರೆ ಗಂಡು ಹೆಣ್ಣೆನ್ನದೆ ಈ ಬಾರಿ ತರುಣ ಜನರು ಸಿಡಿದೆದ್ದಿರುವುದು. ವಿದ್ಯಾರ್ಥಿಗಳು ಒಟ್ಟಾಗಿ ಪ್ರತಿಭಟಿಸುತ್ತಿರುವುದು. ಮಹಾ ಅಸೂಕ್ಷ್ಮ ಜೀವಿಗಳ ಎದುರು ಸೂಕ್ಷ್ಮವಂತರ ಹೋರಾಟವಿದು. ನಿರಂತರ ಯುದ್ಧ. ಕವಿ ವೆಂಕಟೇಶ ಮೂರ್ತಿಯವರೆಂದಂತೆ 'ಇರುಳ ವಿರುದ್ಧ ಬೆಳಕಿನ ಯುದ್ಧ'. ಹೋರಾಡುವುದೊಂದೇ ಮಾರ್ಗ. ಯಾವಾಗ ವಿಧಾನಸಭೆಯಲ್ಲಿಯೇ 'ವೀಕ್ಷಣೆ' ನಡೆಯುತ್ತದೆಯೋ ಅಂಥವರೇ ಹೆಚ್ಚಿರುವ ನಾ'ಮರ್ದ್'ಗಳಿಂದ ಸುರಕ್ಷತೆ ಎಲ್ಲಿಂದ? ಆರಕ್ಷಕರೇ ನಾರಕ್ಷಕರಾದರೆ ರಕ್ಷಿಸುವವರು ಯಾರು? ತನ್ನದೇ ಧೃತಿ, ಮತಿ ಧೈರ್ಯಗಳೊಂದಿಗೇ ಯಾವ ತಂತ್ರ, ತಂತ್ರಜ್ಞಾನ ಆಕೆಯ ನೆರವಿಗೆ ಬರಬಲ್ಲುದು? ಅತಂತ್ರದಿಂದ ತನ್ನನ್ನು ಕಾಪಾಡಿಕೊಳ್ಳುವ ಸಕಲಾತಿಸಕಲ ಮಾರ್ಗಗಳನ್ನೂ ತಂತ್ರಗಳನ್ನೂ ತಂತ್ರಜ್ಞಾನಗಳನ್ನೂ ಕುರಿತು ಆಳಚಿಂತಿಸುವ ಅಳವಡಿಸುವ ಕಂಡುಕೊಳ್ಳುವ ಸಮಯ ಇದುವೇ. ಇನ್ನೊಂದಿಲ್ಲ.

ಮಹಿಳೆಯರನ್ನು ಚಿಟಿಕೆ ಮಾತ್ರದಲ್ಲಿ ಕತ್ತಲಿಗೆ ದೂಡಿಬಿಡುವ ನರಾಧಮರ ಶಿಕ್ಷೆಯಲ್ಲಾದರೂ ಸಡಿಲ ಕೂಡದು. ಅವರನ್ನು ಹೊರಜಗತ್ತಿಗಂತೂ ಸುತರಾಂ ಬಿಡಲಾಗದು. ಭುಜಬಲದ 'ಪರಾಕ್ರಮ'ದ ಅವರಿಗೆ ಅಂಥ ಪರಾಕ್ರಮ ಮೆರೆವ ರೀತಿಯನ್ನು ಪಲ್ಲಟಿಸಿ ತಿಳಿಸಿ ಸಶ್ರಮ ಶಿಕ್ಷೆ ನೀಡಬೇಕು. ಅವರು ದಣಿದು ಕೈ ಸೋತು ಪಶ್ಚಾತ್ತಾಪದಲ್ಲಿ ಬೆಂದು ಒಂಟಿಯಾಗಿ ಕಂಬಿಯೊಳಗೇ ಬಡವಾಗಿ ಕರಗಬೇಕು. ದೇಶದ ಪ್ರಥಮ ಪ್ರಜೆಯಿಂದಲೂ ಕ್ಷಮಾದಾನ ಪಡೆಯಲು ಅಸಾಧ್ಯವಾಗಬೇಕು. ಕೊನೇ ಪಕ್ಷ, ಇಷ್ಟಾದರೂ ಆಗಬೇಕು. ಆದೀತೆ?

ಕಳೆದ ವರ್ಷದ ಕೊಳೆಯನ್ನು ರಕ್ತಕಲೆಗಳನ್ನು ತೊಳೆದು ಶುಚಿಗೊಳಿಸುವಂತೆ ಸುರಿಯುತ್ತಿದೆ ಮಳೆ, ಹೊಸವರ್ಷದ ಬಾಗಿಲ ತೆರೆಯುತ್ತಿದೆ. ಕಲೆ ತೊಳೆಯಬಹುದು, ಹೋದ ಜೀವವನ್ನು ಮರುತರಲು ಆದೀತೆ? ಆ ನಗೆ, ಆ ಕನಸು ತುಂಬಿದ ಮಗಳನ್ನು ಮತ್ತೆ ತಂದು ಹೆತ್ತವರ ಮಡಿಲಲ್ಲಿ ಕೂಡಿಸಲು? ಮುತ್ತಿಟ್ಟು ತುತ್ತಿಟ್ಟು ಬೆಳೆಸಿದವರ ಆಕ್ರಂದನ ತಣಿಸಲು? ಜೀವಮಾನವಿಡೀ ಕುದಿವ ಸಂಕಟಕ್ಕೆ ತಂಪೆರೆಯಲು? ನಂದಿದ ದೀಪ ನಂದಿಯೇ ಹೋಯಿತು. ಮತ್ತೆ ಅದನ್ನು ಹಚ್ಚಲಾಗದು. ಅದೇ ಬೆಳಕು ಮತ್ತೆ ಬರಲುಂಟೆ?


ಹೊಸವರ್ಷದ ಸಂಭ್ರಮದಲ್ಲಿದ್ದ ಒಬ್ಬರು - "ಓ, ಅದೇನು ಯಾವತ್ತಿನಿಂದಲೂ ಇದ್ದದ್ದೇ. ಇಷ್ಟಕ್ಕೂ ಅದು ದೂರದಲ್ಲಿ, ದೆಲ್ಲಿಯಲ್ಲಿ ನಡೆದದ್ದು, ಅದಕ್ಕೆಲ್ಲ ಇನ್ನೂ ನೇತಾಡಿಕೊಂಡರೆ ಹೌದೆ? ಯಾವುದೂ ಆಯಿತು ಹೋಯಿತು ಅಂತಿರಬೇಕು. ಹೊಸ ವರ್ಷ ಹೊಸವರ್ಷವೇ" ಎಂದರು. ಅವರನ್ನೇ ನೋಡುವಂತಾಯಿತು. ದಿನನಿತ್ಯ ಇಂತಹವೇ ಸುದ್ದಿ ಓದಿ ಕೇಳಿ ನೋಡಿ ಜನ ಜಡಗಟ್ಟುವರೇನು? ನೇರ ತಾತ್ವಿಕ ಸತ್ಯಗಳಿಂದಲೇ? ಅವತ್ತು ಅಷ್ಟೊಂದು ನಡುಗಿದಂತೆ ಕಂಡ ವ್ಯಕ್ತಿ ಇಷ್ಟು ಬೇಗ ಎಲ್ಲ ಮರೆತರೆಂದರೆ!

ಏನಿದೆ ಮಹಿಳೆಯರ ಭವಿಷ್ಯದಲ್ಲಿ? ಯಾಕಿಷ್ಟು ಭಯ ತುಂಬಿದೆ? "ಕೆಲಭಯಗಳು ಮನುಷ್ಯರೆಲ್ಲರಲ್ಲೂ ಇರುವುದೇ. ಆದರೆ ಕೆಲವುಂಟಲ್ಲ, ಅದು ನಮಗೆ, ಹೆಣ್ಣುಮಕ್ಕಳಿಗೆ ಮಾತ್ರವೇ ಎಂಬಂತೆ ಆ ಕ್ಷಣಕ್ಕೆ ಉದ್ಭವವಾಗುತ್ತವೆ. ಸಮಾಜದ ವ್ಯವಸ್ಥೆಯೊಂದಿಗೆ ವಿಕೃತ ಮಾತ್ರವಲ್ಲ, ಸಾತ್ವಿಕ ಮನಸ್ಸುಗಳೂ ಹುಟ್ಟು ಹಾಕಿದ 'ಕೇಸ್ ಹಿಸ್ಟರಿ'ಗಳು ಐನ್ ಟೈಮಿನಲ್ಲಿ ಹೇಗೆ ಎದ್ದು 'ಭಯೋತ್ಪಾದನೆ' ಮಾಡುತ್ತವೆ!"- ನಡುರಾತ್ರಿ ರಸ್ತೆಯಲ್ಲಿ ಬಸ್ಸುಕೆಟ್ಟು ನಿಂತು, ಮೊಬೈಲ್‌ಗೆ ಸಿಗ್ನಲ್ಲೂ ಸಿಗದೆ, ಪ್ರಯಾಣಿಕರಲ್ಲಿ ತಾನೊಬ್ಬಳೇ ಮಹಿಳೆಯಾಗಿ ಬವಣೆ ಅನುಭವಿಸಿದ (ಓದಿ ಬರೆದು ಹುದ್ದೆಯಲ್ಲಿರುವ, ಧೈರ್ಯ ಸ್ಥೈರ್ಯವುಳ್ಳ) ಫೆಮಿನಿಸ್ಟ್ ಗೆಳತಿಯೊಬ್ಬಳ ಮಾತುಗಳಿವು, ಮತ್ತೆ ಮತ್ತೆ ನೆನಪಾಗುತ್ತಿದೆ.

ಈ ಕತ್ತಲೆ ಯಾಕೆ ಹೆದರಿಸುತ್ತಿದೆ?
ಹಗಲುಗಳೇಕೆ ಇರುಳಿನಂತಿವೆ?
ರಸ್ತೆಯ ಮೇಲೆ ಜನ ಇರುವರೆ?
ಅಯ್ಯೊ! ಇದ್ದಾರೆ! ಭಯ!
ಇಲ್ಲವಾದರೂ!

●


ಹೆಣವಾಗಿ ಮನೆ ಸೇರಿದಾಗ


ಮನೆಯಿಂದ ಸ್ಮಶಾನದತ್ತ ಹೋಗುತ್ತಿರುವುದು


ಬೆಳಕು ಹರಿಯುವ ಮುನ್ನ ಬೆಂಕಿಗೆ ಆಹುತಿ

ತೆಗೆದುಕೊಂಡ ಮುಖ್ಯಮಂತ್ರಿ ಕೇಂದ್ರ ಗೃಹಸಚಿವ ಸುಶೀಲ್ ಕುಮಾರ್ ಶಿಂಧೆಗೆ ಪತ್ರ ಬರೆದಿದ್ದಾರೆ. ಈ ಪತ್ರ ಹೇಗೋ ಮಾಧ್ಯಮಗಳಿಗೆ ಬಹಿರಂಗವಾಗಿ ಈ ಪಾಖಂಡಿ ಅಧಿಕಾರಿಗಳ ಹುನ್ನಾರ ತೀವ್ರ ಖಂಡನೆಗೆ ಗುರಿಯಾಯಿತು.

ಈ ಪ್ರತಿಭಟನೆಯ ಸಂದರ್ಭದಲ್ಲಿ ಮತ್ತೊಂದು ದುರಂತ ನಡೆದುಹೋಯಿತು. ಕೈಯಲ್ಲಿ ಲಾಠಿ ಹಿಡಿದು ಪ್ರತಿಭಟನಾಕಾರರನ್ನು ಅಟ್ಟಿಸಿಕೊಂಡು ಓಡುತ್ತಿದ್ದ ಸುಭಾಷ್ ತೋಮರ್ ಎಂಬ ಪೊಲೀಸ್ ಪೇದೆ ಇದ್ದಕ್ಕಿದ್ದಂತೆ ಕುಸಿದು ಬಿದ್ದ ಸುಮಾರು 50ರ ವಯಸ್ಸಿನ ಪೇದೆಗೆ ಹಾರ್ಟ್‌ಅಟ್ಯಾಕ್ ಆಗಿದ್ದುದು ಮೇಲುನೋಟಕ್ಕೇ ಕಂಡುಬಂದಿತ್ತು. ಆಸ್ಪತ್ರೆಯ ದಾಖಲೆಗಳ ಪ್ರಕಾರ ಪೇದೆಯ ಮೈಮೇಲೆ ಯಾವುದೇ ಗಂಭೀರ ಗಾಯದ ಗುರುತುಗಳಿರಲಿಲ್ಲ. ಮೊಣಕಾಲಿನಲ್ಲಿ ಸಣ್ಣ ತರಚಿದ ಗುರುತು ಮಾತ್ರ ಪತ್ತೆಯಾಗಿತ್ತು.

ಕುತಂತ್ರಿ ಪೊಲೀಸ್ ಅಧಿಕಾರಿಗಳು ತಮ್ಮ ಸಿಬ್ಬಂದಿಯ ಸಾವನ್ನು ಸಹ ದಾಳವಾಗಿ ಬಳಸಿಕೊಂಡು ಪ್ರತಿಭಟನಾಕಾರರನ್ನು ಹಣಿಯಲು ಸಂಚು ರೂಪಿಸಿಬಿಟ್ಟರು. ಪ್ರತಿಭಟನಾಕಾರರು ಹಲ್ಲೆ ಮಾಡಿದ್ದರಿಂದಲೇ ಪೇದೆ ಸತ್ತಿದ್ದಾಗಿ ಘೋಷಿಸಿ ಎಂಟು ಜನರ ಮೇಲೆ ಕೊಲೆ ಮೊಕದ್ದಮೆ ದಾಖಲಿಸಿ, ಜೈಲಿಗೆ ಕಳಿಸಿದರು.

ಆದರೆ ಸುಭಾಷ್ ತೋಮರ್ ಕುಸಿದುಬಿದ್ದಾಗ ಆತನಿಗೆ ಆರೈಕೆ ಮಾಡಿದ ಪೌಲೀನ್ ಎಂಬ ಯುವತಿ ಮತ್ತು ಯೋಗೇಂದ್ರ ಎಂಬ ಯುವಕ ತಾವು ಪ್ರತ್ಯಕ್ಷದರ್ಶಿಗಳಾಗಿ ಕಂಡದ್ದನ್ನು ಮಾಧ್ಯಮಗಳ ಎದುರು ಬಿಚ್ಚಿಟ್ಟು ಅಧಿಕಾರಿಗಳ ಕುತಂತ್ರವನ್ನು ಖಂಡಿಸಿದ್ದಾರೆ. ಈ ಘಟನೆಯ ವಿಡಿಯೋ ತುಣುಕುಗಳು ಸಹ ನಡೆದ ಸತ್ಯವನ್ನು ಸಾರಿ ಹೇಳುತ್ತಿವೆ.

ಇನ್ನು ಈ ಯುವತಿಯ ಶವಸಂಸ್ಕಾರ ನಡೆಸಿದ ರೀತಿಯಂತೂ ಮತ್ತಷ್ಟು ಅನುಮಾನ ಮೂಡಿಸುತ್ತದೆ. ಸಿಂಗಾಪುರ್‌ನಿಂದ ಬೆಳಗಿನ ಜಾವ 5.00 ಗಂಟೆಗೆ ವಿಮಾನದಲ್ಲಿ ಶವವನ್ನು ತರಿಸಿಕೊಂಡು ಬೆಳಕು ಹರಿಯುವ ಮುನ್ನವೇ ಗುಟ್ಟಾಗಿ ಸುಟ್ಟುಹಾಕಿಬಿಡಬೇಕೆಂಬುದು ಪೊಲೀಸ್ ಮತ್ತು ಆಡಳಿತ ಯಂತ್ರಾಂಗದ ಹುನ್ನಾರವಾಗಿತ್ತು. ಕುಟುಂಬ ವರ್ಗದವರ ತೀವ್ರ ವಿರೋಧದ ಹೊರತಾಗಿಯೂ ಬೆಳಗ್ಗೆ 7.00 ಗಂಟೆಗೆ ಶವವನ್ನು ಸುಟ್ಟು ಬೂದಿ ಮಾಡಿ ದೆಹಲಿ ಪೊಲೀಸರು ನಿಟ್ಟುಸಿರು ಬಿಟ್ಟಿದ್ದರು. ಈ ಎಲ್ಲಾ ಹೀನ ನಡವಳಿಕೆಗಳಿಂದ ಪೊಲೀಸ್ ವ್ಯವಸ್ಥೆ ಯಾರ ಪರವಾಗಿ ಮತ್ತು ಯಾರ ವಿರುದ್ಧವಾಗಿ ಕೆಲಸ ಮಾಡುತ್ತಿದೆಯೆಂಬುದನ್ನು ನಾವು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟವೇನಲ್ಲ...!!

ಕೇಂದ್ರ ಗೃಹ ಮಂತ್ರಿ ಸುಶೀಲ್‌ಕುಮಾರ್ ಶಿಂಧೆ ದೆಹಲಿ ಪೊಲೀಸರ ಕ್ರಮವನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ಶಿಂಧೆಯ ನಡವಳಿಕೆ ಅತ್ಯಂತ ಸಹಜವಾದುದು. ಮಹಾರಾಷ್ಟ್ರ ಮೂಲದ ಈ ಆಸಾಮಿ ತನ್ನ ಪೊಲೀಸ್ ಅಧಿಕಾರಿ ಹುದ್ದೆಗೆ ರಾಜೀನಾಮೆ ನೀಡಿಯೇ ರಾಜಕೀಯಕ್ಕೆ ಬಂದಿದ್ದು. ಈ ಸಂದರ್ಭದಲ್ಲಿ ಟಿವಿ ಚಾನೆಲ್‌ವೊಂದರ ಸಂದರ್ಶನದಲ್ಲಿ ಆಡಿದ ಮಾತುಗಳು ಕೇಂದ್ರ ಗೃಹಮಂತ್ರಿಯ ಬೇಜವಾಬ್ದಾರಿತನ ಮತ್ತು ಸಂವೇದನಾಶೂನ್ಯತೆಗೆ ಸಾಕ್ಷಿ. ಈತನ ಪ್ರಕಾರ ಶಾಂತಿಯುತ ಪ್ರತಿಭಟನೆಯಲ್ಲಿ ದುಷ್ಕರ್ಮಿಗಳು ಪ್ರವೇಶಿಸಿದರೆ ಅದಕ್ಕೆ ಪ್ರತಿಭಟನೆ ಮಾಡುತ್ತಿದ್ದವರೇ ಹೊಣೆಯಂತೆ. ಪ್ರತಿಭಟನಾಕಾರರ ಬಳಿಗೆ ನೀವು ಯಾಕೆ ಹೋಗಲಿಲ್ಲ ಎಂಬ ಪ್ರಶ್ನೆಗೆ "ನಾಳೆ ಮಾವೋವಾದಿಗಳೂ ಆಯುಧ ಹಿಡಿದು ಪ್ರತಿಭಟನೆ ಮಾಡಿದರೆ ನಾನು ಅಲ್ಲಿಗೂ ಹೋಗಬೇಕಾ?" "ನಾಳೆ ಛತ್ತೀಸ್‌ಗಡದಲ್ಲಿ ನೂರು ಮಂದಿ ಆದಿವಾಸಿಗಳು ಸತ್ತಿದ್ದಾರೆ ಎಂದರೆ ನಾನು ಅಲ್ಲಿಗೂ ಹೋಗಬೇಕಾ?" ಅಂತಾ ಮರುಪ್ರಶ್ನೆ ಎಸೆದಿದ್ದಾರೆ. "ವೀ ವಾಂಟ್ ಜಸ್ಟೀಸ್, ವೀ ವಾಂಟ್ ಜಸ್ಟೀಸ್ ಅಂತಾ ಕಿರುಚಿದರೆ ನ್ಯಾಯ ಸಿಕ್ಕಿಬಿಡುತ್ತಾ?" ಅನ್ನೋದು ಇವರ ಮತ್ತೊಂದು ಪ್ರಶ್ನೆ. ಈ ಮತಿಗೇಡಿಗೆ ಗೃಹಖಾತೆಯನ್ನು ಅಲಂಕರಿಸಿರುವ ಎರಡನೇ ದಲಿತ ಮಂತ್ರಿಯೆಂಬ (ಬೂಟಾಸಿಂಗ್ ನಂತರ) ಹೆಗ್ಗಳಿಕೆ ಬೇರೆ ಇದೆ. ನಾಚಿಕೆಗೇಡು!

ಈ ಘಟನೆಗೂ ತನಗೂ ಯಾವ ಸಂಬಂಧವೂ ಇಲ್ಲವೆಂಬಂತೆ ಕಣ್ಣುಮುಚ್ಚಿ ಕುಳಿತಿದ್ದ ಪ್ರಧಾನಿಯವರನ್ನು ಎಚ್ಚರಿಸಲು ಸಾವಿರಾರು ಮಂದಿ ರಾಷ್ಟ್ರಪತಿ ಭವನದತ್ತ ನುಗ್ಗಿದರು. ಅನಿವಾರ್ಯವಾಗಿ ತಮ್ಮ ದಂತಗೋಪುರದಿಂದ ಕೆಳಗಿಳಿದು ಬಂದ ಪ್ರಧಾನಿಗಳು ತಮಗೆ ಮೂರು ಮಂದಿ ಹೆಣ್ಣು ಮಕ್ಕಳಿದ್ದಾರೆ ಎಂಬುದನ್ನು ನೆನಪಿಸಿಕೊಂಡರು. ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸುವ ಭರವಸೆ ನೀಡಿದರು. ಅಲ್ಲಿಗೆ ಬರೋಬ್ಬರಿ ಒಂದು ವಾರ ಕಳೆದುಹೋಗಿತ್ತು. ಪ್ರಧಾನಿಯಿಂದ ಒಂದು ಆಶ್ವಾಸನೆಯ ಮಾತು ಕೇಳಲು ಸಾಮಾನ್ಯ ಜನರು ಪೊಲೀಸರೊಂದಿಗೆ ಕಾದಾಡಬೇಕಾಗಿ ಬಂದಿದ್ದು ಮಾತ್ರ ವಿಪರ್ಯಾಸವೇ ಸರಿ.

ಇನ್ನು ದೆಹಲಿಯ ಮಹಿಳಾ ಮುಖ್ಯಮಂತ್ರಿ ನಾಚಿಕೆಯಿಲ್ಲದೆ "ದೆಹಲಿ ರಾಷ್ಟ್ರದ ರಾಜಧಾನಿ ಮಾತ್ರವಲ್ಲ, ಅತ್ಯಾಚಾರಿಗಳ ರಾಜಧಾನಿಯೂ ಆಗಿದೆ" ಎಂದು ಹೇಳಿಕೊಂಡು ತಿರುಗುತ್ತಿದ್ದಾರೆ. ಆದರೆ ದಶಕಗಟ್ಟಲೆಯಿಂದ ತಾನೇ ದೆಹಲಿಯಲ್ಲಿ ರಾಜ್ಯಭಾರ ನಡೆಸುತ್ತಿದ್ದೇನೆ ಎಂಬುದು ಅವರಿಗೆ ಮರೆತುಹೋಗಿರಬಹುದು.

ಇನ್ನೂ ವಿರೋಧ ಪಕ್ಷಗಳು ಈ ವಿಷಯವನ್ನು ರಾಜಕೀಯಕ್ಕೆ ಬಳಸಿಕೊಂಡಿದ್ದನ್ನು ಬಿಟ್ಟರೆ ಪ್ರಾಮಾಣಿಕ ಕಾಳಜಿಯನ್ನು ನಾವು ಅವರಿಂದ ನಿರೀಕ್ಷಿಸುವುದು ಮೂರ್ಖತನವಾದೀತು. ಉಗ್ರ ಶಿಕ್ಷೆ, ಕಠಿಣ ಶಿಕ್ಷೆ, ನೇಣು ಶಿಕ್ಷೆ ಮುಂತಾದ ಚೀರಾಟಗಳ ಜೊತೆಗೆ ಕೆಮಿಕಲ್ ಕ್ಯಾಸ್ಟ್ರೇಷನ್ ಎಂದೆಲ್ಲ ನಿರರ್ಥಕವಾಗಿ ಚೀರಾಡುವುದರಲ್ಲಿ ಮಗ್ನರಾಗಿದ್ದಾರೆ. ದೆಹಲಿಯ ಬಿಜೆಪಿ ಘಟಕ ಯುವತಿಗೆ ಅಶೋಕ ಚಕ್ರ ಪ್ರಶಸ್ತಿ ನೀಡಬೇಕೆಂದು ಆಗ್ರಹಿಸಿ ಪುಕ್ಕಟೆ ಪ್ರಚಾರದ ಗುಂಗಿನಲ್ಲಿದೆ.

ಅಧಿಕಾರ ವರ್ಗಗಳ ಇಂಥಾ ಎಲ್ಲಾ ಜನದ್ರೋಹಿ ನಡವಳಿಕೆಗಳಿಗಿಂತ ತೀರಾ ಭಿನ್ನವಾಗಿ ನಿಂತಿದ್ದು ಮಾತ್ರ ನಾಡಿನ ಸಾಮಾನ್ಯ ಜನತೆ. ಜನರಿಗೆ ಬೇಕಿರುವುದು ರಾಜಕೀಯವೂ ಅಲ್ಲ, ಪ್ರಚಾರವೂ ಅಲ್ಲ, ಅನ್ಯಾಯಕ್ಕೊಳಗಾದ ಯುವತಿಗೆ ನ್ಯಾಯ ದೊರಕಿಸುವುದಷ್ಟೇ ಅವರ ಉದ್ದೇಶ.

ದೇಶಾದ್ಯಂತ ಲಕ್ಷಾಂತರ ಯುವಕ ಯುವತಿಯರಿಗೆ ಸ್ಫೂರ್ತಿಯಾಗಿ ನಿಂತಿದ್ದು ಮಾತ್ರ ಅದೇ ಧೈರ್ಯಶಾಲಿ ಯುವತಿ. ಸಾವುಬದುಕಿನ ಮಧ್ಯೆ ಹೋರಾಡುತ್ತಿದ್ದ ಆಕೆ ಪ್ರಜ್ಞೆ ಬಂದ ಕೂಡಲೇ ಕೇಳಿದ ಮೊದಲ ಪ್ರಶ್ನೆ "ಅವರನ್ನು (ಅಪರಾಧಿಗಳನ್ನು) ಬಂಧಿಸಿದ್ದಾರಾ?" ಎಂದು.

ಆಕೆಯ ಭೇಟಿಗೆ ಬಂದ ಗೆಳೆಯನೊಂದಿಗೆ ಆಕೆ ಹೇಳಿದ ಮಾತು "ನಾನು ಹೋರಾಟ ಮಾಡಬೇಕು" ಎಂದು. ಈ ಮಾತು ಲಕ್ಷಾಂತರ ಯುವಕ ಯುವತಿಯರಲ್ಲಿ ಅನ್ಯಾಯದ ವಿರುದ್ಧ ಹೋರಾಡುವ ಕಿಚ್ಚು ಮೂಡಿಸಿದೆ. ಕೊನೆಯ ಉಸಿರಿನವರೆಗೂ ಆಕೆ ತೋರಿಸಿದ ಸ್ಥೈರ್ಯ, ಸ್ವಾಭಿಮಾನ ಅನುಕರಣೀಯ. ತಾನು ಸಾಯುವ ಮುಂಚಿನ ದಿನ ಆಕೆ ತಾಯಿಗೆ ಹೇಳಿದ ಮಾತು "ಅಮ್ಮಾ, ನಾನು ಬದುಕಬೇಕು" ಎಂದು. ಆಕೆಯ ದಾರುಣ ಸಾವಿನಲ್ಲಿ ಯಾರ್‍ಯಾರ ಪಾಲಿದೆ?

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಆರೋಪಿಗಳ ಪರಿಚಯ

ಇಬ್ಬರು ಪ್ರಮುಖ ಆರೋಪಿಗಳಾದ ರಾಮಸಿಂಗ್ ಮತ್ತು ಆತನ ತಮ್ಮ ಮುಖೇಶ್ ಇಬ್ಬರೂ ಹಾಲಿ ಡ್ರೈವರ್‌ಗಳಾಗಿ ಕೆಲಸ ಮಾಡುತ್ತಿದ್ದಾರೆ. ಇಬ್ಬರಿಗೂ ಕ್ರಿಮಿನಲ್ ಹಿಸ್ಟರಿ ಇದೆ. ರಾಮಸಿಂಗ್ ಕೆಲದಿನಗಳ ಹಿಂದೆ ಅದೇ ಏರಿಯಾದ ವಿವಾಹಿತ ಮಹಿಳೆಯೊಬ್ಬಳೊಂದಿಗೆ ಪರಾರಿಯಾಗಿದ್ದ. ಕೆಲದಿನಗಳ ನಂತರ ಮತ್ತೆ ವಾಪಸ್ ಅದೇ ಏರಿಯಾಗೆ ಬಂದು ನೆಲೆಸಿದ ಆತ ಆ ಮಹಿಳೆ ಸತ್ತು ಹೋದಳೆಂದು ತಿಳಿಸಿದ್ದ. ಈ ಬಗ್ಗೆ ಪೊಲೀಸ್ ತನಿಖೆಯಿರಲಿ, ಸ್ಥಳೀಯರೂ ಆತನನ್ನು ಪ್ರಶ್ನಿಸಿರಲಿಲ್ಲ. ಮಹಿಳೆಯರಿಗೆ ಕಿರುಕುಳ ನೀಡುವುದು ಈತನ ಮಾಮೂಲಿ ಖಯ್ಯಾಲಿಯಾಗಿತ್ತು. ಆದರೆ ಏರಿಯಾದ ಸಜ್ಜನರು ಈತನನ್ನು "ಮೆಂಟಲ್ ಕೇಸು" ಅಂತ ಕರೆದು ಹೇಗೋ ಸಹಿಸಿಕೊಂಡಿದ್ದರು.

ವಿನಯ್ ಶರ್ಮ ಜಿಮ್ ಇನ್‌ಸ್ಟ್ರಕ್ಟರ್ ಆಗಿ ಕೆಲಸ ಮಾಡುತ್ತಿದ್ದ ಸಲ್ಮಾನ್ ಖಾನ್‌ನಂತೆ ಬಾಡಿ ಬೆಳೆಸಿಕೊಳ್ಳಬೇಕೆಂಬುದು ಆತನ ಬಯಕೆಯಾಗಿತ್ತಂತೆ. ಈತ ಕೆಲವೊಮ್ಮೆ ಪೂಜೆ ಪುನಸ್ಕಾರಗಳನ್ನೂ ನಡೆಸಿ ನಾಲ್ಕು ಕಾಸು ಸಂಪಾದಿಸುತ್ತಿದ್ದ. ಅದು ಅವನ ಕುಟುಂಬದ ಪರಂಪರಾಗತ ವೃತ್ತಿಯಾಗಿತ್ತು.

ಪವನ್ ಗುಪ್ತಾ ಹಣ್ಣಿನ ವ್ಯಾಪಾರಿಯಾಗಿದ್ದ. ಅಕ್ಷಯ್ ಠಾಕೂರ್ ಎಂಬುವವನು ಇತ್ತೀಚೆಗಷ್ಟೆ ಬಿಹಾರದಿಂದ ಉದ್ಯೋಗ ಅರಸಿ ದೆಹಲಿಗೆ ಬಂದು ಈ ರಾಮಸಿಂಗ್ ಬಳಗ ಸೇರಿಕೊಂಡಿದ್ದ. ಮಹಮದ್ ಅಫ್ರೋಜ್ ಅಲಿಯಾಸ್ ರಾಜು ಎಂಬ ಮೈನರ್ ಬಾಲಕನಿಗೆ ಹದಿನೆಂಟು ತುಂಬಲು ಇನ್ನೂ ಆರು ತಿಂಗಳು ಬಾಕಿಯಿದೆ. ಈತ ಆ ಬಸ್ಸಿನ ಕ್ಲೀನರ್ ಆಗಿ ಕೆಲಸ ಮಾಡುತ್ತಿದ್ದ. ಇವರೆಲ್ಲಾ ದಕ್ಷಿಣ ದೆಹಲಿಯಲ್ಲಿ ಬಹುತೇಕ ಸರ್ಕಾರಿ ನೌಕರರೇ ವಾಸಿಸುವ ಒಂದು ಸ್ಲಮ್‌ನ ನಿವಾಸಿಗಳಾಗಿದ್ದರು. ಎಲ್ಲರೂ 17ರಿಂದ 30ರ ವಯಸ್ಸಿನವರು.

ಶಿರಸಿ ತೋಟಗಾರ್ಸ್ ಎಂಬ ಟೈಟಾನಿಕ್!

ಶಿರಸಿ ಸೀಮೆಯ ಯಾವ ತೋಟಗನೂ ಇಂಥ ದೊಂದು ಅಧಃಪತನ ತೋಟಗಾರ್ಸ್ ಸೊಸೈಟಿ ಹೊಂದ ಬಹುದೆಂದು ಕನಸಲ್ಲೂ ಊಹಿಸಿರಲಿಕ್ಕಿಲ್ಲ! ಹೇಗೆ ಟೈಟಾನಿಕ್ ಎಂಬ ಬೃಹತ್ ಹಡಗು ಇಂಚಿಂಚಾಗಿ ಮುಳುಗಿ ತ್ತೋ, ಹಾಗೆ ಈ ಅಡಿಕೆ ತೋಟಗರ ಜೀವನಾಧಾರವಾದ ದೈತ್ಯ ಸಂಸ್ಥೆ ದಿನ-ದಿನವೂ ದಿವಾಳಿಯಾಗುತ್ತಿದೆ. ಶಿರಸಿ ಪ್ರಾಂತ್ಯದ ಅಡಿಕೆ ಬೆಳೆಗಾರರ ಹಿತ ಕಾಯುವ ದೂರದೃಷ್ಟಿಯಿಂದ ಶ್ರೀಪಾದ ಹೆಗಡೆ ಕಡವೆ ಎಂಬ "ಸಹಕಾರಿ ಸಂತ" ಕಟ್ಟಿ ನಿಲ್ಲಿಸಿದ್ದ ತೋಟಗಾರ್ಸ್ (ಟಿಎಸ್ಎಸ್) ಇವತ್ತು ಹೆಗ್ಗಣಗಳ ಬಿಲದಂತಾಗಿ ಹೋಗಿದೆ!

ಕಡವೆ ಹೆಗಡೆಯ ಅಳಿಯನಾದ ಶಾಂತಾರಾಮ ಹೆಗಡೆ ಶೀಗೇಹಳ್ಳಿ ಎಂಬ ಅರೆಶಿಕ್ಷಿತ ಪೊಳ್ಳು ಪುಢಾರಿ ಎಂದು ತೋಟಗಾರ್ಸ್‌ನ ಅಧ್ಯಕ್ಷನಾಗಿ ವಕ್ಕರಿಸಿದನೋ, ಅಂದಿನಿಂದಲೇ ತೋಟಗಾರ್ಸ್‌ಗೆ ದೊಡ್ಡ-ದೊಡ್ಡ ತೂತುಗಳು ಬೀಳಲಾರಂಭಿಸಿತು. ಈ ಶಾಂತಾರಾಮ ಹೆಗಡೆ ಯಾನೆ



ಟಿಎಸ್‌ಎಸ್ ಕಟ್ಟಡ




ಸ್ವೀಟ್ ಸುಫಾರಿ


ಶಾಂತೆಗ್ಗೆ ಅಂಡ್ ಕೋ ಬರೋಬ್ಬರಿ **101** ಕೋಟಿಯ ಕರ್ಮಕಾಂಡ ತೋಟಗಾರ್ಸ್‌ನ ಉದ್ದಗಲಕ್ಕೆ ಮಾಡಿರುವುದು ಸಹಕಾರ ಸಂಘಗಳ ನಿಯಮ **64** ರ ಪ್ರಕಾರ ನಡೆದ ಶಾಸನಬದ್ಧ ವಿಚಾರಣೆಯಲ್ಲಿ ನಿಸ್ಸಂಶಯವಾಗಿ ಸಾಬೀತಾಗಿಹೋಗಿದೆ!


ಚಪ್ಪೆ ಅಡಿಕೆ ಖರೀದಿ-ಮಾರಾಟದಿಂದ ಸಿಹಿ ಅಡಿಕೆ ಪೊಟ್ಟಣ ತಯಾರಿಕೆ-ಮಾರಾಟದ ತನಕ, ರೈತರಿಗೆ ಸಾಲ ಕೊಡುವುದರಿಂದ ಗೋಲ್‌ಮಾಲ್ ವ್ಯಾಪಾರಿಗಳಿಗೆ ಮುಂಗಡ ಹಣ ನೀಡುವವರೆಗೆ, ಎಟಿಎಂ, ಶೈತ್ಯಾಗಾರ, ನಕಲಿ ಟಿಎಸ್ಎಸ್ ಆಸ್ಪತ್ರೆ ನಡೆಸುವುದರಿಂದ ಹಿಡಿದು ಲಾಭ-ಹಾನಿ ಲೆಕ್ಕ ಪರಿಶೋಧನೆ ನಡೆಸುವವರೆಗೆ ಶಾಂತೆಗ್ಗೆ ಸಹಚರರು ಅಕ್ರಮ-ಅವ್ಯವಹಾರ-ಅವಾಂತರ ನಿರಂತರ-ನಿರಾತಂಕವಾಗಿ ನಡೆಸುತ್ತಲೇ ಬಂದಿದ್ದಾರೆ. ತಮ್ಮ ಅನ್ಯಾಯದ ವಿರುದ್ಧ ಧ್ವನಿ ಎತ್ತುವವರನ್ನು ಸಾಮ-ಭೇದ-ದಂಡ ಪ್ರಯೋಗದಿಂದ ಪಳಗಿಸುವ ಪರಿಪಾಠದ ಶಾಂತೆಗ್ಗೆ ಪಟಾಲಮ್‌ಗೆ ತೋಟಗಾರ್ಸ್ ಹಿತರಕ್ಷಣಾ ವೇದಿಕೆಯ ಸದಸ್ಯರು ಮಾತ್ರ ನಿದ್ದೆಗೆಡಿಸುತ್ತಿದ್ದಾರೆ. ಡ್ಯಾಮೇಜ್ ಕಂಟ್ರೋಲ್‌ಗೆ ಶಾಂತೆಗ್ಗೆ ತನಗೆ ತಾನೇ ಬೋಗಸ್ ಸನ್ಮಾನ ಮಾಡಿಸಿಕೊಂಡು ಹಲ್ಲು ಕಿಸಿಯುತ್ತಿರುವುದು ತೋಟಗಾರ್ಸ್ ಸದಸ್ಯರಿಗೆ ಪುಕ್ಕಟೆ ಮನರಂಜನೆ ಒದಗಿಸುತ್ತಿದೆ!

ನೂರಾರು ಕೋಟಿಯ ಸ್ಥಿರ-ಚರ ಆಸ್ತಿ ಮತ್ತು ವ್ಯವಹಾರದ ತೋಟಗಾರ್ಸ್ ಸೊಸೈಟಿಯನ್ನು ತ್ರೀ ಈಡಿಯಟ್ಸ್ ಆಳುತ್ತಿವೆ. ಅಧ್ಯಕ್ಷ ಶಾಂತಾರಾಮ ಹೆಗಡೆ, ಪ್ರಧಾನ ವ್ಯವಸ್ಥಾಪಕ ರವೀಶ್ ಹೆಗಡೆ ಮತ್ತು ಅಡಿಕೆ ವ್ಯಾಪಾರ ವಿಭಾಗದ ಯಜಮಾನ ಅನೀಲ್ ಮುಷ್ಟಗಿ ಎಂಬ ಈ ಮೂರು ಮೂರ್ಖರ ತೆವಲಿಗೆ ತಕ್ಕಂತೆ ತೋಟಗಾರ್ಸ್‌ನ ಅಷ್ಟೂ ಆಡಳಿತ ನಡೆಯುತ್ತಿದೆ. ಕಳ್ಳದಂಧೆಯಲ್ಲಿ ನಿಸ್ಸೀಮರಾದ ಈ ತ್ರಿಮೂರ್ತಿಗಳು ದುಂಡಗಾದಂತೆಲ್ಲ ಸದೃಢ ತೋಟಗಾರ್ಸ್ ಸಂಸ್ಥೆ ಮಾತ್ರ ಸೊರಗುತ್ತಿದೆ. ಶಾಂತೆಗ್ಗೆ ಮಾಡಿರುವ ಆಸ್ತಿ, ನಡೆಸುತ್ತಿರುವ ಐಷಾರಾಮಿ ಜೀವನವೇ ಸಾಕು, ತೋಟಗಾರ್ಸ್‌ನಲ್ಲಿ ಆದಂಥ ಹಗಲು ದರೋಡೆ ಆಗುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು! ಸಹಕಾರ ಇಲಾಖೆಯ ನಿರ್ಬಂಧ ಎಸ್.ಜಿ. ಹೆಗಡೆಯಿಂದ ಹಿಡಿದು ಆಯಕಟ್ಟಿನ ಅಧಿಕಾರಿಗಳನ್ನೆಲ್ಲ ತಮ್ಮ -"ಗೋಟಡಿಕೆ" ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕಿಸಬಲ್ಲ ಈ ಸಕಲ ಕಲಾವಲ್ಲಭ ತ್ರಯರ ಲೇಟೆಸ್ಟ್ ಲಫಡಾ 'ಪತ್ರಿಕೆ'ಗೆ ಸಾಕ್ಷ್ಯಾಧಾರ ಸಮೇತ ಸಿಕ್ಕಿದೆ.

ಅದು ತೋಟಗಾರ್ಸ್‌ಗೆ ಸಿಹಿ ಅಡಿಕೆ ಕಹಿಯಾದ ಕಥನ! ಟಿಎಸ್ಎಸ್‌ನ ತಲೆಗೆ ಮಕಮಲ್ ಟೋಪಿ ಏರಿಸುವ ತರಹೇವಾರಿ ಪ್ಲಾನ್-ಪ್ರಾಜೆಕ್ಟ್ ಶಾಂತೆಗ್ಗೆ ರವೀಶ್ ಹೆಗಡೆ ಮತ್ತು ಮುಷ್ಟಗಿ ಮಾಮನ ತಲೆಯಲ್ಲಿ ಆಗಾಗ ಹೊಳೆಯುತ್ತಲೇ ಇರುತ್ತದೆ. ಅಂಥ ಮನೆಮುರುಕು ಸ್ಕೀಮ್‌ನಲ್ಲಿ **2009** ರಲ್ಲಿ ಶುರುವಾದ ಸಿಹಿ ಅಡಿಕೆ ತಯಾರಿಕೆ ಮತ್ತು


ಶಾಂತಾರಾಮ


ಅನಿಲ್


ರವೀಶ್ ಹೆಗಡೆ


ಮಾರಾಟ ಯೋಜನೆಯೂ ಒಂದು. ಈ ಪ್ರಾಜೆಕ್ಟ್ ತ್ರೀ ಈಡಿಯಟ್ಸ್ ತಲೆಯಲ್ಲಿ ಬಂದಿದ್ದೇ ತಡ, ತೋಟಗಾರ್ಸ್ ಮತ್ತೊಂದು ಕೋಟಿ-ಕೋಟಿಯ ಕರ್ಮಕಾಂಡಕ್ಕೆ ಕೇಂದ್ರವಾಗಿ ಹೋಯ್ತು! ಇದು ಐದಾರು ಕೋಟಿ ರೂಪಾಯಿ ಹೂಡಿ ನಡೆಸುತ್ತಿರುವ ಪಕ್ಕಾ ದಗಾಕೋರ ದಂಧೆ. ಒಂದು ಅಂದಾಜಿನಂತೆ ಸುಮಾರು **18** ಕೋಟಿ ರೂಪಾಯಿ ವಹಿವಾಟು ತೋಟಗಾರ್ಸ್ ಸೊಸೈಟಿಯ ಆವಾರದಾಚೆ ಸ್ಥಾಪಿಸಲಾಗಿರುವ ಮೂರು ಸ್ವೀಟ್ ಸುಪಾರಿ ಘಟಕದಿಂದ ನಡೆಯುತ್ತಿದೆ. ಈ ದಗಲುಬಾಜಿ ಉದ್ಯಮದ ರೂವಾರಿಗಳು ತೋಟಗಾರ್ಸ್‌ಗೆ ಕನ್ನ ಹಾಕಿ ತಮ್ಮ ಬಳಗದ ಜೀರ್ಣೋದ್ಧಾರಕ್ಕೆ ಅನುಕೂಲವಾಗುವಂತೆ ಸದ್ರಿ ಸ್ವೀಟ್ ಸುಪಾರಿ ತಯಾರಿಕಾ ಒಡಂಬಡಿಕೆ-ಗುತ್ತಿಗೆ ಕರಾರು ಮಾಡಿಕೊಂಡಿದ್ದಾರೆ!!

ಸಕಲ ಸರಳ ಕಾನೂನು, ತೋಟಗಾರ್ಸ್‌ನ ಬೈಲಾ, ಸಹಕಾರ ಮತ್ತು ಕೈಗಾರಿಕಾ ಇಲಾಖೆಗಳ ನಿಯಮ ಬುದ್ಧಿಪೂರ್ವಕವಾಗಿ ಉಲ್ಲಂಘಿಸಿ ಚಿಪಗಿ, ಕಡವೆ ಮತ್ತು ಎಪಿಎಂಸಿ ಪ್ರಾಂಗಣದಲ್ಲಿ ಸಿಹಿ ಅಡಿಕೆ ಘಟಕ ಸ್ಥಾಪಿಸಲಾಗಿದೆ. "ಟಿಎಸ್ಎಸ್‌ನ ಟೈಗರ್ ಸ್ವೀಟ್ ಸುಪಾರಿ" ಎಂಬ ಬ್ರ್ಯಾಂಡ್ ಹೆಸರಿಂದ ದೇಶದ ವಿವಿಧ ರಾಜ್ಯಗಳಲ್ಲಿ ಮಾರಾಟ ಮಾಡುವ ದೊಡ್ಡ ಪ್ರಮಾಣದ ಉದ್ಯಮವಿದು. ಇದರ ಪ್ರಚಾರಕ್ಕೆ ಕಂಡ-ಕಂಡ ಊರಿನ ಗೋಡೆಗಳ ಮೇಲೆ ಜಾಹೀರಾತು ಬರೆಸಲಾಗಿದೆ. ದೂರದರ್ಶನದ ಹಲವು ವಾಹಿನಿಗಳಲ್ಲಿ ಆ್ಯಡ್ ತಿಂಗಳುಗಟ್ಟಲೆ ಬಿತ್ತರಿಸಲಾಗಿದೆ. ಟಿಎಸ್ಎಸ್‌ನ ಬೊಕ್ಕಸವನ್ನೇ ನುಂಗಿಹಾಕಿರುವ ಈ ಟೈಗರ್ ತಯಾರಿಕೆ ಬಗ್ಗೆ ತೋಟಗಾರ್ಸ್‌ನ ಯಾವ ಸರ್ವಸಾಧಾರಣ ಸಭೆಯಲ್ಲೂ ವಿಷಯ ಮಂಡಿಸಿದ್ದಿಲ್ಲ. ಪರವಾನಗಿ ಠರಾವು ಪಾಸು ಮಾಡಿಕೊಂಡಿದ್ದಿಲ್ಲ, ಇದು ಶಾಂತೆಗ್ಗೆ-ರವೀಶ್ ಮಾಣಿ ಮತ್ತು ಮುಷ್ಟಗಿ ಮಾಮಾರ ಏಕಪಕ್ಷೀಯ ನಿರ್ಧಾರ!

ಇದೊಂದು ಖಾಸಗಿಯವರೊಂದಿಗೆ ಸೇರಿಕೊಂಡು ಮಾಡಿರುವ ಅನಾಹುತಕಾರಿ ಬಿಸಿನೆಸ್. ತೋಟಗಾರ್ಸ್‌ನ ಬೈಲಾದಲ್ಲಿ ಖಾಸಗಿಯವರೊಂದಿಗೆ ಕೈಜೋಡಿಸಿ ಯಾವುದೇ ಉತ್ಪಾದನೆ **(manufacturing)** ಮಾಡಲು ಅವಕಾಶವೇ ಇಲ್ಲ, ಅಷ್ಟೇ ಅಲ್ಲ ತೋಟಗಾರ್ಸ್ ಸೊಸೈಟಿ ಸಹ ಯಾವುದೇ ಪ್ರತ್ಯೇಕ ಉತ್ಪಾದನೆ ತಯಾರಿಸುವಂತಿಲ್ಲ. ಆದರೂ ಸಿಹಿ ಅಡಿಕೆ ಉತ್ಪಾದನೆ ಕಾನೂನುಬಾಹಿರವಾಗಿ ಖಾಸಗಿಯವರ-ಅಂದರೆ ಅಧ್ಯಕ್ಷ ಶಾಂತೆಗ್ಗೆಯ ಖಾಸಾ ಖದೀಮ ಆದ್ಮಿಗಳ-ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ಇಷ್ಟು ದೊಡ್ಡ ಯೋಜನೆ ಕೈಗೆತ್ತಿಕೊಳ್ಳುವಾಗ ಕನಿಷ್ಠ ಪ್ರಾಜೆಕ್ಟ್ ವರದಿಯಾಗಲಿ-ನೀಲ ನಕ್ಷೆಯಾಗಲಿ ಬೇಡವಾ? ಅದೇ ತೋಟಗಾರ್ಸ್‌ನ ತುಂಡರಸರು ತಯಾರಿಸಿಕೊಂಡಿಲ್ಲ. ಸಹಕಾರ ಇಲಾಖೆ-ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕೈಗಾರಿಕಾ ಇಲಾಖೆಯಿಂದ ಪರವಾನಗಿ ಸಿಹಿ ಅಡಿಕೆ ತಯಾರಿಸಿಕೊಡುವ ಕರಾರು ಮಾಡಿಕೊಂಡಿರುವ ಖಾಸಗಿ ಮಂದಿ ಪಡೆದುಕೊಂಡಿಲ್ಲ. ಯೋಜನೆಗೆ ತೊಡಗಿಸಿರುವ ಬಂಡವಾಳ-ಭೂಮಿ-ಕಟ್ಟಡ ಮತ್ತು ಯಂತ್ರಗಳ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಅರ್ಥಾತ್ ಹೂಡಿಕೆ ಆಗಿರುವ ಬಂಡವಾಳಕ್ಕೆ ಯಾವ ಭದ್ರತೆಯೂ ಇಲ್ಲ. ಇದೊಂದು ಪಕ್ಕಾ ದೋನಂಬರ್ ದಂಧೆ. ಸರ್ಕಾರಕ್ಕೂ ಮೋಸ; ತೋಟಗಾರ್ಸ್‌ನ ನಂಬಿರುವ ಶೇರುದಾರ ಸದಸ್ಯರಿಗೂ ವಂಚನೆ.

ಆರಂಭದಿಂದಲೂ ಸಿಹಿ ಅಡಿಕೆ ವಿಭಾಗ ಲುಕ್ಸಾನ್ ಖಾತೆಗೆ ಸೇರುತ್ತಲೇ ಬಂದಿದೆ. ಇದನ್ನು ಮರೆಮಾಚಲು ಜಿಎಂ ರವೀಶ್ ಮಾಣಿ, ಅಧ್ಯಕ್ಷ ಶಾಂತೆಗ್ಗೆ ತುಂಬ ಉಪಾಯವಾಗಿ ಈ ಸಿಹಿ ಅಡಿಕೆ ವ್ಯವಹಾರ ಕೋಟ್ಯಂತರ ರೂ. ವಹಿವಾಟಿನ ಅಡಿಕೆ ವ್ಯಾಪಾರ ವಿಭಾಗಕ್ಕೆ ಸೇರಿಸಿ ಖೋಟಾ ಲೆಕ್ಕ ತೋರಿಸುತ್ತ ಬಂದಿದ್ದಾರೆ. ಸಿಹಿ ಅಡಿಕೆ ಲೆಕ್ಕವನ್ನು ಪ್ರತ್ಯೇಕವಾಗಿ ತೋರಿಸದಿರುವುದನ್ನು ಲೆಕ್ಕ ಪರಿಶೋಧಕರೇ ಆಕ್ಷೇಪಿಸಿದ್ದರು. ಅದನ್ನು ತೋಟಗಾರ್ಸ್


INDIA NON JUDICIAL

Government of Karnataka

e-Stamp

Contract for Manufacturing

This agreement on contract of Manufacturing is entered into on the 10th day of October, 2011 between 'The Totgars' Co-operative Sale Society Ltd., Sirsi (U.K.) represented by its Chairman Shri S. V. Hegde, Shigehalli, a/o 65, R/O Sirsi (hereinafter called the "First Party") and Shrimati Vishala Anilkumar Mushtagi, a/o 42, R/O

ವಿಶಾಲ್ ಮುಷ್ಟಗಿ ಹಾಗೂ ಶಾಂತಾರಾಮ್‌ರ ಕರಾರು ಪತ್ರ..


ವಿಶಾಲ್ ಮುಷ್ಟಗಿಯ ಫ್ಯಾಕ್ಟರಿ

ಶಾಂತೆಗ್ಗೆಯ ಸನ್ಮಾನೋನ್ಮಾದ!

ಬಿಡ ಅಡಿಕೆ ತೋಟಗರ ಬದುಕಾಗಿದ್ದ ಟಿಎಸ್ಎಸ್ ಸಂಸ್ಥೆಯನ್ನು ದಿವಾಳಿ ಅಂಚಿಗೆ ತಂದಿರುವ, ಜಿಲ್ಲಾ ಮಧ್ಯವರ್ತಿ ಬ್ಯಾಂಕ್ (ಕೆಡಿಸಿಸಿ) ನಲ್ಲಿ ತರಹೇವಾರಿ ಅವಾಂತರ ಮಾಡಿರುವ ಶಾಂತಾರಾಮ ಹೆಗಡೆ ಎಂಬ ಅಸಡ್ಡಾಳ ಪುಢಾರಿಗೆ ಈಗ ಅಂತಾರಾಷ್ಟ್ರೀಯ ಸಹಕಾರ ಪ್ರಶಸ್ತಿಯೊಂದು 'ಹುಡುಕಿಕೊಂಡು' ಬಂದಿದೆ. ಸದ್ರಿ ಖೋಟಾ ಸಹಕಾರಿ ರತ್ನ ಈ ವಿಶ್ವಸ್ವರ್ಣಶ್ರೀ. ಸಹಕಾರಿ ಸಂಸ್ಥೆಗಳಲ್ಲಿನ ನಿರಂತರ ಅವ್ಯವಹಾರ-ಅವಾಂತರ, ಕಾಂಗ್ರೆಸ್ ರಾಜಕಾರಣದಲ್ಲಿ ಹಿನ್ನಡೆಗಳಿಂದ 'ಶೇಪ್ ಔಟ್' ಆಗಿದ್ದ ಶಾಂತೆಗ್ಗೆಗೆ ಈ ಬೋಗಸ್ 'ಇಂಟರ್‌ನ್ಯಾಷನಲ್' ಪ್ರಶಸ್ತಿ ಬಡಿವಾರ ತೋರಿಸಲು ನೆಪವಾಗಿರುವುದು ಶಿರಸಿ ಮಂದಿಗೆ ಮನರಂಜನಾತ್ಮಕವಾಗಿದೆ.

ಶಾಂತೆಗ್ಗೆ ಪೆದ್ದು ಪುಢಾರಿ; ಸಹಕಾರಿ ರಂಗದ ಅಥವಾ ರಾಜಕಾರಣದ ಪ್ರಾಥಮಿಕ ತಿಳುವಳಿಕೆ ಕೂಡ ಇಲ್ಲದ ನಾರದನಂಥವ. ದೊಡ್ಡ ಸಹಕಾರಿ ಧುರೀಣರಾಗಿದ್ದ ಕಡವೆ ಹೆಗಡೆಯ ಅಳಿಯನೆಂಬ ಏಕೈಕ ಕಾರಣಕ್ಕೆ ಈತ ಮಂಚಾರಾಮನ್ನ ಹಾಗು ಚಲಾಯಿಸುತ್ತ 18 ವರ್ಷದಿಂದ ಅನವರತ ತೋಟಗಾರ್ಸ್ ಅಧ್ಯಕ್ಷನಾಗಿದ್ದಾನೆ. ಈತ ಆ ತೋಟಗಾರ್ಸ್‌ನಲ್ಲಿ ಮಾಡಿರುವ ನೂರೊಂದು ಕೋಟಿ ಕರ್ಮಕಾಂಡ ಇಡೀ ಜಿಲ್ಲೆಯಲ್ಲಿ ಜನಜನಿತ; ಕೆಡಿಸಿಸಿ ಬ್ಯಾಂಕಲ್ಲಿ ಮಾಡಿರುವ ಭಾನಗಡಿಗಳದೇ ಪ್ರತ್ಯೇಕ ಪುರಾಣ. ಕಾಂಗ್ರೆಸ್‌ನ ಜಿಲ್ಲಾಧ್ಯಕ್ಷನಾಗಿದ್ದ ಈತ ಆರ್.ವಿ. ದೇಶಪಾಂಡೆಯ ಚೇಲಾಗಿರಿಯೇ ರಾಜಕಾರಣಕ್ಕೆ ಅರ್ಹತೆ ಎಂದು ನಂಬಿರುವಾತ. ಶಿರಸಿ ಕ್ಷೇತ್ರದ ಕಾಂಗ್ರೆಸ್ ಕ್ಯಾಂಡಿಡೇಟಾಗಲು ಕಂಡ-ಕಂಡವರ ಕಾಲು ಹಿಡಿಯುತ್ತಿರುವ ಶಾಂತೆಗ್ಗೆ ಶಿರಸಿ ಸೀಮೆಯ ಸ್ವ-ಜಾತಿ ಹೈಗರೇ ಓಟು ಹಾಕುವುದಿಲ್ಲ. ಎಮ್ಮೆಲ್ಲೆಗಿರಿಗಿಂತ ನಾಲಾಯಕ್ ಎಂಬುದು ಆತ ಇಷ್ಟು ವರ್ಷದ ವಿವಿಧ ವಿನೋದಾವಳಿ ಕಂಡವರ ಅಭಿಪ್ರಾಯ.

ಕಳೆದ ಜನವರಿ 5 ರಂದು ನವದೆಹಲಿಯಲ್ಲಿ ಈ ಶಾಂತೆಗ್ಗೆಗೆ ಒಂದು ದುಡ್ಡು ಮಾಡುವ ಸಂಸ್ಥೆ ಅಂತಾರಾಷ್ಟ್ರೀಯ ಸಹಕಾರಿ ಪ್ರಶಸ್ತಿ ಕೊಟ್ಟಿದೆ. ಪ್ರಶಸ್ತಿ ಕೊಟ್ಟಿರುವುದು 'ಏಶಿಯನ್ ಅಕಾಡೆಮಿ ಆಫ್ ಫಿಲಂ ಅಂಡ್ ಟೆಲಿವಿಷನ್'ನ ಅಂಗಸಂಸ್ಥೆಯಾದ 'ವರ್ಲ್ಡ್ ಪೀಸ್ ಡೆವಲಪ್‌ಮೆಂಟ್ ಅಂಡ್ ರಿಸರ್ಚ್ ಫೌಂಡೇಷನ್'. ಈ ಸಂಸ್ಥೆಗೆ ಸಹಕಾರಿರಂಗದವರಿಗೆ ಪ್ರಶಸ್ತಿ ಕೊಡುವ ಹೆಚ್ಚುಗಾರಿಕೆಯಾಗಲಿ, ಯಾವುದೇ ಚೆಲೆಯಾಗಲಿ ಇಲ್ಲ. ಇದೊಂದು ಪಕ್ಕಾ ದುಡ್ಡು ದೋಚುವ ಸಂಸ್ಥೆ. ಶಾಂತೆಗ್ಗೆಯಂಥ ಅಗ್ಗದ ಹೊಗಳಿಕೆ-ಸನ್ಮಾನಕ್ಕೆ ಹಿಗ್ಗಿ ಹೀರೆಕಾಯಿ ಆಗುವ ದೌರ್ಬಲ್ಯದವರನ್ನೇ ಇಂಥ ಸಂಸ್ಥೆಗಳು ಹೆಕ್ಕಿ ತೆಗೆಯುತ್ತಾರೆ. ಅವರಿಗೆ ಪ್ರಶಸ್ತಿ ಬಂದಿದೆ ಎಂದು ಮುದಗೊಳಿಸುತ್ತಾರೆ. ಇಂಥ ಬೋಗಸ್ ಪ್ರಶಸ್ತಿ ಕೊಡುವವರ ಹಾವಳಿ ಈಗ ತೃತೀಯ ಜಗತ್ತಿನ ದೇಶಗಳಲ್ಲಿ ಜೋರಾಗಿದೆ. ಭಾರತದಲ್ಲಿ ಇಂಥ ಹಲವು ಹೋಪ್‌ಲೆಸ್ ಪ್ರಶಸ್ತಿದಾರರಿದ್ದಾರೆ. ನಂತರ ಪ್ರಶಸ್ತಿ ಪ್ರ'ಧಾ'ನಕ್ಕೆ ಪ್ರಯಾಣ ವೆಚ್ಚ ಹಾಕಿಕೊಂಡು ನೀವೇ ದಿಲ್ಲಿಗೆ ಬನ್ನಿ ಎನ್ನುತ್ತಾರೆ. ಬರುವಾಗ ಡೆಲಿಗೇಷನ್ ತನ್ನಿ ಎನ್ನುತ್ತವೆ. ಪ್ರಶಸ್ತಿ ವಿಜೇತ ಮತ್ತವನ ಪಟಾಲಂನ ಎಂಟ್ರಿ-ವಾಸ್ತವ್ಯದ ಫೀಸ್ ಎಂದು **2** ರಿಂದ **30** ಸಾವಿರದ ತನಕ ಪೀಕಿಸುತ್ತಾರೆ. ಶಾಂತೆಗ್ಗೆ ತನ್ನ ತೋಟಗಾರ್ಸ್ ಸೊಸೈಟಿಯ ಗ್ಯಾಂಗ್ ಕಟ್ಟಿಕೊಂಡು ಹೋಗಿದ್ದರು ದಿಲ್ಲಿಗೆ. ಈ ಶುಲ್ಕವೇ ಹತ್ತಿರತ್ತಿರ ಎರಡು ಲಕ್ಷ ದಾಟಿದೆ ಎಂಬುದು ಶಿರಸಿ ಜನರ ಅಂದಾಜು. ಒಟ್ಟಿನಲ್ಲಿ ಶಾಂತೆಗ್ಗೆ ಹಣಕೊಟ್ಟು 'ಪ್ರಶಸ್ತಿ' ಕೊಂಡುಕೊಂಡು ಬಂದಿದ್ದಾರೆ.

ಈ ಘನತೆ- ಗೌರವ ಇಲ್ಲದ ಪ್ರಶಸ್ತಿ ತೋರಿಸಿ ಶಾಂತೆಗ್ಗೆ ಶಿರಸಿಯಲ್ಲಿ ಕುಣಿದಾಡುವುದು ಮರ್ಯಾದಸ್ಥರಲ್ಲಿ ವಾಕರಿಕೆ ಬರುವಂತಿದೆ. ಈತನಿಗೆ ಟಿಎಸ್ಎಸ್ ಮತ್ತು ಕೆಡಿಸಿಸಿ ಬ್ಯಾಂಕ್‌ನವರು ಈಚೆಗೆ ಸನ್ಮಾನ ಹಮ್ಮಿಕೊಂಡಿದ್ದರು. ಆತ್ತೂ ಕರೆದು ಶಾಂತೆಗ್ಗೆ ಈ ಸನ್ಮಾನ ಮಾಡಿಸಿಕೊಂಡಿದ್ದಾನೆ. ಊರು ತುಂಬ ಏನೋ ಮಹತ್ಸಾಧನೆ ಮಾಡಿದಂತೆ ಚೇಲಾಗಳಿಗೆ ಹಣ ಕೊಟ್ಟು ಬಂಟಿಂಗ್ಸ್, ಹೋರ್ಡಿಂಗ್, ಬ್ಯಾನರ್ ಹಾಕಿಸಿಕೊಂಡಿದ್ದಾನೆ. ಹಿಂಬಾಲಕರಿಂದ, ಕೆಡಿಸಿಸಿ, ಟಿಎಸ್ಎಸ್‌ನವರಿಂದ ಪತ್ರಿಕೆಯಲ್ಲಿ ಪುಟಗಟ್ಟಲೆ ಅಭಿನಂದನಾ ಜಾಹೀರಾತು ಹಾಕಿಸಿಕೊಂಡಿದ್ದಾನೆ.

ಅಡಿಕೆ ಕದ್ದ ಮಾನ ಆನೆ ಕೊಟ್ಟರೂ ಬರುತ್ತದಾ? ಪುಟಗೋಸಿ ಪ್ರಶಸ್ತಿ ಹಿಡಿದು ಪರಮವೀರ ಚಕ್ರ ಪಡೆದಂತೆ ಪೋಸು ಕೊಡುತ್ತಿರುವ ಶಾಂತೆಗ್ಗೆಯ ದರಿದ್ರ ಪರಿಸ್ಥಿತಿ ಕಂಡು ಜನ ಬಿದ್ದು-ಬಿದ್ದು ನಗುತ್ತಿದ್ದಾರೆ "ಪ್ರಶಸ್ತಿ ಪ್ರ'ಧಾ'ನ" ನಗೆ ನಾಟಕದಂತಾಗಿದೆ!!

"ದೊರೆ"ಗಳು ಕೇರ್ ಮಾಡಲಿಲ್ಲ. 2010-11 ರ ಆಡಾವೆಯಲ್ಲಿ ಮತ್ತೆ ಆಕ್ಷೇಪಿಸಿದ್ದರು. ಮೂರನೇ ಬಾರಿ (2011-12) ಇದೇ ಪ್ರಜ್ಞಾಪೂರ್ವಕ ತಪ್ಪು ತೋಟಗಾರ್ಸ್ ಯಜಮಾನರು ಮಾಡಿದ್ದಾರೆ. ಸ್ವೀಟ್ ಅಡಿಕೆ ಲೆಕ್ಕ ಕೇಳುವ ತೋಟಿಗ ಸದಸ್ಯರ ಕಣ್ಣಿಗೆ ಮಣ್ಣೆರಚಲೆಂದೇ ಅಡಿಕೆ ವಿಭಾಗದಲ್ಲಿ ಸಿಹಿ ಅಡಿಕೆ ವ್ಯಾಪಾರದ ಲೆಕ್ಕ ಸೇರಿಸಲಾಗುತ್ತಿದೆ. ಮರಂತವೆಂದರೆ, ಸಹಕಾರಿ ಇಲಾಖೆಯ ನಿಬಂಧಕರು, ಉಪನಿಬಂಧರಾದಿಯಾಗಿ ಎಲ್ಲರೂ ಈ ಅವ್ಯವಹಾರ ಕಂಡೂಕಾಣದಂತಿದ್ದಾರೆ. ಪಾಲಿಗೆ ಬಂದದ್ದೇ ಪಂಚಾಮೃತ ಎಂದು ಧನ್ಯರಾಗುತ್ತಿದ್ದಾರೆ. ಇತ್ತ ತೋಟಗಾರ್ಸ್‌ನ ಸಿಹಿ ಅಡಿಕೆ ತಯಾರಾಗುತ್ತಿರುವ ಮೂರು ಕಡೆ ನೂರಾರು ತರದ ಅವ್ಯವಹಾರ-ಅವಾಂತರ ನಡೆಯುತ್ತಿದೆ.

ಮುಷ್ಟಗಿ ಮಡದಿ ಜತೆ ಸೇರಿ ಮಸಲತ್ತು!

ತೋಟಗಾರ್ಸ್ ಸೊಸೈಟಿಯ ಸಕಲ ಸ್ವಾಹಾ ಕಾರ್ಯಾಚರಣೆಯ ಮಾಸ್ಟರ್ ಮೈಂಡ್ ಅನಿಲ್‌ಕುಮಾರ್ ಮುಷ್ಟಗಿ. ಬಿಜಾಪುರ ಬದಿಯ ಈತ ತೋಟಗಾರ್ಸ್ ಸಂಸ್ಥೆ ನಡೆಸುತ್ತಿರುವ 'ಸಾಮ್ರಾಟ್ ಹೋಟೇಲ್'ನ ರೂಮ್‌ಬಾಯ್ ಆಗಿ ಸೇರಿಕೊಂಡಿದ್ದವ. ಈಗ ಕೋಟ್ಯಂತರ ರೂ. ವಹಿವಾಟಿನ ತೋಟಗಾರ್ಸ್‌ನ ಆಯಕಟ್ಟಿನ ಸ್ಥಾನಕ್ಕೇರಿರುವ ಮುಷ್ಟಗಿ ಮಹಿಮೆ ಒಂದೆರಡಲ್ಲ. ಕಡವೆ ಹೆಗಡೆ ತೋಟಗಾರ್ಸ್‌ನ ಅಧಿಪತಿಯಾಗಿದ್ದಾಗ ಅಂದು ಅವರ ಭಾವಿ ಅಳಿಯನೆನಿಸಿದ್ದ- ಇಂದಿನ ಅಧ್ಯಕ್ಷ ಶಾಂತ್ವೆಗ್ಡೆ ಮತ್ತು ಮುಷ್ಟಗಿ ಸರದಿ ಮೇಲೆ ಸಾಮ್ರಾಟ್ ಚಾಕರಿ ಮಾಡಿಕೊಂಡಿದ್ದರು. ಹರೆಯ ತುಡುಗು ದಿನಗಳ ದೋಸ್ತಿಯ 'ದೌರ್ಬಲ್ಯ' ಇವತ್ತಿಗೂ ಇವರಿಬ್ಬರನ್ನು ಬೆಸೆದಿಟ್ಟಿದೆ. ಯಾರಿಗೆ ಯಾವ ಸೇವೆ ಬೇಕೋ ಅದನ್ನು ಅರ್ಥಮಾಡಿಕೊಂಡು ಒದಗಿಸುವ 'ಜಾಣ್ಮೆ'ಯ ಮುಷ್ಟಗಿ ಇವತ್ತು ಕೋಟಿಗಳಿಗೆ ತೂಗುತ್ತಾನೆಂದು ತೋಟಗಾರ್ಸ್‌ನ ಕಂಬ-ಕಂಬಗಳೂ ಪಿಸುಗುಡುತ್ತದೆ.

ಶಿರಸಿಯಲ್ಲಿ ನೆಲೆ ನಿಂತಿರುವ ಈತ ಚಿಪಗಿ ಗ್ರಾಮದ ದೇವನಿಲಯ ಎಂಬಲ್ಲಿ ಎಕರೆಗಟ್ಟಲೆ ಅರಣ್ಯ ಅತಿಕ್ರಮಣ ಮಾಡಿಕೊಂಡಿದ್ದಾನೆ. ಈತನ ಧರ್ಮಪತ್ನಿ ವಿಶಾಲ್ ಎಂಬಾಕೆಯ ಹೆಸರಲ್ಲಿ ಸದ್ರಿ ಅತಿಕ್ರಮಣ ಜಾಗೆಯಲ್ಲಿ 10x12 ಅಡಿ ಅಳತೆಯ ಮನೆ ಇದೆ. ಇದಕ್ಕೆ ಇಸಳೂರು ಗ್ರಾಮ ಪಂಚಾಯ್ತದ ನಂಬರ್ 177 ಮತ್ತು 177/1 ಬಿದ್ದಿದೆ. ಇಂಥ ಅತ್ಯಾಪ್ತ ಮಿತ್ರನ ಮಡದಿಯೊಂದಿಗೆ ಪ್ರತಿಷ್ಠಿತ ತೋಟಗಾರ್ಸ್ ಅಧ್ಯಕ್ಷ-ಭಾವಿ ಕಾಂಗ್ರೆಸ್ ಎಮ್ಮೆಲ್ಲೆ ಎಂಬ ಭ್ರಮೆಯಲ್ಲಿ ಅಂಡಲೆಯುತ್ತಿರುವ ಶ್ರೀಮಾನ್ ಶಾಂತ್ವೆಗ್ಡೆ ತೋಟಗಾರ್ಸ್ ಸೊಸೈಟಿ ಪರವಾಗಿ ಒಂದು ಎಡವಟ್ಟು ಕರಾರು ಮಾಡಿಕೊಂಡಿದ್ದಾನೆ.

ಈ ವಿಶಾಲ್-ಶಾಂತ್ವೆಗ್ಡೆ ಒಳಒಪ್ಪಂದದ ಪ್ರಕಾರ ಆಕೆ ತನ್ನ 120 ಚದರ ಅಡಿ ಅಳತೆಯ ಪುಟ್ಟ ಮನೆಯಲ್ಲಿ ಕೋಟ್ಯಂತರ ರೂ. ಸಿಹಿ ಅಡಿಕೆ ತಯಾರಿಸಿ ಕೊಡಬೇಕು!! ಇಂಥ ಚಿಕ್ಕ ಜಾಗದಲ್ಲಿ ಫ್ಯಾಕ್ಟರಿ, ವಿದ್ಯುತ್ ಟ್ರಾನ್ಸ್‌ಫಾರ್ಮರ್, ಅಡಿಕೆ ಒಣಗಿಸುವ ಪ್ರದೇಶ ಹೇಗೆ ಸಿಕ್ಕೀತು? ಅಂದರೆ ವಿಶಾಲ್-ಅನಿಲ್ ದಂಪತಿಗಳು ಎಕರೆಗಟ್ಟಲೆ ಅರಣ್ಯ ಅತಿಕ್ರಮಿಸಿ ಕೊಂಡಿದ್ದಾರೆಂದು ಅರ್ಥ! ವಿಶಾಲ್‌ಗೆ ಸಿಹಿ ಅಡಿಕೆ ತಯಾರಿಸುವ ಕೈಗಾರಿಕೆ ನಡೆಸಲು ಬೇಕಾದ ಒಂದೇ ಒಂದು ಇಲಾಖೆಯ ಸ್ಪಷ್ಟ ಪರವಾನಗಿ ಇಲ್ಲ. ಕಾರವಾರದ ಕೈಗಾರಿಕಾ ಇಲಾಖೆಗೆ ಸಿಹಿ ಅಡಿಕೆ ತಯಾರಿಕಾ ಘಟಕ ಸ್ಥಾಪನೆಗೆ ಅನುಮತಿ ಕೋರಿ ಕೊಟ್ಟಿರುವ ಅರ್ಜಿಗೆ ಸಿಕ್ಕಿರುವ ಸ್ವೀಕೃತಿ ಪತ್ರ (Acknowledgement) ವನ್ನೇ ಈಕೆ ಲೈಸನ್ಸ್ ಎಂದು ತೋರಿಸುತ್ತಾಳೆ! ಇದು ಸಿಹಿ ಅಡಿಕೆ ತಯಾರಿಕೆ ಪರವಾನಗಿ ಆಗಲು ಸಾಧ್ಯವೇ?

ವಿಶಾಲ್ ಮೇಡಮ್ ಶಿರಸಿಯ ದೊಡ್ಡ ಲೀಡರ್ ಶಾಂತ್ವೆಗ್ಡೆಯ ಪ್ರಭಾವದಿಂದ ಇಸಳೂರು ಗ್ರಾ.ಪಂ.ದಿಂದ ವಿದ್ಯುತ್ ಪಡೆಯಲು ಎನ್‌ಓಸಿ ಗಿಟ್ಟಿಸಿಕೊಂಡಿದ್ದಾರೆ. ಅದರಂತೆ ಶಿರಸಿ ಹೆಸ್ಕಾಮ್‌ನ ಅಧಿಕಪ್ರಸಂಗಿ ಅಧಿಕಾರಿಗಳು ಹಿಂದು-ಮುಂದು ನೋಡದೆ ಶಾಂತ್ವೆಗ್ಡೆ ಸಂಪ್ರೀತಗೊಳಿಸಲು ಕಾನೂನುಬಾಹಿರವಾಗಿ ದೇವನಿಲಯದ ಅರಣ್ಯದಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಅಳವಡಿಸಿಕೊಟ್ಟಿದ್ದಾರೆ. ಹಾಗಂತ ಅರಣ್ಯ ಅತಿಕ್ರಮಣ ಜಾಗದಲ್ಲಿ ಫ್ಯಾಕ್ಟರಿ ಬಿಲ್ಡಿಂಗ್ ಕಟ್ಟಲು ಯಾರೂ ವಿಶಾಲಮ್ಮನಿಗೆ ಪರವಾನಗಿ ಕೊಟ್ಟಿಲ್ಲ. ಯಾವುದೇ ನೀಲನಕ್ಷೆಯೂ ಈ ಕೈಗಾರಿಕೆಗೆ ಇಲ್ಲ. ಹೀಗಾಗಿ ಗ್ರಾ.ಪಂ ಮತ್ತು ಹೆಸ್ಕಾಂನ 'ಪರವಾನಗಿ'ಗಳು ಕಾನೂನಿನ ಸ್ಪಷ್ಟ ಉಲ್ಲಂಘನೆ. ಅಷ್ಟೇ ಅಲ್ಲ, ಈ ಘಟಕಕ್ಕೆ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರಾಕ್ಷೇಪಣಾ ಪತ್ರ ಮೊದಲೇ ಇಲ್ಲ!!

ತೋಟಗಾರ್ಸ್ ದೊರೆ ಶಾಂತ್ವೆಗ್ಡೆಯನ್ನು ತನ್ನ ಬೆರಳ ಈಶಾರೆಯಲ್ಲಿ ಕುಣಿಸುವ ಮುಷ್ಟಗಿ ಮಾಮನ ಸ್ವೀಟ್ ಸುಪಾರಿ ಅಡ್ಡೆಗೆ ತೋಟಗಾರ್ಸ್‌ನಿಂದ ಕ್ವಿಂಟಾಲುಗಟ್ಟಲೆ ಅಡಿಕೆ ಬರುತ್ತದೆ. ಆದರೆ ಬಂದ ತೋಟಗಾರ್ಸ್‌ನ ಅಡಿಕೆಗೆ ಸಿಹಿ ಸುಪಾರಿಯಾಗಿ ಹೊರಹೋದದ್ದಕ್ಕೆ ತಾಳ-ಮೇಳವೇ ಇಲ್ಲ, ತೋಟಗಾರ್ಸ್‌ನ ಅಡಿಕೆ ವಿಕ್ರಿ ವಿಭಾಗದ ಬಾಸ್‌ನೇ ಅನಿಲ್ ಮುಷ್ಟಗಿ. ಹೀಗಿರುವಾಗ ಅವ್ಯವಹಾರ ಪ್ರಶ್ನಿಸುವ ತಾಕತ್ತು ಯಾರಿಗಿದೆ. ಜಿ.ಎಂ. ರವೀಶ್ ಮಾಣಿ ಮುಷ್ಟಗಿ ಹೇಳಿದಂತೆ ಕೇಳುವ ನಿಷ್ಠಾವಂತ ಅನುಯಾಯಿ ಅಷ್ಟೇ! ಒಟ್ಟಿನಲ್ಲಿ ಟಿಎಸ್‌ಎಸ್‌ಗೆ ಕೋಟಿ-ಕೋಟಿ ಖೋತಾ; ತ್ರಿ ಈಡಿಯಟ್ಸ್‌ಗೆ ಅಷ್ಟೇ ಫಾಯ್ದೆ.

ತೋಟಗಾರ್ಸ್‌ನಲ್ಲಿ ಅದರ ಸದಸ್ಯರಿಗೇ ವಾಹನ ಸಾಲ ಕೊಡುವ ಪದ್ಧತಿಯಿಲ್ಲ. ಹೀಗಿರುವಾಗ ತೋಟಗಾರ್ಸ್‌ನ ಸದಸ್ಯಳೂ ಅಲ್ಲದ ವಿಶಾಲ್‌ಗೆ ಮಹೇಂದ್ರಾ ಟೆಂಪೋ ಖರೀದಿಗೆ ತೋಟಗಾರ್ಸ್ ಭರ್ಪೂರ್ ಸಾಲಕೊಟ್ಟಿದೆ. ಹಾಗೆಯೇ ಅನಿಲ್ ಮುಷ್ಟಗಿಯ ವೇತನ ಮುಂಗಡ 2010-11 ರಲ್ಲಿ 8,48,766 ರೂ. ಬಾಕಿಯಿದೆ. ಆದರೂ ಚಡ್ಡಿ ದೋಸ್ತನಿಗೆ ಶಾಂತ್ವೆಗ್ಡೆ 2011-12 ರಲ್ಲಿ ಈ ಅಡ್ವಾನ್ಸ್ 11,73,239 ಏರಿಸಿ 'ನೀ ನನಗಿದ್ದರೆ ನಾ ನಿನಗೆ' ಎಂದು ನಿಯತ್ತು ತೋರಿಸಿದ್ದಾರೆ. ತೋಟಗಾರ್ಸ್ ಬೈಲಾದಲ್ಲಿ ಸಂಸ್ಥೆಯ ನೌಕರರು ಅಥವಾ ಅವರ ಕುಟುಂಬದವರೊಂದಿಗೆ ಸಂಸ್ಥೆ ವ್ಯವಹಾರಿಕ ಸಂಬಂಧ ಇಟ್ಟುಕೊಳ್ಳಬಾರದೆಂದು ಸ್ಪಷ್ಟವಾಗಿ ಹೇಳಲಾಗಿದೆ. ಆದರೂ ತೋಟಗಾರ್ಸ್‌ನ ಸೂಪರ್ ನೌಕರ ಮುಷ್ಟಗಿ ಮಾಮನ ಮಡದಿ ಜತೆ ಅಧ್ಯಕ್ಷ ಶಾಂತ್ವೆಗ್ಡೆ ಸ್ವೀಟ್ ವ್ಯವಹಾರ ಮಾಡಿದ್ದಾರೆ!!

ಭಾಮೈದನಿಗೊಂದು ಸ್ವೀಟ್ ಫ್ಯಾಕ್ಟರಿ!

•ಶಿರಸಿ ತಾಲ್ಲೂಕಿನ ಬೈರುಂಬೆ ಪಂಚಾಯತದ ಕಡವೆ ಮಜಿರೆಯಲ್ಲಿ ನಾರಾಯಣ ಹೆಗಡೆ ಮತ್ತು ರಾಮಕೃಷ್ಣ ಹೆಗಡೆ ಎಂಬಿಬ್ಬರು ಸಹೋದರರು ತೋಟಗಾರಿಕೆ ಮಾಡಿಕೊಂಡಿದ್ದಾರೆ. ಈ ಅಣ್ಣಾ-ತಮ್ಮನ ಜಂಟಿ ಮಾಲಿಕತ್ವದ ಜಮೀನು ಸರ್ವೇ ನಂಬರ್ 323 ರಲ್ಲಿ ಇದೆ. ಇಲ್ಲಿಂದ ಸಿಹಿ ಅಡಿಕೆ ತಯಾರಿಕಾ ಘಟಕ ಸ್ಥಾಪಿಸಲು ತೋಟಗಾರ್ಸ್‌ನ ತ್ರಿ ಈಡಿಯಟ್ಸ್ ರಹಸ್ಯ ಒಪ್ಪಂದ ಮಾಡಿಕೊಂಡಿದೆ. ಈ ಸಹೋದರರು ಬೇರೆ ಯಾರೂ ಅಲ್ಲ; ಸಾಕ್ಷಾತ್ ಶಾಂತ್ವೆಗ್ಡೆಯ ಭಾಮೈದರು, ಹೆಂಡತಿಯ ತಮ್ಮಂದಿರು.

ನಾರಾಯಣ ಶ್ರೀಪಾದ ಹೆಗಡೆ ಎಂಬ ಭಾಮೈದನ ಜತೆ ಶಾಂತ್ವೆಗ್ಡೆ ಸಿಹಿ ಅಡಿಕೆ ತಯಾರಿಸಿ ತೋಟಗಾರ್ಸ್‌ಗೆ ಕೊಡುವ ಮೋಗಂ ಕರಾರು ಮಾಡಿಕೊಂಡಿದ್ದಾರೆ. ಜಂಟಿ ಮಾಲೀಕತ್ವದ ಸದ್ರಿ ಜಾಗದಲ್ಲಿ ಒಬ್ಬನೇ ಸಹೋದರನೊಂದಿಗೆ ಅಗ್ರಿಮೆಂಟ್ ಮಾಡಿಕೊಳ್ಳುವುದಕ್ಕೆ ಸಿಂಧುತ್ವವಿಲ್ಲ. ಹಾಗೆಯೇ ಈ ನಾರಾಯಣನ ಸಹೋದರ ರಾಮಕೃಷ್ಣ ತೋಟಗಾರ್ಸ್‌ನ ಆಡಳಿತ ಮಂಡಳಿಯ ನಿರ್ದೇಶಕ ಭೂಪ ಬೇರೆ. ತೋಟಗಾರ್ಸ್ ನಿಯಮದಂತೆ ನಿರ್ದೇಶಕರೊಂದಿಗೆ ಅಥವಾ ಅವರ ಸಂಬಂಧಿಗಳೊಂದಿಗೆ ಸಂಸ್ಥೆ ವ್ಯವಹಾರಿಕ ಸಂಬಂಧ ಇಟ್ಟುಕೊಳ್ಳುವಂತಿಲ್ಲ. ಆದರೂ ತೋಟಗಾರ್ಸ್‌ನ 'ಪಾಲು' ಪಡೆಯುವ ಭಾಗ್ಯ ಭಾವಮೈದುನನಿಗೆ ಶಾಂತ್ವೆಗ್ಡೆ ಮಾನ-ಮರ್ಯಾದೆ ಬಿಟ್ಟು ದಯಪಾಲಿಸಿದ್ದಾನೆ!

ಹಾಗೆಯೇ ಸಿಹಿ ಅಡಿಕೆ ಘಟಕ ಸ್ಥಾಪಿತವಾಗಿರುವ ಕಡವೆಯ ಜಾಗದಲ್ಲಿ ಕೈಗಾರಿಕೆ ಹಾಕುವಂತೆಯೇ ಇಲ್ಲ. ಏಕೆಂದರೆ ಇದು ಖುಷ್ಕಿ ಜಾಗ. ಕೃಷಿಯೇತರ ಚಟುವಟಿಕೆ ಇಲ್ಲಿ ನಡೆಸುವಂತಿಲ್ಲ. ನಾನ್ ಅಗ್ರಿಕಲ್ಚರ್ (ಎನ್‌ಎ) ಮಾಡಲಾಗದ ಜಮೀನಲ್ಲಿ ಶಾಂತ್ವೆಗ್ಡೆ ರಾಜಕೀಯ ಬಲದಿಂದ ಕೈಗಾರಿಕೆ ನಡೆಯುತ್ತಿವೆ. ಈ ಕೈಗಾರಿಕೆಗೆ ಯಾವ ಅನುಮತಿಯೂ ಇಲ್ಲ. ಕೈಗಾರಿಕಾ ಇಲಾಖೆಯ ಲೈಸೆನ್ಸ್ ಇಲ್ಲ; ಮಾಲಿನ್ಯ ನಿಯಂತ್ರಣ ಮಂಡಳಿಯ ನಿರಾಕ್ಷೇಪಣಾ ಪತ್ರವೂ ಇಲ್ಲ; ಎನ್‌ಎ ಅಲ್ಲದ ಜಾಗದಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಹೆಸ್ಕಾಂನ ಭ್ರಷ್ಟರು ಸ್ಥಾಪಿಸಿಕೊಟ್ಟಿದ್ದಾರೆ. ತೋಟಗಾರ್ಸ್‌ನ ಶಾಂತ್ವೆಗ್ಡೆ ಜತೆ ಭಾಮೈದ ನಾರಾಯಣ ಹೆಗಡೆ ಮಾಡಿಕೊಂಡಿರುವ ಒಪ್ಪಂದ ತುಂಬ ನಿಗೂಢವಾಗಿದೆ.

ಚಿಪಗಿಯ ವಿಶಾಲ್ ಮುಷ್ಟಗಿ ಅಥವಾ ಕಡವೆಯ ನಾರಾಯಣ ಹೆಗಡೆ ಜಾಗದಲ್ಲಿ ತೋಟಗಾರ್ಸ್ ಹೂಡಿರುವ ಹಣ, ಯಂತ್ರ, ಕಳಿಸುವ ಅಡಿಕೆಗಳಿಗೆ ಯಾವ ಭದ್ರತೆಯೂ ಇಲ್ಲ. ವಿಶಾಲ್ ಮತ್ತು ನಾರಾಯಣ ಮೆಷಿನರಿ- ಅಡಿಕೆ ತಮ್ಮಲ್ಲಿ ತೋಟಗಾರ್ಸ್‌ನವರು ಇಟ್ಟೇ ಇಲ್ಲ ಎಂದರೆ ಏನೂ ಮಾಡಲು ಆಗದು. ಅಂಥ ದುಸ್ಥಿತಿಯಲ್ಲಿ ತೋಟಗಾರ್ಸ್ ಸೊಸೈಟಿ ಸಿಕ್ಕಿಬಿದ್ದಿದೆ. ಒಟ್ಟಿನಲ್ಲಿ ವಿಶಾಲ್ ಮುಷ್ಟಿಗಿ ಮತ್ತು ನಾರಾಯಣ ಹೆಗಡೆಯವರ ಭಾಗ್ಯದ ಬಾಗಿಲು 'ಟೈಗರ್ ಸ್ವೀಟ್' ಸುಪಾರಿ ತೆರೆದಿದೆ! ತೋಟಗಾರ್ಸ್‌ನ ಬಾಗಿಲು ಮುಚ್ಚುವ ಸೂಚನೆ ನಿಚ್ಚಳವಾಗಿಸಿದೆ. ಇದೇ ರೀತಿಯ ನಿಯಮ ಉಲ್ಲಂಘನೆ- ಪಡಪೋಸಿತನ ತೋಟಗಾರ್ಸ್‌ನ ಹತ್ತಿರವೇ ಇರುವ ಎಪಿಎಂಸಿ ಪ್ರಾಂಗಣದಲ್ಲಿ ಸ್ಥಾಪಿಸಲಾಗಿರುವ ಮೂರನೇ ಸಿಹಿ ಅಡಿಕೆ ಘಟಕದ ಸುತ್ತಲೂ ನಿರಾತಂಕವಾಗಿ ನಡೆಸಿದೆ ಶಾಂತ್ವೆಗ್ಡೆ ಅಂಡ್ ಕೋ.


ಟಿಎಸ್‌ಎಸ್‌ನ ಕರ್ಮಕಾಂಡಗಳತ್ತ ಈಗಲಾದರೂ ಸಹಕಾರ ಇಲಾಖೆಯ ಪ್ರಭೃತಿಗಳು ಕಣ್ಣು ಹಾಯಿಸುವರಾ? ಜಿಲ್ಲಾ ಮಂತ್ರಿ ಕಾಗೇರಿ ಮಾಣಿಗೆ ಕಾಂಗ್ರೆಸ್‌ನ ದುರ್ಬಲ ಎದುರಾಳಿ ಶಾಂತ್ವೆಗ್ಡೆಯ ಹಿತಕಾಯುವುದು ಓಟ್ ಬ್ಯಾಂಕ್ ರಾಜಕಾರಣದ ಟೆಕ್-ಟೆಕ್ಸಾ? ಸಿಹಿ ಅಡಿಕೆ ತಯಾರಿಕೆ ನೆಪದಲ್ಲಿ ಆಗಿರುವ ಹಾನಿ, ಹೂಡಿರುವ ದುಡ್ಡು ಬಂಡವಾಳ ಅಧ್ಯಕ್ಷ ಶಾಂತ್ವೆಗ್ಡೆ ಮತ್ತವನ ಸಲಹೆಗಾರ ಮಾಣಿ ಜಿಎಂ ರವೀಶ್ ಹೆಗಡೆಯಿಂದ ವಸೂಲು ಮಾಡುವ ತಾಕತ್ತು ಸಹಕಾರ ಇಲಾಖೆಯ ನಿಬಂಧಕರಿಗೆ ಇದೆಯಾ?

ಹಾಗಂತ ಶಿರಸಿ ಸೀಮೆಯ ನತದೃಷ್ಟ ಅಡಿಕೆ ತೋಟಿಗರು ಮಾತಾಡಿಕೊಳ್ಳುತ್ತಿದ್ದಾರೆ. ಒಂದಂತೂ ಖರೆ. ಶಾಂತ್ವೆಗ್ಡೆ-ರವೀಶ್ ಹೆಗಡೆ ಮತ್ತು ಅನಿಲ್ ಮುಷ್ಟಗಿ ಪಾರುಪತ್ಯದಲ್ಲೇ ತೋಟಗಾರ್ಸ್ ಉಳಿದರೆ ಟೈಟಾನಿಕ್ ಹಡಗಿನಂತೆ ಸಂಪೂರ್ಣ ಮುಳುಗಲಿದೆ! ಕಡವೆ ಹೆಗಡೆ ಆತ್ಮ ಅದೆಷ್ಟು ನೊಂದುಕೊಂಡಿದೆಯೋ ತೋಟಗಾರ್ಸ್‌ನ ದುರ್ಗತಿ ಕಂಡು?!


• ನಹುಷ

ಹಾಲಪ್ಪನ ರೇಪ್ ಮಿಸ್ಟರಿ

ರಾಜಕಾರಣದ ಲೇಟೆಸ್ಟ್ ಡ್ರಾಮಾ



ಒಂದು, ಎರಡು ಮತ್ತು ಮೂರನ್ನೂ ಬಿಟ್ಟವರು ಮೊಂಡಾಟಕ್ಕೆ ಬಿದ್ದರೆ ಏನೇನು ಆಗಬಹುದೊ, ಅದೆಲ್ಲವೂ ಹರತಾಳು ಹಾಲಪ್ಪನೆಂಬ ಅವಿವೇಕಿಯ ರೇಪ್ ಕೇಸಿನಲ್ಲಿ ಚಾಚೂತಪ್ಪದೆ ನಡೆಯುತ್ತಿದೆ. ಹೆಂಡತಿ ಪರಪುರುಷನಿಂದ ರೇಪ್ ಆಗುತ್ತಿದ್ದರೆ ಗಂಡ ಮರೆಯಲ್ಲಿ ನಿಂತು ಮೊಬೈಲ್‌ನಲ್ಲಿ ವೀಡಿಯೋ ಮಾಡಿಕೊಳ್ಳುವ ವಿಲಕ್ಷಣ ಸನ್ನಿವೇಶದಿಂದ ಆರಂಭವಾದ ಕಂತು ಮೀಡಿಯಾ, ಪೊಲೀಸ್ ಕಂಪ್ಲೇಂಟ್, ಕೋರ್ಟ್ ವಿಚಾರಣೆ, ಹಾಲಪ್ಪನ ರಾಜೀನಾಮೆ, ಫೊರೆನ್ಸಿಕ್ ಪರೀಕ್ಷೆ ಅಂತೆಲ್ಲ ಅಲೆದಾಡಿ ಮೂಲೆ ಸೇರಿದ್ದು ಹಳೆಯ ವಿಷಯ. ಆದರೆ ಡಿಸೆಂಬರ್ 31ರ ರಾತ್ರಿ ಈ ವೃತ್ತಾಂತಕ್ಕೆ ಹೊಸದೊಂದು ಟರ್ನಿಂಗ್ ಸಿಕ್ಕಿದೆ.



ಅವತ್ತು ರಾತ್ರಿ ಎಂಟು ಗಂಟೆಯ ಸುಮಾರಿಗೆ ಶಿವಮೊಗ್ಗದ ತುಂಗಾನಗರದಲ್ಲಿರುವ ವೆಂಕಟೇಶ್ ಮೂರ್ತಿಯ ಮನೆ ಮುಂದಕ್ಕೆ ಎರಡು ಬೈಕ್‌ಗಳಲ್ಲಿ ಬಂದಿಳಿದ ನಾಲ್ಕು ಅನಾಮಿಕ ಆಗಂತುಕರು ಮೂರ್ತಿಯನ್ನು ಕೂಗಿ ಕರೆದಿದ್ದಾರೆ. ವೆಂಕಟೇಶ್ ಮೂರ್ತಿ ಹೊರಬರುತ್ತಿದ್ದಂತೆ ಅವರಲ್ಲೊಬ್ಬ ಮಚ್ಚನ್ನು ಹೊರತೆಗೆದು ಮೂರ್ತಿಯತ್ತ ಗುರಿ ಮಾಡಿದ. ವೆಂಕಟೇಶ್ ಮೂರ್ತಿ ತಪ್ಪಿಸಿಕೊಂಡು ಮನೆಯೊಳಕ್ಕೆ ಓಡಿಹೋಗಿ ಲಾಕ್ ಮಾಡಿಕೊಂಡ. ಬಾಯಿಗೆ ಬಂದಂತೆ ಧಮಕಿ ಹಾಕಿದ ದಾಂಢಿಗರು 'ಹಾಲಪ್ಪನ ಮೇಲಿರುವ ಕೇಸನ್ನು ವಾಪಾಸ್ ತೆಗೆದುಕೊಳ್ಳದಿದ್ದರೆ ಪರಿಣಾಮ ನೆಟ್ಟಗಿರುವುದಿಲ್ಲ' ಎನ್ನುವ ಎಚ್ಚರಿಕೆ ರವಾನಿಸಿ, ಅಲ್ಲಿಯೇ ನಿಂತಿದ್ದ ಮೂರ್ತಿಯ ಕಾರಿನ ಗಾಜನ್ನು ಪುಡಿ ಮಾಡಿ ಬೈಕನ್ನೇರಿ ವಾಪಾಸ್ ಹೋಗಿದ್ದಾರೆ.

ಇದಿಷ್ಟೂ ಡಿಸೆಂಬರ್ 31ರ ರಾತ್ರಿ ನಡೆದ ಘಟನೆಯ ಕುರಿತು ವೆಂಕಟೇಶ್ ಮೂರ್ತಿ ತುಂಗಾನಗರದ ಪೊಲೀಸರಿಗೆ ನೀಡಿರುವ ದೂರಿನ ಸಾರಾಂಶ. ಅಂದಹಾಗೆ ಈ ಮೂರ್ತಿ ಬೇರಾರೂ ಅಲ್ಲ, ತನ್ನ ಹೆಂಡತಿ ಚಂದ್ರವತಿಯನ್ನು ಹಾಲಪ್ಪ ರೇಪ್ ಮಾಡುತ್ತಿರುವುದಾಗಿ ಆರೋಪಿಸಿ, ವೀಡಿಯೋ ಕ್ಲಿಪಿಂಗ್ ಸಮೇತ ಸುದ್ದಿಯಾದ 'ಸನ್ಸೇಷನಲ್ ಹೀರೊ'. ರೇಪ್ ಪ್ರಕರಣವನ್ನು ಕೂಲಂಕಷವಾಗಿ ಗಮನಿಸಿದ್ದೇ ಆದಲ್ಲಿ ಹಾಲಪ್ಪ ಮತ್ತು ವೆಂಕಟೇಶ್ ಮೂರ್ತಿ ಇಬ್ಬರೂ ಭಯಾನಕ ಲಂಪಟರೆಂಬ ಸಂಗತಿ ಸ್ಪಷ್ಟವಾಗುತ್ತದೆ. ಅಂತಹ ವೆಂಕಟೇಶ್ ಮೂರ್ತಿ ನೀಡಿರುವ ಪ್ರಸ್ತುತ ದೂರಿನ ಬಗ್ಗೆಯೂ ಹತ್ತಾರು ವಿಶ್ಲೇಷಣೆಗಳು, ವಿಭಿನ್ನ ಲೆಕ್ಕಾಚಾರಗಳು ಹುಟ್ಟಿಕೊಂಡಿವೆ.

ಅಸಲಿಗೆ ಈ ವೆಂಕಟೇಶ್ ಮೂರ್ತಿಯ ಮಾತನ್ನು ಅಷ್ಟು ಸುಲಭವಾಗಿ ನಂಬಲಿಕ್ಕೆ ಸಾಧ್ಯವಿಲ್ಲ. ಈತ ಪ್ರತಿ ವಿಷಯದಲ್ಲೂ ಲಾಭದ ನಿರೀಕ್ಷೆ ಮಾಡುವ ಪಕ್ಕಾ ವ್ಯವಹಾರಸ್ಥನೆಂಬ ಅಭಿಪ್ರಾಯಗಳು ದಟ್ಟವಾಗಿವೆ. ರೇಪ್ ಕೇಸಿನ ಕುರಿತು ವಿಚಾರಣೆ ಕೋರ್ಟ್‌ನಲ್ಲಿ ನಡೆಯುತ್ತಿರುವ ಈ ಸಂದರ್ಭದಲ್ಲಿ ಇಂತಹ ಘಟನೆಯನ್ನು ತಾನೇ ಸೃಷ್ಟಿಸಿಕೊಂಡು ಆ ಮೂಲಕ ಹಾಲಪ್ಪನ ವಿರುದ್ಧ ಸಾಕ್ಷ್ಯಗಳನ್ನು ಸ್ಟ್ರಾಂಗ್ ಮಾಡುವ ಪ್ರಯತ್ನವೂ ಇದು ಆಗಿರಬಹುದು ಅಥವಾ ಎಲೆಕ್ಷನ್ ಹತ್ತಿರ ಬರುತ್ತಿರುವುದರಿಂದ ಮರೆತು ಹೋಗಿರುವ ಈ ಪ್ರಕರಣವನ್ನು ಬೆಳಕಿಗೆ ತಂದು ಹಾಲಪ್ಪನನ್ನು ಬ್ಲ್ಯಾಕ್‌ಮೇಲ್ ಮಾಡುವ ಇಲ್ಲವೇ ಭರ್ಜರಿ ಡೀಲಿಗೆ ಒಪ್ಪಿಸುವ ಮೂರ್ತಿಯ ಹುನ್ನಾರವೂ ಆಗಿರಬಹುದೆಂದೇ ಅಂದಾಜಿಸಲಾಗುತ್ತಿದೆ.


ಇದೆಲ್ಲದಕ್ಕೂ ಕಾರಣ ಇದೆ. ಮೂರ್ತಿಯ ದೂರಿನ ಪ್ರಕಾರ ಬೆದರಿಕೆಯ ಘಟನೆ ನಡೆದದ್ದು ರಾತ್ರಿ ಎಂಟು ಗಂಟೆಯ ಸುಮಾರಿಗೆ. ಆತನ ಮನೆ ಇರುವುದು ರೆಸಿಡೆನ್ಷಿಯಲ್ ಏರಿಯಾ ಆದ್ದರಿಂದ ಆ ಹೊತ್ತಿಗೆ ಅಕ್ಕಪಕ್ಕದವರು ಎಚ್ಚರವಾಗಿಯೇ ಇರುತ್ತಾರೆ. ಅದರಲ್ಲೂ ಡಿಸೆಂಬರ್ 31ನೇ ತಾರೀಕಾದ ಕಾರಣ ಹೊಸವರ್ಷದ ಸಂಭ್ರಮಾಚರಣೆಗೆ ಅಷ್ಟು ಬೇಗ ಯಾರೂ ಮಲಗಿರುವುದಿಲ್ಲ, ಅಂತಹದ್ದರಲ್ಲಿ ಜೋರು ಧ್ವನಿಯಲ್ಲಿ ಧಮಕಿ ಹಾಕಿದ, ಅರಚಾಡಿದ, ಕಾರ್‌ನ ಗಾಜು ಹೊಡೆದ ಈ ಘಟನೆಯ ಕುರಿತು ನೆರೆಯವರ್‍ಯಾರಿಗೂ ಗೊತ್ತೇ ಆಗಿಲ್ಲವಂತೆ. ಯಾರೊಬ್ಬರೂ ಇದಕ್ಕೆ ಸಾಕ್ಷಿಯಾಗಿಲ್ಲ ಎನ್ನುವುದೇ ಮೂರ್ತಿಯ ದೂರನ್ನು ಅನುಮಾನದಿಂದ ನೋಡುವಂತೆ ಮಾಡುತ್ತದೆ.

ಆರಂಭದಿಂದಲೂ ತನ್ನನ್ನು ವ್ಯವಸ್ಥಿತವಾಗಿ ಸಿಕ್ಕಿಸುತ್ತಲೇ ಬಂದಿರುವ ಮೂರ್ತಿ ಈ ಹಂತದಲ್ಲಿ ಕೇವಲ ಬೆದರಿಕೆಗೆ ಮಣಿಯುತ್ತಾನೆ ಎಂದು ಆಲೋಚಿಸುವಷ್ಟು ಹಾಲಪ್ಪ ಹೆಡ್ಡನಲ್ಲ, ಹಾಗಾಗಿ ಮೂರ್ತಿಯ ದೂರನ್ನು ನಂಬುವುದು ಕಷ್ಟ ಎನ್ನುವ ಮಾತುಗಳು ಸ್ಥಳೀಯ ಪತ್ರಕರ್ತರಲ್ಲೇ ಕೇಳಿಬರುತ್ತಿವೆ. ವೆಂಕಟೇಶ್ ಮೂರ್ತಿ ಮೊದಲಿನಿಂದಲೂ ತನ್ನ ಯಾವುದೇ ತಕರಾರುಗಳಿದ್ದರೂ ಅವುಗಳನ್ನು ಪೊಲೀಸಿನವರಿಗೆ ತಿಳಿಸುವ ಮುನ್ನ ಮಾಧ್ಯಮಗಳ ಮೂಲಕ ಸುದ್ದಿ ಮಾಡಿ ಲಾಭ ಮಾಡಿಕೊಳ್ಳುವ ಆಸಾಮಿ. ಆತನ ಹೆಂಡತಿಯ ರೇಪ್ ಕೇಸನಲ್ಲೂ ಆತ ಇದನ್ನೇ ಪಾಲಿಸಿದ್ದ, ಮಾಧ್ಯಮಗಳ ಮೂಲಕ ಈ ಸುದ್ದಿ ರಟ್ಟಾದ ನಂತರವಷ್ಟೆ ಆತ ಹಾಲಪ್ಪನ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದ. ಆನಂತರ ಈಡಿಗ ಸಮುದಾಯದ ಮುಖಂಡರ ಸಮ್ಮುಖದಲ್ಲಿ ಒಳಗಿಂದೊಳಗೇ ಹಾಲಪ್ಪನ ಜೊತೆ ಡೀಲ್‌ಗೆ ಮುಂದಾಗಿದ್ದ ಎಂಬ ಗುಮಾನಿಗಳೂ ಇವೆ.

ಈ ನಡುವೆ ಪ್ರಕರಣದಲ್ಲಿ ಹುಣಸೇಕೊಪ್ಪ ಶ್ರೀಧರ್ ಎನ್ನುವ ಹೊಸದೊಂದು ಹೆಸರು ತೇಲಿಬರುತ್ತಿದೆ. ಈತ ಒಂದಾನೊಂದು ಕಾಲಕ್ಕೆ ಹಾಲಪ್ಪನ ಬಲಗೈ ಬಂಟನಾಗಿದ್ದವ. ಆದರೆ ಈಗ ಹರತಾಳು ಹಾಲಪ್ಪನ ಪ್ರತಿಸ್ಪರ್ಧಿ ಕ್ಯಾಂಡಿಡೇಟ್. ಯಡ್ಡಿಯ ಕೆ.ಜೆ.ಪಿ ಪಕ್ಷದಿಂದ ಹಾಲಪ್ಪ ಚುನಾವಣೆಗೆ ನಿಲ್ಲಲು ಸಜ್ಜಾಗುತ್ತಿದ್ದಂತೆಯೇ ಈ ಹುಣಸೇಕೊಪ್ಪ ಶ್ರೀಧರ್ ಬಿಜೆಪಿಯ ಅಭ್ಯರ್ಥಿಯಾಗಿ ಸ್ವಯಂ ಘೋಷಿಸಿಕೊಂಡಿದ್ದಾನೆ. ಮುಂದಿನ ಚುನಾವಣೆಯಲ್ಲಿ ಹಾಲಪ್ಪ, ಶ್ರೀಧರ್ ಮುಖಾಮುಖಿಯಾಗುವುದು ಬಹುತೇಕ ಖಚಿತ. ಇದೇ ಕಾರಣಕ್ಕೆ, ಹುಣಸೇಕೊಪ್ಪ ಶ್ರೀಧರ್ ವೆಂಕಟೇಶ್ ಮೂರ್ತಿಯ ಜೊತೆ ಸೇರಿ, ರೇಪ್ ಪ್ರಕರಣಕ್ಕೆ ಮರುಜೀವ ತುಂಬಲು ಈ ರೀತಿಯ ಹುನ್ನಾರ ನಡೆಸಿರುವ ಸಾಧ್ಯತೆಯೂ ಇದೆ. ಹಾಲಪ್ಪನ ಅತ್ಯಾಚಾರ ಪ್ರಕರಣವನ್ನು ಜನ ಮುಕ್ಕಾಲು ಪಾಲು ಮರೆತುಹೋಗಿದ್ದಾರೆ. ಅದನ್ನು ಮತ್ತೆ ನೆನಪಿಸಿ, ಹಾಲಪ್ಪನ ವರ್ಚಸ್ಸನ್ನು ಹಣಿಯುವ ರಾಜಕಾರಣವೂ ಇದರಲ್ಲಿ ಬೆರೆತಿದೆ ಎನ್ನಲಾಗುತ್ತಿದೆ.

ಅಂತೂಇಂತೂ ಹಾಲಪ್ಪನ ವೀಕ್ನೆಸ್‌ನಂತಾಗಿರುವ ವೆಂಕಟೇಶ್ ಮೂರ್ತಿ ಚುನಾವಣೆ ಹತ್ತಿರವಾಗುತ್ತಿದ್ದಂತೆ ಭರ್ಜರಿ ಬೆಳಕಿಯಾಗೋದು ಗ್ಯಾರಂಟಿಯಾಗಿದೆ. ಹಾಗೊಮ್ಮೆ ಹಾಲಪ್ಪನ ವಿರೋಧಿಗಳು ಬಳಸಿಕೊಳ್ಳದಿದ್ದರೂ ತನ್ನನ್ನು ತಾನು ಬಳಸಿಕೊಳ್ಳುವ ಜಾಣ್ಮೆಯೂ ಈ ಮೂರ್ತಿಗಿದೆ. ಹಾಗಾಗಿ ಮುಂದಿನ ದಿನಗಳಲ್ಲಿ ಹಾಲಪ್ಪನ ರೇಪ್ ರಾದ್ಧಾಂತ ಚಿತ್ರವಿಚಿತ್ರ ತಿರುವುಗಳಿಗೆ ಸಾಕ್ಷಿಯಾದರೆ ಅಚ್ಚರಿಯೇನು ಇಲ್ಲ, ಆದರ ಮೊದಲ ಎಪಿಸೋಡು ಈ ರೀತಿ ಶುರುವಾಗಿದೆಯಷ್ಟೆ. ಒಟ್ಟಿನಲ್ಲಿ ಹಾಲಪ್ಪನಿಗೆ ಮಳೆ ನಿಂತರೂ ಹನಿ ತಪ್ಪಲಿಲ್ಲ ಎನ್ನುವ ಪರಿಸ್ಥಿತಿ. ಅಷ್ಟಕ್ಕೂ ಅಧಿಕಾರದ ಮದದಲ್ಲಿ ಮೆರೆದಾಡಿದ ಹರತಾಳು ಹಾಲಪ್ಪನಿಗೆ ಇಂತಹದ್ದೊಂದು ಶಾಸ್ತಿ ಆಗಲೇಬೇಕಿತ್ತು ಬಿಡಿ...

• ಗಿರೀಶ್ ತಾಳಿಕಟ್ಟೆ



ಪದ್ಮನಾಭನಗರಕ್ಕೆ ಅಶೋಕ್ ಕೊಡುಗೆ ಮೂರಕ್ಕೆ ಮೂರೂ ಕೆರೆಗಳ ಸ್ವಾಹಾ!

ಅಶೋಕ್‌ರನ್ನು ಭಾರೀ ಮತಗಳ ಅಂತರದಿಂದ ಗೆಲ್ಲಿಸಿ ಉಪಮುಖ್ಯಮಂತ್ರಿ ಪಟ್ಟಕ್ಕೂ ಏರಿಸಿದ ಪದ್ಮನಾಭ ನಗರದ ಜನತೆ ಅದಕ್ಕೆ ಪಡಬೇಕಾದ ಪ್ರಾಯಶ್ಚಿತ್ತ ಮತ್ತು ತೆರಬೇಕಾದ ದಂಡವೇನು ಗೊತ್ತೆ?

ಇನ್ನು ಮುಂದೆ ಯಾರೇ ಪದ್ಮನಾಭನಗರದ ಮಕ್ಕಳು ಕ್ರಿಕೆಟ್ ಹಾಗಾಗಲಿ ಕುಂಟಾಬಿಲ್ಲೆ ಆಡುವುದಕ್ಕೂ ಜಾಗವಿಲ್ಲದ ಹಾಗೆ ಅಶೋಕ್ ಗ್ಯಾಂಗ್ ಭೂಮಿ ಮುಕ್ಕತೊಡಗಿದೆ. ಸತ್ತವರ ಹೆಣ ಹೂಳುವುದಕ್ಕೂ ಸ್ಮಶಾನಕ್ಕೆಂದು ಜಮೀನಿಲ್ಲದಂತೆ, ಪಾರ್ಕು, ಬಸ್‌ಸ್ಟ್ಯಾಂಡ್, ಸ್ಕೂಲು, ಕಾಲೇಜು ಯಾವುದಕ್ಕೂ ಅಂಗುಲ ನೆಲವನ್ನೂ ಉಳಿಸದಂತೆ ಅಶೋಕ್ ಪಟಾಲಮ್ ಭೂಭೋಜನ ಮಾಡುತ್ತಲೇ ಇದೆ. ಬಿಜೆಪಿ ಸರ್ಕಾರದ ಅತ್ಯಂತ ಬಲಾಢ್ಯ ಅತಿ ಪ್ರಭಾವಶಾಲಿ ಉಪಮುಖ್ಯಮಂತ್ರಿ ಅಶೋಕ್ ತನ್ನ ಚೇಲಾಗಳ ಮೂಲಕ ನಡೆಸುತ್ತಿರುವ ವ್ಯವಸ್ಥಿತ ಭೂಕಬಳಿಕೆಗೆ ಬಲಿಯಾದ ಪದ್ಮನಾಭನಗರದ ಮೂರು ಕೆರೆಗಳ ದುರಂತ ಕತೆಗೆ ಯಾವ ನಾಗರಿಕ ಸಮಾಜವಾದರೂ ತಲೆ ತಗ್ಗಿಸಲೇಬೇಕು.

ಮೊದಲಿಗೆ ಪದ್ಮನಾಭನಗರದ ಕೆರೆಯನ್ನೇ ನೋಡಿ. ಒಂದಾನೊಂದು ಕಾಲಕ್ಕೆ ಚಿಕ್ಕಲ್ಲಸಂದ್ರದ ಕೆರೆ ಎಂದೇ ಖ್ಯಾತಿಗಳಿಸಿದ್ದ ಅದರ ಒಟ್ಟು ವಿಸ್ತೀರ್ಣ 40 ಎಕರೆ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಎ.ಟಿ.ರಾಮಸ್ವಾಮಿ ಆಯೋಗ ತನ್ನ ವರದಿಯಲ್ಲಿ ಸ್ಪಷ್ಟವಾಗೇ ಸಾವಿರದಿನ್ನೂರು ಕೋಟಿ ಮೊತ್ತದ ಕೆರೆ ಭೂಮಿಯನ್ನು ದೋಚಲಾಗಿದೆಯೆಂದು ನಮೂದಿಸಿತ್ತು. ಹಾಗೆ ಪದ್ಮನಾಭಕೆರೆಯನ್ನು ತನ್ನ ರಿಯಲ್ ಎಸ್ಟೇಟ್ ದಂಧೆಗೆಂದು ಬಲಿ ಹಾಕಿದ್ದು ಬೇರೆ ಯಾರೂ ಅಲ್ಲ, ಸದ್ಯ ಬಿಬಿಎಂಪಿಗೆ ಉಪಮೇಯರ್ ಆಗಿರುವ ಅಶೋಕ್ ಬಲಗೈ ಬಂಟ ಎಲ್. ಶ್ರೀನಿವಾಸ್!

ಎ.ಟಿ.ರಾಮಸ್ವಾಮಿ ಆಯೋಗ ಎಲ್.ಶ್ರೀನಿವಾಸ್‌ನನ್ನು ಇಡೀ ಚಿಕ್ಕಲ್ಲಸಂದ್ರ ಕೆರೆ ದುರಂತದ ಕಾರಣಪುರುಷನನ್ನಾಗಿ ಆರೋಪಿಸಿದ್ದರೂ ಅಶೋಕ್ ಪಟ್ಟು ಹಿಡಿದು ಆತನನ್ನು ಉಪಮೇಯರ್ ಗಾದಿಗೆ ತಂದಾಗಲೇ ಅಳಿದುಳಿದ ಕೆರೆ ಭೂಮಿಗೂ ಗತಿ ಕಾದಿದೆಯೆಂಬುದು ಪದ್ಮನಾಭನಗರದ ಪ್ರಜ್ಞಾವಂತರಿಗೆಲ್ಲ ಮನದಟ್ಟಾಗಿತ್ತು. ಪದ್ಮನಾಭನಗರದ ಕಿದ್ವಾಯಿ ಫೌಂಡೇಶನ್ನಿಗೆ ಹೊಂದಿಕೊಂಡಂತೆ ಪಕ್ಕದ ಗೌಡನಪಾಳ್ಯ ಕದಿರೇನಹಳ್ಳಿಗಳನ್ನು ವ್ಯಾಪಿಸಿದ ಚಿಕ್ಕಲ್ಲಸಂದ್ರದ ಕೆರೆಯ ನಲವತ್ತೆಕರೆಯ ಮಧ್ಯೆಯೇ ಉಪಮೇಯರ್ ಶ್ರೀನಿವಾಸನ ಬಂಗಲೆಯಿದೆ. ಸದ್ಯ ಜೆಡಿಎಸ್ ಕಾರ್ಯಕರ್ತನೆಂದು ಹೇಳಿಕೊಳ್ಳುವ ನಿನ್ನೆ ಮೊನ್ನೆಯ ತನಕ ಬಿಜೆಪಿಯಲ್ಲೇ ಇದ್ದ ಆಂಜನಪ್ಪ ಎಂಬ ಮತ್ತೊಬ್ಬ ಅಶೋಕ್ ಶಿಷ್ಯನೂ ನಲವತ್ತೆಕರೆಯ ಕೆರೆ ಕಬಳಿಕೆಯಲ್ಲಿ ಸಮಾನ ಪಾಲುದಾರ. ಇವತ್ತಿಗೂ ಅಶೋಕ್ ಜೊತೆಜೊತೆಗೇ ಸುತ್ತಾಡುವ ಆಂಜನಪ್ಪನನ್ನು ಒಂದು ಮಗ್ಗುಲಿಗೆ ಮತ್ತು ಉಪಮೇಯರ್ ಶ್ರೀನಿವಾಸ್‌ನನ್ನು ಮತ್ತೊಂದು ಮಗ್ಗುಲಿಗೆ ಕಟ್ಟಿಕೊಂಡು ಪದ್ಮನಾಭನಗರದ ಉದ್ಧಾರಕ್ಕೆ ನಿಂತಿದ್ದಾರೆ ಡಿಸಿಎಂ ಅಶೋಕ್.

ಕದ್ದ ಕೆರೆಗೇ ಖಾತೆ!

ಕೆರೆಯನ್ನು ನೆಲಗಳ್ಳರಿಂದ ಉಳಿಸಲೆಂದೇ ಈ ಭಾಗದ ಸ್ವಾತಂತ್ರ್ಯ ಹೋರಾಟಗಾರರು, ಜನಪರ ಸಂಘಟನೆಗಳೆಲ್ಲ ಸೇರಿಕೊಂಡು ಕೆರೆ ಉಳಿಸಿ ಒಕ್ಕೂಟ ಕಟ್ಟಿಕೊಂಡರು. ಅಶೋಕ್ ಬಂಟರಿಂದ ಕೆರೆ ಅಳಿದುಳಿದ ಜಮೀನಿಗೂ ಉಳಿಗಾಲವಿಲ್ಲವೆಂದು ಪದ್ಮನಾಭನಗರದ ಕಾಂಗ್ರೆಸ್ ಕಾರ್ಯಕರ್ತರೆಲ್ಲ ನಾಯಕ ಗುರಪ್ಪನಾಯ್ಡು ನೇತೃತ್ವದಲ್ಲಿ ಪತ್ರಿಕಾಗೋಷ್ಠಿಯನ್ನೇ ನಡೆಸಿ ಮುಖ್ಯಮಂತ್ರಿ, ಅರಣ್ಯ ಇಲಾಖೆ, ಬಿಡಿಎ ಎಲ್ಲಕ್ಕೂ ದೂರುಗಳ ಮೇಲೆ ದೂರಿತ್ತರು. ಹೀಗೆ ಡಿಸೆಂಬರ್ 7ನೇ ತಾರೀಖಿಗೆ ಪದ್ಮನಾಭನಗರದ ಕಾಂಗ್ರೆಸ್ ಕಾರ್ಯಕರ್ತರು ಪತ್ರಿಕಾಗೋಷ್ಠಿ ಕರೆದು ದಾಖಲೆ ಬಿಡುಗಡೆ ಮಾಡಿದ ಮಾರನೇ ದಿನಕ್ಕೇ ಚಿಕ್ಕಲ್ಲಸಂದ್ರದ ಕೆರೆಯ ಮತ್ತೊಂದು ಎಕರೆಗೆ ಅಶೋಕ್ ಚೇಲಾ ಆಂಜನಪ್ಪ ತಂತಿ ಬೇಲಿ ಹಾಕಿಬಿಟ್ಟ!

ಕಂಗಾಲಾದ ಪದ್ಮನಾಭನಗರದ ಕೆಲ ಪ್ರಮುಖರು ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆಗೆ ಹೋಗಿ ದೂರುಕೊಟ್ಟರೆ ಇನ್ಸ್‌ಪೆಕ್ಟರ್ ಬಾಳೇಗೌಡ ತಾನೇ ಏನು ಮಾಡಲು ಸಾಧ್ಯ?

ಹೋಗಿಹೋಗಿ ಅರಣ್ಯ ಇಲಾಖೆ, ಬಿಎಂಟಿಎಫ್‌ಗೆ ಕೊಡಬೇಕಾದ ದೂರು ಪೊಲೀಸರ ಹತ್ತಿರ ತಂದಿದ್ದೀರಲ್ಲಪ್ಪಾ...? ಎಂದು ಇನ್ಸ್‌ಪೆಕ್ಟರ್ ಬಾಳೇಗೌಡ ದಮ್ಮಯ್ಯಗುಡ್ಡೆ ಹಾಕಿಬಿಟ್ಟರು. ಈಗಾಗಲೇ ಚಿಕ್ಕಲ್ಲಸಂದ್ರದ ಕೆರೆಯ 40 ಎಕರೆಯನ್ನು ಕಬಳಿಸಿದ್ದಾಗಿದೆ. ಉಳಿದ ನಾಲ್ಕೋ ಐದೋ ಎಕರೆಯಲ್ಲಿ ಮೊನ್ನೆ ತಾನೇ ಒಂದೆಕರೆಗೆ ಬೇಲಿ ಬಿದ್ದಿದೆ. ಓಟು ಕೊಟ್ಟ ಜನರೇ ಬೀದಿಗಿಳಿದು ಕೆರೆ ರಕ್ಷಣೆಗೆ ಮುಂದಾದರೆ ಶಾಸಕ, ಡಿಸಿಎಂ ಅಶೋಕ್ ಕೆರೆ ಭೂಮಿಯನ್ನು ತನ್ನದೇ ಚೇಲಾಗಳಿಂದ ವಶಪಡಿಸಿಕೊಳ್ಳುವುದು ಹಾಳಾಗಲಿ ಅಳಿದುಳಿದ ಕೆರೆ ಭೂಮಿಯನ್ನೂ ಬಿಡದೇ ಶಿಷ್ಯರ ಮೂಲಕ ಕಬಳಿಸುತ್ತಿದ್ದಾರೆ!

ಒಂದು ಮೂಲದ ಪ್ರಕಾರ ಕದ್ದ ಇಡೀ ಕೆರೆಯ ನಲವತ್ತೆಕರೆಯಲ್ಲಿ ಉಪಮೇಯರ್ ಶ್ರೀನಿವಾಸ್ ಯಾರ್‍ಯಾರಿಗೆ ಸೈಟು ವಿಂಗಡಿಸಿ ಮಾರಿದ್ದನೋ ಅವರೆಲ್ಲರಿಗೂ ಅಶೋಕ್‌ರೇ ನಿಂತು ಖಾತೆ ಮಾಡಿಸಿಕೊಟ್ಟಿದ್ದಾರಂತೆ. ಕದ್ದ ಕೆರೆಯನ್ನೇ ಖಾತೆ ಮಾಡಿಸಿಕೊಡುತ್ತಾರೆಂದ ಮೇಲೆ ಅಶೋಕ್ ಕೆರೆ ಉಳಿಸುವುದೆಲ್ಲಿ. ಚಿಕ್ಕಲ್ಲಸಂದ್ರದ ಕೆರೆಯ ಸಮಾಧಿಯ ಮೇಲೆ ಅಶೋಕ್ ಛೇಲಾಗಳ ರಿಯಲ್ ಎಸ್ಟೇಟ್ ದಂಧೆ ವಿಜೃಂಭಿಸುತ್ತಲೇ ಇದೆ. ಹಕೀಕತ್ತೇನೆಂದರೆ, ಉಪಮೇಯರ್ ಶ್ರೀನಿವಾಸನ ಮೂಲಕ ದೋಚಿದ ಕೆರೆಯ ಪಾಪದ ಸೈಟುಗಳ ಪೈಕಿ 20 ಭರ್ಜರಿ ನಿವೇಶನಗಳನ್ನು ಅಶೋಕ್ ತಮ್ಮ ಅಕ್ಕನ ಮಗ ನವೀನ ಎಂಬಾತನ ಹೆಸರಲ್ಲಿ ಬಚ್ಚಿಟ್ಟುಕೊಂಡಿದ್ದಾರೆ. ಇಂಥ ಇಪ್ಪತ್ತು ಸೈಟ್‌ಗಳ ಒಟ್ಟು ಮೊತ್ತ ಸದ್ಯದ ಮಾರ್ಕೆಟ್ ರೇಟಿನ ಪ್ರಕಾರವೇ 20 ಕೋಟಿಗೂ ಅಧಿಕ. ಇನ್ನು ಕೆರೆ ಮಾಯವಾದರೆಷ್ಟು ಪದ್ಮನಾಭನಗರಕ್ಕೇ ಬೆಂಕಿ ಬಿದ್ದರೆಷ್ಟು?

ಇಟ್ಟಮಡು ಕೆರೆ


ಚಿಕ್ಕಲ್ಲಸಂದ್ರದ ಕೆರೆಗೆ ಹೊಂದಿಕೊಂಡಂತೆಯೇ ಇಟ್ಟಮಡು ಕೆರೆ ನಿನ್ನೆ ಮೊನ್ನೆಯ ತನಕ ಎಲ್ಲಾ ಕಬಳಿಕೆಯಾಗಿ ಕೆರೆಯ ಅವಶೇಷವೋ ಎಂಬಂತೆ 11 ಎಕರೆ ಉಳಿದಿತ್ತು. ಕಳೆದ ಪಾಲಿಕೆ ಚುನಾವಣೆಯಲ್ಲಿ ಅಶೋಕ್ ಪಕ್ಕಾ ಶಿಷ್ಯ ವೆಂಕಟಸ್ವಾಮಿ ನಾಯ್ಡು ಇಲ್ಲಿಂದ ಬಿಜೆಪಿ ಕೌನ್ಸಿಲರ್ ಆಗಿ ಗೆದ್ದುಬಿಟ್ಟ. ಸುತ್ತಮುತ್ತಲ ಜನ ಇಟ್ಟಮಡು ಕೆರೆಯ ಬಗ್ಗೆ ಪಾರ್ಕು ಆಟದ ಮೈದಾನ, ಸ್ಮಶಾನದ ಕನಸು ಕಂಡಿದ್ದೇ ಕಂಡಿದ್ದು. ಅಶೋಕ್ ಮಂತ್ರಿಯಾಗಿದ್ದೇ ತಡ, ಶಿಷ್ಯ ಉಪಮೇಯರ್ ಶ್ರೀನಿವಾಸ್ ಮಾವ ಪಾಪಣ್ಣ ಅಲಿಯಾಸ್ ರಾಮಯ್ಯ ಕೆರೆಯ ಐದೆಕರೆಗೆ ಬೇಲಿ ಸುತ್ತಿ ಸೈಟು ವಿಂಗಡಿಸಿ ಮಾರಿಬಿಟ್ಟ. ಮಿಕ್ಕಂತೆ ಅಶೋಕ್ ಚೇಲಾಗಳೆಲ್ಲ ಇಂಚಿಂಚೂ ಕದ್ದು ಅಂತಿಮವಾಗಿ ಮೂರೋ, ನಾಲ್ಕೋ ಎಕರೆಯಷ್ಟು ಕೆರೆ ಮಾತ್ರವೇ ಉಳಿದಿತ್ತು.

ಈಗ ನೋಡಿದರೆ ಕೌನ್ಸಿಲರ್ ವೆಂಕಟಸ್ವಾಮಿ ನಾಯ್ಡು ರಾತ್ರೋರಾತ್ರಿ ಅಲ್ಲಿ ಗಂಗಮ್ಮನ ದೇವಸ್ಥಾನ ಹುಟ್ಟುಹಾಕಿ, ಅದರ ಸುತ್ತ ಫೈವ್ ರೌಂಡ್ ತಂತಿಬೇಲಿ ಹಾಕಿದ್ದಾನೆ. ಪುದಿ ಶೆಡ್ಡಿನಲ್ಲಿ ಸೃಷ್ಟಿಯಾದ ಗಂಗಮ್ಮ ದೇವಸ್ಥಾನ ಮತ್ತು ಅದರ ಸುತ್ತ ಉದ್ಭವಿಸಿದ ತಂತಿಬೇಲಿಯನ್ನು ಹೊರತುಪಡಿಸಿ ನೋಡಿದರೆ ಎರಡೆಕರೆಯ ತುಂಡು ಭೂಮಿ ಕೂಡ ಉಳಿಸಿಲ್ಲ. ಮೊನ್ನೆಯಷ್ಟೇ ಉದ್ಭವಿಸಿದ ಗಂಗಮ್ಮನ ಜಾತ್ರೆಯನ್ನು ಶಿಷ್ಯ ವೆಂಕಟಸ್ವಾಮಿ ನಾಯ್ಡು ಸಮ್ಮುಖದಲ್ಲೇ ಅಶೋಕ್ ನೂರಾರು ಜನರನ್ನು ಸೇರಿಸಿ ನೆರವೇರಿಸಿದ್ದಾರೆ. ಜಾತ್ರೆಗೆ ಬಂದವರೆಲ್ಲ ನೆಲಗಳ್ಳ ಚೇಲಾಗಳು ಮತ್ತು ಕೂಳುಬಾಕ ಪುಂಡರು.


ಹನ್ನೊಂದು ಎಕರೆಯಿದ್ದ ಇಟ್ಟಮಡು ಕೆರೆ ಇವತ್ತು ಸಂಪೂರ್ಣವಾಗಿ 'ನಾಮಾವಶೇಷವಾಗಿದೆ. ಉಳಿಕೆ ಚೂರುಪಾರು ಸೊತ್ತನ್ನೂ ಬಿಡದೆ ನುಂಗಿಹಾಕಲು ಅಶೋಕ್ ಪಟಾಲಮ್ ಗಂಗಮ್ಮನನ್ನು ಹುಟ್ಟಿ ಹಾಕಿದೆ. ಇಟ್ಟಮಡು ಏರಿಯಾ ಅದೆಂಥಾ ಕೊಂಪೆಯಾಗಿದೆಯೆಂದರೆ ಜನಕ್ಕೆ ಶೌಚಾಲಯ, ಆಟದ ಮೈದಾನ, ಬಸ್‌ಸ್ಟ್ಯಾಂಡ್, ಪಾರ್ಕು ಯಾವ ಜಾಗವೂ ಉಳಿದಿಲ್ಲ. ಈ ಅಳಿದುಳಿದ ಖಾಲಿ ಭೂಮಿಗೂ ಅಶೋಕ್ ಪಟಾಲಮ್ ಬೇಲಿ ಎಬ್ಬಿಸಿತೆಂದರೆ ಅಂತಿಮವಾಗಿ ಉಳಿಯುವುದು ಗಂಗಮ್ಮನ ಗುಡಿಯೊಂದೆ. ಅಂದಹಾಗೆ ಇಟ್ಟಮಡು ಕೆರೆಯನ್ನು ಅಶೋಕ್ ಗ್ಯಾಂಗ್ ಪಟಾಯಿಸಿ ಗಳಿಸಿದ್ದು 700 ಕೋಟಿ ರೂಪಾಯಿಗಳಿಗೂ ಅಧಿಕ. ಇದರಲ್ಲಿ ಅಶೋಕ್ ಪಾಲೆಷ್ಟು ಎಂಬುದು ಮಾತ್ರ ಇವತ್ತಿಗೂ ನಿಗೂಢ. ಅಶೋಕರನ್ನು ಗೆಲ್ಲಿಸಿದ ತಪ್ಪಿಗೆ ಪದ್ಮನಾಭನಗರದ ಜನ ಪುರಾತನ ಇಟ್ಟಮಡು ಕೆರೆಯನ್ನೇ ಕಳಕೊಂಡಂತಾಗಿದೆ.

ಹೊಸಕೆರೆಹಳ್ಳಿ ಕೆರೆ...!


ಇನ್ನು ಹೊಸಕೆರೆಹಳ್ಳಿ ಕೆರೆಯ ವಿಷಯಕ್ಕೆ ಬಂದರೆ ಅದೇ ಹೈಟೆಕ್ ದರೋಡೆಯೊಂದರ ಕತೆಯಾಗುತ್ತದೆ.



ಕೆರೆಭೂಮಿಗೆ ಯಾರಿಗೋ ಖಾತೆ



ಕೆರೆ ಭೂಮಿಯಲ್ಲಿ ಕೌನ್ಸಿಲರ್ ನಾರಾಯಣನ ಬಂಗಲೆ




ಚಿಕ್ಕಲ್ಲಸಂದ್ರಕೆರೆ ಮಧ್ಯೆ ಅಶೋಕ್ ಚೇಲಾನ ಕಾಂಪ್ಲೆಕ್ಸ್

ಆಲಿ ಹಂತಕರಿಗೆ ಆಸರೆ

ಮುಂಬರುವ ಚುನಾವಣೆಯಲ್ಲಿ ಪದ್ಮನಾಭನಗರದಲ್ಲಿ ಸರಿಸುಮಾರು 40 ಸಾವಿರ ಮುಸ್ಲಿಂ ಮತಗಳನ್ನು ಒಡೆದರಷ್ಟೇ ತಾನು ಗೆಲ್ಲಲು ಸಾಧ್ಯ ಎಂಬ ಅಶೋಕ್ ಹುನ್ನಾರಕ್ಕೆ ಹೇಗೆ ಮುಸ್ಲಿಂ ರೌಡಿಗಳು ಬಳಕೆಯಾಗುತ್ತಿದ್ದಾರೆಂಬುದಕ್ಕೆ ಈ ಘಟನೆಯೊಂದೇ ಸಾಕು.


ಜೆಡಿಎಸ್‌ನ ಕೌನ್ಸಿಲರಾಗಿದ್ದ ದಿವಾನಾ ಆಲಿಯ ಹತ್ಯೆಯಾದ ನಂತರ ಬನಶಂಕರಿ ದೇವಸ್ಥಾನಕ್ಕೆ ಗೆದ್ದು ಬಂದವನು ಪ್ರಳಯಾಂತಕ ಬಸವರಾಜು. ಡಿಸಿಎಂ ಅಶೋಕ್‌ರ ಪಟ್ಟಾ ಛೇಲಾ ಮತ್ತು ನಿಸ್ಸೀಮ ನೆಲಕಂಟಕ ಬಸವರಾಜು ಅಶೋಕ್ ಮಂತ್ರಿಗಿರಿಯನ್ನು ಬಳಸಿಕೊಂಡೇ ವ್ಯವಸ್ಥಿತವಾಗಿ ಕೌನ್ಸಿಲರ್ ಆಲಿಯನ್ನು ಮುಗಿಸಿದ್ದೂ ಅಲ್ಲದೆ ಸರಿಸುಮಾರು 14 ಸಾವಿರದಷ್ಟು ಮುಸ್ಲಿಂ ಮತಗಳನ್ನು ಮತಪಟ್ಟಿಯಿಂದಲೇ ಕಾಣೆಯಾಗಿಸಿ ಬೋಗಸ್ ಮತಗಳಿಂದಲೇ ಗೆದ್ದುಬಿಟ್ಟ.

ಆಲಿಯ ಹಂತಕರಾದ ಅಜಗರ್, ಅಫ್ರೋಜ್ ಅಲಿಯಾಸ್ ಅಪ್ಪಿ, ಬಕೀಟ್ ಕಾಲು, ಬೊಮ್ಮನ್ ಬಾಬು ಮುಂತಾದವರನ್ನು ಇವತ್ತಿಗೂ ಸಾಕುತ್ತಿರುವವನು ಕೌನ್ಸಿಲರ್ ಬಸವರಾಜ್. ಮೊನ್ನೆಯಷ್ಟೇ ಜೈಲಿನಿಂದ ಹೊರಬಿದ್ದ ಆಲಿ ಹಂತಕರನ್ನು ಬಳಸಿಕೊಂಡೇ ಮುಂಬರುವ ಚುನಾವಣೆಯಲ್ಲಿ ಮುಸ್ಲಿಂ ಮತಗಳನ್ನು ಒಡೆಯುವುದು ಅಶೋಕ್ ತಂತ್ರ. ಹಾಗಂತ ನೇರವಾಗಿ ಕೈಹಾಕುವಂತಿಲ್ಲವಲ್ಲ, ಅದಕ್ಕೆ ಛೂಬಿಟ್ಟಿದ್ದು ಚೇಲಾ ಕೌನ್ಸಿಲರ್ ಬಸವರಾಜುನನ್ನು!



ಬಸವರಾಜ್

ಜೈಲಿಂದ ಹೊರಬಿದ್ದ ಆಲಿ ಹಂತಕರನ್ನು ಹೇಗಾದರೂ ಮಾಡಿ ಮತ್ತೆ ಯಾರಬ್‌ನಗರದಲ್ಲಿ ಮಿಂಚಿಸಿಬಿಟ್ಟರೆ ಆಲಿ ಬೆಂಬಲಿಗರನ್ನು ಸಲೀಸಾಗಿ ಹುಟ್ಟಡಗಿಸಬಹುದೆಂಬ ದುರಾಶೆ ಬಸವರಾಜನದ್ದು. ಅದಕ್ಕೊದೇ ಸಿಕ್ಕಿಯಾಗಿದ್ದು ಕಳೆದ ಡಿಸೆಂಬರ್ 20. ಅವತ್ತು ಅಪರಾಹ್ನ 12.30ರ ಹೊತ್ತಿಗೆ ಏಕಾಏಕಿ ಇಪ್ಪತ್ತು ಕಾರುಗಳಲ್ಲಿ ನಲವತ್ತಕ್ಕೂ ಅಧಿಕ ರೌಡಿಗಳ ಹಿಂಡೊಂದು ಯಾರಬ್‌ನಗರಕ್ಕೆ ನುಗ್ಗಿದೆ. ಆಲಿ ಹಂತಕ ಅಪ್ಪಿ, ಖತರ್‌ನಾಕ್ ರೌಡಿ ಬಕೀಟ್ ಕಾಲು, ಚೊಂಬಾ ಇಸ್ಮಾಯಿಲ್ ಮೊಮ್ಮಗ ಆಯಾಜ್, ಅಪ್ಪೀ ಅಣ್ಣ ಕೌಸರ್, ಟ್ಯಾನರಿ ರಸ್ತೆಯ ರೌಡಿ ಅಕ್ರಮ್ ಮುಂತಾದವರಿದ್ದ ರೌಡಿಗಳ ಗ್ಯಾಂಗ್ ಏಕಾಏಕಿ ಯಾರಬ್‌ನಗರದ ಮಸೀದಿಯೆದುರು ಜಮಾಯಿಸಿದ್ದೇ ತಡ ದಾಂಧಲೆ ಶುರುಮಾಡಿದೆ. ಪಕ್ಕದಲ್ಲೇ ಇದ್ದ ಆಲಿಯ ತಮ್ಮಂದಿರ ಆಫೀಸಿಗೂ ಲಗ್ಗೆಯಿಟ್ಟು ಅಲ್ಲಿದ್ದ ಪೀಠೋಪಕರಣಗಳನ್ನು ಧ್ವಂಸಗೊಳಿಸಿದೆ.



ದಿವಾನ್ ಆಲಿ

ನುಗ್ಗಿದ ಗ್ಯಾಂಗಿನ ನಡುವಿನಲ್ಲಿದ್ದವನೊಬ್ಬ ತನ್ನ ರಿವಾಲ್ವರ್ ತೆಗೆದದ್ದೇ ಆಕಾಶಕ್ಕೆ ಗುಂಡು ಹಾರಿಸಿ ಕೇಕೆ ಹಾಕಿದ್ದಾನೆ. ಇದು ತಕ್ಷಣವೇ ಬನಶಂಕರಿ ಇನ್ಸ್‌ಪೆಕ್ಟರ್ ಮುರಳೀಧರ್ ಕಿವಿಗೆ ಬಿದ್ದದ್ದೇ, ಒಬ್ಬನೇ ಒಬ್ಬ ಡ್ರೈವರ್ ಸಮೇತ ಧಾವಿಸಿ ಬಂದಿದ್ದಾರೆ. ಪೊಲೀಸರನ್ನು ನೋಡಿದ್ದೇ ರೌಡಿಗಳು ಪರಾರಿಯಾಗಲೆತ್ನಿಸಿದರೆ ಮುರಳೀಧರ್ ಒಬ್ಬರೇ ಸರಿಸುಮಾರು ಏಳು ಮಂದಿಯನ್ನು ಬಂಧಿಸಿಬಿಟ್ಟರು. ಲಾಕಪ್ಪಿನಲ್ಲಿಟ್ಟು ಬಾಯಿ ಬಿಡಿಸಿದಾಗಲೇ ಗೊತ್ತಾಗಿದ್ದು ಇದರ ಹಿಂದಿದ್ದದ್ದು ಕೌನ್ಸಿಲರ್ ಬಸವರಾಜು!

'ನೀವೆಲ್ಲ ಏನೂ ಚಿಂತೆ ಮಾಡಬೇಡಿ. ಅಶೋಕ್ ಸಾಹೇಬರ ಕೈಯಿಂದ ಡಿಸಿಪಿ-ಎಸಿಪಿಗೆ ಫೋನ್ ಮಾಡಿಸ್ತೀನಿ. ಹೋಗಿ ಚೆನ್ನಾಗಿ ಹವಾ ಮೆಂಟೇನ್ ಮಾಡಿ.....!' ಎಂದೇ ಬಸವರಾಜು ರೌಡಿಗಳನ್ನು ಛೂಬಿಟ್ಟಿದ್ದ.

ಹಾಗಂತ ಅಶೋಕ್ ಮುಸ್ಲಿಂ ರೌಡಿಗಳ ಪರವಾಗಿ ಪೊಲೀಸ್‌ರಿಗೆ ಹೇಳಲು ಸಾಧ್ಯವಾ? 'ಆಯ್ತು ಅದೇನ್ ಮಾಡ್ತೀಯೋ ಮಾಡು' ಎಂದಿದ್ದಾರೆ. ನಂಬಿದ್ದ ಬಸವರಾಜು ರೌಡಿಗಳಿಗೊಂದಿಷ್ಟು ಕಾಸು ಕೊಟ್ಟಿದ್ದೇ ಯಾರಬ್ ನಗರಕ್ಕೆ ನುಗ್ಗಿಸಿದ್ದಾನೆ. ಯಾವತ್ತು ರೌಡಿಗಳ ಹಾವಳಿ ಗೊತ್ತಾಯಿತೋ ಇನ್ಸ್‌ಪೆಕ್ಟರ್ ಮುರಳೀಧರ್ ಅಟ್ಟಾಡಿಸಿ ಎಳೆದೊಯ್ದು ಸಮಾ ರಿಪೇರಿ ಮಾಡಿಬಿಟ್ಟರು. ಇನ್ನು ಪೊಲೀಸರಿಂದ ಬಿಡಿಸದೇ ಹೋದರೆ ನಾಳೆ ತನ್ನ ಮೇಲೆಲ್ಲಿ ತಿರುಗಿ ಬೀಳುತ್ತಾರೋ ಎಂದು ಗಾಬರಿಗೆ ಬಿದ್ದ ಬಸವರಾಜು ಯಾರೋ ಮೇಲಧಿಕಾರಿಯೊಬ್ಬರ ಜೊತೆ ಫಜೀತಿ ಹೇಳಿಕೊಂಡನಂತೆ. ಕೊನೆಗೆ ಹಿಡಿದೊಯ್ದ ಮುಸ್ಲಿಂ ರೌಡಿಗಳಲ್ಲೇ ಎರಡು ತಂಡ ಮಾಡಿ ಒಂದು ತಂಡವನ್ನು ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆಗೆ ಸಾಗಿಸಿ ಅಲ್ಲಿಂದ ಬಚಾವು ಮಾಡಲಾಯಿತಾದರೂ ಮುರಳೀಧರ್ ಮಾತ್ರ ಯಾವುದಕ್ಕೂ ಜಗ್ಗಲೇ ಇಲ್ಲ.

ಸದ್ಯ ಕೌನ್ಸಿಲರ್ ಬಸವರಾಜನನ್ನು ನಂಬಿದ ತಪ್ಪಿಗೆ ಆಲಿ ಹಂತಕರೆಲ್ಲ ಜೈಲುಪಾಲಾಗಿದ್ದಾರೆ. ಮತ್ತೊಂದೆಡೆ ಅಣ್ಣನನ್ನು ಕಳಕೊಂಡು ಕಂಗಾಲಾಗಿರುವ ದಿವಾನಾ ಆಲಿ ತಮ್ಮಂದಿರನ್ನು ಖೊಟ್ಟಿ ಕೇಸು ಹಾಕಿಸಿ ಸುಳ್ಳು ಸುಳ್ಳೇ ಮೂಗರ್ಜಿ ಬರೆಯಿಸಿ ಅತ್ತ ಯಾರಬ್‌ನಗರದಲ್ಲೂ ಇರಲಾಗದ ಇತ್ತ ಪೊಲೀಸರ ಕಾಟವನ್ನೂ ತಾಳಲಾಗದೆ ಭೂಗತರಾಗುವ ಹಾಗೆ ಮಾಡುವುದು ಅಶೋಕ್ ಭಟ್ಟಂಗಿಗಳ ತಂತ್ರ. ಆಲಿಯ ತಮ್ಮಂದಿರ ಪೈಕಿ ಯಾರಾದರೂ ಒಬ್ಬ ತನ್ನ ದುಷ್ಮನ್‌ಗಳಿಂದ ಬಲಿಯಾಗಬೇಕು ಅಥವಾ ಪೊಲೀಸರನ್ನು ಛೂಬಿಟ್ಟು ಎನ್‌ಕೌಂಟರ್ ಮಾಡಿಸಬೇಕು. ಹೀಗಾದರಷ್ಟೇ ಆಲಿಯ ಕೊಲೆ ಕೇಸಿನಿಂದ ಹಂತಕರನ್ನು ಬಚಾವು ಮಾಡಬಹುದೆಂಬುದು ಚೇಲಾ ಬಸವರಾಜನ ತಂತ್ರ. ಇದಕ್ಕೆ ಅಶೋಕ್ ಏನೇನು ಬೇಕೋ ಎಲ್ಲವನ್ನೂ ಮಾಡುತ್ತಿದ್ದಾರೆ.

ಚಿಕ್ಕಲ್ಲಸಂದ್ರದಕೆರೆ ಮತ್ತು ಇಟ್ಟಮಡು ಕೆರೆಗಳನ್ನು ಹಾದು ಮೈಸೂರು ರಸ್ತೆ ದಿಕ್ಕಿಗೆ ಬಂದರೆ ಸುತ್ತಮುತ್ತಲ ಭೂಪ್ರದೇಶಕ್ಕೇ ಚೇಮಸೆಲೆಯುಂತಿದ್ದದ್ದು ಹೊಸಕೆರೆಹಳ್ಳಿ ಕೆರೆ. ಮೂಲತಃ ಅದು ಹೊಸಕೆರೆಹಳ್ಳಿ ಸರ್ವೇ ನಂ. 19.2ನಲ್ಲಿ 59.26 ಎಕರೆಗಳಷ್ಟು ವಿಶಾಲವಾಗಿದ್ದ ಕೆರೆ. ಈ ಭಾಗದ ಜನಕ್ಕೆ ಮಿನಿ ಕಬ್ಬನ್ ಪಾರ್ಕ್ ಅಥವಾ ಮಿನಿ ಲಾಲ್‌ಬಾಗ್ ಏನನ್ನಾದರೂ ಇಲ್ಲಿ ಸೃಷ್ಟಿಸಬಹುದಿತ್ತು. ಅಶೋಕ್ ಅದೇನು ಕೈಚಳಕ ಮೆರೆದರೋ ಹೊಸಕೆರೆಹಳ್ಳಿ ಕೆರೆಯ ಒಂದು ಭಾಗದ ನಡುವಿನಿಂದ ನೈಸ್ ರಸ್ತೆ ಹಾದುಹೋಯ್ತು.

ಕಾಯ್ದೆ ಪ್ರಕಾರ ಯಾವುದೇ ಅರಣ್ಯ ಭೂಮಿ, ಕೆರೆ ಮಧ್ಯೆ ಖಾಸಗಿ ರಸ್ತೆ ನಿರ್ಮಿಸುವಂತಿಲ್ಲ. ಆದರೆ ನೈಸ್ ರಸ್ತೆ ಕೆರೆಯ ಅಂಚಿಗೆ ಬದಲಾಗಿ ಒಂದು ಭಾಗದ ನಡುವಿನಿಂದ ಹಾದುಹೋಗಿದೆ! ಹಾಗೆ ನುಗ್ಗಿದ ನೈಸ್ ರಸ್ತೆಯ ಆಚೆಗೆ ಸರಿಸುಮಾರು ಏಳು ಎಕರೆಗಳಷ್ಟು ಕೆರೆ ಭೂಮಿ ಉಳಿಯುತ್ತಲ್ಲ ಅದಕ್ಕೆ ಬಿಡಿಎ ಬೇಲಿ ಹಾಕಿ ರಕ್ಷಿಸಬೇಕಿತ್ತಲ್ಲವೆ?

ಅಷ್ಟರೊಳಗೆ ಪಾಲಿಕೆ ಚುನಾವಣೆ ಬಂತು. ಹೊಸಕೆರೆಹಳ್ಳಿ ವಾರ್ಡಿಗೆ ಅಶೋಕ್ ಬಿಜೆಪಿ ಟಿಕೆಟ್ ಕರುಣಿಸಿದ್ದು ತನ್ನ ಬಲಗೈ ಬಂಟ ಉಪಮೇಯರ್ ಎಲ್.ಶ್ರೀನಿವಾಸನ ಹತ್ತಿರದ ಸಂಬಂಧಿ ನಾರಾಯಣನಿಗೆ. ಈತನ ತಂದೆ ಹನುಮಂತಪ್ಪ, ಆ ಕಾಲಕ್ಕೆ ಹೊಸಕೆರೆಹಳ್ಳಿ ಕೆರೆ ಕಬಳಿಸಿದ ಕುಖ್ಯಾತ ಭೂಚೋರ. ಅರಣ್ಯ ಇಲಾಖೆಯ ಸಿಬ್ಬಂದಿ ವಿರುದ್ಧವೇ ತನ್ನ ರೌಡಿ ಪಡೆ ಸಮೇತ ದಾಳಿ ನಡೆಸಿ ಕೆರೆಗೆ ಹಾಕಿದ್ದ ಬೇಲಿ ಕಿತ್ತೆಸೆದಿದ್ದ. ಜೈಲಿಗೂ ಹೋಗಿಬಂದ. ಇಂಥಾ ಹನುಮಂತಪ್ಪನ ಮಗನೇ ಹಾಲಿ ಕೌನ್ಸಿಲರ್ ನಾರಾಯಣ. ಜೆಡಿಎಸ್‌ನ ಕೆಂಪೇಗೌಡನ ವಿರುದ್ಧ ಕೇವಲ 300 ಮತಗಳ ಅಂತರದಿಂದ ಗೆದ್ದ ನಾರಾಯಣನನ್ನು ಇನ್ನಿಲ್ಲದಂತೆ ಬೆಂಬಲಿಸಿ ಗೆಲ್ಲಲು ಕಾರಣವಾಗಿದ್ದ ಎಲ್. ಶ್ರೀನಿವಾಸ್ ದೊಡ್ಡಕೆರೆ ಕಳ್ಳನಾದರೆ ನಾರಾಯಣ ಚಿಕ್ಕಕೆರೆ ಕಳ್ಳ!

ಹೊಸಕೆರೆಹಳ್ಳಿ ಕೆರೆಗೆ ಹೊಂದಿಕೊಂಡಂತೆ ನಾರಾಯಣನಿಗೆ ಒಂದೂವರೆ ಎಕರೆ ಆಸ್ತಿಯಿತ್ತು. ಆ ಒಂದೂವರೆ ಎಕರೆಯ ಸರ್ವೇ ನಂಬರ್ ಹಾಕಿದ್ದೆ ನೈಸ್ ರಸ್ತೆಯ ಆಚೆಗಿದ್ದ ಏಳೂ ಎಕರೆಯನ್ನು ಕೌನ್ಸಿಲರ್ ನಾರಾಯಣ ಸೈಟು ವಿಂಗಡಿಸಿದ. ಅಲ್ಲೇ ತನ್ನದೊಂದು ಭರ್ಜರಿ ಬಂಗಲೆಯನ್ನೂ ಎಬ್ಬಿಸಿದ. ಅಲ್ಲಿಗೆ ಕೆರೆಯ ಏಳೆಕರೆಯಲ್ಲದೆ ಸುತ್ತಮುತ್ತ ಇದ್ದ ಹತ್ತೆಕರೆಯ ಕೆರೆಯಂಗಳದ ಖರಾಬು ಜಮೀನನ್ನು ನಾರಾಯಣ ಮತ್ತು ಶ್ರೀನಿವಾಸ್ ಸೇರಿಕೊಂಡು ದೋಚಿಬಿಟ್ಟರು.

ಸರ್ವೆ ನಾಟಕ

ಅಲ್ಲಿಗೆ ಹೊಸಕೆರೆಹಳ್ಳಿ ಕೆರೆಯ 17 ಎಕರೆ ಅಶೋಕ್ ಪಟಾಲಮ್ಮಿನ ಪಾಲಾಗಿತ್ತು. ಇಷ್ಟಾದ ನಂತರವಾದರೂ ಪಾಪದ ಕೆರೆಯನ್ನ ಅದರ ಪಾಡಿಗೆ ಬಿಡಬೇಕಲ್ಲವೆ? ಕನಿಷ್ಠ ಅಶೋಕ್ ಭೂದಾಹವಾದರು ತಣಿಯಬೇಕಲ್ಲವೆ?

ಹಾಗಾಗಲಿಲ್ಲ. ಏಕೆಂದರೆ ಅಶೋಕ್ ಮತ್ತವರ ಚೇಲಾಗಳ ಮೈತುಂಬ ಧುಮ್ಮಿಕ್ಕುತ್ತಿರುವುದು ರಿಯಲ್ ಎಸ್ಟೇಟ್ ರಕ್ತ. ಈಗ ಏಕಾಏಕಿ ಹೊಸಕೆರೆಹಳ್ಳಿ ಕೆರೆಗೆ ಬೇಲಿ ಬಿದ್ದಿದೆ. ಜನ ಕೇಳಿದ್ದಕ್ಕೆ ಬಿಡಿಎ ಅಧಿಕಾರಿಗಳು ಕೊಡುವ ಉತ್ತರ, 'ನೆಲಗಳ್ಳರಿಂದ ಕೆರೆಯನ್ನು ಉಳಿಸ್ತೀವಿ' ಅನ್ನೋದು. ವಿಚಿತ್ರವೆಂದರೆ ಬಿಡಿಎ ಹಾಕಿದ ಬೇಲಿ ಕೆರೆಯ ನಡುವಿನಿಂದ ಹಾದು ಹೋಗುತ್ತದೆ. ಕೆರೆ ಭೂಮಿ ಅದರ ಸುತ್ತಮುತ್ತಲ ಖರಾಬು ಇತ್ಯಾದಿಗಳನ್ನೆಲ್ಲ ಹೊರಗೆ ಬಿಟ್ಟು ನಡುವಿನಿಂದ ಬಿಡಿಎ ಬೇಲಿ ನಿರ್ಮಿಸುತ್ತಿದೆಯೆಂದರೆ ಸ್ಥಳೀಯ ಶಾಸಕ ಅಶೋಕ್ ಅಣತಿಯಿಲ್ಲದೆ ಸಾಧ್ಯವೆ? ಅಕ್ಕಪಕ್ಕದ ನಿವಾಸಿಗಳು ಈಗಾಗಲೇ ಪ್ರತಿಭಟನೆಗಿಳಿದಿದ್ದಾರೆ. ಶ್ರೀರಾಮರೆಡ್ಡಿ ಎಂಬ ವಕೀಲರ ನೇತೃತ್ವದಲ್ಲಿ ಹೈಕೋರ್ಟ್ ಮೊರೆ ಹೋಗುವುದಕ್ಕೂ ಮುಂದಾಗಿದ್ದಾರೆ. ಜನರ ಕಣ್ಣೊರೆಸಲು ಅಶೋಕ್ ಅರಣ್ಯ ಇಲಾಖೆಯ ಸರ್ವೆಯ ನಾಟಕ ಮಾಡಿ ಇನ್ನೇನು ಅರಣ್ಯಾಧಿಕಾರಿಗಳು ಪಕ್ಕಾ ಸರ್ವೆ ಮಾಡೇಬಿಟ್ಟರು ಎನ್ನುವಾಗ ಅರ್ಧಕ್ಕೇ ಸರ್ವೆಯನ್ನು ನಿಲ್ಲಿಸುವಂತೆ ಧಮಕಿ ಹಾಕಿದ್ದಾರೆ.

ಮತ್ತೊಂದೆಡೆ ಬಿ.ಡಿ.ಎ. ಅಧಿಕಾರಿಗಳು ಕೂಡ ಜನ ಕೊಟ್ಟ ದೂರಿಗೆ ಮಹಾ ಮರ್ಯಾದೆ ಕೊಟ್ಟಂತೆ ಸರ್ವೆ ನಾಟಕ ನಡೆಸಿ ಅರ್ಧಕ್ಕೇ ಪರಾರಿಯಾಗಿದ್ದಾರೆ. ಬಿಡಿಎ ಸರ್ವೆಯೇ ಪ್ರತ್ಯೇಕ. ಅರಣ್ಯ ಇಲಾಖೆಯದ್ದೇ ಪ್ರತ್ಯೇಕ. ಎರಡಕ್ಕೂ ಪರಸ್ಪರ ತಾಳೆಯಿಲ್ಲ. ಪ್ರತ್ಯೇಕವಾಗಿ ನಡೆಸಿದ ಇಂಥ ಸರ್ವೆಗಳಿಂದ ಕೆರೆಯ ಮೂಲ ವಿಸ್ತೀರ್ಣವೂ ಸ್ಪಷ್ಟಗೊಳ್ಳುತ್ತಿಲ್ಲ. ಇದರರ್ಥ ಹೇಗಾದರೂ ಮಾಡಿ ಹೊಸಕೆರೆಹಳ್ಳಿ ಕೆರೆಗೊಂದು ಗತಿ ಕಾಣಿಸುವುದು ಅಶೋಕ್ ಹುನ್ನಾರ. ಸ್ಥಳೀಯ ಶಾಸಕನಾಗಿ ಜನರ ಓಟಿನ ಋಣಕ್ಕೆ ಬಿದ್ದು ರಸ್ತೆ ನಿರ್ಮಿಸುವುದು, ಮನೆ ಕಟ್ಟಿಸುವುದು, ಹೆಣ್ಣುಮಕ್ಕಳ ಮಾನಪ್ರಾಣ ಉಳಿಸುವುದು ಒತ್ತಟ್ಟಿಗಿರಲಿ- ಆ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಕೆರೆಕುಂಟೆಗಳ ಭೂಮಿಯನ್ನೂ ಬಿಡದೆ ಕಬಳಿಸುತ್ತಾನೆಂದರೆ ಅಶೋಕ್ ಯಾವ ಮುಖ ಹೊತ್ತು ಡಿಸಿಎಂ ಪೋಜು ಕೊಡುತ್ತಾರೆ.


ನೂರಾರು ಎಕರೆ ನೆಲ ಕದ್ದು ಸಾರಿಗೆ ಇಲಾಖೆಯಿಂದ ಸಾವಿರಾರು ಕೋಟಿ ದೋಚಿಯೂ ತನ್ನ ಕ್ಷೇತ್ರದ ಕೆರೆಗಳನ್ನೂ ಬಿಡದೆ ಕಬಳಿಕೆಗೆ ನಿಂತ ಅಶೋಕ್ ಮುಂದೊಮ್ಮೆ ಪದ್ಮನಾಭನಗರದ ಮೋರಿ, ಶೌಚಾಲಯ, ರಸ್ತೆ ಫುಟ್‌ಪಾತ್‌ಗಳನ್ನಾದರೂ ಉಳಿಯಕೊಟ್ಟರೆ ಅದೇ ಪದ್ಮನಾಭನಗರದ ಪುಣ್ಯ!

● ರಾ. ಸೋಮನಾಥ್


ಅನೈತಿಕತೆಗೆ ಆಧ್ಯಾತ್ಮವೇ ಕಾವಲುಗಾರು

ಪಿರಮಿಡ್ ಒಳಗೆ ರೊಮ್ಯಾನ್ಸ್ ಬಾಬಾ!

ಅತೀ ಬುದ್ಧಿವಂತ ಮನೋವಿಕಾರಿಗಳು ನಮ್ಮ ದೇಶದಲ್ಲಿ ಏನೇನಾಗುತ್ತಾರೆ? ಡೌಟೇ ಬೇಡ, ಬಾಬಾ ಇಲ್ಲವೇ ಸ್ವಾಮಿಗಳಾಗಿ ಬಿಡುತ್ತಾರೆ! ಈ ಜನಸಾಮಾನ್ಯ ಅಭಿಪ್ರಾಯಕ್ಕೆ ನಿತ್ಯಾನಂದ ಸ್ವಾಮಿಯಿಂದ ಋಷಿಕುಮಾರನವರೆಗೆ ಸಾಲುಸಾಲು ನಿದರ್ಶನಗಳು ಕಾಣಸಿಗುತ್ತವೆ. ಈ ಪಂಕ್ತಿಗೆ ಪತ್ರಿಬಾಬಾ ಅಲಿಯಾಸ್ ಪಿರಮಿಡ್ ಬಾಬಾ ಹೊಸ ಸೇರ್ಪಡೆ. ಪರಿಪಕ್ವ ಮನಃಶಾಸ್ತ್ರಜ್ಞರೊಬ್ಬರ ಮುಂದೆ ಈತನನ್ನು ಕೂರಿಸಿದರೆ ಸಾಕು, ಅರ್ಧ ನಿಮಿಷದಲ್ಲೇ ಇವನನ್ನು ಮನೋರೋಗಿ ಎಂದು ಡಿಕ್ಲೇರ್ ಮಾಡಿಬಿಡುತ್ತಾರೆ. ಆ ಪರಿ ತಿಕ್ಕಲುತನದ ಆಸಾಮಿ ಈತ. ಆದರೂ ಬಾಬಾ ಆಗಿ ಬದಲಾಗಿದ್ದಾನೆ. ಇದಕ್ಕೂ ದೊಡ್ಡ ದುರಂತವೆಂದರೆ, ಇಂತವನಿಗೂ ಲಕ್ಷಾಂತರ ಭಕ್ತ-ಭಕ್ತೆಯರಿದ್ದಾರೆ, ಅದೂ 'ಮೈ'ಮೇಲೆ ಮುಗಿಬಿದ್ದು ಸೇವೆ ಮಾಡುವ ಭಕ್ತರವರು. ಅಂದಹಾಗೆ, ಈತನ ಆಸ್ಥಾನದಲ್ಲಿ ಕಿಸ್ಸಿಂಗು, ಹಗ್ಗಿಂಗು, ಸ್ಟೇಜ್ ಡ್ಯಾನ್ಸಿಂಗು, ಟಚಿಂಗು, ಮಸಾಜಿಂಗು, ಎಲ್ಲವೂ ಕಾಮನ್. ಈ ಎಲ್ಲಾ ಅನೈತಿಕತೆಗೂ ಪತ್ರಿಬಾಬಾ ಅಂಟಿಸಿರುವುದು ಆಧ್ಯಾತ್ಮ, ಧ್ಯಾನ, ಸಾಕ್ಷಾತ್ಕಾರದ ಲೇಬಲ್!



ಅವನ ಮೂಲ ಹೆಸರು ಸುಭಾಷ್ ಪತ್ರಿ. ಆದರೆ ಅದಕ್ಕಿಂತಲೂ ಹೆಚ್ಚಾಗಿ ಪತ್ರಿಬಾಬಾ, ಪಿರಮಿಡ್ ಬಾಬಾ ಎಂತಲೇ ಪರಿಚಿತ. ಈತನ ಹೆಸರಿನ ಮುಂದೆ ಈಜಿಪ್ಟ್ ನಾಗರಿಕತೆಯ ಪಿರಮಿಡ್ ಜೋತು ಬೀಳುವುದಕ್ಕೂ ಕಾರಣವಿದೆ. ಈಜಿಪ್ಟ್ ವಿನ್ಯಾಸವನ್ನು ಭಾರತೀಯ ಆಧ್ಯಾತ್ಮಕ್ಕೆ ಬೆರೆಸಿದ ಬಲು ಚತುರ ಈತ. ಹೌದು, ಪಿರಮಿಡ್‌ಗಳೇ ಇವನ ಆಧ್ಯಾತ್ಮ ಕೇಂದ್ರಗಳು. ಈತ ನಿರ್ಮಿಸಿದ ಪಿರಮಿಡ್‌ಗಳ ಒಳಕ್ಕೆ ಒಮ್ಮೆ ಹೋಗಿ ಬಂದರೆ ಎಂತಹ ಕಾಯಿಲೆ ಇದ್ದರೂ ವಾಸಿಯಾಗಿಬಿಡುತ್ತದಂತೆ. ಅತ್ಯಾಧುನಿಕ ತಂತ್ರಜ್ಞಾನದ, ಐಷಾರಾಮಿ ದವಾಖಾನೆಗಳಿಗೂ ಸವಾಲೆಸೆಯುಂತಹ ಇದೊಂದು ಕಾರಣ ಸಾಕು ಇವನೊಬ್ಬ ಬೋಗಸ್ ಬಾಬಾ ಎನ್ನುವುದನ್ನು ಸಾಬೀತುಮಾಡಲು. ಆಂಧ್ರಪ್ರದೇಶದ ತುಂಬೆಲ್ಲ ಇದೇ ನೆಪವಿಟ್ಟುಕೊಂಡು ಬೇಕಾಬಿಟ್ಟಿಯಾಗಿ ಈತ ಸ್ಥಾಪಿಸಿರುವ ಪಿರಮಿಡ್‌ಗಳೇ ಬೃಹತ್ ರಿಯಲ್ ಎಸ್ಟೇಟ್ ಉದ್ಯಮವಾಗಿ ಬೆಳೆದುನಿಂತಿವೆ. ಸರ್ಕಾರ, ಸಾರ್ವಜನಿಕರ ಸ್ವತ್ತನ್ನು ಲಪಟಾಯಿಸಲು ಈತನಿಗೆ ಆಧ್ಯಾತ್ಮದ ಪಿರಮಿಡ್‌ಗಳು ಒಂದು ನೆಪ ಮಾತ್ರ. ಮೆಹಬೂಬ್ ನಗರದ ಸಮೀಪವಿರುವ ಕಡತಲ್ ಗ್ರಾಮದಲ್ಲೇ ಬರೋಬ್ಬರಿ 150 ಎಕರೆಯಷ್ಟು ಜಾಗವನ್ನು ಪಿರಮಿಡ್‌ಗಾಗಿ ಸ್ವಾಹಾ ಮಾಡಿದ್ದಾನೆಂದರೆ ಇನ್ನೆಂತವನಿರಬೇಡ.



ಭೂಕಬಳಿಕೆಯೇ ಇವನ ಅಜೆಂಡಾವಾಗಿದ್ದರೆ, ಭ್ರಷ್ಟ ಬಾಬಾ ಎಂದು ಮೂದಲಿಸಿ ಪ್ರತಿಭಟಿಸಬಹುದಿತ್ತು. ಆದರೆ ತನ್ನೊಳಗಿನ ಕಾಮತೃಷೆಯನ್ನು ಬಲು ಜಾಣ್ಮೆಯಿಂದ, ತಕರಾರಿಲ್ಲದೆ ತೀರಿಸಿಕೊಳ್ಳುವುದೇ ಪತ್ರಿಬಾಬಾನ ಮೂಲ ಉದ್ದೇಶ. ಆತನ ಧ್ಯಾನದ ವೈಖರಿ, ಭಕ್ತರೊಂದಿಗೆ ವರ್ತಿಸುವ, ನರ್ತಿಸುವ ಅವನ ಆಧ್ಯಾತ್ಮ ಶೈಲಿಗಳನ್ನು ಗಮನಿಸಿದ ಎಂತವರಿಗೇ ಆದರೂ ಇವನೊಬ್ಬ ವಿಕೃತಕಾಮಿ ಎನ್ನುವುದು ತಕ್ಷಣಕ್ಕೇ ಸಾಬೀತಾಗುತ್ತದೆ. ಈತನ ಆಸುಪಾಸಿನಲ್ಲಿ ಪುರುಷ ಭಕ್ತರಿಗಿಂತ ಮಹಿಳಾ ಭಕ್ತೆಯರಿಗೇ ಹೆಚ್ಚಿನ ಪ್ರಾಶಸ್ತ್ಯ. ಹಾಗೆ ನೋಡಿದರೆ ಇವನ ಭಕ್ತರಲ್ಲಿ ಮಹಿಳೆಯರ ಸಂಖ್ಯೆಯೇ ಹೆಚ್ಚು. ಇನ್ನು ಅವನ ಪ್ರೈವೇಟ್ ಸೆಕ್ರೆಟರಿಗಳಾದರು ಈಗಷ್ಟೆ ಇಪ್ಪತ್ತೈದರ ಹೊಸಿಲು ದಾಟಿದ ಹೆಂಗಳೆಯರು.

ಪ್ರವಚನ ನೆಪದಲ್ಲಿ ಸ್ಟೇಜ್ ಹತ್ತುವ ಈ ಬೋಗಸ್ ಬಾಬಾ, ಬೋಧನೆ ಮಾಡುವುದಕ್ಕಿಂತ ಮಹಿಳಾ ಭಕ್ತೆಯರೊಂದಿಗೆ ಡ್ಯಾನ್ಸ್ ಮಾಡುವುದು, ಅಪ್ಪಿಕೊಳ್ಳುವುದು, ಚುಂಬಿಸುವುದೇ ಹೆಚ್ಚು. ಅದಕ್ಕೆ ಭಕ್ತರ ಸಮ್ಮತಿಯೂ ಇರುತ್ತದೆ. ಆ ಮಟ್ಟಿಗೆ ಬ್ರೈನ್‌ವಾಶ್ ಮಾಡಿದ ನಂತರವಷ್ಟೆ ಬಾಬಾನ ಸಾಮೀಪ್ಯ ಭಾಗ್ಯವನ್ನು ಅವರಿಗೆ ಕರುಣಿಸಲಾಗುತ್ತದೆ. ಸಾರ್ವಜನಿಕ ಸಭ್ಯತೆಯೂ ಇಲ್ಲದೆ, ಮಹಿಳೆಯರ ಮೈಕೈಗಳ ಖಾಸಗಿ ಜಾಗವನ್ನೆಲ್ಲ ತಡಕಾಡುವುದು ಅದ್ಯಾವ ಸೀಮೆಯ ಆಧ್ಯಾತ್ಮವೋ ಗೊತ್ತಿಲ್ಲ.

ಇನ್ನು ಪಿರಮಿಡ್‌ನ ಒಳಗೆ ಈತನಿಗೆಂದೇ ಇರುವ ರಹಸ್ಯ ಕೋಣೆಯಲ್ಲಿ ನಡೆಯುವುದು ಇದಕ್ಕಿಂತಲೂ ಹೊಲಸು. ಆತನ ಭಕ್ತರ ಹೇಳಿಕೆಯಂತೆ ಅಲ್ಲಿ ಬಾಬಾನ ಸೇವೆ ಮಾಡಲು ಭಕ್ತೆಯರಿಗೆ ಅವಕಾಶ ಕಲ್ಪಿಸಲಾಗುತ್ತದಂತೆ. ಇನ್ನು ಖಾಸಗಿ ಸೇವೆಯೆಂದರೆ ಅಲ್ಲಿ ಅಳಿದುಳಿದ ಸೆನ್ಸಾರ್‌ಗೂ ಅವಕಾಶವಿರುವುದಿಲ್ಲ ಎಂಬುದಂತೂ ಸ್ಪಷ್ಟ. ಸಾಕಷ್ಟು ಸ್ವಾಮಿ, ಬಾಬಾಗಳ ಖಾಸಗಿ ಕೋಣೆಯ ದರ್ಬಾರನ್ನು ಕೇಳಿ ತಿಳಿದ ನಮ್ಮೆಲ್ಲರ ನಿರೀಕ್ಷೆಗಳಿಗೆ ಎಲ್ಲಿಯೂ ಚ್ಯುತಿ ಬರದಂತೆಯೇ ಪತ್ರಿಬಾಬಾನ ಸೇವೆಯೂ ನಡೆಯುತ್ತವೆ. ಸ್ಟೇಜ್ ಮೇಲೆ ಮಾಡಿದ ಎಲ್ಲಾ ಆಸನಗಳನ್ನೂ ಒಂದಿಷ್ಟು ವಿಪರೀತ ಆವೇಗದಲ್ಲಿ ನಡೆಸಿಕೊಡುವ ಆತ ತನ್ನ ಕಾಮತೃಷೆಯನ್ನು ತೀರಿಸಿಕೊಳ್ಳುತ್ತಾನೆ.

ಈತನ ಮತ್ತೊಂದು ವಿಚಿತ್ರ ಸೇವಾ ವಿಧಾನವಿದೆ. ಅದೇನೆಂದರೆ ಖಾಸಗಿ ಕೋಣೆಯ ಮಂಚದ ಮೇಲೆ ಸಿಂಗಲ್ ಪೀಸ್ ಡ್ರೆಸ್‌ನಲ್ಲಿ ಅಂಗಾತ ಮಲಗಿಕೊಂಡು ಭಕ್ತೆಯರಿಂದ ಮೈಕೈ ತುಳಿಸಿಕೊಳ್ಳುತ್ತಾನೆ. ಅದು ಮಸಾಜ್‌ಗಿಂತ ವಿಭಿನ್ನವಾಗೇನೂ ಇರುವುದಿಲ್ಲ. ಕೆಲವರು ಕೈಯಿಂದಲೇ ಈತನ ಮೈಗೆ ಮಸಾಜ್ ಮಾಡಿದರೆ, ಸಂಪೂರ್ಣವಾಗಿ ಬ್ರೈನ್‌ವಾಶ್‌ಗೆ ಒಳಗಾದವರು ಬಾಬಾನ ಮೈ ಮೇಲೆ ನಿಂತು ತುಳಿದು ಸಂಭ್ರಮಿಸುತ್ತಾರೆ. ಮೂಢ ಭಕ್ತೆಯರು ಈ ಸೇವೆಯಿಂದ ಸಂತೃಪ್ತತೆ ಪಡೆದರೆ, ಬೋಗಸ್ ಬಾಬಾ ಒಳಗಿಂದೊಳಗೇ ತೃಪ್ತ(?)ನಾಗಿ ಹೋಗಿರುತ್ತಾನೆ.

ತನ್ನ ಕಡತಲ್ ಪಿರಮಿಡ್‌ನಲ್ಲಿ ಈ ರೀತಿ ಸೇವೆ ಪಡೆಯುವಾಗ ರೆಡ್‌ಹ್ಯಾಂಡಾಗಿ ರೆಕಾರ್ಡಾಗಿರುವ ಪತ್ರಿಬಾಬಾ ಈಗ ಇಕ್ಕಟ್ಟಿನಲ್ಲಿ ಸಿಲುಕಿಕೊಂಡಿದ್ದಾನೆ. ಒಂದು ಕಡೆ ಜಿಲ್ಲಾಧಿಕಾರಿಗಳು ಇವನ ಸಮಗ್ರ ಆಸ್ತಿ, ಜಮೀನು ಕಬಳಿಕೆಯ ಕುರಿತು ತಕ್ಷಣವೇ ತನಿಖೆ ನೀಡುವಂತೆ ಆದೇಶಿಸಿದ್ದಾರೆ. ಮತ್ತೊಂದೆಡೆ ರಾಜ್ಯ ಮಾನವ ಹಕ್ಕುಗಳ ಆಯೋಗ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯದ ಕೇಸನ್ನು ದಾಖಲಿಸಿಕೊಂಡು ಫೆಬ್ರವರಿ 18ರ ಒಳಗಾಗಿ ವರದಿ ನೀಡುವಂತೆ ಜಿಲ್ಲಾ ಪೊಲೀಸ್ ವರಿಷ್ಠರಿಗೆ ಸೂಚಿಸಿದೆ.

ಬ್ರಿಲಿಯಂಟ್ ಪತ್ರಿ, ಬಾಬಾ ಆದದ್ದು

ಸೆಕ್ಸ್ ಸ್ಕ್ಯಾಂಡಲ್‌ನಲ್ಲಿ ತಗುಲಿಕೊಂಡಿರುವ ಸುಭಾಷ್ ಪತ್ರಿ ತನ್ನ ಕೆಲಸ ತಾನು ಮಾಡಿಕೊಂಡಿದ್ದರೆ, ರೈತರ ಪಾಲಿಗೆ ನಿಜಕ್ಕೂ ದೇವರಾಗುಬಹುದಿತ್ತೇನೊ. ಆದರೆ ತೆವಲಿಗೆ ಬಲಿಯಾಗಿ ಬೋಗಸ್ ದೇವರಾಗಲು ಹೋಗಿ ಫಜೀತಿ ತಂದಿಟ್ಟುಕೊಂಡಿದ್ದಾನೆ. ಮೂಲತಃ ಈತ ಭೂವಿಜ್ಞಾನಿ. 1974ರಲ್ಲೇ ಆಂಧ್ರ ಪ್ರದೇಶದ ಕೃಷಿ ವಿವಿಯಿಂದ ಸಾಯಿಲ್ ಸೈನ್ಸ್ ವಿಷಯದ ಸ್ನಾತಕೋತ್ತರ ಪದವಿ ಪಡೆದಿದ್ದ ಸುಭಾಷ್ ಬಹುರಾಷ್ಟ್ರೀಯ ಕಂಪನಿಯಲ್ಲಿ ಭಾರತೀಯ ಮಣ್ಣು ಮತ್ತು ಅದಕ್ಕೆ ಸೂಕ್ತವಾಗುವ ರಾಸಾಯನಿಕಗಳು ಎನ್ನುವ ವಿಷಯದ ಕುರಿತು ಅದ್ಭುತವಾದ ಅಸೈನ್‌ಮೆಂಟ್ ಒಂದನ್ನು ಮಂಡಿಸಿ ಪ್ರತಿಭಾವಂತ ಅಂತಲೂ ಕರೆಸಿಕೊಂಡಿದ್ದ.

ಆದರೆ ತನ್ನೊಳಗೆ ಬೆಳೆಯುತ್ತಿದ್ದ ವಿಕೃತ ಆಲೋಚನೆಗಳನ್ನು ನಿಯಂತ್ರಿಸಿಕೊಳ್ಳುವಲ್ಲಿ ಸಂಪೂರ್ಣ ವಿಫಲನಾಗಿದ್ದ. ಅದನ್ನು ಈಡೇರಿಸಿಕೊಳ್ಳಲು ಅವನಿಗೆ ಸುಲಭ ಮತ್ತು ಖರ್ಚಿಲ್ಲದ, ಆದಾಯಕರ ಮಾರ್ಗ ಅಂತನ್ನಿಸಿದ್ದು ಬಾಬಾ ಆಗುವ ಉಪಾಯ. 1979ರ ವೇಳೆಗಾಗಲೇ ಪೂರ್ಣ ಪ್ರಮಾಣದ ಬಾಬಾನಾಗಿ ಆಧ್ಯಾತ್ಮ ಮತ್ತು ಧ್ಯಾನಗಳನ್ನು ತನ್ನ ಸರಕನ್ನಾಗಿಸಿಕೊಂಡಿದ್ದ. ಈ ಕುರಿತು ಸುಮಾರು 50,000ಕ್ಕೂ ಹೆಚ್ಚು ಪುಸ್ತಕ ಓದಿ ಪಕ್ವವಾಗಿದ್ದೇನೆ ಎನ್ನುವ ಆತನ ಮಾತನ್ನು ಜನ ಸುಲಭವಾಗಿ ನಂಬಿದ್ದರು. ತನ್ನ ರಹಸ್ಯ ಚಟುವಟಿಕೆಗಳಿಗೋಸ್ಕರ 1991ರಲ್ಲಿ ಕರ್ನೂಲ್‌ನಲ್ಲಿ ಮೊದಲ ಪಿರಮಿಡ್ ನಿರ್ಮಿಸಿದ ಪತ್ರಿ 1996ರಲ್ಲಿ ಉರವಕೊಂಡ ಎಂಬಲ್ಲಿ ಎರಡನೇ ಪಿರಮಿಡ್ ಅನ್ನೂ ನಿರ್ಮಿಸಿದ್ದ. ಆನಂತರ ಆಂಧ್ರದ ತುಂಬೆಲ್ಲಾ ಬೇಕಾಬಿಟ್ಟಿಯಾಗಿ ಪಿರಮಿಡ್ ನಿರ್ಮಿಸಿ ದಂಧೆಗೆ ಇಳಿದುಬಿಟ್ಟದ್ದಾನೆ.

ಭಕ್ತರನ್ನು ಮೋಡಿ ಮಾಡುವ ಇವನ ಪರಿಯೇ ರೋಮಾಂಚಕಾರಿಯಾಗಿದೆ. ಅದಕ್ಕಾಗಿ ಬಾಬಾ ಆಧ್ಯಾತ್ಮದ ಮೂರು ನಿಯಮಗಳನ್ನು ಬೋಧಿಸುತ್ತಾನೆ. ಒಂದನೆಯದು, ನಾವು ಸರಳವಾಗಿ, ಸಹಜವಾಗಿ, ನೈಸರ್ಗಿಕವಾಗಿ, ಸುಲಭವಾಗಿ, ಮೃದುವಾಗಿ, ಮುಕ್ತವಾಗಿ, ಶಾಂತವಾಗಿ ಇದ್ದಾಗ ಮನಸ್ಸು ಎಲ್ಲಾ ಚಿಂತೆಗಳಿಂದ ಮುಕ್ತವಾಗುತ್ತದಂತೆ. ಎರಡನೇ ನಿಯಮ, ಮನಸ್ಸು ಜಂಜಡಗಳಿಂದ ಮುಕ್ತವಾಗಿದ್ದಾಗ ಭೌತಿಕ ದೇಹದೊಳಕ್ಕೆ ಆಧ್ಯಾತ್ಮಿಕ ಶಕ್ತಿ ಪ್ರವಹಿಸುತ್ತದಂತೆ. ಇನ್ನು ಕಡೆಯ ನಿಯಮದ ಪ್ರಕಾರ, ಸಾಕಷ್ಟು ಪ್ರಮಾಣದ ಆಧ್ಯಾತ್ಮಿಕ ಶಕ್ತಿ ದೇಹದೊಳಗೆ ಕ್ರೋಢೀಕರಣಗೊಂಡಾಗ ನಮ್ಮ ಮೂರನೇ ಕಣ್ಣು (ಅವನ ಪ್ರಕಾರ ಸಾಕ್ಷಾತ್ಕಾರದ್ದು) ತೆರೆದುಕೊಳ್ಳುತ್ತದಂತೆ. ಮೊದಲನೇ ನಿಯಮವನ್ನು ಸ್ವಲ್ಪ ಗಂಭೀರವಾಗಿ ಗಮನಿಸಿ ನೋಡಿ, ಇವನ ಲೈಂಗಿಕ ಚೇಷ್ಟೆಗಳಿಗೆ ಸಹಕರಿಸುವಂತೆ ಹೆಂಗಸರ ಮನಪರಿವರ್ತಿಸಲು ಅದೊಂದು ನಿಯಮ ಸಾಕಲ್ಲವೆ?

ಹೀಗೆ ಕಾಮತೃಷೆಗಾಗಿ ಆಧ್ಯಾತ್ಮವನ್ನು ಸಂತೆಯ ಸರಕಾಗಿಸಿದ ಈತನಿಗೂ ಒಂದು ಮಹದಾಸೆ ಇದೆಯಂತೆ. 2020ರ ಒಳಗೆ ಭೂಮಿಯ ಮೇಲೆ ಆಧ್ಯಾತ್ಮಿಕ ಸ್ವರ್ಗ ಸೃಷ್ಟಿಸುವುದೇ ಅವನ ಗುರಿಯಂತೆ. ಇಲ್ಲಿ ಆಧ್ಯಾತ್ಮಿಕ ಕೇವಲ ನೆಪಕ್ಕಷ್ಟೇ, 'ಸ್ವರ್ಗ' ಮಾತ್ರವೇ ಅವನ ಗುರಿ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ.

ಒಂದು ಕಡೆ ದೆಹಲಿ ಯುವತಿಯ ಅಮಾನುಷ ಅತ್ಯಾಚಾರ, ಕೊಲೆಯ ಕುರಿತಂತೆ ಇಡೀ ದೇಶವೇ ಮಹಿಳಾ ದೌರ್ಜನ್ಯದ ವಿರುದ್ಧ ಬೀದಿಗಿಳಿದು ಧಿಕ್ಕಾರ ಕೂಗುತ್ತಿದೆ. ಮತ್ತೊಂದೆಡೆ, ಇಂತಹ ಬೋಗಸ್ ಬಾಬಾಗಳ ಮೋಡಿಗೆ ಒಳಗಾಗಿ ಖುದ್ದು ಹೆಂಗಸರೆ ಮೈಮೇಲೆ ಬಿದ್ದು ಅವರ ಕಾಮತೃಷೆಗಳನ್ನು ತಣಿಸುವ ಮೂಲಕ ಅಮಾಯಕ ಬಲಿಪಶುಗಳಾಗುತ್ತಿದ್ದಾರೆ. ಇದು ಈ ದೇಶದ ವಿಪರ್ಯಾಸವಲ್ಲದೆ ಮತ್ತಿನ್ನೇನು? ಜನ ಜಾಗರೂಕರಾಗದ ಹೊರತು ಯಾವ ಕಾನೂನು ತಾನೆ ಏನು ಮಾಡೀತು? ಅಲ್ಲವೇ...

● ಗಿರೀಶ್ ತಾಳಿಕಟ್ಟೆ

ಈ ವಿಕಾರಕ್ಕೂ ಒಂದು ಹೆಸರಿದೆ!


ಪಿರಮಿಡ್ ಬಾಬಾನನ್ನಾಗಲಿ, ನಿತ್ಯಾನಂದ ಸ್ವಾಮಿಯನ್ನಾಗಲಿ ಮನೋವಿಕಾರಿಗಳು, ಮಾನಸಿಕ ರೋಗಿಗಳು ಎಂದು ಕರೆಯುವುದು ಕೇವಲ ದೂಷಿಸಲು ಮಾತ್ರವಲ್ಲ, ಅದಕ್ಕೂ ಒಂದು ವೈಜ್ಞಾನಿಕ ವಿವರಣೆಯಿದೆ. ಮನೋವಿಜ್ಞಾನದಲ್ಲಿ ಇವರ ನಡವಳಿಕೆಗಳಿಗೆ ಹೊಂದಿಕೆಯಾಗುವಂತಹ ಗುಣಲಕ್ಷಣದ ಒಂದು ಮನೋಲೈಂಗಿಕ ಅಪಸಾಮಾನ್ಯತೆ ಇದೆ. ಅದನ್ನು ಫ್ರೊಟ್ಯೂರಿಸಮ್ (Frotteurism) ಎಂದು ಕರೆಯಲಾಗುತ್ತದೆ. ಇದರಲ್ಲಿ ಅಂತಹ ವ್ಯಕ್ತಿ ಸಾರ್ವಜನಿಕ ಸ್ಥಳಗಳಲ್ಲಿ ಅಪರಿಚಿತ ವ್ಯಕ್ತಿಯ ದೇಹಕ್ಕೆ ತನ್ನ ದೇಹವನ್ನು ಒತ್ತುವುದರಿಂದ, ಸ್ಪರ್ಶಿಸುವುದರಿಂದ, ಉಜ್ಜುವುದರಿಂದ ಲೈಂಗಿಕ ಸುಖ ಪಡೆಯಲು ಬಯಸುತ್ತಾನೆ. ಇದನ್ನು Sexual Preference ವಿಭಾಗದ ಅಡಿಯಲ್ಲಿ ಸ್ಪಷ್ಟವಾಗಿ ಲೈಂಗಿಕ ಅಪಸಾಮಾನ್ಯತೆ ಎಂದು ವರ್ಗೀಕರಿಸಲಾಗಿದೆ. ಈಗ ನೀವೇ ಯೋಚಿಸಿ ಆಧ್ಯಾತ್ಮ, ಧ್ಯಾನ, Enlightenment ಹೆಸರಿನಲ್ಲಿ ಈ ಬಾಬಾಗಳು ಎಲ್ಲರೆದುರು ಸ್ವಚ್ಛಂದವಾಗಿ ಮಹಿಳೆಯರನ್ನು ಅಪ್ಪಿಕೊಳ್ಳುವುದು, ಮುತ್ತಿಕ್ಕುವುದು, ಎದೆ ಪೃಷ್ಠ ಮುಂತಾದ ಪ್ರೈವೇಟ್ ಅಂಗಗಳನ್ನೆಲ್ಲ ತಡಕಾಡಿ ಆನಂದದ ನಗು ಬೀರುವುದು ಇವೆಲ್ಲವೂ ಅದರ ಲಕ್ಷಣಕ್ಕೆ ಸರಿಸಮನಾಗಿಲ್ಲವೆ. ಇವತ್ತಿನ ಪರಿಸ್ಥಿತಿಗೆ ಜನ ಆಧ್ಯಾತ್ಮಕ್ಕಿಂತ ಹೆಚ್ಚಾಗಿ ಇಂತಹ ವೈಜ್ಞಾನಿಕ ಸಂಗತಿಗಳತ್ತ ಆಕರ್ಷಿತರಾಗುವುದು ಆರೋಗ್ಯಕರ. ಆಗ ಮಾತ್ರ ಇಂತಹ ಬೋಗಸ್ ಆದ್ಮಿಗಳನ್ನು ಕಿತ್ತೊಗೆಯಬಹುದು.

ಸ್ಕಾಟಿಷ್ ಪ್ರತಿಭೆಗಳು

ಕರ್ನಾಟಕದ ಸುಪ್ರಸಿದ್ಧ ಬೇಟೆಗಾರ ಕೆನೆತ್ ಆಂಡರ್ಸನ್‌ರ ಬೇಟೆಯ ನೆನಪುಗಳನ್ನು ಅವರ ಕೃತಿಗಳಲ್ಲಿ ಓದಿ ತಿಳಿದಿದ್ದೆ. ಇತ್ತೀಚೆಗೆ 'ಗೌರಿ ಲಂಕೇಶ್ ಪತ್ರಿಕೆ'ಯ ಮುಖಾಂತರ ಆಂಡರ್‌ಸನ್‌ರ ಮಗ ಡೊನಾಲ್ಡ್ ಆಂಡರ್‌ಸನ್ ಬಗ್ಗೆ ತಿಳಿದುಕೊಳ್ಳುವ ಹಾಗೂ ಅವರನ್ನ ಭೇಟಿಯಾಗುವ ಅವಕಾಶವೂ ಸಿಕ್ಕಿತು. ಡೊನಾಲ್ಡರ ಬಗ್ಗೆ ಪತ್ರಿಕೆಯಲ್ಲಿ ಬರೆದ ಲೇಖನದಲ್ಲಿ ಈ ಸ್ಕಾಟಿಷ್ ಜನರಿಗೆ ಬೇಟೆಯಾಗಲಿ, ಮತ್ತೊಂದಾಗಲಿ ಹಿಡಿದದ್ದನ್ನು ಬಿಡದೆ ಮಾಡುವುದೇ ಒಂದು ಗೀಳು ಎನ್ನುವುದನ್ನು ಓದಿದಾಗ-

ಇಂತಹದೇ ಛಲದಂಕಮಲ್ಲ ಸ್ಕಾಟಿಷ್ ಜನ ಸಾವಿರಾರು ಮೈಲಿ ದೂರದ ತಮ್ಮ ತಾಯ್ನೆಲ ಸ್ಕಾಟ್ಲೆಂಡಿನಿಂದ ಉದ್ಯೋಗ ನಿಮಿತ್ತ ಇಂಡಿಯಾಕ್ಕೆ ಬಂದು ಅವರು ಮಾಡಿದ ಕೆಲಸ ನಮಗೆ ಹೇಗೆ ಮಹತ್ವದ ಕೊಡುಗೆ ಆಯ್ತು ಎನ್ನುವುದು ನೆನಪಾಯ್ತು. 2008 ರಲ್ಲಿ ನಾನು ಇಂಗ್ಲೆಂಡ್ ಸಂದರ್ಶಿಸಲು ಹೊರಡುವ ಮುನ್ನ ಆಕಸ್ಮಿಕವಾಗಿ ಪ್ರೊಫೆಸರ್ ಸದಾನಂದರವರು 'ಇಂಡಿಯನ್ ಬೊಟಾನಿಕಲ್ ಡ್ರಾಯಿಂಗ್ಸ್' ಎಂಬ ಪುಸ್ತಕ ತೋರಿಸಿದರು. ಅದರ ಕರ್ತೃ ಸ್ಕಾಟ್ಲೆಂಡಿನ ಹೆನ್ರಿ ನಾಲ್ಬಿಯವರು. ಎಡಿನ್‌ಬರಾದಲ್ಲಿ ನಾಲ್ಬಿಯವರನ್ನು ಭೇಟಿಯಾದಾಗ ಅವರು ಉಡುಗೊರೆಯಾಗಿ ಕೊಟ್ಟ ಮೂರು ಅಮೂಲ್ಯ ಹೊತ್ತಿಗೆಗಳ ತುಂಬಾ ಇರುವುದು ಸುಮಾರು ನೂರೈವತ್ತು ವರ್ಷಗಳ ಹಿಂದೆ ಇಂಡಿಯಾಕ್ಕೆ ಬಂದ ಸ್ಕಾಟ್ಲೆಂಡಿನ ವೈದ್ಯರುಗಳು ಮಾಡಿದ ಕೆಲಸಗಳು ಮತ್ತು ಇಂಡಿಯಾದಲ್ಲಿ ಅವರು ಸಂಗ್ರಹಿಸಿದ ನಮ್ಮ ದೇಶದ ಸಸ್ಯಗಳು ಹಾಗೂ ಸ್ಥಳೀಯ ಕಲಾವಿದರಿಂದ ಅವರು ಬರೆಸಿದ ಸಸ್ಯ ಚಿತ್ರಗಳು. ಇವನ್ನೆಲ್ಲಾ ಒಂದೇ ಉಸಿರಿಗೆ ಓದಿದೆ, ಡ್ರಾಯಿಂಗ್ಸ್ ನೋಡಿದೆ, ಮೈಮರೆತೆ.

ಹೆನ್ರಿ ನಾಲ್ಬಿಯವರು ತಮ್ಮ ಪೂರ್ವಿಕರ ಹೆಜ್ಜೆಗಳನ್ನು ಅನುಸರಿಸಿ ನಮ್ಮ ದೇಶಕ್ಕೆ ಬಂದು ಅವರ ಪೂರ್ವಿಕರು ನಮ್ಮ ದೇಶದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಕೆಲಸ ಮಾಡಿದ ಭಾಗಗಳನ್ನು ಸಂದರ್ಶಿಸಿ, ಇದುವರೆಗೆ ನಮ್ಮ ಅರಿವಿಗೆ ಬಾರದಿದ್ದ ನಮ್ಮದೇ ಸಸ್ಯಜ್ಞಾನ ನಿಧಿಯನ್ನು ತೋರಿಸಿಕೊಟ್ಟರು. ಹೆನ್ರಿ ನಾಲ್ಬಿ ಎಡಿನ್‌ಬರಾದ ರಾಯಲ್ ಬಟಾನಿಕ್ ಗಾರ್ಡನ್ನಿನ ಕ್ಯುರೇಟರ್ ಹಾಗೂ ಸಸ್ಯ ವರ್ಗೀಕರಣ ಶಾಸ್ತ್ರ ಪರಿಣತರು.



ರಾಬರ್ಟ್ ವೈಟ್

ಇಂಡಿಯಾ ಮತ್ತು ಬ್ರಿಟಿಷ್ ಸಾಮ್ರಾಜ್ಯದ ಸಂಬಂಧ ಬಹಳ ಸಂಕೀರ್ಣವಾದದ್ದು. ಸೂರ್ಯ ಮುಳುಗದ ನಾಡಿನ ಬ್ರಿಟಿಷರಿಗೆ ನಮ್ಮ ದೇಶ ಒಂದು ಮಾಹತು ಆಗಿಹೋಯ್ತು. ವ್ಯಾಪಾರಕ್ಕಾಗಿ ಬಂದವರು ನಮ್ಮನ್ನು ಆಳುವವರಾದರು ಎಂಬ ಅಸಮಾಧಾನ ನಮಗಿತ್ತು. ಅಹಿಂಸಾತ್ಮಕ ಹೋರಾಟದಿಂದ ಸ್ವಾತಂತ್ರ್ಯ ಪಡೆದದ್ದು ಬೇರೆಯೇ ಕಥೆ. ಅಸಮಾಧಾನವನ್ನು ಬದಿಗೆ ಸರಿಸಿ, ಬೇರೆ ದೃಷ್ಟಿಕೋನದಿಂದ ನೋಡಿದಾಗ ಬ್ರಿಟಿಷರಿಂದ ಪಡೆದದ್ದೂ ಇದೆ. ವಿದ್ಯಾಭ್ಯಾಸ, ವೈದ್ಯಕೀಯ ಜ್ಞಾನ, ಹೊರ ಜಗತ್ತಿನ ಪರಿಚಯ, ಜ್ಞಾನಾರ್ಜನೆ ಇತ್ಯಾದಿ. ಇಂಥ ಒಂದು ಮಧುರ ಸಂಬಂಧದ ಕೊಂಡಿಯನ್ನು ನಾಲ್ಬಿ ಬೆಳಕಿಗೆ ತಂದಿದ್ದಾರೆ.

ಸ್ಕಾಟ್ಲೆಂಡಿನ ಎಡಿನ್‌ಬರಾದ ರಾಯಲ್ ಬಟಾನಿಕ್ ಗಾರ್ಡನ್ನಿನಲ್ಲಿ 1998ರಲ್ಲಿ ನಡೆದ ಒಂದು ಸಸ್ಯ ಪ್ರದರ್ಶನಕ್ಕಾಗಿ ಹೆನ್ರಿ ನಾಲ್ಬಿ ಅಲ್ಲಿನ ಸಸ್ಯಚಿತ್ರ ಸಂಗ್ರಹದಿಂದ ಕೆಲವು ಚಿತ್ರಗಳನ್ನು ಆರಿಸಿಕೊಳ್ಳುವಾಗ 'ಬಟಾನಿಕ್ ಗಾರ್ಡನ್ಸ್' ಎಂಬ ಶೀರ್ಷಿಕೆಯ ಒಂದು ಚಿತ್ರಗಳ ಕಟ್ಟು ಸಿಕ್ಕಿತು. ಇದರಿಂದ ಕೆಲವು ಚಿತ್ರಗಳನ್ನು ಆಯ್ದು ಪ್ರದರ್ಶಿಸಿ, ಅವುಗಳ ಸಂರಕ್ಷಣೆ, ಹೆಚ್ಚಿನ ಸಂಶೋಧನೆಗಳ ಅಗತ್ಯದ ಬಗ್ಗೆ ಬರೆದಿದ್ದರು. ಈ ಬಗ್ಗೆ ಆಸಕ್ತಿ ತಳೆದ ಶ್ರೀಮತಿ ದಿನ್‌ಶಾರವರ ಧನಸಹಾಯದಿಂದ ಇಂಡಿಯಾಕ್ಕೆ ಬಂದು 18 ಮತ್ತು 19ನೇ ಶತಮಾನದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ವೈದ್ಯರುಗಳಾಗಿ ನಮ್ಮ ದೇಶದಲ್ಲಿ ವೈದ್ಯಕೀಯದ ಜತೆಗೆ ಸಸ್ಯಶಾಸ್ತ್ರದ ಜ್ಞಾನವನ್ನು ಹೆಚ್ಚಿಸಲು ಅವರು ಕೊಟ್ಟ ಕೊಡುಗೆಯನ್ನು ತಿಳಿಯುವ ಪ್ರಯತ್ನದಲ್ಲಿ ಎಲ್ಲೆಲ್ಲಿ ಸ್ಕಾಟಿಷ್ ವೈದ್ಯರು ಕೆಲಸ ಮಾಡಿದರೊ ಅಲ್ಲೆಲ್ಲಾ ಸುದೀರ್ಘ ಸಂಶೋಧನೆ ನಡೆಸಿ ನಾಲ್ಬಿಯವರು ಮೂರು ಸಾರ್ಥಕ ಕೃತಿಗಳನ್ನು ರಚಿಸಿದ್ದಾರೆ.

ಅಂದು ನಮ್ಮಲ್ಲಿ ದುಡಿದ ಈ ಸ್ಕಾಟಿಷ್ ವೈದ್ಯರ ಬಗ್ಗೆ ಒಂದು ಕಿರು ಪರಿಚಯವನ್ನು ಮುಂದೆ ನೋಡೋಣ.

ಈಸ್ಟ್ ಇಂಡಿಯಾ ಕಂಪೆನಿ ಮೂಲಕ ಇಂಗ್ಲೆಂಡಿನ ಜನ ನಮ್ಮಲ್ಲಿಗೆ ಬಂದರು. ಸೈನಿಕ, ಸೈನ್ಯಾಧಿಕಾರಿ, ಗವರ್ನರ್ ಜನರಲ್ ಇತ್ಯಾದಿ ಹುದ್ದೆಗಳನ್ನು ಅಲಂಕರಿಸಿ ಈ ದೇಶವನ್ನು ಆಳಿದರು. ಇದು ಚರಿತ್ರೆಯಿಂದ ತಿಳಿದು ಬರುವ ವಿಷಯ. ಹೀಗೆಯೆ ಈಸ್ಟ್ ಇಂಡಿಯಾ ಕಂಪೆನಿಯ ಮೂಲಕ ವೈದ್ಯರಾಗಿ ಬಂದ ಜನ ವೈದ್ಯಕೀಯದ ಜೊತೆಗೆ ಮತ್ತೊಂದು ಜವಾಬ್ದಾರಿಯನ್ನು ಹೊರಬೇಕಾಗಿತ್ತು. ವ್ಯವಸಾಯ, ತೋಟಗಾರಿಕೆಗಳ ಕಡೆಯೂ ಗಮನ ಹರಿಸಬೇಕಿತ್ತು. ಈ ರೀತಿ ಒಬ್ಬ ವೈದ್ಯ ತನ್ನದಲ್ಲದ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಮುಖ್ಯ ಕಾರಣ ಅಂದು ಇಂಗ್ಲೆಂಡಿನಲ್ಲಿ ಪ್ರಚಲಿತವಾಗಿದ್ದ ವಿದ್ಯಾಭ್ಯಾಸ ಕ್ರಮ. ವೈದ್ಯನಾಗಬೇಕೆಂದಿರುವವನು ಸಸ್ಯಶಾಸ್ತ್ರವನ್ನು ಓದಲೇಬೇಕಿತ್ತು. ಆ ದಿನಗಳಲ್ಲಿ ಲಂಡನ್ನಿನ 'ಕ್ಯೂ' ಗಾರ್ಡನ್‌ನೊಡನೆ ಸಂಬಂಧವಿಟ್ಟುಕೊಳ್ಳುವುದು, ಅದರೊಡನೆ ಸಸ್ಯ ಮಾದರಿಗಳನ್ನು ವಿನಿಮಯ ಮಾಡಿಕೊಳ್ಳುವುದು ಹಾಗೂ 'ಕ್ಯೂ' ಗಾರ್ಡನ್‌ಗೆ ಸಸ್ಯಗಳನ್ನು ಒದಗಿಸುವುದು ಸಸ್ಯಶಾಸ್ತ್ರಜ್ಞರಿಗೆ ಹಾಗೂ ಶ್ರೀಮಂತ ಪ್ರತಿಷ್ಠಿತರಿಗೆ ಒಂದು ಪ್ರತಿಷ್ಠೆಯ ಸಂಕೇತವಾಗಿತ್ತು. ಅಂದಿನಿಂದ ಇಂದಿನವರೆಗೆ 'ಕ್ಯೂ' ಗಾರ್ಡನ್ ಆಸಕ್ತರ ಪಾಲಿಗೆ ಒಂದು ಸಸ್ಯಕಾಶಿ. ಇದೇ ರೀತಿ ಸ್ಕಾಟ್ಲೆಂಡಿನಲ್ಲೂ ವಿದ್ಯಾರ್ಥಿಗಳು ವೈದ್ಯಕೀಯದ ಜೊತೆಗೆ ಸಸ್ಯಶಾಸ್ತ್ರವನ್ನು ಕಲಿಯಬೇಕಿತ್ತು. ಹೀಗೆ ಕಲಿತು ಇಂಡಿಯಾಕ್ಕೆ ಬಂದ ವೈದ್ಯರು ತಮ್ಮ ಕಲಿಕೆ ಶಿಸ್ತಿಗನುಗುಣವಾಗಿ ತಾವು ಕೆಲಸ ಮಾಡಿದ ಇಂಡಿಯಾ ದೇಶದ ವಿವಿಧ ಭಾಗಗಳಲ್ಲಿ ಸಸ್ಯಗಳನ್ನು ಸಂಗ್ರಹಿಸಿ, ಅವುಗಳ ಒಣಮಾದರಿಗಳನ್ನು (dry specimens) ಸಂಗ್ರಹಿಸುವುದರೊಡನೆ, ಸಸ್ಯಗಳ ಬೆಳವಣಿಗೆಯ ವಿವಿಧ ಹಂತಗಳು, ಎಲೆ, ಕಾಯಿ, ಮೊಗ್ಗು, ಹೂವುಗಳನ್ನು ಚಿತ್ರ ರಚನೆಯ ಮೂಲಕ ದಾಖಲಿಸಲು ಚಿತ್ರಕಲಾವಿದರನ್ನು ನೇಮಿಸಿಕೊಂಡರು. ಹೀಗೆ ತಯಾರಾದ ಸಸ್ಯಚಿತ್ರಗಳು ಮತ್ತು ಸಸ್ಯ ಮಾದರಿಗಳು ಮೊದಲು 'ಕ್ಯೂ' ಗಾರ್ಡನ್ನಿನ ಮನ್ನಣೆಗಾಗಿ ಅಲ್ಲಿಗೆ ರವಾನಿಸಲ್ಪಟ್ಟವು. ಕಾಲಕ್ರಮೇಣ ಈ ವೈದ್ಯರುಗಳ ಸ್ವಂತ ಸಂಗ್ರಹ ಕ್ಯೂ ಗಾರ್ಡನ್ ಹಾಗೂ ಎಡಿನ್‌ಬರಾದ ರಾಯಲ್ ಬಟಾನಿಕ್ ಗಾರ್ಡನ್ನಿಗೆ ಸೇರಿಹೋದವು.

ನಾಲ್ಬಿಯವರ ಸಂಶೋಧನೆಯಿಂದ ಸುಗ್ಯಾಗಾರದಲ್ಲಿದ್ದ ಸಸ್ಯ ಚಿತ್ರಗಳೂ, ಸಸ್ಯ ಚಿತ್ರಗಳನ್ನು ಬರೆಸಿದ ವೈದ್ಯರುಗಳ ಬಗ್ಗೆಯೂ ನಾವು ತಿಳಿಯುವಂತಾಯ್ತು. ದುರದೃಷ್ಟವಶಾತ್ ಇಂತಹ ಅದ್ಭುತ ಚಿತ್ರಗಳನ್ನು ರಚಿಸಿದ ಭಾರತೀಯ ಕಲಾವಿದರು ಇಂದು ಅಜ್ಞಾತ ಅನಾಮಧೇಯರು. ಕೇವಲ ಒಂದಿಬ್ಬರು ಕಲಾವಿದರ ಹೆಸರುಗಳು ಮಾತ್ರ ಗೊತ್ತಾಗುತ್ತದೆ. ಅವರೇ ರಂಗಯ್ಯ ಮತ್ತು ಗೋವಿಂದು.

ಸಸ್ಯ ವಿಜ್ಞಾನಿಗಳಾಗಿದ್ದ ಬ್ರಿಟಿಷ್ ವೈದ್ಯರು ತಾವು ಸಂಗ್ರಹಿಸಿದ ಸಸ್ಯಗಳನ್ನು ವೈಜ್ಞಾನಿಕವಾಗಿ ದಾಖಲಿಸಲು ಅವುಗಳ ಚಿತ್ರ ರಚನೆಗಾಗಿ ಮೊದಲು ಪಾಶ್ಚಿಮಾತ್ಯ ಕಲಾವಿದರನ್ನು ನೇಮಿಸಿಕೊಂಡರು. ಈ ಸಮಯದಲ್ಲಿ ಇಂಡಿಯಾದಲ್ಲಿ ದೇಶೀಯ ಚಿತ್ರಕಲೆಗಳಾದ ಮೊಗಲ್ ಮಿನಿಯೇಚರ್ ಶೈಲಿ, ಕಲಂಕಾರಿ ಶೈಲಿಯಲ್ಲಿ ಹೂ, ಗಿಡ, ಮರ, ಬಳ್ಳಿಗಳ ಚಿತ್ರಣ ಇದ್ದೇ ಇತ್ತು. ಆದರೂ ಸಸ್ಯ ವಿಜ್ಞಾನಕ್ಕೆ ತಕ್ಕಂತೆ ಚಿತ್ರಿಸುವಾಗ ಸಸ್ಯಗಳ ವಿವಿಧ ಭಾಗಗಳನ್ನು ವೈಜ್ಞಾನಿಕ ಖಚಿತತೆಗೆ ತಕ್ಕಂತೆ ಸೂಕ್ಷ್ಮವಾಗಿ, ವಿವರವಾಗಿ ಚಿತ್ರಿಸುವುದಕ್ಕೆ ಪ್ರಾಶಸ್ತ್ಯ. ಸ್ಕಾಟಿಷ್ ವೈದ್ಯರು ಈ ನಿಟ್ಟಿನಲ್ಲಿ ದೇಶೀಯ ಕಲಾವಿದರನ್ನು ತಮ್ಮ ಅಗತ್ಯಕ್ಕೆ ತಕ್ಕಂತೆ ದುಡಿಸಿಕೊಳ್ಳಬಹುದೆಂದು ತಿಳಿದು ಸ್ಥಳೀಯ ಕಲಾವಿದರಿಗೆ ತರಬೇತಿ ಕೊಟ್ಟದ್ದರ ಪರಿಣಾಮವಾಗಿ ಒಂದು ಅದ್ಭುತ ಕಸುವು ಉಳ್ಳ ಸತ್ವಶಾಲಿ ಹೈಬ್ರಿಡ್ ಶೈಲಿಯ ಚಿತ್ರಕಲೆಯನ್ನು ರೂಪಿಸಿದರು. ಇದು ಪಾಶ್ಚಾತ್ಯ ಮತ್ತು ಪೌರ್ವಾತ್ಯ ಸಂಸ್ಕೃತಿಗಳ ಒಂದು ಸತ್ವಪೂರ್ಣ ಸಂಮಿಶ್ರಣ.



ಹೆನ್ರಿ ನಾಲ್ಬಿ

ಇಂಗ್ಲೆಂಡಿನಿಂದ ವೈದ್ಯರಾಗಿ ಬಂದು ಸಸ್ಯಶಾಸ್ತ್ರದಲ್ಲೂ ತಮ್ಮ ಛಾಪನ್ನು ಮೂಡಿಸಿದ ಸ್ಕಾಟಿಷ್ ವೈದ್ಯರಲ್ಲಿ ವಿಲಿಯಂ ರಾಕ್ಸ್‌ಬರ್ಗ್, ಬುಕಾನನ್, ರಾಬರ್ಟ್ ವೈಟ್, ಅಲೆಕ್ಸಾಂಡರ್ ಗಿಬ್ಸನ್, ಕ್ಲೆಗ್‌ಹಾರ್ನ್ ಪ್ರಮುಖರು. ಇವರೆಲ್ಲಾ ಸೇನೆಯಲ್ಲಿ ವೈದ್ಯರಾಗಿ ದುಡಿದರೂ ಇಲ್ಲಿನ ಹವಾಮಾನ ವೈಪರೀತ್ಯ, ಕ್ಷಾಮ, ರೋಗರುಜಿನಗಳ ಬಗ್ಗೆ ಚಿಂತಿಸಿದರು ಹಾಗೂ ಕೆಲಸ ಮಾಡಿದರು. ಕ್ಲೆಗ್‌ಹಾರ್ನ್ ಲಂಡನ್ನಿನ ಕ್ಯೂ ಗಾರ್ಡನ್‌ನಿಂದ ಸಿಂಕೋನಾ ಸಸಿಗಳನ್ನು ತಂದು ಪ್ರಯೋಗಾತ್ಮಕವಾಗಿ ನೀಲಗಿರಿಯಲ್ಲಿ ಪರಿಚಯಿಸಿದ. ಬೆಂಗಳೂರಿನ ಲಾಲ್‌ಬಾಗ್‌ನ್ನು ಉತ್ತಮ ಸ್ಥಿತಿಗೆ ತಂದು, ಮೈಸೂರು ಮುಂತಾದ ಕಡೆಗಳಲ್ಲಿ ಕೆಲಸ ಮಾಡಿದ. ರಾಕ್ಸ್‌ಬರ್ಗ್‌ನ ಕಾಲದಿಂದ ಭಾರತೀಯ ಸಸ್ಯಚಿತ್ರಣ ಭಾರತೀಯ ಕಲಾವಿದರಿಂದ ಪ್ರಾರಂಭವಾಯ್ತು. ಅಲೆಗ್ಸಾಂಡರ್ ಗಿಬ್ಸನ್ ಎಂಬ ಸ್ಕಾಟಿಷ್ ವೈದ್ಯ ಮಹಾರಾಷ್ಟ್ರದಲ್ಲಿ ಎರಡು ತೋಟಗಳನ್ನು ರಚಿಸಿ ಅವುಗಳನ್ನು ನಿರ್ವಹಿಸಿದ. ಅವನು ಅತ್ಯಂತ ಕಷ್ಟಕರ ಸನ್ನಿವೇಶಗಳಲ್ಲಿ ಸಂಚರಿಸಿ ವೈದ್ಯಕೀಯ ಕೆಲಸದೊಡನೆ ಅಗಾಧವಾದ ಸಸ್ಯ ಸಂಗ್ರಹಣ, ಸಸ್ಯಚಿತ್ರಣ ಮಾಡಿದ್ದಾನೆ. ಸ್ಥಳೀಯ ಕಲಾವಿದರಿಂದ ಗಿಬ್ಸನ್ ಬರೆಸಿರುವ ಅದ್ಭುತ ಸಸ್ಯಚಿತ್ರಗಳನ್ನು ನಾಲ್ಬಿಯವರ 'ಡಾಪುರಿ ಪೈಂಟಿಂಗ್ಸ್' ಎಂಬ ಗ್ರಂಥದಲ್ಲಿ ನೋಡಬಹುದು.

ಇನ್ನು ರಾಬರ್ಟ್ ವೈಟ್ ಎಂಬ ಸ್ಕಾಟಿಷ್ ವೈದ್ಯನ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ. ರಾಬರ್ಟ್ ವೈಟ್ 1819 ರಲ್ಲಿ ಇಂಡಿಯಾಕ್ಕೆ ಬಂದು ಮದ್ರಾಸಿನ ಸೈನ್ಯದಲ್ಲಿ ಕೆಲಸಕ್ಕೆ ಸೇರಿದ. ತನ್ನ ಜೀವಿತದ 31 ವರ್ಷಗಳನ್ನು ಸಸ್ಯ ಸಂಗ್ರಹಣೆ, ಸಸ್ಯ ಚಿತ್ರಣಕ್ಕಾಗಿ ಮುಡಿಪಿರಿಸಿದ ರಾಬರ್ಟ್ ವೈಟ್‌ನ ಕೊಡುಗೆ ಅಸಾದೃಶವಾದುದು. ಅವನು ಸಂಗ್ರಹಿಸಿದ ಸಸ್ಯಗಳ ಸುಂದರವಾದ, ನಿಖರವಾದ ವೈಜ್ಞಾನಿಕ ಮಾಹಿತಿಯುಳ್ಳ ಚಿತ್ರಗಳನ್ನು ರಚಿಸಿದವರು ದಕ್ಷಿಣ ಇಂಡಿಯಾದ ರಂಗಯ್ಯ ಮತ್ತು ಗೋವಿಂದು ಎಂಬ ಅನಾಮಿಕ ಕಲಾವಿದರು. ವೈಟ್ ಒಮ್ಮೆ ರಜೆಯ ಮೇಲೆ ಇಂಗ್ಲೆಂಡಿಗೆ ಹೋಗಿದ್ದಾಗ ತನ್ನೊಡನೆ ತೆಗೆದುಕೊಂಡು ಹೋಗಿದ್ದ ಸಸ್ಯಗಳ ಒಣಮಾದರಿಗಳ ಸಂಖ್ಯೆ 100001! ಆಗ ಅವನು ಅಲ್ಲಿ ಲಿಥೊಪ್ರೆಸ್ ತಂತ್ರಜ್ಞಾನವನ್ನು ಕಲಿತು ಒಂದು ಲಿಥೊಗ್ರಾಫ್ ಪ್ರೆಸ್ಸನ್ನು ಇಂಡಿಯಾಕ್ಕೆ ತಂದ. ಇದರಿಂದ ಸಸ್ಯಗಳ ಸುಂದರವಾದ ವರ್ಣಚಿತ್ರಗಳು ತಯಾರಾದವು. 1826-53 ರವರೆಗೆ ರಾಬರ್ಟ್ ವೈಟ್ ಸಂಗ್ರಹಿಸಿದ ಸಸ್ಯಗಳ ಒಂದು ದೀರ್ಘ ಸರಣಿ ಚಿತ್ರಗಳು ಎಡಿನ್‌ಬರಾ ರಾಯಲ್ ಬಟಾನಿಕ್ ಗಾರ್ಡನ್‌ನಲ್ಲಿ ಇದೆ. ಸಸ್ಯತಜ್ಞರು ಆಗೀಗ ಇವುಗಳನ್ನು ಕೈಯಾಡಿಸಿದ್ದನ್ನು ಬಿಟ್ಟರೆ, ಮುಸುಕಿನೊಳಗಿದ್ದ ಈ ಕಲಾಕೃತಿಗಳನ್ನು ಇದೀಗ ಹೆನ್ರಿ ನಾಲ್ಬಿ ಪರಿಶ್ರಮದಿಂದ ಬೆಳಕಿಗೆ ತಂದಿದ್ದಾರೆ.

ದಕ್ಷಿಣ ಇಂಡಿಯಾದ ಊಟಿ, ಶ್ರೀರಂಗಪಟ್ಟಣ, ಬಳ್ಳಾರಿ ಮುಂತಾದ ಕಡೆಗಳಲ್ಲಿ ಉದ್ಯೋಗನಿರತನಾಗಿ ಸಸ್ಯ ಸಂಗ್ರಹಣೆ ಮಾಡಿದ ರಾಬರ್ಟ್ ವೈಟ್ 'ಇಲಸ್ಟ್ರೇಷನ್ಸ್ ಆಫ್ ಇಂಡಿಯನ್ ಬಾಟನಿ', 'ಐಕೋನ್ಸ್ ಪ್ಲಾನ್‌ಟೇರಮ್ ಇಂಡಿಯೆ ಒರಿಯಂಟಾಲಿಸ್' ಮತ್ತು 'ಸ್ಪೀಷಿಲಿಜಿಯಂ ನೀಲಗಿರೆನ್ಸ್' ಎಂಬ ಮೂರು ಗ್ರಂಥಗಳನ್ನು ರಚಿಸಿದ್ದಾನೆ. ಈ ಮೂರು ಗ್ರಂಥಗಳಿಗಾಗಿ ಸಾವಿರಕ್ಕೂ ಹೆಚ್ಚು ಸಸ್ಯಚಿತ್ರಗಳನ್ನು ಕಲಾವಿದ ರಂಗಯ್ಯ ರಚಿಸಿದ್ದಾನೆ. ತನಗಾಗಿ ದುಡಿದ ಪ್ರತಿಭಾವಂತ ಕಲಾವಿದರಾದ ರಂಗಯ್ಯ ಮತ್ತು ಗೋವಿಂದೂರನ್ನು ರಾಬರ್ಟ್ ವೈಟ್ ಹಾರ್ದಿಕವಾಗಿ ಸ್ಮರಿಸಿದ್ದಾನೆ. ಕಲಾವಿದ ಗೋವಿಂದೂ ಸ್ಮರಣಾರ್ಥ ಒಂದು ಆರ್ಕಿಡ್‌ಗೆ 'ಗೋವಿಂದೂಯಿಯಾ ನರ್ವೋಸಾ' ಎನ್ನುವ ಹೆಸರನ್ನು ಕೊಟ್ಟಿದ್ದಾನೆ. ಮತ್ತೊಂದು ಸಸ್ಯಕ್ಕೆ ರಂಗಯ್ಯನ ಗೌರವಾರ್ಥ 'ರಂಗಿಯೊ' ಎಂಬ ಹೆಸರು ಕೊಟ್ಟಿದ್ದಾನೆ. ರಂಗಯ್ಯ ಗೋವಿಂದೂ ಕಲಾವಿದರ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಕೆಲವು ಚಿತ್ರಗಳ ಮೇಲೆ ರಂಗಯ್ಯ, ಗೋವಿಂದೂರ ಹಸ್ತಾಕ್ಷರ, ತೆಲುಗು ಲಿಪಿಯಲ್ಲಿ ಬರೆದಿರುವ ಅವರ ಟಿಪ್ಪಣಿಗಳು ಈ ಕಲಾವಿದರ ತಂಜಾವೂರು, ತಿರುಚಿಗೆ ಸೇರಿದವರಿರಬೇಕೆಂಬುದನ್ನು ಸೂಚಿಸುತ್ತದೆ.

ನೂರೈವತ್ತು ವರ್ಷಗಳಿಗಿಂತ ಹೆಚ್ಚುಕಾಲ ರಂಗಯ್ಯ, ಗೋವಿಂದೂ ರಚಿಸಿದ ಸಸ್ಯಚಿತ್ರಗಳು ಎಡಿನ್‌ಬರಾದ ರಾಯಲ್ ಬಟಾನಿಕ್ ಗಾರ್ಡನ್ನಿನಲ್ಲಿ ಇದ್ದವು. ನಾಲ್ಬಿಯವರ ಆಸಕ್ತಿ, ಶ್ರಮಗಳ ದೆಸೆಯಿಂದ ಅವುಗಳ ಬಗ್ಗೆ ನಾವು ತಿಳಿಯುವಂತಾಗಿದೆ. ಇದರಿಂದ ಎರಡೂ ದೇಶಗಳಿಗೆ ಸಂಬಂಧಿಸಿದಂತೆ ಹೆಮ್ಮೆ, ಪ್ರೀತಿಯ ಭಾವನೆಗಳನ್ನು ಅವು ಉದ್ದೀಪನಗೊಳಿಸುತ್ತವೆ. ರಾಬರ್ಟ್ ವೈಟ್ ಈ ಕಲಾಕೃತಿಗಳನ್ನು ಪುಸ್ತಕ ರೂಪದಲ್ಲಿ ತಂದದ್ದರಿಂದ ಅವು ಇಂದಿಗೂ ನಮ್ಮ ದೇಶದ ಚೆನ್ನೈ, ಊಟಿ ಬಹುಶಃ ಬೆಂಗಳೂರಿನ ಲಾಲ್‌ಬಾಗ್ ಗ್ರಂಥಾಲಯಗಳಲ್ಲಿ ನಮಗೆ ಕಾಣಸಿಗುತ್ತವೆ.

ಇಷ್ಟೆಲ್ಲಾ ನಮ್ಮ ಸಸ್ಯಗಳ, ಕಲಾವಿದರ ಪರಂಪರೆಯ ಮಾಹಿತಿ ನಮಗೆ ದೊರಕಿದ್ದು ನಾಲ್ಬಿಯವರು ತಮ್ಮ ನಾಡಿನ ಹಿರಿಯರ ಕೊಡುಗೆಯ ಬಗ್ಗೆ ಸಂಶೋಧಿಸಿ ಗ್ರಂಥ ರಚನೆ ಮಾಡಿದ್ದರಿಂದ. ನಾಲ್ಬಿಯವರಿಗೆ ಈಗೊಂದು ಕನಸಿದೆ. ಆ ಬಗ್ಗೆ ಈ ಮೈಲ್ ಮೂಲಕ ಪ್ರಸ್ತಾಪಿಸುತ್ತಿರುತ್ತಾರೆ. ಕಲಾವಿದ ರಂಗಯ್ಯ, ಗೋವಿಂದೂರ ಸಂತತಿಯವರು ಇದ್ದು ಇಂದು ಆ ಸಸ್ಯಚಿತ್ರಗಳನ್ನು ಅವರು ನೋಡಿದರೆ! ಆಹಾ!

ಈ ವಿಷಯಗಳನ್ನು ಮೆಲುಕು ಹಾಕಿದಾಗ ನೆನಪಿಗೆ ಬರುವುದು 'ತನ್ನ ಮರೆಯ ಕಂಪನರಿಯದೆ, ಅದನೆ ಹೊರಗೆ ಹುಡುಕುವ ಮೃಗದ ಸೇಡು ನಮ್ಮ ಪಾಡು' ಎನ್ನುವುದು.


■ ಪದ್ಮ ಶ್ರೀರಾಮ



ಗೋವಿಂದು ಬರೆದ ಚಿತ್ರ



ರಂಗಯ್ಯ ಬರೆದ ಸಸ್ಯಚಿತ್ರ- ಕೆಲವು ಭಾಗಗಳಿಗೆ ಜಲವರ್ಣ ಸಂಯೋಜನೆ



ಯಡಿಯೂರಪ್ಪ ಹೊಸ ಪಕ್ಷದ ಕಷ್ಟಗಳು

ಮುಖ್ಯಮಂತ್ರಿ ಜಗದೀಶ್ ಶೆಟ್ಟರ್‌ರ ಅಧಿಕಾರಾವಧಿ ಕೆಲವೇ ದಿನಗಳಲ್ಲಿ ಮುಗಿದುಹೋಗಲಿದೆ. ಇದು ಶತಸ್ಸಿದ್ಧ. ಬಹುತೇಕ ಜನವರಿ 14 ರ ಸಂಕ್ರಾಂತಿಯ ನಂತರ ಟಕದ ರಾಜಕಾರಣವು ಹೊಸ ಹಾದಿ ಹಿಡಿಯುವುದು ಖಚಿತ.

'ಲಂಕೇಶ್' ಪ್ರಿಂಟಿಗೆ ಹೋಗುತ್ತಿರುವ ಕೊನೆಯ ಷಗಳಲ್ಲಿ ಸಿಗುತ್ತಿರುವ ಮಾಹಿತಿಯನ್ನು ಆಧರಿಸಿ ಬೇಕೆಂದರೆ ಶೆಟ್ಟರ್ ಒಂದೋ ವಿಧಾನಸಭೆ ವಿಸರ್ಜನೆಗೆ ರಸ್ಸು ಮಾಡಬೇಕು ಅಥವಾ ಮೈನಾರಿಟಿ ಸರ್ಕಾರವೆಂದು ಗಣನೆಯಾಗಿ ರಾಷ್ಟ್ರಪತಿ ಆಳ್ವಿಕೆಗೆ ಅವಕಾಶ ನೀಡಿ ಗೆ ಸರಿಯಬೇಕು...

ಇವೆರಡೇ ಸದ್ಯಕ್ಕೆ ಅವರ ಮುಂದಿರುವ ಆಯ್ಕೆಗಳು....! ಜನವರಿ 5 ರ ಕೆಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ಕೀಯ ಸ್ಥಿತಿಯ ಅವಲೋಕನ, ಬಿಜೆಪಿ ಸರ್ಕಾರದ ಲ್ಯಗಳು ಇವೇ ಮುಂತಾದ ವಿಚಾರಗಳ ಚರ್ಚೆ ಯಾದರೂ ಅಲ್ಲಿ ನಿಜವಾಗಲೂ ನಡೆಯುವುದು ದ್ದಿಯ ತಾಕತ್ತಿನ ಪರೀಕ್ಷೆ. ಅಂದರೆ ಶೆಟ್ಟರ್ ಸರ್ಕಾರವನ್ನು ತ್ರಗೊಳಿಸುವಷ್ಟು ಶಾಸಕರು ಅರ್ಥಾತ್ ಕನಿಷ್ಠ ಒಂದು ರ್ ಮಂದಿಯಾದರೂ ತನ್ನೊಂದಿಗೆ ಬರುತ್ತಾರಾ ಎಂಬ ಯಡಿಯೂರಪ್ಪನವರಿಗೇ ಇದೆ. ಚುನಾವಣಾ ಕಾರಣದಲ್ಲಿ ಮಹತ್ವ ಪಡೆಯುವುದು ಇಂತಹ ವಿಚಾರಗಳೇನೆ.

ಈ ಹಂತದಲ್ಲಿ ಯಡಿಯೂರಪ್ಪ ಹಾಗೂ ಬಿಜೆಪಿಗಳಲ್ಲಿ ಇರುವ ಯೋಚನೆಗಳೇನೆಂಬುದು ಕುತೂಹಲಕಾರಿಯಾಗಿದೆ.

ಯಡಿಯೂರಪ್ಪಾಗೆ 'ಏನೇ ಆಗಲಿ, ಶೆಟ್ಟರ್‌ಗೆ ಈ ಬಾರಿಯ ಬಜೆಟ್ ಮಂಡಿಸಲು ಬಿಡಬಾರದು' ಎಂಬುದು ಮೊದಲ ಲೆಕ್ಕಾಚಾರವಾಗಿದೆ. ಖಜಾನೇಲಿ ಹಣ ಇರಲಿ, ಇಲ್ಲದಿರಲಿ, ಮುಂದೆ ಆದಾಯ ಸಂಗ್ರಹ ಆಗುತ್ತೋ, ಬಿಡುತ್ತೋ ಅವಕಾಶ ಸಿಕ್ಕರೆ ಶೆಟ್ಟರ್ ತಾನೇನು ಕಡಿಮೆ ಎಂಬಂತೆ ಒಂದು ಲಕ್ಷ ಕೋಟಿ ರೂಪಾಯಿಗಿಂತಾ ಜಾಸ್ತಿಯ ಬಜೆಟ್ ಮಂಡಿಸಲು ಯತ್ನಿಸುತ್ತಾರೆ. ಆ ಬಜೆಟ್‌ನಲ್ಲಿ ಎಲೆಕ್ಷನ್ ಡ್ರಾಮಾಗೆ ಬೇಕಾದ ಹೊಸ ಪಾಪುಲರ್ ಸ್ಕೀಂಗಳನ್ನು ಪ್ರಕಟಿಸಿ, ಸಂಘ ಪರಿವಾರಕ್ಕೆ, ಬ್ರಾಹ್ಮಣ ಪುರೋಹಿತರಿಗೆ ಸಾಕಷ್ಟು ತಿನ್ನಲೂ ನೀಡಿ, ಬಿಜೆಪಿ ಎಲೆಕ್ಷನ್ ಖರ್ಚಿಗೂ ದಾರಿ ಮಾಡಿಕೊಳ್ಳುತ್ತಾರೆಂಬ ಕಸಿವಿಸಿ ಯಡ್ಡಿಗಿದೆ.

ಇದಲ್ಲದೆ ಯಡ್ಡಿಗೆ ಹಾಗೂ ಕೆಜೆಪಿಗೆ ಅದೆಷ್ಟು ಪವರ್ ಇದೆ ಎನ್ನುವುದನ್ನು ತೋರಿಸಬೇಕೆಂದರೆ ಅವರು ಬಿಜೆಪಿ ಸರ್ಕಾರ ಬೀಳಿಸಿ, ಬಜೆಟ್ ಮಂಡಿಸಲು ಬಿಡದೆ, ಶಾಸಕರನ್ನೆಲ್ಲಾ ಚಿದುರಿಸಿ ತಮ್ಮೆಡೆಗೆ ಸೆಳೆದರೆ ತಾನೆ ಎಲೆಕ್ಷನ್‌ನ ಖದರ್ ಸೃಷ್ಟಿಯಾಗುವುದು. ಕೆಜೆಪಿಗೆ ವೀರೋಚಿತ ಇಮೇಜ್ ಬರುವುದು.

ಮತ್ತೊಂದೆಡೆ ಬಿಜೆಪಿಯ ಪುರೋಹಿತ ಥಿಂಕ್‌ಟ್ಯಾಂಕ್‌ನಲ್ಲಿ ಬೇರೊಂದು ಲೆಕ್ಕಾಚಾರ ನಡೆಯುತ್ತಿದೆ.

ಯಡ್ಡಿಯ ಮೂವ್‌ಗಿಂತ ಮೊದಲೇ ವಿಧಾನಸಭೆ ವಿಸರ್ಜನೆಗೆ ಶಿಫಾರಸ್ಸು ಮಾಡಿಬಿಟ್ಟರೆ ಕನಿಷ್ಠ ಪಕ್ಷ ಉಸ್ತುವಾರಿ ಸರ್ಕಾರವಾದರೂ ಬಿಜೆಪಿ ಕೈಲಿರುತ್ತದೆ. ಬಜೆಟ್‌ಗೆ ಬದಲಾಗಿ ಲೇಖಾನುದಾನವನ್ನಾದರೂ ಪಡೆದು ಹಳೇ ಯೋಜನೆಗಳ ಹೆಸರಲ್ಲಿ ಶಾಸಕರಿಗೆ, ಪಾರ್ಟಿ ಕಾರ್ಯಕರ್ತರಿಗೆ ಒಂದಿಷ್ಟು ತೀರ್ಥ ಪ್ರಸಾದಕ್ಕೆ ಅನುಕೂಲ ಮಾಡಿಕೊಳ್ಳಬಹುದು. ಬಹಳ ಮುಖ್ಯವಾಗಿ ಎಲೆಕ್ಷನ್ ಬಂದಾಗ ಉಸ್ತುವಾರಿ ಸರ್ಕಾರವೇ ಇದ್ದರೂ ಬಿಜೆಪಿಗೆ ಕೊಂಚ ಅನುಕೂಲವಾಗಬಹುದು ಎಂಬುದೇ ಅವರ ಯೋಚನೆ.

ಯಡ್ಡಿ ಒಂದಷ್ಟು ಶಾಸಕರನ್ನು ತವ್ಮೊಂದಿಗೆ ಕರೆದೊಯ್ದು ಆಕಸ್ಮಾತ್ ರಾಜೀನಾಮೆ ಕೊಡಿಸಿಯೇ ಬಿಟ್ಟರೆ ಕಾಂಗ್ರೆಸ್, ಜೆಡಿಎಸ್‌ಗಳಂತೂ ರಾಜ್ಯಪಾಲರನ್ನು ಕಂಡು ಸರ್ಕಾರ ವಜಾಗೊಳಿಸಲು ಒತ್ತಡ ಹಾಕೇ ಹಾಕುತ್ತಾರೆ. ಆಗ ಶೆಟ್ಟರ್ ಸರ್ಕಾರ ಹೋಗುತ್ತದಲ್ಲದೆ ಉಸ್ತುವಾರಿ ಸರ್ಕಾರ ನಡೆಸುವ ಅವಕಾಶವೂ ಇಲ್ಲವಾಗಿಬಿಡುತ್ತದೆ ಎಂಬ ಆತಂಕ ಬಿಜೆಪಿಗಿದೆ.

ಇಲ್ಲಿ ಬಿಜೆಪಿಗಳ ಸಮಸ್ಯೆ ಏನೆಂದರೆ ಯಡಿಯೂರಪ್ಪ 'ಹೆಟ್ಟೊಂದು ತುಂಡೆರಡು' ಎಂಬ ರಾಜಕೀಯ ಹೆಜ್ಜೆ ಇಡುವ ಮುನ್ನವೇ ಬಿಜೆಪಿಯು ಸರ್ಕಾರದ ಬಗ್ಗೆ ನಿರ್ಧಾರ ಮಾಡಲೇಬೇಕಾಗಿ ಬಂದಿದೆ. ಆದರೂ ಬಿಜೆಪಿ ನಾಯಕತ್ವವು ಕೊಂಚ ಕಾದು ನೋಡಿ ನಂತರ ಒಂದು ಅಂತಿಮ ತೀರ್ಮಾನ ಮಾಡೋಣ ಎಂದುಕೊಳ್ಳುತ್ತಲೂ ಇದೆ.

ಅದು ಏಕೆಂದರೆ....

ಯಡಿಯೂರಪ್ಪನವರ ಜೊತೆ ಚುನಾವಣಾ ಸಮಯದಲ್ಲಿ ಕೈಜೋಡಿಸಬಹುದಾದ ಎಲ್ಲರೂ ಈ ತಕ್ಷಣದಲ್ಲೇ ಬಿಜೆಪಿಗೆ ರಾಜೀನಾಮೆ ನೀಡಿ ಹೊರಹೋಗುವ ಮೂಡ್ ಪ್ರದರ್ಶಿಸುತ್ತಿಲ್ಲ!

ಉಮೇಶ್ ಕತ್ತಿ, ನಿರಾಣಿ, ರೇಣುಕಾಚಾರ್ಯ, ಶೋಭಾ, ಸೋಮಣ್ಣ ಮುಂತಾದವರು ತಕ್ಷಣ ದೃಢ ನಿರ್ಧಾರ ಮಾಡದಿದ್ದರೆ ಯಡ್ಡಿ ಬಯಸುವ ಆನೆ ಬಲವು ಕೆಜೆಪಿಗೆ ಈಗಲೇ ಬರುವುದಿಲ್ಲ, ಜನವರಿ 5ರ ಕೆಜೆಪಿ ಸಭೆಯ ಸಮಯಕ್ಕೆ ರಾಜೀನಾಮೆ ನೀಡಲು ರೆಡಿಯಿರುವ ಶಾಸಕರ ಸಂಖ್ಯೆ ಹತ್ತನ್ನೂ ದಾಟಲಾರದೆಂಬ ಸತ್ಯ ಯಡ್ಡಿಗೂ ಗೊತ್ತಿದೆ. ನೆಹರೂ ಓಲೇಕಾರ್, ಚಿಕ್ಕನಗೌಡ, ಹರೀಶ್, ಚಂದ್ರಪ್ಪ ಮುಂತಾದವರ ರಾಜೀನಾಮೆಯು ಶೆಟ್ಟರ್ ಸರ್ಕಾರಕ್ಕೆ ಕಂಪನ ಮೂಡಿಸಬಹುದೇ ವಿನಃ ಉರುಳಿಸುವಷ್ಟು ಸಂಖ್ಯೆಯಾಗಲಾರದು. ನೂತನ ಕರ್ನಾಟಕ ಜನತಾ ಪಾರ್ಟಿ ಸೇರಿದರೆ ಅಂತವರ ರಾಜಕೀಯ ಭವಿಷ್ಯವು ಸುಭದ್ರವಾಗಿರಲಿದೆ ಎಂಬ ನಂಬಿಕೆ ಮೂಡಿಸುವ ಹೊಣೆ ಈಗ ಯಡ್ಡಿಯ ಮೇಲೇ ಇದೆ. ಯಡಿಯೂರಪ್ಪಗೆ ನಾಲ್ಕು ದಶಕಗಳ ರಾಜಕೀಯ ಅನುಭವವೇ ಇರಬಹುದು. ಅವರು ಲಿಂಗಾಯತ ನಾಯಕರಾಗಿ ಹೊರ ಹೊಮ್ಮಿರಬಹುದು. ಆದರೆ ಅವರದ್ದು ಹೇಳಿಕೇಳಿ ಹೊಸ ರಾಜಕೀಯ ಪಕ್ಷ. ತಮ್ಮ ಪಾರ್ಟಿ ಬಲಪಡಿಸಲು ಯಡ್ಡಿ ಒಂದನೇ ಮೆಟ್ಟಿಲಿನಿಂದಲೇ ಮೇಲೆ ಹತ್ತಲು ಆರಂಭಿಸಬೇಕಷ್ಟೇ. ನಾಳೆ ಚುನಾವಣೆಗಳು ಮುಗಿದನಂತರ ಕೆಜೆಪಿಗೆ ಬಿಜೆಪಿಗಿಂತಾ ಜಾಸ್ತಿ ಓಟು-ಸೀಟು ಬರಬಹುದಾದರೂ ಇವತ್ತಿನಿಂದ ಎಲೆಕ್ಷನ್‌ವರೆಗಿನ ಅವಧಿ ಇದೆಯಲ್ಲ, ಅದೇ ಯಡ್ಡಿ ಪಾಲಿನ ಕಷ್ಟದ, ಸಂಕೀರ್ಣ ಪರಿಸ್ಥಿತಿಯಾಗಲಿದೆ. ಬಿಜೆಪಿಗಳು ಈ ಮೊದಲೆಲ್ಲಾ ಸರ್ಕಾರ ಬೀಳಿಸಿದ ಅಪಕೀರ್ತಿ ಯಡ್ಡಿ ತಲೆಗೇ ಸುತ್ತಿಕೊಳ್ಳಲಿ ಎಂದು ತಮ್ಮ ಎಂದಿನ ಕುತಂತ್ರ ಬುದ್ಧಿಯ ಯೋಚನೆ ಮಾಡುತ್ತಿದ್ದವು. ಆದರೆ ಈಗ ಒಂದು ವೇಳೆ ಸರ್ಕಾರ ಬಿದ್ದೇ ಹೋದರೂ ಅಳುವವರು, ದೂಷಿಸುವವರು ಯಾರೂ ಇರುವುದಿಲ್ಲ

ಈ ಸತ್ಯ ಈಗ ಬಿಜೆಪಿಗೆ ಹಾಗೂ ಯಡಿಯೂರಪ್ಪ ಇಬ್ಬರಿಗೂ ಅರ್ಥವಾಗಿ ಹೋಗಿದೆ.

ಯಡಿಯೂರಪ್ಪನವರು ಈಗ ಶೆಟ್ಟರ್ ಸರ್ಕಾರವನ್ನು ಉರುಳಿಸಲು ಕಾಯುತ್ತಿರುವುದು ಸಂಕ್ರಾಂತಿಗೂ ಅಲ್ಲ ಬಕ್ರೀದ್‌ಗೂ ಅಲ್ಲ...

ಶಾಸಕರ ಸಂಖ್ಯೆಗೆ!

ಅದು ತನ್ನ ಕೈಗೆಟಕುವಷ್ಟಾಯಿತು ಎಂದು ಖಾತ್ರಿಯಾದ ತಕ್ಷಣ ಶೆಟ್ಟರ್ ಮನೆಗೆ ಹೊರಡಬೇಕಾಗುತ್ತದೆ. ಆ ಕಾಲ ಇನ್ನೇನು ಹತ್ತಿರದಲ್ಲೇ ಇದೆ ಎಂಬುದಕ್ಕೂ ಸಾಕ್ಷಿಗಳು ಸಿಗುತ್ತಿವೆ. ಫೆಬ್ರವರಿ ಮೊದಲ ವಾರದಲ್ಲಿ ಶೆಟ್ಟರ್ ಮಂಡಿಸಬೇಕಿದ್ದ ಬಜೆಟ್ ತಯಾರಿಯ ಕೆಲಸ ಈಗ ರಭಸ ಕಳೆದುಕೊಂಡಿದೆ. ಬಿಜೆಪಿ ಕೋರ್ ಕಮಿಟಿ ಹಾಗೂ ಕ್ಯಾಬಿನೆಟ್ ಕಮಿಟಿ ಸಭೆಗಳು ನಿರಂತರವಾಗಿ ನಡೆಯುತ್ತಿವೆ. ಮತ್ತೊಂದೆಡೆ ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯ ಹಾಗೂ ಪರಮೇಶ್ವರ್‌ರನ್ನು ದೆಹಲಿಗೆ ಕರೆಸಿಕೊಂಡು ಕೆಲವು ಸಂಗತಿಗಳನ್ನು ಕಿವಿಗೆ ಹಾಕಿದೆ. ಅದರಲ್ಲಿ ಇನ್ನೇನು ಘಟಿಸಲಿರುವ ಶೆಟ್ಟರ್ ಸರ್ಕಾರದ ಪತನವೇ ಮುಖ್ಯವಾದದ್ದಾಗಿದೆ.

ಕೆಜೆಪಿ ಹೊಸ ಪಾರ್ಟಿಯಾಗಿ ನಿರೀಕ್ಷೆ ಮೀರಿ ಬೆಳೆಯುತ್ತಿರುವಾಗಲೂ ಆ ಪಕ್ಷದ ನಾಯಕ ಯಡಿಯೂರಪ್ಪ ಹಾಲಿ ಬಿಜೆಪಿ ಶಾಸಕರ ಪೈಕಿ ತಮ್ಮ ನಿಷ್ಠಾವಂತರ ಮನವೊಲಿಸಿ ತಮ್ಮೊಂದಿಗೆ ಕರೆದೊಯ್ಯಲು ಸದ್ಯಕ್ಕೆ ಸೆಣೆಸಾಡುತ್ತಿದ್ದಾರೆ. ಅದು ಕೈಗೂಡಿದ ಗಳಿಗೆಯೇ ಶೆಟ್ಟರ್ ಸರ್ಕಾರ ಪತನ ಆಗಲಿದೆ.

● ಪಾರ್ವತೀಶ

ಕೃಷ್ಣ ಪ್ರತ್ಯಕ್ಷ

ಅಧಿಕಾರದ ಚುಕ್ಕಾಣಿಯನ್ನು ಹಿಡಿಯುವ ತವಕದ ವ ರಾಜ್ಯ ಕಾಂಗ್ರೆಸ್ ಘಟಕದಲ್ಲಿ ಈಗ ಹಲವು ಕರ ನಡುವೆ ಅಂತಃಕಲಹ ತಾರಕಕ್ಕೇರುತ್ತಿದೆ. ಅದರಲ್ಲೂ ಲಿಯಲ್ಲಿರುವ ಕಾಂಗ್ರೆಸ್ ಹೈಕಮಾಂಡಿನಿಂದ ಒದ್ದೋಡಿಸಿ ಡು ಬೆಂಗಳೂರಿಗೆ ವಾಪಸ್ ಬಂದ ಮಾಜಿ ವಿದೇಶಾಂಗ ವ ಎಸ್.ಎಂ.ಕೃಷ್ಣ ಎರಡು ತಿಂಗಳ ಕಾಲ ಮನೆಯಲ್ಲಿ ನವಾಗಿದ್ದು ಈಗ ಹೊರಗೆ ಕಾಲಿಟ್ಟಿರುವುದು ವಿವಿಧ ವಣಿಗೆಗಳಿಗೆ ನಾಂದಿ ಹಾಡಿದೆ.

ಇತ್ತೀಚೆಗೆ ಕೃಷ್ಣ ದಿಢೀರನೆ ಒಕ್ಕಲಿಗರ ಮಠಾಧೀಶರಾದ ಲಗಂಗಾಧರ ಸ್ವಾಮಿಯವರನ್ನು ಭೇಟಿಯಾಗಿ ಅವರ ರ್ವಾದವನ್ನು ಪಡೆದರು. ಅದಾದ ಕೆಲವೇ ದಿನಗಳಲ್ಲಿ ನ್ನೂ ಯಂಗ್‌ಮ್ಯಾನ್, ತನಗೆ ವಯಸ್ಸಾಗಿಲ್ಲ ಎಂಬುದನ್ನು ರಿಸಲೆಂಬಂತೆ ಛಾಯಾಗ್ರಾಹಕರನ್ನೆಲ್ಲ ಕರೆಸಿ, ಅವರ ಮುಖದಲ್ಲಿ ಟೆನ್ನಿಸ್ ಆಡಿದರು. ಕೃಷ್ಣ ಟೆನ್ನಿಸ್ ಆಡುವ ಟೋಗಳು ಪತ್ರಿಕೆಗಳಲ್ಲಿ ಬರುತ್ತಿದ್ದಂತೆ ಅವರ ರೋಧಿಗಳು "ಇದು ಟೆನ್ನಿಸ್ ಆಟವಲ್ಲ, ಬದಲಾಗಿ ರ ರಾಜಕೀಯ ಆಟದ ಮೊದಲ ಹೆಜ್ಜೆ" ಎಂದು ಸುತ್ತಾ ಹುಷಾರಾದರು.

ಕೃಷ್ಣ 'ರಾಜಕೀಯ ಆಟ' ಅಷ್ಟಕ್ಕೇ ನಿಲ್ಲಲಿಲ್ಲ, ಹೊಸ ದ ಮೊದಲ ದಿನ ಪತ್ರಕರ್ತರನ್ನೆಲ್ಲ ತಮ್ಮ ಮನೆಯಲ್ಲಿ ಟೀಗೆ ಆಹ್ವಾನಿಸಿದರು. ಕೃಷ್ಣರ ಹೈ ಟೀಗೆ ಎಲ್ಲಾ ಕೆಗಳ ಮುಖ್ಯ ವರದಿಗಾರರು ಮತ್ತು ಸುದ್ದಿ ವಾಹಿನಿಗಳ ಗಾರರು ಓಬಿ ವ್ಯಾನ್ ಸಮೇತ ದೌಡಾಯಿಸಿದರು. ತ್ತು ಕೃಷ್ಣರು ಎಂತಹದ್ದೋ 'ಬ್ರೇಕಿಂಗ್ ನ್ಯೂಸ್' ಡುತ್ತಾರೆಂದೇ ಎಲ್ಲರೂ ಭಾವಿಸಿದ್ದರು. ಆದರೆ ಪತ್ರಕರ್ತರಿಗೆ ಕೊಟ್ಟ ಕೃಷ್ಣರು ಅಪ್ಪಿತಪ್ಪಿಯೂ ರಾಜ್ಯ ರಾಜಕೀಯದ ಯಾಗಲೀ ಅಥವಾ ವಿದೇಶಾಂಗ ಸಚಿವ ಸ್ಥಾನಕ್ಕೆ ನಾಮೆ ನೀಡಿದ ಬಗ್ಗೆಯಾಗಲೀ ಒಂದು ಅಕ್ಷರವೂ ತನಾಡದೇ ಎಲ್ಲರನ್ನೂ ನಿರಾಶೆಗೊಳಿಸಿದರು.

2004ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮುಗ್ಗುಮುಕ್ಕಲು ಪ್ರಮುಖ ಕಾರಣರಾಗಿದ್ದ ಕೃಷ್ಣರನ್ನು ಅದೇ - ಹೈಕಮಾಂಡ್ ಮಹಾರಾಷ್ಟ್ರದ ರಾಜ್ಯಪಾಲರನ್ನಾಗಿಸುವ ಲಕ ಅವರಿಗೆ ರಾಜಕೀಯದಿಂದ ನಿವೃತ್ತಿ ನೀಡಿತ್ತು, ರ ಮುಂಬೈಯಲ್ಲಿರುವ ರಾಜಭವನದಿಂದಲೇ ಟಕದ ರಾಜಕೀಯದಲ್ಲಿ ಕ್ರಿಯಾಡಿಸುತ್ತಿದ್ದ ಕೃಷ್ಣ ಬಹಳ ಸುಮ್ಮನಿರಲಿಲ್ಲ, ರಾಜ್ಯದಲ್ಲಿ ಸಕ್ರಿಯ ರಾಜಕಾರಣಕ್ಕೆ ಸುವ ಉದ್ದೇಶದಿಂದಲೇ ಅವರು 2008ರಲ್ಲಿ ಪಾಲ ಹುದ್ದೆಗೆ ರಾಜೀನಾಮೆ ನೀಡಿದರು. ಮಾತ್ರವಲ್ಲ ಟಕವನ್ನು ಬೆಳಗಾವಿಯ ಮೂಲಕ ಪ್ರವೇಶಿಸು ದೂ, ಅಲ್ಲಿಂದ ಬೆಂಗಳೂರಿಗೆ ಬರುತ್ತೇನೆಂದೂ ಒಂದು ಬೃಹತ್ ಕಾರ್ಯಕ್ರಮವನ್ನೇ ಹಮ್ಮಿಕೊಂಡಿದ್ದರು. ಆಗ ಕಾಂಗ್ರೆಸ್‌ನ ರಾಜ್ಯಾಧ್ಯಕ್ಷರಾಗಿದ್ದ ಮಲ್ಲಿಕಾರ್ಜುನ ಖರ್ಗೆ ಅವರು ಕೃಷ್ಣರ ಈ ಮೆರವಣಿಗೆ ಯೋಜನೆಗೆ ಕೊಕ್ಕೆ ಹಾಕಿದ್ದರು. ಅದೂ ಹೇಗೆ? "ಕೃಷ್ಣ ರಾಜ್ಯಪಾಲ ಹುದ್ದೆಗೆ ರಾಜೀನಾಮೆ ಕೊಟ್ಟು ಬರುವಾಗ ಇಂತಹ ಮೆರವಣಿಗೆ ಮಾಡುವುದು ಸರಿಯಲ್ಲ, ಯಾವುದಾದರೂ ದೊಡ್ಡ ಸಾಧನೆ ಮಾಡಿದಾಗ ಈ ತರಹ ಮೆರವಣಿಗೆ, ಜಾಥಾಗಳನ್ನು ಮಾಡೋಣ" ಎಂದು ಖರ್ಗೆ ಲೇವಡಿ ಮಾಡಿದ್ದರು.

ಕೇಂದ್ರ ಸಚಿವ ಸಂಪುಟದಿಂದ ಗೇಟ್ ಪಾಸ್ ಪಡೆದ ಕೃಷ್ಣ ಬೆಂಗಳೂರಿಗೆ ಬಂದಾಗಲೂ ಅವರ ಹಿಂಬಾಲಕರು ವಿಮಾನ ನಿಲ್ದಾಣದಿಂದ ಬೃಹತ್ ಮೆರವಣಿಗೆಯನ್ನು ಏರ್ಪಡಿಸಿದ್ದರು. ಆದರೆ ಅವತ್ತು ಮನೆ ಸೇರಿದ ಕೃಷ್ಣ ಇಲ್ಲಿಯ ತನಕ ಸುಮ್ಮನಿದ್ದರು. ಈಗ ನೋಡಿದರೆ ಕೃಷ್ಣ ನೇರವಾಗಿ ಅಖಾಡಕ್ಕೆ ಧುಮುಕಿದ್ದಾರೆ.

ಖರ್ಗೆಗೆ ಕೋಪ

ಕೇಂದ್ರದಲ್ಲಿ ಕಾರ್ಮಿಕ ಸಚಿವರಾಗಿರುವ ಖರ್ಗೆ ಹೈಕಮಾಂಡಿನ ವಿಶ್ವಾಸವನ್ನು ಉಳಿಸಿಕೊಂಡಿದ್ದಾರೆ. ಕಾಂಗ್ರೆಸ್‌ನ ಒಂದು ಗುಂಪಿನ ಪ್ರಕಾರ ಮುಂದಿನ ಚುನಾವಣೆಯಲ್ಲಿ ಒಂದು ವೇಳೆ ಕಾಂಗ್ರೆಸ್ ಬಹುಮತವನ್ನು ಪಡೆದರೆ ಹೈಕಮಾಂಡ್ ಖಂಡಿತವಾಗಿಯೂ ಹಿಂದುಳಿದ ವರ್ಗಗಳ ನೇತಾರ ಖರ್ಗೆಯವರನ್ನು ಮುಖ್ಯಮಂತ್ರಿ ಕುರ್ಚಿಯಲ್ಲಿ ಕುಳ್ಳಿರಿಸುವ ಬಗ್ಗೆ ಚಿಂತಿಸುತ್ತಿದೆಯಂತೆ.



ಖರ್ಗೆಯವರು ಈಗಾಗಲೇ ಹತ್ತು ಬಾರಿ ಎಂಎಲ್‌ಎಯಾಗಿ ಚುನಾವಣೆಗಳಲ್ಲಿ ಗೆದ್ದಿದ್ದಾರೆ. ಹಲವಾರು ಬಾರಿ ಮಂತ್ರಿ ಆಗಿ ಕಾರ್ಯನಿರ್ವಹಿಸಿದ್ದಾರೆ. ಇದೀಗ ಮೊದಲ ಬಾರಿಗೆ ಲೋಕಸಭಾ ಸದಸ್ಯರಾಗಿ ಕೇಂದ್ರದಲ್ಲಿ ಮಂತ್ರಿಯಾಗಿದ್ದಾರೆ. ಅವರು ಅಪ್ಪಟ ಕಾಂಗ್ರೆಸ್ಸಿಗ. ಹಲವಾರು ವರ್ಷಗಳಿಂದ ಪಕ್ಷಕ್ಕೆ ಸಂಪೂರ್ಣ ನಿಷ್ಠೆಯನ್ನು ಪ್ರದರ್ಶಿಸಿದ ಖರ್ಗೆಗೆ ಈ ಬಾರಿ ಮುಖ್ಯಮಂತ್ರಿ ಪದವಿ ಒಲಿಯುವ ಸಾಧ್ಯತೆಯಿದೆ ಎಂದು ಅವರ ಹಿಂಬಾಲಕರು ಹೇಳುತ್ತಿದ್ದಾರೆ. ಅಷ್ಟೇ ಅಲ್ಲ, ಖರ್ಗೆಗೆ ಕಾಂಗ್ರೆಸ್ ನಾಯಕರಾದ ವೀರಪ್ಪ ಮೊಯ್ಲಿ, ಆಸ್ಕರ್ ಫರ್ನಾಂಡಿಸ್, ಬಿ.ಕೆ.ಹರಿಪ್ರಸಾದ್, ಸಿದ್ದರಾಮಯ್ಯ, ಸಿ.ಎಂ.ಇಬ್ರಾಹಿಂ, ಮುನಿಯಪ್ಪ ಮೊದಲಾದವರ ಬೆಂಬಲವೂ ಇದೆಯಂತೆ. ಈ ಹಿನ್ನೆಲೆಯಲ್ಲಿಯೇ ಕೃಷ್ಣ ಮತ್ತು ಅವರ ಹಿಂಬಾಲಕರ ಸದ್ದದ ರಾಜಕೀಯದ ರಂಗಿನಾಟಗಳನ್ನು ಕಂಡು ಖರ್ಗೆಗೆ ಕೋಪ ಬಂದಿದೆಯಂತೆ.

ಆಯಕಟ್ಟಿನ ಜಾಗಗಳಲ್ಲಿ ವಿಜೃಂಭಿಸಿರುವ ಕೃಷ್ಣರಿಗೆ ಈ ವಯಸ್ಸಿನಲ್ಲಿ ಮತ್ತೊಮ್ಮೆ ಮುಖ್ಯಮಂತ್ರಿಯಾಗುವ ಅವಕಾಶವನ್ನು ಯಾವುದೇ ಕಾರಣಕ್ಕೂ ನೀಡಬಾರದು ಎಂದು ಹಿಂದುಳಿದ ನಾಯಕರೆಲ್ಲ ತೀರ್ಮಾನಿಸಿದ್ದಾರೆ.

ಹೈ-ಕ ಮಸೂದೆಯಿಂದ ಲಾಭ

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಸೂದೆಯನ್ನು ಇತ್ತೀಚೆಗೆ ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷ ಅನುಮೋದಿಸಿದ್ದರಿಂದ ಸಹಜವಾಗಿಯೇ ರಾಜ್ಯದ ಆ ಭಾಗದ ಸುಮಾರು ಎಂಟು ಜಿಲ್ಲೆಗಳ ಜನರಲ್ಲಿ ಕಾಂಗ್ರೆ ಪರ ಒಲವು ಕಾಣಿಸಿಕೊಳ್ಳಲಿದೆ ಎಂಬುದು ಕಾಂಗ್ರೆಸ್ಸಿಗರ ಲೆಕ್ಕಾಚಾರ. ಅದರ ಜೊತೆಗೆ ಹೈದರಾಬಾದ್ ಕರ್ನಾಟಕ ಪ್ರದೇಶದವರಾದ ಮತ್ತು ಹಿಂದುಳಿದ ದಲಿತ ಸಮುದಾಯದ ನಾಯಕರಾದ ಖರ್ಗೆಯವರನ್ನು ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಕಾಂಗ್ರೆಸ್ ಪ್ರತಿಬಿಂಬಿಸಿದರೆ ಕಾಂಗ್ರೆಸ್‌ಗೇ ಹೆಚ್ಚಿನ ಲಾಭವಾಗುತ್ತದೆ ಎಂದೂ ತರ್ಕಿಸಲಾಗಿದೆ.

ಅದೇ ಹೊತ್ತಿಗೆ ಅಕಸ್ಮಾತ್ ಕೃಷ್ಣರನ್ನು ಮುಂದಿನ ಕಾಂಗ್ರೆಸ್ ಮುಖ್ಯಮಂತ್ರಿ ಎಂದು ಬಿಂಬಿಸಿದರೆ ಅದರಿಂದ ಪಕ್ಷಕ್ಕೆ ಯಾವ ಲಾಭವೂ ಇಲ್ಲ ಎಂದು ಹೇಳಲಾಗುತ್ತಿದೆ. ಏಕೆಂದರೆ ಕೃಷ್ಣರ ಒಕ್ಕಲಿಗ ಸಮುದಾಯದ ಜನ ಹೆಚ್ಚಿನ ಸಂಖ್ಯೆಯಲ್ಲಿರುವ ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿನ ಜನರು ಕೃಷ್ಣರನ್ನು 'ವೈಟ್ ಕಾಲರ್ ಗೌಡ, ಆಕ್ಸ್‌ಫರ್ಡ್ ಗೌಡ' ಎಂದು ಲೇವಡಿ ಮಾಡುತ್ತಾರೆಯೇ ಹೊರತು ತಮ್ಮ ಸಮುದಾಯದ ನಾಯಕನೆಂದು ಎಂದೂ ಭಾವಿಸಿಲ್ಲ. ಯಾಕೆಂದರೆ ದೇವೇಗೌಡರ ತರಹ ಕೃಷ್ಣ ಒಕ್ಕಲಿಗ ಜನಾಂಗದವರೊಂದಿಗೆ ಯಾವತ್ತೂ ಬೆರೆತವರೇ ಅಲ್ಲ. ಅಷ್ಟೇ ಯಾಕೆ, 2004ರಲ್ಲಿ ಸ್ವತಃ ಕೃಷ್ಣ ಮದ್ದೂರಿನಿಂದ ಚುನಾವಣೆಯನ್ನು ಎದುರಿಸಲಾಗದೆ ಬೆಂಗಳೂರಿನ ಚಾಮರಾಜಪೇಟೆಗೆ ವಲಸೆ ಬಂದಿದ್ದರು. ಇಂತಹ ಕೃಷ್ಣ ಅದು ಹೇಗೆ ಕಾಂಗ್ರೆಸ್ ಪಕ್ಷಕ್ಕೆ ಒಕ್ಕಲಿಗರ ಮತಗಳನ್ನು ತರಲು ಸಾಧ್ಯ ಎಂದು ಅವರ ವಿರೋಧಿಗಳು ಸವಾಲು ಹಾಕುತ್ತಿದ್ದಾರೆ.


ಸದ್ಯಕ್ಕೆ ಕಾಂಗ್ರೆಸ್‌ನಲ್ಲಿ ಕೃಷ್ಣ ವಿರೋಧಿ ಗುಂಪು ದಿನದಿಂದ ದಿನಕ್ಕೆ ಬಲಾಢ್ಯಗೊಳ್ಳುತ್ತಿದೆ. ಹೈಕಮಾಂಡ್‌ನೊಂದಿಗೆ ನಿಕಟವಾಗಿರುವ ಬಿ.ಕೆ.ಹರಿಪ್ರಸಾದ್, ಮೊಯ್ಲಿ ಮತ್ತು ಆಸ್ಕರ್ ಫರ್ನಾಂಡಿಸ್ ಕೂಡ ಕೃಷ್ಣ ವಿರೋಧಿ ಗುಂಪಿನಲ್ಲಿದ್ದಾರೆ. ಮಾತ್ರವಲ್ಲ ರಾಜ್ಯದಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರದ ಗದ್ದುಗೆಯನ್ನೇರಬೇಕಾದರೆ ಒಂದು ಫಾರ್ಮುಲಾ ಪಾಲಿಸಬೇಕು ಎಂದಿದ್ದಾರಂತೆ.

ಆ ಫಾರ್ಮುಲಾದ ಮುಖ್ಯಾಂಶಗಳು ಹೀಗಿವೆಯಂತೆ: ಲಿಂಗಾಯತ ಸಮುದಾಯವನ್ನು ಕಾಂಗ್ರೆಸ್ ಹಿಂದಿನಿಂದಲೂ ನಿರ್ಲಕ್ಷಿಸುತ್ತಾ ಬಂದಿದೆ ಎಂಬ ಆಪಾದನೆ ಇದೆ. ಈ ಆಪಾದನೆಯನ್ನು ಹೋಗಲಾಡಿಸಲು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ಲಿಂಗಾಯತ ಸಮುದಾಯಕ್ಕೆ ಸೇರಿದ ಶಾಮನೂರು ಶಿವಶಂಕರಪ್ಪನವರಿಗೆ ನೀಡಬೇಕು.


ಹಾಗೆಯೇ ಖರ್ಗೆ ನೇತೃತ್ವದಲ್ಲಿ ಮುಂದಿನ ಚುನಾವಣೆಗಳನ್ನು ಎದುರಿಸಬೇಕು. ಆಗ ಹೈದರಾಬಾದ್ ಕರ್ನಾಟಕದ ಮತದಾರರಲ್ಲದೆ ರಾಜ್ಯದ ದಲಿತರ ಓಟುಗಳೂ ಸಾರಾಸಗಟಾಗಿ ಕಾಂಗ್ರೆಸ್‌ಗೆ ಸಿಗುತ್ತವೆ.

ಇದಲ್ಲದೆ ಇತರೆ ಜಾತಿ ಮತ್ತು ಸಮುದಾಯಗಳನ್ನೂ ಒಲೈಸಬೇಕು. ಉದಾಹರಣೆಗೆ ಮುಸಲ್ಮಾನ ಮತದಾರರನ್ನು

>>>12



ಬೆಳಗಾವಿಯಲ್ಲಿ ದಲಿತ ಸಾಹಿತ್ಯ ಸಮ್ಮೇಳನ



ಮಾನವತೆಯ ಮನಸುಗಳ ಸಮಾಜ ಕಟ್ಟುವ ಉದ್ಘೋಷ

ಪ್ರಸ್ತುತ ಸಂದರ್ಭದ ಜಾಗತಿಕ ತಲ್ಲಣಗಳು ಜಾತಿಯತೆ, ಸ್ವಹಿತಾಸಕ್ತಿಗಳಿಂದಾಗಿ ಕುಸಿದುಹೋಗಿರುವ ಭಾರತೀಯ ಬದುಕಿನ ಒಟ್ಟು ವ್ಯವಸ್ಥೆಯನ್ನು ಮತ್ತೊಮ್ಮೆ ಮಾನವೀಯ ನೆಲೆಯಲ್ಲಿ ಎಲ್ಲವೂ ರಿಪೇರಿ ಆಗಬೇಕಾದ ಅವಶ್ಯಕತೆಗೆ ದೇಶದಲ್ಲಿನ ಮಾನವತೆಯ ಮನಸ್ಸುಗಳು ಇಂದು ಹೆಚ್ಚು ಕ್ರಿಯಾಶೀಲಗೊಳ್ಳುತ್ತಿವೆ. ಈ ತುಡಿತಕ್ಕೆ ಕರ್ನಾಟಕದ ಜನಪರ ಮನಸುಗಳು ಗಟ್ಟಿಯಾದ ಧ್ವನಿ ಹೊರಡಿಸುತ್ತಿರುವ ಅನೇಕ ನಿರ್ದೇಶನಗಳಿವೆ. ಕರ್ನಾಟಕದ ಗಡಿಮೂಲೆಯ ಬೆಳಗಾವಿಯಲ್ಲಿ ದಲಿತ ಸಾಹಿತ್ಯ ಪರಿಷತ್ತು (ರಿ) ರಾಜ್ಯ ಘಟಕ, ಗದಗ ಹಾಗೂ ದಲಿತ ಸಾಹಿತ್ಯ ಪರಿಷತ್ತು ಬೆಳಗಾವಿ ಜಿಲ್ಲಾ ಘಟಕಗಳ ಸಂಯೋಜನೆಯಲ್ಲಿ ಡಿಸೆಂಬರ್ 29, 30 ರಂದು ಎರಡು ದಿನಗಳ ಕಾಲ ಜರುಗಿದ ಅಖಿಲ ಭಾರತ 4ನೆಯ ದಲಿತ ಸಾಹಿತ್ಯ ಸಮ್ಮೇಳನ ಇದಕ್ಕೊಂದು ಉತ್ತಮ ನಿದರ್ಶನವಾಗಿ ಹೊರಹೊಮ್ಮಿದೆ. ಇದೇ ಸಂದರ್ಭದಲ್ಲಿ ಮಂಗಳೂರಿನಲ್ಲಿ ಕೋಮು ಸೌಹಾರ್ದತಾ ವೇದಿಕೆ ಇಂಥದ್ದೆ ತಾತ್ವಿಕ ನಿಲುವಿನ ಚರ್ಚಾ ವೇದಿಕೆಯನ್ನಾಗಿಸಿದ್ದು ಕರ್ನಾಟಕದಲ್ಲಿನ ಜೀವಪರ ನಿಲುವುಗಳು ಕ್ರಿಯಾಶೀಲತೆ ತೋರ್ಪಡಿಸುತ್ತದೆ.

ದಲಿತ ಸಾಹಿತ್ಯ ಸಮ್ಮೇಳನದ ಮೂಲಕ ಬೆಳಗಾವಿಯ ಮೂಲೆಯಿಂದ ಹೊಮ್ಮಿಸಿದ ಮನುಷ್ಯತ್ವದ ಕೂಗು ವಿಶ್ವ ಮಾನವೀಯತೆಗೆ ತೆರೆದುಕೊಳ್ಳಲು ಸಂದೇಶ ರವಾನಿಸಿದೆ. ದಲಿತರ ಕಾರ್ಯಕ್ರಮ ಎಂದಾಕ್ಷಣ ದಲಿತರು ಮಾತ್ರ ಜಮಾಯಿಸಿ ಕೂಗುವ ಇತ್ತೀಚಿನ ಸಂಪ್ರದಾಯಕ್ಕೆ ಒಂದಿಷ್ಟು ಭಿನ್ನವಾಗಿ ಬೆಳಗಾವಿಯ ದಲಿತ ಸಾಹಿತ್ಯ ಸಮ್ಮೇಳನ ಸ್ಪಂದಿಸಿದೆ. ಅಂದರೆ, ಸಮ್ಮೇಳನದಲ್ಲಿ ದಲಿತರೊಂದಿಗೆ ಪ್ರಗತಿಪರ ಮನಸ್ಸುಗಳು ಮತ್ತೊಮ್ಮೆ ಗಟ್ಟಿ ಧ್ವನಿ ಹೊರಡಿಸಿದ್ದು, 70ರ ದಶಕದ ದಲಿತ ಬಂಡಾಯ ಚಳವಳಿಯನ್ನು ನೆನಪಿಗೆ ತಂದುಕೊಟ್ಟಿದೆ. ಡಾ. ಅರ್ಜುನ ಗೊಳಸಂಗಿ, ಡಾ. ಎಚ್.ಬಿ.ಕೋಲ್ಕಾರ, ಡಾ. ಕೆ.ಎನ್.ದೊಡ್ಡಮನಿ, ಡಾ. ಅನುಸೂಯ ಕಾಂಬಳೆ, ಶಂಕರ ಬಾಗೇವಾಡಿಯಂತಹ ದಲಿತ ಸಮುದಾಯದ ಪ್ರಜ್ಞಾವಂತ ಹೊಸ ತಲೆಮಾರಿನವರು ತಮ್ಮೆದುರಿಗಿರುವ ಮಿತಿಯನ್ನು ದಾಟಲು ಮಾಡಿದ ಪ್ರಯತ್ನ ಇದಕ್ಕೆ ಕಾರಣ:

ಸಮ್ಮೇಳನದಲ್ಲಿ ಹಮ್ಮಿಕೊಂಡ ಐದು ಗೋಷ್ಠಿಗಳು, ಮೂರು ವಿಶೇಷ ಉಪನ್ಯಾಸಗಳು ಸೇರಿದಂತೆ ಪ್ರಶಸ್ತಿ-ಸಮ್ಮಾನಗಳೂ ಸಹಿತ ಮನುಷ್ಯತ್ವಕ್ಕೆ ಎದುರಾಗಿರುವ ಹೊಸ ಸವಾಲುಗಳಿಗೆ ಪರಿಹಾರ ಮಾರ್ಗಗಳನ್ನು ಹುಡುಕಲು ಪ್ರಯತ್ನಿಸಿವೆ.

ಡಾ. ಬಿ.ಆರ್. ಅಂಬೇಡ್ಕರ ಅವರು ಎಳೆದುತಂದ ರಥವನ್ನು ಮುಂದೆ ಎಳೆಯುವ ಬಲಕ್ಕೆ ಹುಮ್ಮಸ್ಸು ನೀಡಲು ಪ್ರಯತ್ನಿಸಿದೆ. ಸಮ್ಮೇಳನದ ಅಚ್ಚುಕಟ್ಟಾದ ಆಯೋಜನೆ ಹಿಡಿದುಕೊಂಡು, ಅಭಿವ್ಯಕ್ತಿಯ ಅನೇಕ ವಿಚಾರಗಳು ನಿದರ್ಶನವಾಗಿದ್ದವು.

4ನೆಯ ದಲಿತ ಸಾಹಿತ್ಯ ಸಮ್ಮೇಳನಕ್ಕೆ ಸರ್ವಾಧ್ಯಕ್ಷರನ್ನಾಗಿ ಹಿರಿಯ ತಲೆಮಾರಿನ ದಲಿತ ಬರಹಗಾರರಾದ ಡಾ. ಚೆನ್ನಣ್ಣ ವಾಲೀಕಾರ ಅವರನ್ನು ಆಯ್ಕೆ ಮಾಡುವುದರ ಜೊತೆಗೆ, ಸಮ್ಮೇಳನವನ್ನು ಮರಾಠಿಯ ಖ್ಯಾತ ಬರಹಗಾರ ಉತ್ತಮ ಕಾಂಬಳೆ ಅವರಿಂದ ಉದ್ಘಾಟನೆ ಮಾಡಿಸಿರುವುದು ಸಮ್ಮೇಳನದ ಸಾಂಸ್ಕೃತಿಕ ವೈಚಾರಿಕತೆಗೆ ಕೈಗನ್ನಡಿಯಾಗಿತ್ತು. ಈ ಸಮ್ಮೇಳನ ಬೆಳಗಾವಿಯ ಗಡಿ ಭಾಗದಲ್ಲಿ ಭಾಷಾಮಿತಿಯನ್ನು ಮೀರಿ 'ದಲಿತ' ಎಂಬುದು 'ಮನುಷ್ಯತ್ವದ ಸಂಸ್ಕೃತಿ' ಅನ್ನುವುದನ್ನು ಸಾಬೀತುಪಡಿಸಿದೆ.

"ದಲಿತ ಸಾಹಿತ್ಯದಲ್ಲಿ ಧರ್ಮ, ಜಾತಿ ಪರಂಪರೆಗಳು ಸಣ್ಣದಾಗಿದ್ದು, ಇಲ್ಲಿ ಮನುಷ್ಯನೇ ಮುಖ್ಯವಾಗುತ್ತಾನೆ. ಜಾಗತೀಕರಣ ಹಾಗೂ ಉದಾರೀಕರಣದಿಂದಾಗಿ ಮನುಷ್ಯ ಮತ್ತು ಯಂತ್ರದ ನಡುವಿನ ಕಲಹಕ್ಕೆ ಕಾರಣವಾಗಿದೆ. ಮನುಷ್ಯನಿಗೆ ಸಾಥ್ ನೀಡಬೇಕಾಗಿದೆ. ಇಂದು ಸ್ಪರ್ಧೆಯು ಮುಕ್ತವಾಗಿದ್ದರೂ, ಕೆಲವು ಇತಿಮಿತಿಗಳಿಂದ ಎದುರಿಸಲು ಸಾಧ್ಯವಾಗುತ್ತಿಲ್ಲ, ಇಂಥ ಸಂದರ್ಭದಲ್ಲಿ ದಲಿತ ಸಾಹಿತ್ಯವು ಜನರಿಗೆ ಮಾರ್ಗದರ್ಶನ ಮಾಡುತ್ತದೆ. ನಾವು ಇತಿಹಾಸ, ಮೂಲ ಹಾಗೂ ಸಿದ್ಧಾಂತವನ್ನು ಅರಿತುಕೊಂಡು ಭವಿಷ್ಯವನ್ನು ರೂಪಿಸಿಕೊಳ್ಳಬೇಕು" ಎಂದು ಸಮ್ಮೇಳನವನ್ನು ಉದ್ಘಾಟಿಸಿ ದಲಿತ ಸಂವೇದನೆಗಳಿಗೆ ಸ್ಪರ್ಶ ನೀಡಿದ ಉತ್ತಮ ಕಾಂಬಳೆ ದಲಿತ್ವದ ನೆಲೆಯಲ್ಲಿಯೇ ಮನುಷ್ಯ ಸಮಾಜವನ್ನು ಕಟ್ಟಲು ಸಾಧ್ಯವಿರುವ ಏಕೈಕ ಮಾರ್ಗವನ್ನು ಸೂಚಿಸಿದರು. ಇದನ್ನು ಕತೆಗಳ ನಿರ್ದೇಶನಗಳ ಮೂಲಕ ತಿಳಿಯಪಡಿಸಿದ ಕಾಂಬಳೆ ಅವರ ವಿಚಾರಗಳು ಗ್ರಾಮೀಣ ಪ್ರದೇಶದಿಂದ ಬಂದ ದಲಿತ ಮತ್ತು ದಲಿತೇತರ ಬಂಧುಗಳ ಮನಪ್ರವೇಶ ಮಾಡುವಲ್ಲಿ ಯಶಸ್ಸು ಸಾಧಿಸಿತು.

ಆದರೆ, ಉತ್ತಮ ಕಾಂಬಳೆ ಅವರು ಕನ್ನಡ ಮತ್ತು ಮರಾಠಿ ಎರಡೂ ಭಾಷೆಯಲ್ಲಿ ಮಾತನಾಡುವುದಾಗಿ ಪ್ರಾರಂಭದಲ್ಲಿ ಸೂಚನೆ ನೀಡಿದರೂ ಹೆಚ್ಚಾಗಿ ಮರಾಠಿ ಭಾಷೆಯಲ್ಲಿಯೇ ಮಾತನಾಡಿದ್ದರಿಂದ ಮರಾಠಿ ತಿಳಿಯದ ಸಮ್ಮೇಳನದಲ್ಲಿಯ ಒಂದು ಭಾಗದ ಮಂದಿ ಪ್ರತಿಕ್ರಿಯೆ ತೋರಿಸದ್ದನ್ನು ಸಮಾರೋಪ ಭಾಷಣದ ಸಂದರ್ಭದಲ್ಲಿ ಚಂಪಾ ಅವರು ನೆನಪಿಸಿಕೊಂಡರು. "ಕಾಂಬಳೆ ಅವರು ವೇದಿಕೆಯ ಹೊರಗಡೆ ನನ್ನೊಂದಿಗೆ ಸರಳವಾಗಿ ಮತ್ತು ಸ್ಪಷ್ಟವಾಗಿ ಕನ್ನಡದಲ್ಲಿ ಮಾತನಾಡಿದ್ದಾರೆ. ಅವರ ಭಾಷಣವೂ ಒಂದಿಷ್ಟು ಕನ್ನಡದಲ್ಲಿ ಇರಬೇಕಾಗಿತ್ತು" ಎಂದು ಚಂಪಾ ಅವರು ಕುಟುಕಿದಾಗ ಕನ್ನಡ ನೆಲದಲ್ಲಿ ಜನಿಸಿ, ಮಹಾರಾಷ್ಟ್ರದ ನೆಲದಲ್ಲಿ ಬೆಳೆದ ಉತ್ತಮ ಕಾಂಬಳೆ ಅವರು ದಲಿತ ಸಂಸ್ಕೃತಿಯನ್ನು ವ್ಯಾಖ್ಯಾನಿಸುವಾಗ ಭಾಷಾಮಿತಿಯನ್ನು ದಾಟದೇ ಉಳಿದರೇನೋ ಎಂಬ ಅನುಮಾನ ಬಂದಿತು.

ಸಮ್ಮೇಳನದ ಸರ್ವಾಧ್ಯಕ್ಷರಾದ ಡಾ. ಚೆನ್ನಣ್ಣ ವಾಲೀಕಾರ ಅವರು, ತಮ್ಮ ಬದುಕಿನ ಉದ್ದಕ್ಕೂ ಶೋಷಣೆಯ ವಿರುದ್ಧ ಧ್ವನಿ ಎತ್ತಿದ ಘಟನಾವಳಿಗಳನ್ನು ತೆರೆದಿಡುತ್ತ, ದಲಿತ ಸಂಘರ್ಷ ಸಮಿತಿ ಸಂಚಾಲಕರಾಗಿದ್ದ ದೇವನೂರು ಮಹಾದೇವ ಅವರು ಕೆಲವು ಯುವಕರು ಲೆಕ್ಕ ಕೇಳಿ ಗಲಾಟೆ ಮಾಡಿದರೆಂದು ಸಂಘಟನೆಯಿಂದ ವಿಮುಖರಾಗಿ ಮನೆಯಲ್ಲೇ ಕುಳಿತುಕೊಂಡರು. ಇದರ ಪರಿಣಾಮವೇ ಇಂದು ದಲಿತ ಸಂಘರ್ಷ ಸಮಿತಿಯ ಸಂಚಾಲಕರು ಸ್ವಾರ್ಥಿಗಳಾಗುವಂತಾಗಿದೆ. ಸುಮಾರು 30ಕ್ಕೂ ಹೆಚ್ಚು ದಲಿತ ಸಂಘಟನೆಗಳಾಗಿ ಒಡೆದುಹೋಗಿವೆ ಎಂದು ಬೇಸರ ವ್ಯಕ್ತಪಡಿಸಿದರು. ಯಾವುದೇ ಸಂಬಂಧ, ಮೋಹಕ್ಕೆ ಒಳಗಾಗದೇ ನಾವು ಅಂಬೇಡ್ಕರ್ ಸಿದ್ಧಾಂತವನ್ನು ಅನುಷ್ಠಾನಗೊಳಿಸಲು ಸದಾ ಹೋರಾಟ ಮಾಡಬೇಕು ಎಂದು ತಮ್ಮದೇ ಆದ ಮಾತಿನ ಶೈಲಿಯಲ್ಲಿ ದಲಿತಪರ ಮುಖವಾಡಗಳನ್ನು ಬಿಚ್ಚುತ್ತಿದ್ದಂತೆ ದಲಿತ ಸಂಘರ್ಷ ಸಮಿತಿ ನಾಯಕರುಗಳಿಗೆ ಇರುಸುಮುರುಸು ಆಗಿದ್ದನ್ನು ಸಮ್ಮಾನ ಸಮಾರಂಭದಲ್ಲಿ ದಲಿತ ಚೇತನ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಮಾವಳ್ಳಿ ಶಂಕರ್ ಅವರ ಮಾತಿನ ಶೈಲಿಯಲ್ಲಿ ಪ್ರಕಟಗೊಂಡಿತು. ಆದರೆ, ಇದಾವುದಕ್ಕೂ ಜಗ್ಗುವುದಿಲ್ಲ ಎನ್ನುವಂತೆ ಕವಿಗೋಷ್ಠಿ ಸಂದರ್ಭದಲ್ಲಿ ಚೆನ್ನಣ್ಣ ಅವರು ಮತ್ತೊಮ್ಮೆ ಮಾತಿನ ಬಾಣಗಳನ್ನು ಬೀಸಿದರು. ಆದರೆ, ಡಾ. ಚೆನ್ನಣ್ಣ ವಾಲೀಕಾರ ಅವರು ತಮ್ಮ ಹೋರಾಟಮಯ ಬದುಕಿನ ಘಟನಾವಳಿಗಳನ್ನು ವಿವರಿಸುವಲ್ಲಿಯೇ ಸಮಯ ಕಳೆದರೇ ಹೊರತು ಜನ ನಿರೀಕ್ಷಿಸಿದಂತೆ ಸಮಕಾಲೀನ ಸನ್ನಿವೇಶವನ್ನು ಲಕ್ಷಿಸಿ ಸಮ್ಮೇಳನವನ್ನು ಸರಿಯಾಗಿ ಸದುಪಯೋಗಪಡಿಸಿಕೊಳ್ಳಲು ಅವರಿಂದ ಸಾಧ್ಯವಾಗಲಿಲ್ಲ.

ಉತ್ತಮ ಕಾಂಬಳೆ ಅವರು ಅಡಕೋಲಜ್ಜ ಕತೆಗಳನ್ನು ಹೇಳುವುದರಲ್ಲಿ ದೀರ್ಘವಾದ ಕಾಲಹರಣ ಮಾಡಿದ್ದಕ್ಕಾಗಿ ವೇದಿಕೆಯ ಮೇಲೆ ಭಾಷಣಕ್ಕಾಗಿ ಕಾಯುತ್ತ ಕುಳಿತ ಚುನಾವಣೆಯ ಗುಂಗಿನಲ್ಲಿದ್ದ ಬೆಳಗಾವಿ ಜಿಲ್ಲೆಯ ಜನಪ್ರತಿನಿಧಿಗಳಿಗೆ ಮಾತನಾಡಲು ಅವಕಾಶ ಸಿಗದೇ ಇರುವುದು ಆಭಾಸಕ್ಕೆ ಕಾರಣವಾಯಿತಾದರೂ ದಲಿತ ಸಮುದಾಯದೊಂದಿಗೆ ಮಾನವೀಯ ಸಂಬಂಧ ಹೊಂದಿರುವ ಸಂಸದ ಸುರೇಶ ಅಂಗಡಿ ಅವರು, ಬೆಳಗಾವಿಯಲ್ಲಿ ಅಂಬೇಡ್ಕರ್ ಭವನವನ್ನು ರಚಿಸುವಲ್ಲಿ ತಮ್ಮ ಹಿರಿದಾದ ಪಾತ್ರವನ್ನು ಸ್ಮರಿಸಿಕೊಂಡರು. ಆದರೆ, ಮೊದಲಿನಿಂದ ದಲಿತ ಸಾಹಿತ್ಯ ಸಮ್ಮೇಳನಕ್ಕೆ ಸರಿಯಾಗಿ ಸ್ಪಂದಿಸದ ಬೆಳಗಾವಿ ಜಿಲ್ಲಾ ಉಸ್ತುವಾರಿ ಮಂತ್ರಿ ಉಮೇಶ ಕತ್ತಿ ಅವರು ಸಮ್ಮೇಳನದ ಸ್ವಾಗತ ಸಮಿತಿಯ ಗೌರವಾಧ್ಯಕ್ಷತೆಯ ಗೌರವವನ್ನು ಪಡೆದುಕೊಂಡಿದ್ದರೂ ಯಾವ ಸೂಚನೆಯನ್ನೂ ನೀಡದೆ ಸಮ್ಮೇಳನಕ್ಕೆ ಗೈರು ಹಾಜರಾತಿ ಇರುವುದರ ಮೂಲಕ ದಲಿತರ ಬಗ್ಗೆ ಅವರಿಗಿರುವ ನಿಷ್ಕಾಳಜಿಯನ್ನು ಸ್ಪಷ್ಟವಾಗಿ ಸ್ವತಃ ಸಾಬೀತುಪಡಿಸಿದರು. ಇದಕ್ಕೂ ಮೊದಲು ಪರಿಷತ್ತಿನ ಧ್ವಜಾರೋಹಣ ಮಾಡಿದ ಬೆಳಗಾವಿ ಉತ್ತರ ಕ್ಷೇತ್ರದ ಶಾಸಕ ಫಿರೋಜ್ ಶೇಠ ಅವರು, ದಲಿತರ ಸಾಮಾಜಿಕ ಮಾನ್ಯತೆಗೆ ಆರ್ಥಿಕ ಅಭಿವೃದ್ಧಿಯೇ ಸೂಕ್ತ ಮಾರ್ಗ ಎಂಬುದನ್ನು ಸೂಚಿಸಿ, ಇಂಥ ಸಾಹಿತ್ಯ ಕಾರ್ಯಕ್ರಮಗಳಿಂದ ಏನೂ ಸಾಧಿಸಲು ಸಾಧ್ಯವಿಲ್ಲ ಎನ್ನುವುದನ್ನು ಪರೋಕ್ಷವಾಗಿಸಿ ತಿಳಿಸಿ, ತಮ್ಮಲ್ಲಿರುವ ಸಾಂಸ್ಕೃತಿಕ ಗೈರು ಹಾಜರಾತಿಯನ್ನು ತೋರ್ಪಡಿಸಿದರು.

ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಸಮ್ಮೇಳನದ ನಿಕಟಪೂರ್ವ ಅಧ್ಯಕ್ಷರಾದ ಡಾ. ಮೂಡ್ನಾಕೂಡು ಚಿನ್ನಸ್ವಾಮಿ ಅವರು ಉಪಸ್ಥಿತರಿದ್ದರು. "ದಲಿತರ ನೋವು ಹಾಗೂ ಹೋರಾಟ ಉಳಿದವರಿಗೆ ಸಮಷ್ಟಿಯಾಗಿ ಕಾಣುತ್ತಿಲ್ಲ. ದಲಿತರನ್ನೇ ದಲಿತರ ಹೋರಾಟವನ್ನು ಹತ್ತಿಕ್ಕಲು ಬಳಸಿಕೊಳ್ಳಲಾಗುತ್ತಿದೆ. ಇತ್ತೀಚೆಗೆ ನಡೆದ ಮಡೆ ಸ್ನಾನ ಪದ್ಧತಿಯೇ ಇದಕ್ಕೆ ಉತ್ತಮ ನಿದರ್ಶನವಾಗಿದೆ. ಹೀಗಾಗಿ ಮೌಢ್ಯ, ಜಾತೀಯತೆ, ಅಸ್ಪೃಶ್ಯತೆಯಂತಹ ಬ್ರಾಹ್ಮಣ್ಯದ ವಿರುದ್ಧ ಹೋರಾಟ ಅಗತ್ಯವಾಗಿದೆ. ಇಂಥ ಮೌಢ್ಯದಿಂದ ದಲಿತರ ಬಿಡುಗಡೆಗೆ ಬೌದ್ಧಧರ್ಮ ಸ್ವೀಕರಣೆ ಏಕೈಕ ಮಾರ್ಗ" ಎಂದು ಡಾ. ಚಿನ್ನಸ್ವಾಮಿ ಅವರು ತೋಡಿಕೊಂಡ ಚಿಂತನೆ, ಶೋಷಣೆಯ ಹೊಸ ತಂತ್ರಗಳನ್ನು ಸೂಕ್ಷ್ಮವಾಗಿ ಬಿಡಿಸಿಡುವುದರ ಮೂಲಕ ಸಮ್ಮೇಳನಕ್ಕೆ ಗಾಂಭೀರತೆಯ ಸ್ಪರ್ಶ ನೀಡಿದರು.

ಉದ್ಘಾಟನಾ ಸಮಾರಂಭದಲ್ಲಿ ಹರಿದುಬಂದ ವಿಚಾರಗಳ ಹಿನ್ನೆಲೆಯಲ್ಲಿಯೇ ವಿವಿಧ ಗೋಷ್ಠಿಗಳಲ್ಲಿ ದಲಿತ ಸಂವೇದನೆಯ ತಾತ್ವಿಕ ನೆಲೆಯಲ್ಲಿ ಅಭಿವ್ಯಕ್ತಗೊಂಡವು. 'ತಾಯ್ತನ, ಸಾಚಾತನ, ದಟ್ಟ ಅನುಭವದಿಂದ ಬಂದ ದಲಿತ ಸಾಹಿತ್ಯ ಮಾನವ ಸಂವೇದನೆಗಳಾಗಿ ರೂಪುಗೊಳ್ಳುವ ಶಕ್ತಿಯಿದ್ದು, ಜಗತ್ತಿಗೆ ಹೊಸ ಸಂವೇದನೆ ಕಟ್ಟಿಕೊಡುವ ಶಕ್ತಿಯೂ ಇದಕ್ಕಿದೆ" ಎಂದು ದಲಿತ ಸಂವೇದನೆಗಳು ವಿಷಯ ಕುರಿತಾದ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಡಾ. ಎಂ.ಎಸ್. ಶೇಖರ್ ಅವರು ಹೇಳಿದರು. ಆ ಮಾತುಗಳ ಹಿನ್ನೆಲೆಯಲ್ಲಿಯೇ ಕಾವ್ಯದಲ್ಲಿ ದಲಿತ ಸಂವೇದನೆಗಳನ್ನು ಹುಡುಕಾಡಿ ತಿಣುಕಾಡಿದ ಡಾ. ಎಸ್. ನರೇಂದ್ರಕುಮಾರ ಅವರು, ಕಾದಂಬರಿ ಮತ್ತು ನಾಟಕಗಳಲ್ಲಿ ದಲಿತ ಸಂವೇದನೆಯ ಸ್ಪರ್ಶ ಕಾಣಲು ಹೋದ ಶುಭಾದಾಸ ಮರವಂತೆ ಅವರು ವಿಷಯ ವ್ಯಾಪ್ತಿ ತೆಕ್ಕೆಗೆ ಸಿಗದೆ ಚಡಪಡಿಸಿದ್ದುಂಟು. ಶೇಖರ ಅವರು ಅದನ್ನು ಸರಿದೂಗಿಸಲು ಪ್ರಯತ್ನಿಸಿದರು. ದಲಿತ ವಿದ್ಯಾರ್ಥಿಗಳ ಶಿಕ್ಷಣ ಹಾಗೂ ಉದ್ಯೋಗ ವಿಷಯ ಕುರಿತು ಮಾತನಾಡಿದ ಡಾ. ರಾಜಪ್ಪ ದಳವಾಯಿ 70 ದಶಕದಲ್ಲಿ ಹಾಸ್ಟೆಲ್‌ಗಳಲ್ಲಿ ಹುಟ್ಟಿದ ಚಳವಳಿಯ ಬೇರುಗಳನ್ನು ಕಂಡುಕೊಂಡರು. ಬುಡಕಟ್ಟು ಸಮುದಾಯಗಳ ಬದುಕಿನ ಸವಾಲುಗಳು ಕುರಿತು ಮಾತನಾಡಬೇಕಾದ ಡಾ. ಎ.ಎಸ್. ಪ್ರಭಾಕರ ಅವರ ಗೈರುಹಾಜರಾತಿಯಿಂದಾಗಿ ಗೋಷ್ಠಿಯ ಗಂಭೀರತೆ ಇಲ್ಲದಾಯಿತು. ಅದನ್ನು ಯಲ್ಲಪ್ಪ ಹಿಮ್ಮಡಿ ಅವರು ಒಂದಿಷ್ಟು ಸರಿದೂಗಿಸಲು ಪ್ರಯತ್ನಿಸಿದರಾದರೂ ಸದಾಶಿವ ಆಯೋಗದ ವಿಷಯವನ್ನು ಎಳೆದುತರುವುದರ ಮೂಲಕ ಎಸ್‌ಸಿ ಎಸ್‌ಟಿ ಜನರನ್ನು ಎಳೆದಾಡಿದ್ದು ಒಂದಿಷ್ಟು ಇರುಸುಮುರಿಸಿಗೆ ಕಾರಣವಾಯಿತು. ದಲಿತ ಮಹಿಳಾ

11<<< ಕೃಷ್ಣ ಪ್ರತ್ಯಕ್ಷ

ಸಂತೃಪ್ತಿಗೊಳಿಸಲು ಜಾಫರ್ ಷರೀಫ್ ಅವರನ್ನು ಸದ್ಯದಲ್ಲೇ ಯಾವುದಾದರೊಂದು ರಾಜ್ಯಕ್ಕೆ ರಾಜ್ಯಪಾಲರನ್ನಾಗಿ ನೇಮಿಸಬೇಕು.

ಪರಮೇಶ್ವರ್ ಏಕಾಂಗಿ

ಹೀಗೆ ಕಾಂಗ್ರೆಸ್‌ನಲ್ಲಿ ಜಾತಿ ಲೆಕ್ಕಾಚಾರಗಳು ನಡೆಯುತ್ತಿರುವಾಗ ಹಾಲಿ ರಾಜ್ಯಾಧ್ಯಕ್ಷ ಪರಮೇಶ್ವರ್ ಏಕಾಂಗಿಯಾಗುತ್ತಿದ್ದಾರೆ. ವಾಸ್ತವವಾಗಿ ಇವರು ಈ ಹಿಂದೆ ಕೃಷ್ಣರವರ ಕಟ್ಟಾ ಅನುಯಾಯಿ ಆಗಿದ್ದರು. ಜಾತಿ ಬಲವಾಗಲಿ ವೈಯಕ್ತಿಕ ಚಾರಿಸ್ಮಾವಾಗಲಿ ಇಲ್ಲದಿರುವ ಪರಮೇಶ್ವರ್ ಅವರನ್ನು ರಾಜ್ಯಾಧ್ಯಕ್ಷರನ್ನಾಗಿ ಮಾಡುವಲ್ಲಿ ಕೃಷ್ಣರ ಕೈವಾಡವೂ ಇತ್ತು, ತಾನು ಯಾವುದೇ ಸಂದರ್ಭದಲ್ಲಿ ರಾಜ್ಯ ರಾಜಕೀಯಕ್ಕೆ ಮರಳಿಬಂದರೆ ಅಧ್ಯಕ್ಷ ಸ್ಥಾನವನ್ನು ತನಗೆ ಪರಮೇಶ್ವರ್ ಬಿಟ್ಟುಕೊಡಬಹುದು, ಜೊತೆಗೆ ತನ್ನ ಹಿಂಬಾಲಕನೊಬ್ಬ ರಾಜ್ಯಾಧ್ಯಕ್ಷನಾಗಿದ್ದರೆ ತಾನು ಪರೋಕ್ಷವಾಗಿ ರಾಜ್ಯ ಕಾಂಗ್ರೆಸ್ ಅನ್ನು ತನ್ನ ಮುಷ್ಟಿಯಲ್ಲೇ ಇಟ್ಟುಕೊಳ್ಳಬಹುದು ಎಂಬುದು ಕೃಷ್ಣರ ದುರಾಲೋಚನೆಯಾಗಿತ್ತು. ಈ ಕಾರಣಕ್ಕಾಗಿಯೇ ಪರಮೇಶ್ವರ್ ತಮ್ಮ ಹುದ್ದೆಯಿಂದ ಕೆಳಗಿಳಿಯಬೇಕೆಂದು ಕೆಲವು ಬಾರಿ ಕೂಗು ಕೇಳಿಬಂದಾಗ ಕೃಷ್ಣರು ಪರಮೇಶ್ವರ್ ಅವರ ಬೆನ್ನಿಗೆ ನಿಂತಿದ್ದರು.

ಆದರೀಗ ಪರಮೇಶ್ವರ್ ಬದಲಾಗಿದ್ದಾರೆ. ಅವರು ತಮ್ಮ ಸ್ಥಾನವನ್ನು ಕೃಷ್ಣರಿಗೆ ಬಿಟ್ಟುಕೊಡುವ ಬಗ್ಗೆ ತುಟಿಪಿಟಿಕ್ ಎಂದಿಲ್ಲ, ಅಷ್ಟೇ ಅಲ್ಲ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಕೃಷ್ಣ ಬೆಂಗಳೂರಿಗೆ ವಾಪಾಸ್ ಬಂದಾಗ ಅವರನ್ನು ಸ್ವಾಗತಿಸಲು ಪರಮೇಶ್ವರ್ ವಿಮಾನ ನಿಲ್ದಾಣಕ್ಕೂ ಹೋಗಲಿಲ್ಲ.

ಈಗ ಕೃಷ್ಣರ ಗುಂಪಿನಿಂದ ದೂರ ಉಳಿದಿರುವ ಪರಮೇಶ್ವರ್ ಕೃಷ್ಣ ವಿರೋಧಿ ಗುಂಪುಗಳಿಂದಲೂ ದೂರವಾಗಿದ್ದಾರೆ. ಅದಕ್ಕೆ ಕಾರಣ ಪರಮೇಶ್ವರ್ ಅತ್ಯುತ್ಸಾಹದಲ್ಲಿ ಎರಡು-ಮೂರು ಬಾರಿ ಶಾಮನೂರು ಶಿವಶಂಕರಪ್ಪ ಮತ್ತು ಖರ್ಗೆ ಬಗ್ಗೆ ಹಗುರವಾಗಿ ಮಾತನಾಡಿದ್ದು. ಒಮ್ಮೆ ಖರ್ಗೆಯವರನ್ನು ಪರಮೇಶ್ವರ್ ಪರೋಕ್ಷವಾಗಿ ಕೆಣಕಿದ್ದು ಹೀಗೆ: "ಕಚ್ಚೆಕಟ್ಟಿ ಓಡಾಡಿದವರೆಲ್ಲ ಕಾಂಗ್ರೆಸ್‌ನಲ್ಲಿ ನಾಯಕರಾಗಲು ಸಾಧ್ಯವಿಲ್ಲ," ಇದು ಸಹಜವಾಗಿಯೇ ಖರ್ಗೆ, ಅಭಿಮಾನಿಗಳನ್ನು ಕೆರಳಿಸಿತ್ತು.

ಇನ್ನೊಮ್ಮೆ ಶಾಮನೂರು ಶಿವಶಂಕರಪ್ಪ ಲಿಂಗಾಯತ ಶಾಸಕರನ್ನೆಲ್ಲ ಕರೆದುಕೊಂಡು ದೆಹಲಿಗೆ ಹೋಗಿ ತಮ್ಮ ಸಮುದಾಯಕ್ಕೆ ರಾಜ್ಯಾಧ್ಯಕ್ಷ ಸ್ಥಾನ ಕೊಡಬೇಕೆಂದು ಹೈಕಮಾಂಡ್ ಮುಂದೆ ಮನವಿ ಸಲ್ಲಿಸಿದಾಗ ಪರಮೇಶ್ವರ್ ಪ್ರತಿಕ್ರಿಯಿಸಿದ್ದು ಹೀಗೆ: "ನೀವೇ ಎದ್ದು ನಿಂತರೆ, ನಾವು ಸುಮ್ಮನಿರೋಲ್ಲ, ನಾವು ಕೂಡ ಎದ್ದು ಮುನ್ನುಗ್ಗಬೇಕಾಗುತ್ತದೆ."

ಹೀಗೆ ಒಂದೆಡೆ ಹಿಂದುಳಿದ ಸಮುದಾಯದವರು, ಇನ್ನೊಂದಿಗೆ ಬಲಿಷ್ಠ ಲಿಂಗಾಯತ ಜಾತಿ, ಮತ್ತೊಂದೆಡೆ ತಮ್ಮ ರಾಜಕೀಯ ಗುರು ಕೃಷ್ಣರಿಗೇ ಟಾಂಗು ಕೊಟ್ಟಿದ್ದು.

ಇದೆಲ್ಲದರ ಪರಿಣಾಮವಾಗಿ ಪರಮೇಶ್ವರ್ ಇವತ್ತು ಕಾಂಗ್ರೆಸ್‌ನಲ್ಲಿ ಏಕಾಂಗಿಯಾಗಿದ್ದಾರೆ.

ಸಿದ್ದುಗೆ ಯಾವ ಪಾತ್ರ?

ಇದೆಲ್ಲದರ ಮಧ್ಯೆ ಜನತಾದಳದಿಂದ ಕಾಂಗ್ರೆಸ್‌ಗೆ ವಲಸೆ ಬಂದಿರುವ ಸಿದ್ದರಾಮಯ್ಯನವರನ್ನು ಪಕ್ಷ ಹೇಗೆ ಬಳಸಿಕೊಳ್ಳುತ್ತದೆ ಎಂಬುದರ ಬಗ್ಗೆಯೂ ಕುತೂಹಲವಿದೆ. "ನಮ್ಮ ಪಕ್ಷದಿಂದ ಹಿಂದುಳಿದ ಸಮುದಾಯಗಳ ನಾಯಕರಾದ ದೇವರಾಜ್ ಅರಸು, ವೀರಪ್ಪ ಮೊಯ್ಲಿ, ಬಂಗಾರಪ್ಪ ಮೊದಲಾದವರೆಲ್ಲ ಮುಖ್ಯಮಂತ್ರಿಯಾಗಿದ್ದಾರೆ; ನೀವು ಜನತಾ ದಳದಲ್ಲಿದ್ದರೆ ಮುಖ್ಯಮಂತ್ರಿಯಾಗಲು ಸಾಧ್ಯವೇ ಇಲ್ಲ" ಎಂದೆಲ್ಲ ಸಿದ್ದರಾಮಯ್ಯನವರನ್ನು ಪುಸಲಾಯಿಸಿದ್ದ ಕಾಂಗ್ರೆಸ್ ನಾಯಕರು ಅವರನ್ನು ಪಕ್ಷಕ್ಕೆ ಸೇರಿಸಿಕೊಂಡಿದ್ದರು. ಆದರೀಗ ಅವರ ಬದ್ಧತೆಯನ್ನಾಗಲಿ, ಪ್ರಾಮಾಣಿಕತೆಯನ್ನಾಗಲಿ, ಜನಪ್ರಿಯತೆಯನ್ನಾಗಲಿ ಸರಿಯಾಗಿ ಉಪಯೋಗಿಸಿಕೊಳ್ಳದೆ ಅವರನ್ನು ಮೂಲೆಗುಂಪು ಮಾಡುವಲ್ಲಿ ಅದೇ ಕಾಂಗ್ರೆಸ್ ನಾಯಕರು ಬ್ಯುಸಿ ಆಗಿದ್ದಾರೆ.

ಇನ್ನು ಕೆಲವೇ ದಿನಗಳಲ್ಲಿ ಕಾಂಗ್ರೆಸ್ ನಾಯಕರ ಈ ಒಳಜಗಳಕ್ಕೆ ಹೈಕಮಾಂಡ್ ಸಂಪೂರ್ಣವಾಗಿ ತೆರೆ ಎಳೆಯುವ ಸಾಧ್ಯತೆಯಿದೆ. ಸಿದ್ದರಾಮಯ್ಯ ಮತ್ತು ಪರಮೇಶ್ವರ್ ಅವರನ್ನು ದೆಹಲಿಗೆ ಕರೆಸಿ ಈಗಾಗಲೇ ಒಂದು ಸುತ್ತಿನ ಮಾತುಕತೆಯನ್ನು ಹೈಕಮಾಂಡ್ ಮುಗಿಸಿದೆ. ಎಷ್ಟು ಬೇಗ ಹೈಕಮಾಂಡ್ ಇಲ್ಲಿಯ ನಾಯಕರ ನಡುವಿನ ಒಳಜಗಳವನ್ನು ಪರಿಹರಿಸುತ್ತದೋ ಅಷ್ಟೇ ಲಾಭ ಕಾಂಗ್ರೆಗೆ ಆಗಲಿದೆ ಎಂಬುದಂತೂ ನಿಜ.

• ಶೆಣೈ

...ೀಕದ ಸವಾಲುಗಳನ್ನು ಎದುರಿಸಲು ಮುಂದಾದ ಡಾ. ...ಣಾಮ್ಮ ಗೋರೆಬಾಳ ಅವರ ವಿಚಾರಗಳು ಪ್ರಸ್ತುತ ...ದರ್ಭದ ವಾಸ್ತವದ ಕೊರತೆ ಅನುಭವಿಸಿತು. ...ಗೋಷ್ಠಿಯೊಳಗಿನ ಕಾವ್ಯದ ಹರಿವು, ಕವಿತೆಗಳ ಭಾವಗಳಿಗೆ ...ಬರೆದು ಕಲಾವಿದರು ಬಣ್ಣ ತುಂಬಿದ್ದು, ಪ್ರಸ್ತುತ ...ದರ್ಭದಲ್ಲಿ ಬುದ್ಧ-ಬಸವ-ಅಂಬೇಡ್ಕರರ ಸಮನ್ವಯತೆ ...ಸಿರುವ ಉದ್ದೇಶವಾಗಿತ್ತು. ಈ ಉದ್ದೇಶ ಸಮ್ಮೇಳನದ ...ರ್ವಾಧ್ಯಕ್ಷರ ಸಂವಾದದಲ್ಲಿಯೂ ಪ್ರಸ್ತಾಪವಾಯಿತು. ಈ ...ಲ್ಲದರ ಪೂರಣ ಎನ್ನುವ ಹಾಗೆ ದಲಿತ ಸಮುದಾಯದ ...ನ್ಯಾಯ ರಾಜಕಾರಣ ವಿಷಯ ಕುರಿತು ಮಾತನಾಡಿದ ... ಸಿದ್ಧನಗೌಡ ಪಾಟೀಲ ಅವರು ದಲಿತ ಚಳವಳಿ, ...ತ ಚಳವಳಿ, ಕಾರ್ಮಿಕ ಚಳವಳಿ, ಮಹಿಳಾ ಚಳವಳಿ ...ಬದಲಾದ ಚಳವಳಿ ಮೂಲಕ ಒಟ್ಟು ಶಕ್ತಿಯ ರಾಜಕಾರಣ ...ಮುಖ್ಯವಾಹಿನಿಗೆ ಬರಬೇಕಾದ ತುರ್ತ ಅಗತ್ಯವಿದೆ ಎಂದು ...ಪ್ರತಿಪಾಯಿಸಿದ್ದು, ಪ್ರಸ್ತುತ ಸಂದರ್ಭದಲ್ಲಿ ಒಟ್ಟು ವ್ಯವಸ್ಥೆಯ ...ಮರುಸ್ಥಾಪನೆಯ ತುಡಿತ ಜನರ ಒಪ್ಪಿಗೆ ಪಡೆಯುವಲ್ಲಿ ...ಯಶಸ್ಸು ಸಾಧಿಸಿದರು. ಗೋಷ್ಠಿಗಳಲ್ಲಿ ವಿಷಯ ...ತಿಪಾದನೆಗೆ ಮುಂದಾದ ಅನೇಕ ವಿದ್ವಾಂಸರೊಳಗಿನ ...ಚಾರಿಕ ಹಾಗೂ ಸೈದ್ಧಾಂತಿಕ ಸ್ಪಷ್ಟ ತಿಳಿವಳಿಕೆಯ ಓದಿನ ...ಕೊರತೆಯೂ ಕಂಡುಬಂದದ್ದನ್ನು ತಳ್ಳಿಹಾಕುವಂತಿಲ್ಲ.

ಡಾ. ಸಿದ್ಧನಗೌಡ ಪಾಟೀಲ ವಿಚಾರಗಳಿಗೆ ಸ್ಪಷ್ಟ ಮತ್ತು ...ರವಾದ ಉತ್ತರ ಎನ್ನುವಂತೆ ಸಮ್ಮೇಳನದ ಸಂಪೂರ್ಣ ...ತೃತ್ವ ವಹಿಸಿದ್ದ ರಾಜಕಾರಣಿ ಸತೀಶ ಜಾರಕಿಹೊಳಿ ...ವರ ಪರಿಣಾಮಕಾರಿಯಾದ ಸ್ಪಷ್ಟವಾದ ವೈಚಾರಿಕ ...ಮಾತುಗಳು ಬಂಡಾಯದ ಚಂಪಾ ಸಹಿತ ...ಬೆರಗುಬಡಿಯುವಂತಾಯಿತು. ಬೆಳಗಾವಿ ದಲಿತ ...ಸಮ್ಮೇಳನದ ಮೂಲಕ ಹೋರಾಟ ಮೂಲದ ನಮ್ಮ ...ಚಿಂತಿಗಳಿಗೆ ನೀಡಲು ಸಾಧ್ಯವಾಗದ ಸಂದೇಶವನ್ನು ಒಬ್ಬ ...ರಾಜಕಾರಣಿಯಾಗಿ ಯಾವ ಮುಲಾಜಿಗೂ ಒಳಗಾಗದೆ ...ತೀಶ ಜಾರಕಿಹೊಳಿ ಅವರು ದಲಿತ ಸಂವೇದನೆಯ ...ತ್ವಿಕ ಸ್ಪಷ್ಟ ಸಂದೇಶವನ್ನು ಸರಳ ಹಾಗೂ ನೇರವಾದ ...ಮಾತುಗಳ ಮೂಲಕ ನೀಡಿ ಜನರ ಮೆಚ್ಚುಗೆ ಗಳಿಸುವಲ್ಲಿ ...ಯಶಸ್ವಿಯಾದರು. ಇದನ್ನು ಸಮಾರೋಪದಲ್ಲಿ ಸ್ವತಃ ಚಂಪಾ ...ದರೇ ಒಪ್ಪಿಕೊಂಡರು. ಜಾರಕಿಹೊಳಿ ಅವರ ಈ ಯಶಸ್ಸು ...ಳಿದ ರಾಜಕಾರಣಿಗಳಂತೆ ಗಿಮಿಕ್‌ನಿಂದ ಕೂಡಿರಲಿಲ್ಲ ...ಎಂಬುದನ್ನು ನಂಬಬೇಕಾಗುತ್ತದೆ.

ಬೆಳಗಾವಿ ಸಮ್ಮೇಳನದಲ್ಲಿ ಅಭಿವ್ಯಕ್ತಗೊಳ್ಳುವ ವಿಚಾರಗಳ ...ಅಪರೇಷೆ ಹಾಗೂ ಸಮ್ಮೇಳನ ನಡೆಯುವ ...ಅರ್ಥಪೂರ್ಣತೆಯ ಬಗ್ಗೆ ಮೊದಲಿನಿಂದಲೂ ವಿಶೇಷ ...ಮುತುವರ್ಜಿ ವಹಿಸುತ್ತ ಬಂದ ಸತೀಶ ಜಾರಕಿಹೊಳಿ ...ಅವರು, ಎರಡು ದಿನಗಳ ವರೆಗೆ ಸಮ್ಮೇಳನದಲ್ಲಿ ಕುಳಿತು ...ವಿಚಾರಗಳನ್ನು ಸೂಕ್ಷ್ಮವಾಗಿ ಗಮನಿಸಿರುವುದು ಅವರಿಗಿರುವ ...ದಲಿತಪರ ಕಾಳಜಿಯನ್ನು ತೋರ್ಪಡಿಸಿತು. "ಅಂಬೇಡ್ಕರ್ ...ಹೆಸರು ಹೇಳಿಕೊಂಡು ಸೌಲಭ್ಯಗಳನ್ನು ಪಡೆದಿರುವ ನಾವು ...ಸಮುದಾಯಕ್ಕೆ ಏನು ಕೊಡುಗೆ ನೀಡಿದ್ದೇವೆ ಎಂಬುದರ ...ಬಗ್ಗೆ ಚಿಂತನೆ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ದಲಿತ ...ಸಾಹಿತ್ಯ ಪರಿಷತ್ತು ಕಾರ್ಯನಿರ್ವಹಿಸಬೇಕಾಗಿದೆ. ದಲಿತ ...ಚಿಂತಿಗಳು ನೋವಿನಲ್ಲಿ ಸಾಹಿತ್ಯ ರಚಿಸುವ ಮೂಲಕ ...ಚಳವಳಿಯ ಹುಟ್ಟಿಗೆ ಕಾರಣವಾಗಿದ್ದಾರೆ. ಸರಕಾರ ಒಳ್ಳೆಯದು ...ಮಾಡಿದೆ ಎಂಬ ಕಲ್ಪನೆ ತಪ್ಪು, ಸರಕಾರದ ಇತಿಮಿತಿ ...ಗಳ ಕಡಿಮೆ. ಸರ್ಕಾರ ಸರ್ವ ಶ್ರೇಷ್ಠವಲ್ಲ, ಸರ್ಕಾರದ ...ನ್ಯಾಯ ನಾವೇರುವ ಮೆಟ್ಟಿಲಷ್ಟೆ ಆಗಿದೆ. ಎಲ್ಲ ಸರಕಾರಗಳು ...ಸರ್ಕಾರಿ ಯೋಜನೆಗಳಿಗೆ ನಮ್ಮನ್ನು ಕಟ್ಟಿಹಾಕಿ ...ಸೀಮಿತಗೊಳಿಸಿ ಕಟ್ಟಿಹಾಕಿವೆ. ಸರ್ಕಾರದ ನೀತಿಗಳನ್ನು ...ತಿಳಿಯುವ ಕೆಲಸವನ್ನು ಬುದ್ಧಿಜೀವಿಗಳು ಮಾಡಬೇಕು. ...ಅಲ್ಲದೆ, ದಲಿತರು ಬೇರೆ ಸಮುದಾಯವನ್ನು ...ಅವಲಂಬಿಸುವುದನ್ನು ಬಿಡಬೇಕು. ತಮ್ಮ ಬುದ್ಧಿಶಕ್ತಿಯನ್ನು ...ಉಪಯೋಗಿಸಿ ಸ್ವಂತ ಬಲದ ಮೇಲೆ ಜೀವನ ...ಸಾಧಿಸಬೇಕು" ಎಂದು ಸತೀಶ ಜಾರಕಿಹೊಳಿ ಅವರು ...ಳಿದ ದಲಿಪರ ಕಾಳಜಿ ಅವರ ಮುಂದಿನ ಸಾಧನೆ ...ಹೆಜ್ಜೆ ಗುರುತುಗಳನ್ನು ತೋರ್ಪಡಿಸುವುದರ ಜೊತೆಗೆ ...ಸಂಘಟನೆಗಳಿಗೆ ಮತ್ತು ದಲಿತ ಸಮುದಾಯದ ಬೌದ್ಧಿಕ ...ವಲಯಕ್ಕೆ ದೊಡ್ಡ ಸವಾಲು ಎಸೆದಿದ್ದಾರೆ. "ನಾನು ಒಬ್ಬ ...ರಾಜಕಾರಣಿಯಾಗಿ, ದಲಿತ ಮೂಲದವನಾಗಿ ಈ ...ನೆಲೆಯಲ್ಲಿಯೇ ದೃಢವಾದ ಹೆಜ್ಜೆ ಇಟ್ಟಿದ್ದೇನೆ. ಹಾಗೆಯೇ ...ಮುಂದೆ ಸಾಗುತ್ತೇನೆ. ನಾನಿಟ್ಟ ಹೆಜ್ಜೆ ಹಿಂತೆಗೆದಿಡುವುದಿಲ್ಲ" ...ಎಂದು ಘಂಟಾಘೋಷವಾಗಿ ಸತೀಶ ಜಾರಕಿಹೊಳಿ ...ಹೇಳಿಕೊಂಡದ್ದನ್ನು ಸುಲಭವಾಗಿ ತೆಗೆದುಹಾಕುವಂತಿಲ್ಲ.


ಬೆಳಗಾವಿಯ ಕುಮಾರ ಗಂಧರ್ವ ರಂಗಮಂದಿರದಲ್ಲಿ ...ಸೇರಿದ ಜನಸಮುದಾಯ, ಹೊರಗಡೆ ಆವರಣದಲ್ಲಿ ...ವೈಚಾರಿಕ ಪುಸ್ತಕಗಳನ್ನು ಖರೀದಿಸುವಲ್ಲಿ ತೋರಿದ ಆಸಕ್ತಿ ...ಬೆಳಗಾವಿ ನಗರ ಜಿಲ್ಲೆಯ ತಾಲೂಕ್ ಕೇಂದ್ರ ಮತ್ತು ...ಪ್ರಮುಖ ಪಟ್ಟಣಗಳ ಪ್ರಮುಖ ವೃತ್ತ ಮತ್ತು ಬೀದಿಗಳಲ್ಲಿ ...ಅಲಂಕರಿಸಿದ ಸ್ವಾಗತ ಕಮಾನುಗಳು ದಲಿತ ಸಾಹಿತ್ಯ ...ಸಮ್ಮೇಳನದ ವೈಭವ, ವಿಜೃಂಭಣೆ ಹಾಗೂ ಅರ್ಥಪೂರ್ಣತೆ ...ಯನ್ನು ಬಿಂಬಿಸಿದವು. ದಲಿತ ಸಾಹಿತ್ಯ ಸಮ್ಮೇಳನದ ...ಇತಿಹಾಸದಲ್ಲಿಯೇ ಬೆಳಗಾವಿಯಲ್ಲಿ ನಡೆದ ಸಮ್ಮೇಳನ ...ಅವಿಸ್ಮರಣೀಯ ಎಂದು ದಲಿತ ಸಾಹಿತ್ಯ ಪರಿಷತ್ತಿನ ...ಪದಾಧಿಕಾರಿಗಳೇ ಒಪ್ಪಿಕೊಳ್ಳುವುದರ ಮೂಲಕ ಮುಂದಿನ ...ಸಮ್ಮೇಳನಕ್ಕೆ ಸವಾಲಾಗಿದೆ ಎಂದಿದ್ದಾರೆ.

● ಡಾ.ಕೆ.ಎಸ್. ದೊಡ್ಡಮನಿ

ಮಡೆಸ್ನಾನ, ಪಂಕ್ತಿಭೇದ ವಿರುದ್ಧ ಉಡುಪಿಯಲ್ಲಿ ಸಿ.ಪಿ.ಎಂ. ಪ್ರತಿಭಟನೆ

ಪ್ರಜಾಪ್ರಭುತ್ವದ ಮೇಲೆ ಪೊಲೀಸರ ಲಾಠೀಚಾರ್ಜ್

ಕಳೆದ ವರ್ಷ 2012ರ ಡಿಸೆಂಬರ್ 27ರಂದು ಮಡೆಸ್ನಾನ ಮತ್ತು ಪಂಕ್ತಿಭೇದದ ಆಚರಣೆ ಪ್ರತಿಭಟಿಸಿ ಸಿ.ಪಿ.ಎಂ. ರಾಜ್ಯಮಟ್ಟದ ದೊಡ್ಡ ಕಾರ್ಯಕ್ರಮವೊಂದನ್ನು ಉಡುಪಿಯಲ್ಲಿ ನಡೆಸಿತು. ಕರಾವಳಿಯ ಎರಡು ತುದಿಗಳಾದ ಸುಬ್ರಹ್ಮಣ್ಯ ಮತ್ತು ಬೈಂದೂರುಗಳಿಂದ ಹೊರಟ ಕಾಲ್ನಡಿಗೆಯ ಎರಡು ಜಾಥಾಗಳು, ಈ ಅನಿಷ್ಟ ಆಚರಣೆಗಳ ವಿರುದ್ಧ ಅಲ್ಲಲ್ಲಿ ಸಭೆ ನಡೆಸಿ, ಉಡುಪಿಯಲ್ಲಿ ಬೃಹತ್ ಸಭೆ, ಮೆರವಣಿಗೆ ಮತ್ತು ಕೃಷ್ಣದೇವಾಲಯದ ಎದುರು ಪ್ರತಿಭಟನೆಯಲ್ಲಿ ಈ ಕಾರ್ಯಕ್ರಮ ಸಂಪನ್ನಗೊಳ್ಳಬೇಕಿತ್ತು. ಆದರೆ ಮೆರವಣಿಗೆ ದೇವಾಲಯದ ಸಮೀಪ ಬರುತ್ತಿದ್ದಂತೆಯೇ ಪೊಲೀಸರು ಲಾಠೀಚಾರ್ಜ್ ನಡೆಸಿ ಕಾರ್ಯಕ್ರಮವನ್ನು ಬರ್ಖಾಸ್ತುಗೊಳಿಸಿದರು.




'ಅನ್ಯಮತೀಯ'ರ ಮೇಲೆ ಗುಂಪುದಾಳಿ ನಡೆಸಿ ಹೊಡೆದು ಬಡಿದು ಕೇಕೆ ಹಾಕುವ ಹಿಂದೂತ್ವದ ಸಂಸ್ಕೃತಿ ಉಡುಪಿಗೆ ಹೊಸದೇನೂ ಅಲ್ಲ. ಆ ದೃಷ್ಟಿಯಿಂದ 2005ರ ಆದಿಉಡುಪಿ ಬೆತ್ತಲೆ ಪ್ರಕರಣ ಈ ಊರಿನಲ್ಲಿ ವಿಜೃಂಭಿಸುತ್ತಿರುವ ಸಂಸ್ಕೃತಿಗೆ ಒಂದು ಶಾಶ್ವತ ರೂಪಕವಾಗಿದೆ. ಅದರ ಇನ್ನೊಂದು ಬಗೆಯ ಪ್ರಸ್ತುತಿ ಮೊನ್ನೆ ಕೃಷ್ಣದೇವಾಲಯದ ಸಮೀಪವೇ ನಡೆದ ಲಾಠೀಚಾರ್ಜ್. ಆದಿಉಡುಪಿ ಪ್ರಕರಣದ ವೀರರು ಹಿಂದೂತ್ವದ ಕಾಲಾಳುಗಳಾದರೆ, ಸಿ.ಪಿ.ಎಂ ಮೆರವಣಿಗೆಯಲ್ಲಿ ಇದ್ದವರ ಮೇಲೆ ಮುಖಮೋರೆ ನೋಡದೆ ಹೊಡೆದವರು ಹಿಂದೂತ್ವದ ಏಜೆಂಟರಂತೆ ವರ್ತಿಸಿದ ಪೊಲೀಸರು.

ಹಿಂಸೆಯ ಈ ಪರಿಯೂ ಉಡುಪಿಗೆ ಹೊಸದೇನೂ ಅಲ್ಲ. ಈ ಬಾರಿ ಪೆಟ್ಟು ತಿಂದವರಲ್ಲಿ ಯಾರೂ 'ಅನ್ಯಮತೀಯ'ರಲ್ಲ ಎನ್ನುವುದೊಂದೇ ವ್ಯತ್ಯಾಸ. ಆದರೆ ಅವರೆಲ್ಲರೂ ಕಮ್ಯುನಿಸ್ಟರು ಮತ್ತು ಹಿಂದೂತ್ವದ ಗುರು ಗೋಲ್ವಾಲ್‌ಕರ್ ಪ್ರಕಾರ ಮುಸ್ಲಿಮರು ಮತ್ತು ಕ್ರೈಸ್ತರ ಜೊತೆಗೆ ಕಮ್ಯುನಿಸ್ಟರು ಸಹ ರಾಷ್ಟ್ರದ ಶತ್ರುಗಳು. ಮೊನ್ನೆ ಉಡುಪಿಯಲ್ಲಿ ಪೊಲೀಸರು ಜಾರಿಗೊಳಿಸಿದ್ದು ಗೋಲ್ವಾಲ್‌ಕರ್‌ನ ಅಜೆಂಡಾವನ್ನೇ ಹೊರತು ಭಾರತದ ಕಾನೂನನ್ನಲ್ಲ.

ಮಡೆಸ್ನಾನ ಮತ್ತು ಪಂಕ್ತಿಭೇದಗಳ ವಿರುದ್ಧ ಸಿ.ಪಿ.ಎಂ ನಡೆಸಿದ ಕಾರ್ಯಕ್ರಮ, ಇತ್ತೀಚೆಗಿನ ವರ್ಷಗಳಲ್ಲಿ ಆ ಪಕ್ಷ ಉಡುಪಿಯಲ್ಲಿ ನಡೆಸಿದ ಅತಿದೊಡ್ಡ ಕಾರ್ಯಕ್ರಮವಾಗಿತ್ತು. ರಾಜ್ಯದ ಮೂಲೆಮೂಲೆಗಳಿಂದ ಬಂದ ಜನ ಅದರಲ್ಲಿ ಭಾಗವಹಿಸಿದ್ದರಲ್ಲದೆ ದೊಡ್ಡ ಸಂಖ್ಯೆಯಲ್ಲಿ ಹೆಂಗಸರೂ ಸಹ ಹಾಜರಿದ್ದರು. ಕಾರ್ಯಕ್ರಮಕ್ಕೆ ಬಂದ ಹೆಚ್ಚಿನವರು ದುಡಿಯುವ ವರ್ಗದವರೇ ಆಗಿದ್ದರು. ಸುಮಾರು 3000ದಷ್ಟು ಜನ ಸೇರಿದ್ದ ಆ ಸಭೆಯಲ್ಲಿ ಎಲ್ಲರಿಗೂ ತಾವು ಯಾಕೆ ಅಲ್ಲಿದ್ದೇವೆ ಎಂಬುದು ಗೊತ್ತಿತ್ತು. ಅದು ಕಾಂಗ್ರೆಸ್, ಜೆ.ಡಿ.ಎಸ್ ಪಕ್ಷಗಳ ಜನಜಾತ್ರೆಯ ಹಾಗಿರಲಿಲ್ಲ. ಸಭೆಯಲ್ಲಿದ್ದ ಸಂಗಾತಿಗಳು ಉಡುಪಿಯ ಮಧ್ಯಾಹ್ನದ ಉರಿಬಿಸಿಲಿನಲ್ಲೂ ವೇದಿಕೆಯ ಮೇಲಿದ್ದ ಕಾಮ್ರೇಡುಗಳ ಭಾಷಣಗಳನ್ನು ತಣ್ಣಗೆ ಕೂತು ಕೇಳುತ್ತಿದ್ದರು. ಭಾಷಣಕಾರರಾದರೋ ಬಿಸಿಲಿಗೆ ಕ್ಯಾರೆ ಎನ್ನದೆ ಮಡೆಸ್ನಾನ, ಪಂಕ್ತಿಭೇದ ಮುಂತಾದ ಯಜಮಾನ ಸಂಸ್ಕೃತಿಯ ಆಚರಣೆಗಳನ್ನು ಒಬ್ಬರಾದ ಮೇಲೆ ಒಬ್ಬರು ಖಂಡಿಸಿದರು. ಈ ಪ್ರಕಾರವಾಗಿ 11 ಗಂಟೆಗೆ ಪ್ರಾರಂಭವಾದ ಸಭೆ 2 ಗಂಟೆಯವರೆಗೂ ನಡೆದು, ನಂತರ ಆ ಸುಡುಬಿಸಿಲಲ್ಲೇ ಸಭೆ ನಡೆದ ಸ್ಥಳದಿಂದ ಸಾಕಷ್ಟು ದೂರದಲ್ಲಿರುವ ಕೃಷ್ಣ ದೇವಾಲಯದತ್ತ ಮೆರವಣಿಗೆ ಹೊರಟಿತು. ಆದರೆ ದೇವಾಲ ಯವನ್ನು ಸಮೀಪಿಸುತ್ತಿದ್ದಂತೆ ಪೊಲೀಸರು ಅದನ್ನು ತಡೆದರು.





ಮೆರವಣಿಗೆಯಲ್ಲಿದ್ದವರು ಪೊಲೀಸರ ಬ್ಯಾರಿಕೇಡುಗಳನ್ನೂ ಧಿಕ್ಕರಿಸಿ ಮುಂದೆ ನಡೆದಾಗ ಅವರ ಮೇಲೆ ಯದ್ವಾತದ್ವಾ ಲಾಠೀಚಾರ್ಜ್ ನಡೆಯಿತು. ಗಂಡಸರು ಹೆಂಗಸರು ಎನ್ನದೆ ನೂರಾರು ಜನರಿಗೆ ಹೊಡೆತ ಬಿದ್ದು ಒಂಭತ್ತು ಜನ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಅವರ ಪೈಕಿ ಮೂವರಿಗೆ ಗಂಭೀರವಾದ ಗಾಯ ಗಳಾಗಿವೆ.

ಲಾಠೀಚಾರ್ಜ್ ನಡೆಸಿ ಮೆರವಣಿಗೆಯನ್ನು ಚದುರಿಸಿದ ಪೊಲೀಸರು ಸ್ಥಳದಲ್ಲಿ ಸಿಕ್ಕಸಿಕ್ಕವರನ್ನೆಲ್ಲ ಬಂಧಿಸಿ, ಉಡುಪಿಯ ಚಂದುಮೈದಾನದಲ್ಲಿರುವ ಪೊಲೀಸು ಗ್ರೌಂಡ್ಸ್‌ಗೆ ಒಯ್ದರು. ಅಲ್ಲಿ ನಡುರಾತ್ರಿಯವರೆಗೆ ಬಂಧಿತರ ಹೆಸರು, ವಿಳಾಸ ಇತ್ಯಾದಿ ವಿವರ ದಾಖಲಿಸಿಕೊಳ್ಳುವುದು, ಫೋಟೋ ತೆಗೆಯುವುದು ಇತ್ಯಾದಿ ನಡೆಯಿತು. ಪ್ರತಿಭಟನಾ ಕಾರ್ಯಕ್ರಮಕ್ಕೆ ಬಂದಿದ್ದ ಸಿ.ಪಿ.ಎಂ. ನಾಯಕರಾದ ಶ್ರೀರಾಮರೆಡ್ಡಿ, ಜಿ.ಎನ್. ನಾಗರಾಜ, ಮಾರುತಿ ಮಾನ್ಪಡೆ, ಬಿ. ಮಾಧವ ಮೊದಲಾದವರನ್ನೂ ಬಂಧಿಸಿ ಅಲ್ಲಿ ಕೂರಿಸಲಾಗಿತ್ತು. ದೂರದೂರದ ಊರುಗಳಿಂದ ಬಾಡಿಗೆ ವಾಹನ ಮಾಡಿಕೊಂಡು ಕಾರ್ಯಕ್ರಮಕ್ಕೆ ಬಂದವರಲ್ಲಿ ಕೆಲವರು ಬಂಧಿತರಾಗಿದ್ದರು; ಉಳಿದವರು ಗ್ರೌಂಡ್ಸ್‌ನ ಹೊರಗೆ ಅವರಿಗಾಗಿ ಆತಂಕದಲ್ಲಿ ಕಾಯುತ್ತಿದ್ದರು. ಪ್ರತಿಭಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ 42 ಮಹಿಳೆಯರೂ ಸೇರಿದಂತೆ ಒಟ್ಟು 182 ಜನರ ಮೇಲೆ ಕೇಸು ದಾಖಲಾಗಿದೆ. ಅವರೆಲ್ಲರೂ ಇನ್ನು ಆ ಕೇಸುಗಳು ಖುಲಾಸೆ ಆಗುವವರೆಗೆ ತಮ್ಮತಮ್ಮ ಊರುಗಳಿಂದ ಉಡುಪಿ ಕೋರ್ಟಿಗೆ ಪದೇಪದೇ ಯಾತ್ರೆ ಮಾಡುತ್ತಿರಬೇಕಾಗುತ್ತದೆ.

ಮಡೆಸ್ನಾನ ಮತ್ತು ಪಂಕ್ತಿಭೇದಗಳ ವಿರುದ್ಧ 2011ರಲ್ಲೂ ಉಡುಪಿಯಲ್ಲಿ ಸಿ.ಪಿ.ಎಂ.ದೊಡ್ಡ ಪ್ರತಿಭಟನೆ ನಡೆಸಿತ್ತು. ಆದರೆ ಆ ಬಾರಿ ಮೆರವಣಿಗೆ ಕೃಷ್ಣದೇವಾಲಯವಿರುವ ರಥಬೀದಿಗೆ ಪ್ರವೇಶಿಸುತ್ತಿದ್ದಂತೆ ಅದನ್ನು ಪೊಲೀಸರು ತಡೆದಾಗ ಕಾರ್ಯಕ್ರಮವನ್ನು ಅಲ್ಲಿಗೇ ಮುಕ್ತಾಯಗೊಳಿಸಲಾಗಿತ್ತು. ಆದರೆ ಈ ವರ್ಷ ತಾವು ದೇವಾಲಯದ ಎದುರು ಪ್ರತಿಭಟನೆ ನಡೆಸಿಯೇ ಸಿದ್ಧ ಎಂದು ಕಾಮ್ರೇಡುಗಳು ನಿಶ್ಚಯಿಸಿದ್ದರು. ಪೊಲೀಸರ ಲಾಠಿಗಳು ಮಾತ್ರ ಅವರನ್ನು ತಡೆದು ನಿಲ್ಲಿಸಬಹುದಾಗಿತ್ತು. ಅದನ್ನು ಹೊರತುಪಡಿಸಿ, ಮೆರವಣಿಯಲ್ಲಿದ್ದವರ ಮೇಲೆ ಲಾಠೀಚಾರ್ಜ್ ಮಾಡಲು ಪೊಲೀಸರಿಗೆ ಯಾವ ಕಾರಣವೂ ಇರಲಿಲ್ಲ. ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಯಾವ ನಾಯಕನೂ ಯಾರ ವಿರುದ್ಧವೂ ಅವಹೇಳನಕಾರಿಯಾಗಿ ಮಾತಾಡಲಿಲ್ಲ. ಜನರು ಕೂಡ ಆ ಕಾರ್ಯಕ್ರಮದ ಉದ್ದಕ್ಕೂ ಶಿಸ್ತು ಸಂಯಮಗಳನ್ನು ಪಾಲಿಸಿದ್ದರು. ಆದಾಗ್ಯೂ ಯಾಕೆ ಲಾಠೀಚಾರ್ಜ್ ನಡೆಯಿತು? ಇನ್ನು ಮುಂದೆ ಸಿ.ಪಿ.ಎಂ ಅಥವಾ ಇನ್ನಾವುದೇ ಸಂಘಟನೆ ಇಂತಹ ಕಾರ್ಯಕ್ರಮ ಉಡುಪಿಯಲ್ಲಿ ನಡೆಸಬಾರದು ಎಂಬ ಎಚ್ಚರಿಕೆ ಕೊಡುವುದು ಸರಕಾರದ ಉದ್ದೇಶವಾಗಿತ್ತು. ಇದು ಜನರ ಪ್ರಜಾಸತ್ತಾತ್ಮಕ ಹಕ್ಕು ಮತ್ತು ಸ್ವಾತಂತ್ರ್ಯಗಳ ಮೇಲೆ ಸರಕಾರವೇ ನಡೆಸಿದ ಒಂದು ನೇರ ಆಕ್ರಮಣ.


ಉಡುಪಿಯ ರಥಬೀದಿ ಮತ್ತು ಅಲ್ಲಿರುವ ದೇವಾಲಯಗಳು ಸಾರ್ವಜನಿಕ ಸ್ಥಳಗಳೇ ಹೌದಾದರೆ ಯಾವ ಕಾನೂನಿನಪ್ರಕಾರ ಅಲ್ಲಿ ಪ್ರಜಾಸತ್ತಾತ್ಮಕ ಪ್ರತಿಭಟನೆಗಳಿಗೆ ಸರಕಾರ ತಡೆ ಒಡ್ಡುತ್ತದೆ? ಸರಕಾರ ಈ ಪ್ರಕರಣದಲ್ಲಿ ಉಡುಪಿಯ ಮಠಗಳ ಗುಲಾಮನಂತೆ ನಡೆದುಕೊಂಡು ಸಂವಿಧಾನಕ್ಕೆ ದ್ರೋಹ ಬಗೆದಿದೆ. ಉಡುಪಿ ಮಠಗಳಾದರೂ 21ನೆಯ ಶತಮಾನದಲ್ಲಿ ಮಡೆಸ್ನಾನ ಮತ್ತು ಪಂಕ್ತಿಭೇದದಂತಹ ಹೀನ ಆಚರಣೆಗಳನ್ನು ಹೇಗೆ ಸಮರ್ಥಿಸಿಕೊಳ್ಳುತ್ತವೆ? ಹಿಂದೂಗಳೆಲ್ಲರೂ ಒಂದಾಗಬೇಕು ಎಂದು ಬಯಸುವ ಈ ಮಠಗಳವರು ಇತರ ಜಾತಿಯವರ ಜೊತೆ ಒಂದೇ ಪಂಕ್ತಿಯಲ್ಲಿ ಕೂತು ಉಣ್ಣಲೂ ಸಿದ್ಧರಿಲ್ಲ! ಇನ್ನು ಆಸ್ತಿ, ವಿದ್ಯೆ, ಉದ್ಯೋಗ ಮತ್ತಿತರ ಅವಕಾಶಗಳಲ್ಲಿ ಇತರ ಜಾತಿಯವರಿಗೆ ಇವರು ಸಮಪಾಲು ಕೊಡುತ್ತಾರೆಯೇ? ಹಿಂದೂಗಳೆಲ್ಲ ಒಂದು ಎಂದು ಪ್ರತಿಪಾದಿಸುವ ಉಡುಪಿಯ ಮಠಗಳೇ ಕೃಷ್ಣ ದೇವಾಲಯವನ್ನು ಮಾತ್ರ ಸರಕಾರದ ಮುಜರಾಯಿ ಇಲಾಖೆಯ ನಿಯಂತ್ರಣದಿಂದ ಬಿಡಿಸಿ ತಮ್ಮ ಖಾಸಗಿ ಸೊತ್ತಾಗಿ ಮಾಡಿಕೊಂಡಿವೆ. ಈ ಸರಕಾರ ಹಿಂದೂಗಳದ್ದಲ್ಲವೆ? ಅನ್ಯಮತೀಯರ ತಲೆ ಒಡೆಯಲು ಹಿಂದೂಗಳು ಒಗ್ಗಟ್ಟಾಗಬೇಕು ಎಂದು ಬಯಸುವ ಈ ಮಠಗಳು ಹಿಂದೂಗಳೆಲ್ಲರೂ ಸಮಾನರು ಎಂಬುದನ್ನು ಮಾತ್ರ ಸುತರಾಂ ಒಪ್ಪುವುದಿಲ್ಲ. ಸಮಾನತೆಯನ್ನು ಬಯಸುವ ಕಮ್ಯುನಿಸ್ಟರು ಇವರಿಗೆ ನಂ.1 ಶತ್ರುಗಳು! ಹಾಗಾಗಿ ಮಡೆಸ್ನಾನ, ಪಂಕ್ತಿಭೇದಗಳಂತಹ ಉಡುಪಿ ಮಠಗಳ ಜೀವವಿರೋಧಿ ಪರಂಪರೆಯನ್ನು ಪ್ರತಿಭಟಿಸಿದ ಸಿ.ಪಿ.ಎಂ ಕಾರ್ಯಕರ್ತರ ಮೇಲೆ ಪೊಲೀಸು ಸಮವಸ್ತ್ರದಲ್ಲಿದ್ದ ಮಠದ ಕಾಲಾಳುಗಳು ಲಾಠೀಚಾರ್ಜ್ ನಡೆಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

ಉಡುಪಿ ಪೊಲೀಸರ ಈ ದುಂಡಾವರ್ತಿಯ ಬಗ್ಗೆ ತಥಾಕಥಿತ ಸೆಕ್ಯುಲರ್ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆ.ಡಿ.ಎಸ್‌ನ ಎಲ್ಲ ಸ್ಥಳೀಯ ನಾಯಕರು ಮೌನವಹಿಸಿರುವುದರಲ್ಲಿಯೂ ಅಂತಹ ಆಶ್ಚರ್ಯವೇನೂ ಇಲ್ಲ. ಮಡೆಸ್ನಾನ ಮತ್ತು ಪಂಕ್ತಿಭೇದಗಳ ಬಗ್ಗೆ ಇವರು ಇದುವರೆಗೆ ತಮ್ಮ ನಿಲುವು ಏನು ಎಂದು ಸ್ಪಷ್ಟಪಡಿಸಿಲ್ಲ. ಈ ಆಚರಣೆಗಳಿಂದ ಅವಮಾನ ಅನುಭವಿಸುವ ಬ್ರಾಹ್ಮಣೇತರ ಜಾತಿಗಳಾದ ಬಂಟರು, ಬಿಲ್ಲವರು, ಮೊಗವೀರರು, ದೇವಾಡಿಗರು, ಗಾಣಿಗರು, ಭಂಡಾರಿಗಳು ದಲಿತರು ಮೊದಲಾದ ಜಾತಿಯವರೇ ಕರಾವಳಿಯಲ್ಲಿ ಬಹುಸಂಖ್ಯಾತರು. ಈ ಜಾತಿಗಳನ್ನೇ ಇಡಿಇಡಿಯಾಗಿ ದತ್ತು ತೆಗೆದುಕೊಂಡವರಂತೆ ವರ್ತಿಸುವ ಪುಢಾರಿಗಳಿಗೂ ಇಲ್ಲಿ ಕೊರತೆ ಇಲ್ಲ. ಬರಲಿಕುವ ಚುನಾವಣೆಯ ಟಿಕೆಟ್ಟಿಗೆ ಅರ್ಜಿ ಸಲ್ಲಿಸಿ ತಮ್ಮ ಬಯೋಡಾಟಾ ರೆಡಿ ಮಾಡಿ ಇಟ್ಟುಕೊಂಡ ಈ ಜಾತಿಗಳ ಮುಖಂಡರು ಸಹ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಆದರೆ ದೇವಾಲಯಗಳಂತಹ ಸಾರ್ವಜನಿಕ ಸ್ಥಳಗಳಲ್ಲಿ ತಮ್ಮ ಜಾತಿಯ ಜನಸಾಮಾನ್ಯರಿಗೆ ಪ್ರತಿನಿತ್ಯ ಆಗುತ್ತಿರುವ ಅವಮಾನ ಮಾತ್ರ ಇವರಲ್ಲಿ ಯಾರನ್ನೂ ನೋಯಿಸುವುದಿಲ್ಲ!

ಪೆಟ್ಟುತಿಂದವರನ್ನೇ ಅಪರಾಧಿಗಳು ಎಂದು ಚಿತ್ರಿಸುವುದು, ಒಬ್ಬನಿಗೆ ಹತ್ತುಜನ ಒಟ್ಟು ಸೇರಿ ಹೊಡೆಯುವುದು ಮತ್ತು ಹೊಡೆದವರು 'ಮೆಜಾರಿಟಿ' ಯಾಗಿರುವುದರಿಂದ ಅವರು ಮಾಡಿದ್ದೇ ನ್ಯಾಯ ಎಂದು ಸಾಧಿಸುವುದು- ಇದೆಲ್ಲವೂ ಉಡುಪಿಯಲ್ಲಿ ಹಿಂದೂತ್ವ ಚಾಲ್ತಿಗೆ ತಂದಿರುವ ಸಂಸ್ಕೃತಿಯ ರಿವಾಜುಗಳು. ಮೊನ್ನೆ ಮಡೆಸ್ನಾನ, ಪಂಕ್ತಿಭೇದಗಳ ವಿರುದ್ಧ ಸಿ.ಪಿ.ಎಂ ಸಂಘಟಿಸಿದ ಪ್ರತಿಭಟನೆಯ ಸಂದರ್ಭದಲ್ಲಿ ಈ ಸಂಸ್ಕೃತಿಯ ಇನ್ನೊಂದು ಮುಖದ ದರ್ಶನವೂ ನಮಗಾಯಿತು. ಪೊಲೀಸು ಬಂಧನಕ್ಕೆ ಒಳಗಾದವರೆಲ್ಲರಿಗೂ ಊಟದ ಹೊತ್ತಿಗೆ ಊಟ ಕೊಡುವುದು ಇಲಾಖೆಯ ಕರ್ತವ್ಯ. ಆದರೆ ಉಡುಪಿಯಲ್ಲಿ ಕೃಷ್ಣ ದೇವಾಲಯಕ್ಕೂ ಪೊಲೀಸು ಇಲಾಖೆಗೂ ಅದೇನು ಒಳಒಪ್ಪಂದವಿದೆಯೋ ಕೃಷ್ಣ ಪರಮಾತ್ಮನೇ ಬಲ್ಲ; ಮೊನ್ನೆ ಉಡುಪಿಯಲ್ಲಿ ಬಂಧಿತರಾದ ನೂರಾರು ಸಿ.ಪಿ.ಎಂ ಕಾರ್ಯಕರ್ತರಿಗೆ ರಾತ್ರಿ ಒದಗಿಸಲಾದ ಊಟವನ್ನು ಪೊಲೀಸು ಇಲಾಖೆ ಕೃಷ್ಣ ದೇವಾಲಯದಿಂದ ತರಿಸಿತ್ತಂತೆ (ಪುಕ್ಕಟೆಯಾಗಿ?). ಉಡುಪಿಯ ಹೆಮ್ಮೆಯ ದಿನಪತ್ರಿಕೆ (!) ಹಾಗೂ ಹಿಂದೂತ್ವದ ಪ್ರತಿದಿನದ ಕರಪತ್ರ ಉದಯವಾಣಿ ಈ ಸುದ್ದಿಯನ್ನು "ಬಂಧಿತರಾದವರಿಗೆ ಕೃಷ್ಣ ಪ್ರಸಾದ" ಎಂಬ ಶೀರ್ಷಿಕೆಯಲ್ಲಿ ಬಾಕ್ಸ್ ಐಟಂ ಮಾಡಿ ಪ್ರಕಟಿಸಿತು! ಪೆಟ್ಟುತಿಂದ ಅಸಹಾಯಕರನ್ನು ಹಂಗಿಸಿ ಅವಮಾನಿಸುವ ಈ ಬಗೆಯ ಕ್ರೌರ್ಯ ಉದಯವಾಣಿಯ ಅಲ್ಪರಿಗಲ್ಲದೆ ಇನ್ನು ಯಾರಿಗೆ ಸಾಧ್ಯ? ಆ ಪತ್ರಿಕೆಯ ಜಾಹೀರಾತಿನ ಮಾತೊಂದನ್ನು ಬಳಸಿಕೊಂಡು ಹೇಳುವುದಾದರೆ ಈಗ "ಉದಯವಾಣಿಯ ಈ ಭಾಷೆಯೇ ಉಡುಪಿಯ ಭಾಷೆ."


● ಜಿ. ರಾಜಶೇಖರ


ಹೋರಾಡಿ ಉಳಿವಾಕಿ, ಉಳಿದು ಬೆಳೆಸೋವಾಕಿ



ಗುಮಾಸ್ತನ ಬ್ಲಾಗ್ — 9
ಕೆ.ಫಣಿರಾಜ್


ಹೆಲೋ! ಮೆರಿ ಕ್ರಿಸ್ಮಸ್! ಹ್ಯಾಪಿ ನ್ಯು ಇಯರ್! ಅಂತ ವಾಡಿಕೆಗೆ ಹೇಳಲೂ ಬೇಸರವಾಗುತ್ತಿದೆ ಕಣ್ರಿ. ನಮ್ಮ ಸುತ್ತಲೂ ಇರುವ ಪ್ರಪಂಚ ಹಾಗಾಗೋಗಿದೆ ಹಾಳಾದ್ದು. ನಮ್ಮ ಉಡುಪಿಯಲ್ಲಿ ನೋಡಿ. 'ಕ್ರಿಸ್ಮಸ್ ಹಾಗು ನ್ಯು ಇಯರ್ ಪ್ರಯುಕ್ತ ಭಾರಿ ರಿಯಾಯತಿ ಮಾರಾಟ'ಕ್ಕೆ ಮುಗಿಬಿದ್ದು ಇದ್ದದ್ದು ಇಲ್ಲದ್ದು ಎಲ್ಲವನ್ನೂ ಕೊಳ್ಳಲು ಮಂದಿ ಮುಕುರುತ್ತಾರೆ. ಭಜರಂಗಿಗಳು ಕುಂಟು ನೆಪ ತೆಗೆದು ಕ್ರಿಸ್ಮಸ್ ಹೊತ್ತಲ್ಲಿ ನಮ್ಮೂರಿನ ಕಲ್ಮಾಡಿ ಚರ್ಚಿಗೆ ಮುತ್ತಿಗೆ ಹಾಕಿ ದಾಂಧಲೆ ಮಾಡಿದರೆ, ಮೌನವಾಗಿ ಸಾಥ್ ನೀಡುತ್ತಾರೆ! ಉಡುಪಿ ನಗರಸಭೆ ವ್ಯಾಪ್ತಿಯ ಕಲ್ಮಾಡಿಯಲ್ಲಿ ಸ್ಟೆಲ್ಲಾ ಮೇರಿ ಚರ್ಚ್ ಇದೆ. ಕ್ರಿಸ್ಮಸ್ ಹಬ್ಬದ ಪ್ರಯುಕ್ತ ಆ ಚರ್ಚಿನ ಮುಂದೆ ಮೇರಿ ಮಾತೆಯ ಪವಾಡವನ್ನು ವರ್ಣಿಸುವ ಒಂದು ಬ್ಯಾನರ್ ಹಾಕಿದ್ದರು. ಏನು ಈ ಪವಾಡ ಅಂತೀರಾ? ಅದೂ ಮಜವಾಗಿದೆ ಮಾತ್ರವಲ್ಲ ಬೋಧಕವಾಗಿದೆ. ಈ ಸ್ಟೆಲ್ಲಾ ಮೇರಿಸ್ ಚರ್ಚ್ ಇರೋದು ಖ್ಯಾತ ಮಲ್ಪೆ ಬಂದರಿನ ಸಮೀಪದಲ್ಲಿ. ಬಂದರಿನಲ್ಲಿ ಕೆಲಸ ಮಾಡೊ ತಮಿಳುನಾಡಿನ ಮೀನುಗಾರರು ಈ ಚರ್ಚಿನ ಭಕ್ತರು. ತಮಿಳುನಾಡಿನ ನಾಗಪಟ್ಟಿನಂ ನೆನಪಿದೆಯಾ? ಹಾಂ, ಅದೇ ಸುನಾಮಿ ನಾಗಪಟ್ಟಿನಂ. ಈ ನಾಗಪಟ್ಟಿನಂ ಹತ್ತಿರ ಇರೋದು ವೇಲಂಕಣಿ. ಅಲ್ಲಿ ವೇಲಂಕಣಿ ಅಮ್ಮನೋರ ಚರ್ಚ್ ಐತೆ. ಯಾರು ಈ ವೇಲಂಕಣಿ ಅಮ್ಮನೋರು? ಅವ್ರು ಬೇರೆ ಯಾರು ಅಲ್ಲ ಸ್ವಾಮಿ, ಏಸುವಿನ ತಾಯಿ ಮೇರಿಯಮ್ಮ-ವರ್ಜಿನ್ ಮೇರಿ.





ವೇಲಂಕಣಿಯಮ್ಮನ ಚರ್ಚ್ ಹದಿನಾರನೇ ಶತಮಾನದ್ದು; ಕತೆ ಏನಪ್ಪ ಅಂದ್ರೆ, ತಮಿಳ್ ಕೃಷ್ಣಶ್ರೆಷ್ಠಿ ಅನ್ನೋನೊಬ್ಬ ತನ್ನ ಧಣಿಗಳ ಮನೆಗೆ ಗಡಿಗೆ ತುಂಬಾ ಹಾಲು ತಗೊಂಡೋಯ್ತಿದ್ನಂತೆ. ದಾರೀಲಿ ಸುಸ್ತಾಗಿ ವೇಲಂಕಣಿ ಸರೋವರದ ಹತ್ರ ಹಾಗೆ ಮಲಗಿ ಕಣ್ಮುಚ್ಚಿ ನಿದ್ದೆ ಹೋದ್ನಂತೆ. ಮಧ್ಯೆ ಏನೋ ದಿವ್ಯಾನುಭವವಾಗಿ ಎದ್ದು ನೋಡ್ತಾನೆ, ಪ್ರಭೆಯುಳ್ಳ ಮೇರಿ ಹಸುಗೂಸು ಬಾಲಕ ಏಸುವನ್ನು ಎದೆಗೊರಗಿಸಿಕೊಂಡು 'ಅಯ್ಯಾ! ನನ್ನ ಮಗುಗೆ ಹಾಲು ಕೊಡ್ತಿಯಾ?' ಅಂತಾ ಕೇಳ್ತವ್ರೆ! ಅಯ್ಯೋ ಮಗುವಲ್ವ ಅಂತ ತಮಿಳ್ ಕೃಷ್ಣಶ್ರೆಷ್ಠಿ ಗಡಿಗೆಯಲ್ಲಿದ್ದ ಹಾಲು ಕೊಟ್ಟುಬಿಡ್ತನ್ನೆ. ಹಂಗೆ ಹಾಲುಡಿಸಿ ಧಣಿಗಳ ಮನೆಗೋಗಿ ಬುದ್ಧಿ ಹಿಂಗಾಯ್ತು ಅಂತವ್ನೆ. ಧಣಿಗಳು 'ಮಗನೇ! ನಂಗೆ ಮೋಸದ ಕತೆ ಬಿಡ್ತೀಯಾ!' ಅಂತ ರೇಗೋವಾಗ ಮೇರಿಯಮ್ಮನ ಪವಾಡದಿಂದ ಗಡುಗೆಯಲ್ಲಿ ಹಾಲು ಧಾರಾಕಾರವಾಗಿ ತುಂಬಿ ಹರಿಯತೊಡಗುತ್ತದೆ. ಆ ಪವಾಡದ ಕಾರಣವಾಗಿ ಮೇರಿಯಮ್ಮ ವೇಲಂಕಣಿಯ ಸರ್ವಾರೋಗ್ಯ ಪ್ರಧಾಯಿನಿ ದೇವಿ ವೇಲಂಕಣಿಯಮ್ಮನಾಗಿ ಸ್ಥಾಪಿತಳಾಗುತ್ತಾಳೆ ಎಂಬುದು ಕಥಾ ಪ್ರಸಂಗ. ಈ ಬಗೆಯಲ್ಲಿ ವೇಲಂಕಣಿಯಮ್ಮನಿಗೆ ಸರ್ವಮತಗಳ ಭಕ್ತರೂ ನಡೆದುಕೊಳ್ಳುವರು. ಹಂಗೆ ತಮಿಳುನಾಡಿನಿಂದ ಮಲ್ಪೆಗೆ ಬಂದಿರೋ ಮೀನುಗಾರರು ವೇಲಂಕಣಿಯಮ್ಮನನ್ನು ಕಲ್ಮಾಡಿಯ ಸ್ಟೆಲ್ಲಾ ಮೇರಿ ಚರ್ಚಿನ ಮೇರಿಯಮ್ಮನಲ್ಲಿ ಕಾಣುತ್ತಿರಲಾಗಿ, ಚರ್ಚಿನವರು ವೇಲಂಕಣಿಯಮ್ಮನ ಪ್ರಸ್ತುತ ಪವಾಡವನ್ನು ಬ್ಯಾನರ್ ಮಾಡಿಸಿ, ಕ್ರಿಸ್ಮಸ್ ಹಬ್ಬದ ಪ್ರಯುಕ್ತ ಚರ್ಚಿನ ಆವರಣದಲ್ಲಿ ಹಾಕಿದ್ದರು. ಈ ಪವಾಡವನ್ನು ಆಸ್ತಿಕರು ನಂಬಬಹುದು. ನಾಸ್ತಿಕರು ಮೂಢನಂಬಿಕೆ ಎಂದು ವಿವರಿಸಿ ಹುಡಿ ಹಾರಿಸಬಹುದು. ಆದರೆ ನಾಗರಿಕ ಸಮಾಜದಲ್ಲಿ ನಾಸ್ತಿಕರಿಗೂ ಬಲಾತ್ಕಾರ, ದುಂಡಾವರ್ತಿ ಸಲ್ಲದ ಮಾತು. ಹೀಗಿರುವಲ್ಲಿ, ಡಿಸೆಂಬರ್ 26ರಂದು ಬೆಳಿಗ್ಗೆ ಭಜರಂಗದಳದ 200 ಜನ ಚರ್ಚಿಗೆ ಅಕ್ರಮವಾಗಿ ಪ್ರವೇಶಿಸಿ "ಹಿಂದೂ ಧರ್ಮವನ್ನು ಅವಹೇಳನ ಮಾಡೋದಕ್ಕಾಗಿಯೇ ಈ ಬ್ಯಾನರ್ ಹಾಕಲಾಗಿದೆ" ಎಂದು ದುಂಡಾವರ್ತಿ ಶುರುಮಾಡಿಕೊಂಡರು. ಯಥಾಪ್ರಕಾರ ಉಡುಪಿಯ ಪೊಲೀಸರು ದಾಂಧಲೆ ನಡೆಸುವ ಗುಂಪಿನ ಮೇಲೆ ಕ್ರಮ ಜರುಗಿಸುವ ಬದಲು ಅವರನ್ನು ರಮಿಸಲು ಮುಂದಾದರು. ಗುಂಪು ಬ್ಯಾನರ್ ತೆಗಿಸಿರಿ ಎಂದಿತು; ಪೊಲೀಸರು ಚರ್ಚಿನವರಿಗೆ ಬ್ಯಾನರ್ ಕೀಳಲು ಹೇಳಿದರು. ಗುಂಪು ಚರ್ಚಿನ ಆಡಳಿತಮಂಡಳಿಯವರು ತಮ್ಮ ಮುಂದೆ ಬಂದು ಕ್ಷಮೆ ಕೋರಬೇಕು ಎಂದಿತು; ಪೊಲೀಸರು ಆಡಳಿತ ಮಂಡಳಿಯವರನ್ನು ಕರೆಸಿ ಕ್ಷಮೆ ಕೇಳಿಸಿದರು! ಅಷ್ಟಕ್ಕೂ ತೃಪ್ತರಾಗದ ಚೆಡ್ಡಿ ದೊಣ್ಣೆನಾಯಕರು ಚರ್ಚಿನ ಧರ್ಮಗುರುಗಳು ತಮ್ಮ ಮುಂದೆ ಬಂದು ತಪ್ಪೊಪ್ಪಿಕೊಳ್ಳಬೇಕು ಎಂದು ತಾಕೀತುಮಾಡಿತು; ಪೊಲೀಸರು ಮುಚ್ಕೊಂಡು ಅದನ್ನೂ ಮಾಡಿಸಿದರು ಕಣ್ರಿ! ಇಷ್ಟಕ್ಕೆ ಮುಗಿತು ಅನ್ಕೊಂತೀರ ಸ್ವಾಮಿ! ಇಲ್ಲ, ಅಕ್ರಮ ಗುಂಪನ್ನು ತಣಿಸಲು ಉಡುಪಿ ಪೊಲೀಸರು ಚರ್ಚಿನ ಧರ್ಮಗುರುಗಳ ಮೇಲೆ ಎಫ್.ಐ.ಆರ್. ಜಡಿದು ಕೇಸು ದಾಖಲಿಸಿದ್ದಾರೆ! ಇಷ್ಟೆಲ್ಲಾ ಆಗುವಾಗ ಉಡುಪಿಯ ಯಾವ ಕಾಂಗ್ರೆಸ್ ಯಾ ಜಾತ್ಯತೀತ ಜನತಾದಳದ ನಾಯಕನೂ ಬಂದು ಗುಂಪಿನ ಎದುರು ನಿಂತು "ಮುಚ್ಕೊಂಡು ಹೋಗ್ರಯ್ಯ! ನೀವಷ್ಟೇ ಹಿಂದೂಗಳಲ್ಲ, ನಾವೂ ಈ ಊರಿನಲ್ಲಿ ಬಾಗಾಯ್ತಿನಿಂದ ಬದುಕುತ್ತಿರೋ ಹಿಂದೂಗಳೇ! ನಮಗಾಗದ ಅವಮಾನ ನಿಮಗಾಯ್ತದೆ ಅಂದ್ರೆ ಏನರ್ಥ ಹೇಳ್ರಲೇ! ರೀ ಸ್ವಾಮಿ ಪೊಲೀಸ್ನೋರೇ ಯಾಕ್ರಿ ಕೈಕಟ್ಕೊಂಡು ನಿಂತಿದ್ದೀರಿ?" ಅಂತ ಕೇಳಿಲ್ಲ ಸಾರ್. ಹಂಗೇ ಕೇಳೋ ತಾಕತ್ತು ಇವ್ರಿಗೆ ಇದ್ದಿದ್ರೆ ನಮ್ಮೂರು ಹಿಂಗಾಯ್ತಿರಲಿಲ್ಲ. ಇಂಥ ಊರಲ್ಲಿ ಯಾರಿಗೆ ಹೇಳೋದು 'ಮೇರಿ ಕ್ರಿಸ್ಮಸ್! ಹ್ಯಾಪಿ ನ್ಯು ಇಯರ್' ಅಂತ. ಹೂಂ, ನಾವು, ಕರ್ನಾಟಕ ಕೋಮು ಸೌಹಾರ್ದ ವೇದಿಕೆವತಿಯಿಂದ ಎಸ್.ಪಿ ಆಫೀಸಿನ ಎದುರು ಪ್ರತಿಭಟನೆ ಮಾಡಿದ್ವಿ; ಎಫ್.ಐ.ಆರ್ ಹರ್ದಾಕಿ, ದುಂಡಾವರ್ತಿ ಮಾಡಿದೋರ ಮೇಲೆ ಕೇಸಾಕಿ ಅಂತ ಒತ್ತಾಯ ಮಾಡಿದ್ವಿ, ಸರಿ. ಅದ್ರೆ ನಿಮ್ಗೆ ಗೊತ್ತ ಬುದ್ಧಿ. ಕಳೆದ ಹತ್ತು ವರ್ಷಗಳಲ್ಲಿ ಪ್ರತಿ ಸಾಬರ, ಕ್ರಿಶ್ಚಿಯನ್ನರ ಹಬ್ಬದ ಹೊತ್ಗೆ ಈ ಪ್ರತಿಭಟನೆಯೂ ಒಂದು ಹಬ್ಬಾಚರಣೆಯ ಭಾಗವಾಗೋಗಯ್ತೆ! ಯಾರಿಗೆ ಹೇಳ್ತೀರ 'ಮೇರಿ ಕ್ರಿಸ್ಮಸ್'! 'ಈದ್ ಮುಬಾರಕ್'!

ಹಂಗೆ, ಡಿಸೆಂಬರ್ 16ರ ರಾತ್ರಿ ದೆಹಲಿಯಲ್ಲಿ ನನ್ನ ಮಗಳ ವಯಸ್ಸಿನ, ನನ್ನ ಮಗಳು ಓದುತ್ತೀರೋ ಡಿಗ್ರಿಯನ್ನೇ ಓದುತ್ತಿದ್ದ ಹುಡುಗಿನ ಸಾಮೂಹಿಕ ಅತ್ಯಾಚಾರ ಮಾಡಿ, ಅವಳ ಕರುಳನ್ನ ಒಡೆದ ಬೀರುಬಾಟ್ಲಿಯಿಂದ ಕುಯ್ದು ಕೊಂದ್ರಲ್ಲ ಸಾರ್! ಈ ದೇಶದಲ್ಲಿ ಹೇಗೆ ಹೇಳೋದು 'ಹ್ಯಾಪಿ ನ್ಯು ಇಯರ್!' ಅಂತಾ. ಈ ಹುಡುಗಿಯ ಸುದ್ದಿನ 2 ದಿನದ ನಂತರ ಪೇಪರಲ್ಲಿ ಓದಿದಾಗ ನಂಗೆ ಮೊದ್ಲು ನೆನಪಾದದ್ದು ಖೈರಲಾಂಜಿಯ ಸುರೇಖ ಮತ್ತು ಪ್ರಿಯಾಂಕ ಭೋಟ್ಮಾಂಗೆಯವರ ಸಾಮೂಹಿಕ ಅತ್ಯಾಚಾರ ಮತ್ತು ಅಷ್ಟೇ ವಿಕಾರವಾಗಿ ಅವರ ದೇಹದ ಮೇಲೆ ಹಿಂಸೆ ನಡೆಸಿ ಕೊಂದದ್ದು ಸಾರ್. ದೆಹಲಿಯಲ್ಲೂ ಮತ್ತು ದೇಶಾದ್ಯಂತ ಆ ಹುಡುಗಿಯ ಮೇಲೆ ನಡೆಸಿದ ಹಿಂಸೆಗೆ ಪ್ರತಿಭಟನೆಗಳು ನಡೆದ್ವು. ಅನೇಕ ಬರಹಗಾರರು, ಚಳವಳಿಗಾರರು ಇದರ ಅರ್ಥ ಏನು ಅಂತ ಪೇಪರುಗಳಲ್ಲಿ ಬರೆದದ್ದನ್ನ ಓದುತ್ತಾ ಈ ಬಗೆಯ ಹಿಂಸೆಯನ್ನು ಹ್ಯಾಗೆ ಅರ್ಥ ಮಾಡ್ಕೋಳೋದು ಅಂತ ಒದ್ದಾಡ್ತಾ ಇದ್ದೆ ಕಣ್ರಿ. ನಂಗೆ ನಿಜಕ್ಕೂ ಬುದ್ಧಿ ತಪ್ಪಿ ಹೋಗಿತ್ತು, ಓದಿದಷ್ಟು ಸರ್ ಕಾ ಬತ್ತಿ (ತಲೆಯ ಬಲ್ಬು) ಬೆಳಗ್ತಿತ್ತೇ ಶಿವಾಯೇ ಜಿಗರ್ ಕಾ ದರ್ದ್ (ಕರುಳಿನ ಸಂಕಟ) ಗೆ ಉತ್ತರ ಸಿಗ್ತಾ ಇರಲಿಲ್ಲ, ಯಾಕೆ ಅಂತೀರಾ ಸಾರ್? ನಂಗೆ ಕಾಡ್ತ ಇದ್ದದ್ದು ಒಂದೇ ಪ್ರಶ್ನೆ, ಭಾರತದಲ್ಲಿ 'ರೇಪ್' ಆದತಕ್ಷಣ ಆ ಹೆಂಗಸರ ಅಸ್ತಿತ್ವನೇ ನಾಶ ಆಗೋಗುತ್ತಲ್ಲ! 'ರೇಪ್' ಆದ ಹೆಂಗಸಿನ ಬಗ್ಗೆ ಎಷ್ಟೇ ಸಹಾನುಭೂತಿ ಇದ್ದರೂ ಆಕೆ 'ಶೀಲಗೆಟ್ಟವಳು', 'ಮಾನಗೆಟ್ಟವಳು', 'ಕೆಡಿಸಿಕೊಂಡವಳು', 'ಪತಿತೆ', 'ಬೇಲಬ್ರೂ' ಇಷ್ಟೇ ಅಲ್ಲ ಅವಳನ್ನು ಬಣಿಸಲಿಕ್ಕೆ ಇರೋದು ನಮ್ಮ ಭಾಷೆಯಲ್ಲಿ! ಒಂದು ಒಲ್ಲದ, ಬಲಾತ್ಕಾರದ ಸಂಭೋಗದಿಂದ ಹೆಂಗಸಿನ ಗುಣ-ವ್ಯಕ್ತಿತ್ವ-ಅಸ್ತಿತ್ವಗಳೇ ನಾಶವಾಗಿ ಹೋಗ್ತದೆ ಅಂತ ನಮ್ಮ ಸಾಮಾಜಿಕ ಸಾಮೂಹಿಕ ಮನೋಸ್ಥಿತಿಯಲ್ಲಿ ಇರೋದ್ರಿಂದಲೇ ಅಲ್ವಾ ಗಂಡಸರು 'ರೇಪ್' ಅನ್ನು ಹೆಂಗಸರ ಮೇಲೆ ಬಳಸಬಹುದಾದ ಒಂದು ಸುಲಭ ಅಸ್ತ್ರವಾಗಿ ಮಾಡಿಕೊಂಡಿರೋದು. ಬಲಾತ್ಕಾರಕ್ಕೆ ಕಾನೂನಿನಲ್ಲಿ ಶಿಕ್ಷೆ ಇದೆ. ಆದರೆ ಬಲಾತ್ಕಾರಕ್ಕೆ ಒಳಗಾದ ಮಹಿಳೆಯ ಬಗ್ಗೆ ನಾವು ತಾಳುವ ಸಾಮಾಜಿಕ ಮನೋಭಾವಕ್ಕೆ ಯಾವ ಶಿಕ್ಷೆ ಇದೆ? ದೆಹಲಿಯಲ್ಲಿ ಆ ಹುಡುಗಿಯೂ, ಸುರೇಖ-ಪ್ರಿಯಾಂಕರೂ ಮತ್ತೂ ಭಾರತದಲ್ಲಿ ದಿನಕ್ಕೆ ಹತ್ತರಂತೆ ಬಲಾತ್ಕಾರದ ಸಂಭೋಗಕ್ಕೆ ಒಳಗಾಗುವ ಮಹಿಳೆಯರು, ಗಂಡಸರ ಬಲಾಧಿಕಾರಗಳಿಗೆ ವಿರೋಧ ತೋರಿದ ತಕ್ಷಣವೇ ಯಾಕೆ 'ರೇಪ್' ಆಗುತ್ತಾರೆ. ಶೀಲ! ಶೀಲ! ಬಲಾತ್ಕಾರದ ಸಂಭೋಗದಿಂದ ಮಹಿಳೆಯ 'ಶೀಲಹರಣ'ವಾಯ್ತು ಎಂಬ ನಮ್ಮ ದರ್ಪದ ಸಾಮಾಜಿಕ ಸಹಮತವನ್ನು ಯಾವ ಎಗ್ಗಿಲ್ಲದೆ ಬಿ.ಜೆ.ಪಿಯ ಸುಷ್ಮಾ ಸ್ವರಾಜ್ ಭಾರತದ ಸಂಸತ್ತಿನಲ್ಲಿ 'ಇನ್ನೂ ಆ ಹುಡುಗಿ ಜಿಂದಾ ಲಾಷ್-ಜೀವಚ್ಛವ; ಹಾಗಾಗಿ ಅವಳನ್ನು ಆ ಸ್ಥಿತಿಗೆ ತಂದವರಿಗೆ ಗಲ್ಲಾಗಲಿ' ಎಂದು ಘೋಷಿಸಿ ಚಪ್ಪಾಳೆಗಿಟ್ಟಿಸಿದಾಗ, ಬಿ.ಜೆ.ಪಿಯ ಶೋಭಾ ಕರಂದ್ಲಾಜೆ 'ರಾಸಾಯನಿಕ ನಪುಂಸಕತ್ವದ ಶಿಕ್ಷೆಯಾಗಲಿ' ಎಂದಾಗ ನಮಗೆ ಶಾಕ್ ಆಗುವುದೇ ಇಲ್ಲವಲ್ಲ! ಅತ್ಯಾಚಾರಿಗಳಿಗೆ ಕಾನೂನುರೀತ್ಯಾ ಶಿಕ್ಷೆಯಾಗಬೇಕು, ಶಿಕ್ಷೆಯ ಭಯದಲ್ಲಿ ಅತ್ಯಾಚಾರಗಳು ನಿಲ್ಲಬೇಕು-ಇದು ನ್ಯಾಯಸಂಹಿತೆ, ಸರಿ, ಒಪ್ಪಲೇ ಬೇಕು. ಹಾಗೆ ಅತ್ಯಾಚಾರಕ್ಕೆ ಒಳಗಾಗಿ ಉಳಿಯುವವರ ಬಗ್ಗೆ ನಾವು ತೋರುವ ಅಗೌರವ ಎಂಥದ್ದು? ಸರ್-ಒ-ಜಿಗರ್ (ಬುದ್ಧಿ ಮತ್ತು ಕರುಳ ಸಂಕಟಗಳನ್ನು) ಬೆಸೆದು ಹೇಳುವ ಭಾಷೆ ಯಾವುದೂ ಯಾಕೆ ನಮ್ಮಲ್ಲಿಲ್ಲ ಎಂದು ತಳಮಳಿಸುತ್ತಿದ್ದೆ. ಈ ಹೊತ್ತಿಗೆ ನಮ್ಮ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ದಶಮಾನೋತ್ಸವದ 'ಐಕ್ಯತಾ ಸಮಾವೇಶ'ಕ್ಕೆ ಮುಖ್ಯ ಭಾಷಣಕಾರರಾಗಿ ತೀಸ್ತಾ ದೀದಿ ಬಂದರು. ಅವರು ಗುಜರಾತಿನಲ್ಲಿ 2002ರಲ್ಲಿ, ನರೇಂದ್ರ ಮೋದಿ ಸರಕಾರದ ಬೆಂಬಲದಲ್ಲಿ ಮುಸಲ್ಮಾನರ ಮೇಲೆ ಹಿಂಸೆ ನಡೆಸಿದವರಿಗೆ ಶಿಕ್ಷೆಯಾಗಬೇಕು ಎಂದು ಹಿಂಸೆಗೊಳಗಾದವರ ಪರ ಹಲ್ಲುಕಚ್ಚಿ ಹೋರಾಡುತ್ತಿರುವ ಪರಿಯಂತೂ ಜಾಣ-ಜಾಣೆಯರಿಗೆ ತಿಳಿದಿರಲೇ ಬೇಕು. ಅವರು ನಡೆಸುತ್ತಿರುವ ಧೀಮಂತ ಹೋರಾಟದ ಚೈತನ್ಯಶೀಲತೆಯಿಂದಲೇ ಇವತ್ತು ಮೋದಿ ದೇಶದ ಮುಂದಿನ ಪ್ರಧಾನಿಯಾಗುವ ಸಂಗತಿಯು ಪ್ರಶ್ನಾರ್ಹವಾಗುತ್ತಿದೆ ಎನ್ನುವುದು ನನ್ನ ನಂಬಿಕೆ. ನನ್ನ ವೈಯಕ್ತಿಕ ನಂಬಿಕೆ ಅಂತಿರಲಿ. ಡಿಸೆಂಬರ್ 29ರಂದು 'ಐಕ್ಯತಾ ಸಮಾವೇಶ'ದ ತಮ್ಮ ಮಾತುಗಳನ್ನು ಶುರುಮಾಡಿದ್ದೇ ದೆಹಲಿಯಲ್ಲಿ ಆ ಹುಡುಗಿಯ ಮೇಲೆ ನಡೆದ ಹಿಂಸೆಯ ಸಂಗತಿಯನ್ನು ಎತ್ತಿಕೊಂಡು. ಅಂದು ಮುಂಜಾನೆ ಆ ಹುಡುಗಿ ನಿಧನಳಾದ ಸುದ್ದಿ ಬಂದಿತ್ತು, ತೀಸ್ತಾ ದೀದಿ ನೇರ ಸುಷ್ಮಾ ಸ್ವರಾಜರ 'ಜಿಂದಾ ಲಾಷ್' ಮಾತನ್ನು ತರಾಟೆಗೆ ತೆಗೆದುಕೊಂಡರು. 'ಅತ್ಯಾಚಾರವೇ ನಮ್ಮ ಗಮನ ಸೆಳೆಯುತ್ತಿದೆ. ಅತ್ಯಾಚಾರವೆಸಗಿದ್ದಷ್ಟೇ ಅಲ್ಲದೆ ಆಕೆ ಬದುಕುಳಿದು ಸಾಕ್ಷಿಯಾಗದ ಹಾಗೆ ಕ್ರೂರವಾಗಿ ಹಿಂಸಿಸಿ ಕೊಲ್ಲುವ ಕೃತ್ಯ ನಡೆಯಿತು ಅನ್ನೋದನ್ನೂ ನಾವು ಮರೀಬೇಕ್ಯಾಕೆ? ಆದರೂ ಆಕೆ ಬದುಕುಳಿಯಲು, ಧೈರ್ಯವಾಗಿ ಸಾಕ್ಷಿ ಹೇಳಲು ಹೋರಾಡಿದಳು. ಹಾಗೆ ಅವಳು ಉಳಿದು ಸಾಕ್ಷಿಯಾಗಲು ಹೋರಾಡುತ್ತಿದ್ದಾಗ ಅವಳನ್ನು ಜಿಂದಾ ಲಾಷ್ ಅಂತೆವಲ್ಲಾ! ಅಬ್ಬಾ ಇದು ಭಯಾನಕವಲ್ಲವಾ! ಅವಳು ಉಳಿಯಲು, ಉಳಿದು ಸತ್ಯಕ್ಕೆ ಸಾಕ್ಷಿಯಾಗಲು ಹೋರಾಡಿದ ಹುಡುಗಿ. ಅದನ್ನು ನಾವು ಎತ್ತಿ ತೋರಬೇಕು. ಬಿಟ್ಟು ಜಿಂದಾ ಲಾಷ್ ಅಂತರಲ್ಲಾ ಅದನ್ನು ಧಿಕ್ಕರಿಸಿ. ಸಾಕ್ಷಿಯಾಗದ ಹಾಗೆ ಕೊಲೆಮಾಡುವ ಕೃತ್ಯವನ್ನು ಎತ್ತಿ ಹೇಳಿ ಧಿಕ್ಕರಿಸಿ. ಗುಜರಾತಿನ ಕೋಮು ಹಿಂಸೆಯಲ್ಲಿ ಸಾಮೂಹಿಕ ಅತ್ಯಾಚಾರಕ್ಕೆ ಒಳಗಾಗಿ, ಉಳಿದು, ಧೈರ್ಯದಿಂದ ಸಾಕ್ಷಿ ಹೇಳಿದ ಮಹಿಳೆಯರ ಜೊತೆ ನಾನು



ತೀಸ್ತಾ

ಒಡನಾಡುತ್ತಿದ್ದೇನೆ. ಅವರು ಕೇಳುವುದು ಹಿಂಸೆ ನಡೆಸಿದವರಿಗೆ, ತಾವು ನಡೆಸಿದ ಹಿಂಸೆ ತಪ್ಪು ಎಂದು ಮನಗಾಣಿಸುವ ಶಿಕ್ಷೆಯನ್ನು; ಅಂಥ ಹಿಂಸೆ ಮುಂದೆ ಯಾರೂ ಯಾರ ಮೇಲೆಯೂ ನಡೆಸದಂತೆ ಮಾಡುವ ನ್ಯಾಯಬದ್ಧ ಶಿಕ್ಷೆಯನ್ನು. ಅವರು ಬದುಕುಳಿದವರು, ಉಳಿದು ನ್ಯಾಯ ಬೇಡುವವರು. ಈ ಹುಡುಗಿಯೂ ಬದುಕುಳಿದು ನ್ಯಾಯ ಕೇಳಲು ಹೋರಾಡಿದವಳು, ಅವಳು ಹ್ಯಾಗೆ ಜಿಂದಾಲಾಷ್ ಆಗ್ತಳೆ! ಅವಳು ಬದುಕುಳಿದವಳು, ಅವಳು ಬದುಕುಳಿಯಲು ಬಯಸಿದವಳು: ವೊ ಜಿಂದಾ ಲಾಷ್ ನಹೀಂ ಹೈಂ, ಹಮ್ ಕೈಸೇ ವುಸ್ಕೋ ಜಿಂದಾ ಲಾಷ್ ಕಹೆ ಸಕ್ತೆ ಹೈಂ! ಹೈಂನಾ!' ಎಂದರು ತೀಸ್ತಾ ತಮ್ಮ ಮುಖ್ಯ ಭಾಷಣದಲ್ಲೂ, ಆ ನಂತರ ಪತ್ರಕರ್ತರ ಜೊತೆ ನಡೆಸಿದ ಮಾತುಕತೆಯಲ್ಲೂ ತೀಸ್ತಾ ದೀದಿ ಪದೆ ಪದೆ 'ಹೈಂನಾ!' ಎಂದು ಕೇಳುವವರ ಎದೆ ತಟ್ಟುವಂತೆ, ಕಣ್ಣರಳಿಸಿ ಪುಟ್ಟ ಶಾಲಾಬಾಲಕಿಯ ಹಾಗೆ ಕೇಳುತ್ತಿದ್ದರು, ತನ್ನ ಮಾತನ್ನು ತಾನೇ ಪರೀಕ್ಷಿಸಿಕೊಳ್ಳುವ ಹಾಗೆ. ಆ ಮಾತನ್ನು ಕೇಳುತ್ತಿದ್ದ ಹಾಗೆ ನನ್ನ ಸರ್-ಒ-ಜಿಗರ್ ಕೀ ಬತ್ತಿ ಸರಕ್ಕ ಅಂತ ಹೊತ್ಕೊಂಡುಬಿಡ್ತು. ಅನ್ಕೊಂಡೆ ಕಣ್ರಿ, ಈಕೆ ಹೋರಾಡಿ ಉಳಿವಾಕಿ, ಉಳಿದು ಬೆಳೆಸೋವಾಕಿ ಅಂತ. ತೀಸ್ತಾ ದೀದಿಯ ಈ ಬಗೆಯಲ್ಲಿ ಸರ್-ಒ-ಜಿಗರ್ ಕೀ ಬತ್ತಿ ಬೆಳಗಿಸುವ ಶಕ್ತಿಗೆ ಸಲಾಮ್ ಹೇಳೋಣ.

ನಾನು ರೀಲ್ ರಂಗೀಲದ ಹುಚ್ಚ ಅಂತ ಈಗಾಗ್ಲೆ ನಿಮ್ಗೆ ಗೊತ್ತು, ನಮ್ಮ ಜನಪ್ರಿಯ ಸಿನಿಮಾಗಳು ನಮ್ಮ ಸಮಾಜದ ಢೋಂಗಿತನವನ್ನು ತಮ್ಮ ಮಸಾಲೆ ಮನೋರಂಜನೆಯ ನಡುವೆ ತಟ್ಟನೇ ಒಂದು ಬಿಕುಕು ಮೂಡಿಸಿ ತೋರಿಸುತ್ತವೆ ಅಂತ ಕೆಲವು ಉದಾಹರಣೆ ಕೊಟ್ಟಿದ್ನಿ. ಆದ್ರೆ ಹೆಂಗಸರ ಶೀಲದ ಪ್ರಶ್ನೆ ಬಂದಾಗ ಮಾತ್ರ ಅವೂ ಅಷ್ಟೇ ಸಾರ್. ಅವು ಮುಟ್ಟಬಹುದಾದ ಎತ್ತರ ಒಂದು ಬದಿ 'ಶರಪಂಜರ' ಮತ್ತೊಂದು ಬದಿ 'ಇನ್ಸಾಫ್ ಕೀ ತರಾಜು'. ಇಂತಿಪ್ಪ ರೀಲುರಂಗೀಲಾ ದುನಿಯಾದೊಳ್ ಮಹಿಳೆಯರ ಮೇಲೆ ನಡೆಯುವ 'ರೇಪ್' ಅನ್ನು ಹಲವು ಮಗ್ಗುಲುಗಳಿಂದ ಅರಿಸುವ 'ಜನಪ್ರಿಯ' ಅನ್ನೋ ಮಾದರಿಗೆ ಸೇರದ ಚಲನಚಿತ್ರಗಳಿವೆ. ಅಂಥ ಒಂದು ಚಿತ್ರ ಉನ್ನಿವಿಜಯನ್ ಅವರ 'ಲೆಸನ್ಸ್ ಇನ್ ಫರ್ಗೆಟಿಂಗ್". ಈ ಚಿತ್ರ ಹೋದ ತಿಂಗಳಲ್ಲಿ ಬೆಂಗಳೂರಲ್ಲಿ ನಡೆದ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡಿತು. ಈ ಹೊತ್ತಿಗೆ ದೆಹಲಿಯಲ್ಲಿ ನಡೆದ ಅತ್ಯಾಚಾರದ ಬಗ್ಗೆ ಚರ್ಚೆ ಪ್ರತಿಭಟನೆಗಳು ನಡೆಯುತ್ತಿದ್ದವು. ಈ ಸಿನಿಮಾವನ್ನು ನೋಡಿ ಮತ್ತು ಸುತ್ತಲಿನ ಸಮಾಜದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಸಿನಿಮಾದ ಜೊತೆ ಹೆಣೆದು, ತುಂಬಾ ಒಳ್ಳೆಯ ವಿಮರ್ಶೆಯನ್ನು 'ದಿ ಹಿಂದು' ಪತ್ರಿಕೆಯಲ್ಲಿ ಬಾಗೇಶ್ರೀಯವರು ಬರೆದಿದ್ದಾರೆ (ದಿ ಹಿಂದು, ಡಿಸೆಂಬರ್ 23,2012, ಬೆಂಗಳೂರು ಆವೃತ್ತಿ, <http://www.thehindu.com/todays-paper/tp-national/tp-karnataka/popular-mood-on-gender-violence-finds-an-echo-at-biffes/article4230830.ece>).

ಬಾಗೇಶ್ರೀ ತಮ್ಮ ಸುತ್ತಲಿನ ವಿದ್ಯಮಾನಗಳನ್ನು ಭಿನ್ನ ಬಗೆಯಲ್ಲಿ ಅರಿತು ಬರೆಯುವ ಪತ್ರಕರ್ತರು. ಅವರು ತಮ್ಮ ಪ್ರಸ್ತುತ ಬರಹದ ಕೊನೆಯಲ್ಲಿ ಸೂಕ್ಷ್ಮ ಅರಿವಿನ ಮಾತೊಂದನ್ನು ಬರೆದಿದ್ದಾರೆ: "ತಂದೆತಾಯಂದಿರು ತಮ್ಮ ಮಕ್ಕಳಿಗೆ, ಅದರಲ್ಲೂ ಮಗಳಿಗೆ, ಈಗ ಏನಂತ ಹೇಳಬೇಕು? ಹೋಗಿ ಏನಾದ್ರು ಸರಿ ಜಗತ್ತನ್ನು ಎದುರಿಸಿ ಅಂತಲೋ? ಅಥವಾ ಬೇಡ ಮಗಳೆ ರಗಳೆ ಇಲ್ಲದ ದಾರಿ ನೋಡಿಕೊ ಅಂತಲೋ? ಇದು ಇಂದು ಪ್ರತಿ ಪಾಲಕರೂ ಉತ್ತರಿಸಲು ನಿಜಕ್ಕೂ ಒದ್ದಾಡುವಂತಹ ಪ್ರಶ್ನೆ". ಈ ಸೂಕ್ಷ್ಮವ್ರೂ ಮುಖ್ಯ ಬಾಗೇಶ್ರೀಯವರಿಗೂ ಒಂದು ಸಲಾಂ ಹೇಳೋಣ. ●

20ನೇ ವರ್ಷಕ್ಕೆ ಕಾಲಿಟ್ಟ ಕಟ್ಟೆ ಪುರಾಣ



ಕಟ್ಟೆಪುರಾಣ ಅಂಕಣ ಇಪ್ಪತ್ತನೇ ವರ್ಷಕ್ಕೆ ಕಾಲಿಟ್ಟಿರುವುದನ್ನು ಕಂಡು ಅಚ್ಚರಿಯಾಗುತ್ತಿದೆ. ಈ ಕಾಲಮ್ಮಿನ ಹಿಂದೆ ಮತ್ತು ಇದು ಶುರುವಾದ ಅನೇಕ ಐತಿಹಾಸಿಕ ಘಟನೆಗಳಿವೆ. ಸರಿಯಾಗಿ ಹನ್ನೆರಡು ವರ್ಷ ಸ್ಲಿಯಾಂವ್ ಬರೆದ ಪುಂಡಲೀಕ್ ಶೇಟ್ ಅಕಾಲ ಮರಣಕ್ಕೆ ತುತ್ತಾದರು. ಸಾವು ಲಂಕೇಶ್‌ರಿಗೆ ತುಂಬಾ ಆಘಾತವುಂಟುಮಾಡಿತ್ತು. ಏಕೆಂದರೆ ಲೀಕರ ಕಾಲಂ ಆ ಮಟ್ಟದಲ್ಲಿತ್ತು. ನಾಲ್ಕು ಸಾಲು ಸಿನಿಮಾ ಹಾಡಿನಿಂದ ಭಗೊಂಡ ಅವರ ಲೇಖನ ಆ ವಾರದ ರಾಜಕಾರಣವನ್ನ ಲೇವಡಿ , ಕಡೆಗೆ ಒಂದು ಆಧುನಿಕ ವಚನದೊಂದಿಗೆ ಮುಕ್ತಾಯವಾಗುತ್ತಿತ್ತು. ಹಾಸ್ಯಲೇಖನ ಆ ವಚನದ ಮೇಲೆ ನಿಂತಿರುವಂತೆ ಬರೆಯುತ್ತಿದ್ದ ಲೀಕ್ ಶೇಟ್ ದೈತ್ಯ ಪ್ರತಿಭಾವಂತ. ಹನ್ನೆರಡು ವರ್ಷವಾದರೂ ಬೋರ್ ಹೊಡೆಸದೆ ಪ್ರತಿ ವಾರ ಕಾಯುವಂತಹ ತಾಜಾತನ ಕೊಂಡಿತ್ತು.

ಪುಂಡಲೀಕ್ ಶೇಟ್ ತೀರಿಕೊಂಡ ನಂತರ ಅವರ ಕಾಲಂ ಇಲ್ಲದ ನೋಡಲು ಲಂಕೇಶರಿಗೆ ಬೇಸರವಾಗುತ್ತಿತ್ತು. ಆ ಸಾವಿನ ಬಗ್ಗೆ ಬರೆದ ಲಂಕೇಶ್ 'ಈ ಅತಾರ್ಕಿಕ ಸಾವಿಗೆ ನನ್ನ ಉತ್ತರವೆಂದರೆ ಲೀಕ್ ಬದುಕಿದ್ದಾನೆ. ಆತ ತೀರಿಕೊಂಡಿಲ್ಲ ಎಂಬ ಸವಾಲೆಸೆಯುತ್ತೇನೆ' ರು! ಇದಾದ ಒಂದು ತಿಂಗಳ ನಂತರ ಪತ್ರಿಕೆ ಆಫೀಸಿನಲ್ಲಿ ಅವರೆದುರು ಕುಳಿತಿದ್ದಾಗ, "ಚಂದ್ರೇಗೌಡ, ನೀನ್ಯಾಕಯ್ಯ ಪುಂಡಲೀಕ್ ತರ ಒಂದು ಶುರುಮಾಡಬಾರ್ದು?" ಎಂದರು. ಆಶ್ಚರ್ಯಗೊಂಡ ನಾನು "ನನ್ನ ಕಲ್ಲ ಸಾರ್. ಪುಂಡಲೀಕ್ ಶೇಟ್ ಎಲ್ಲಿ, ನಾನೆಲ್ಲಿ" ಎಂದೆ. "ಅಂಗಲ್ಲಯ್ಯ ಲೀಕ್ ಶೇಟ್ ತರ ನಾನೂ ಬರಿಬಲ್ಲೆ. ನಾನೇಳಿದ್ದೇನಂದ್ರೆ ನೀನು ತರ ಬರಿ. ನಿಮ್ಮ ಜನ ಮಾತಾಡ್ತರಲ್ಲ ಅಂಗೆ. ನಾನು ಕ್ಯಾಪ್ಷನ್ ಎ. ಚಿಕ್ಕದಾಗಿ ಶುರು ಮಾಡು" ಎಂದರು. ನಾನು ಮತ್ತೆ "ನನ್ನ ಕಲ್ಲ ಸಾರ್" ಎಂದಾಗ ಅವರ ಮುಖ ಸಿಟ್ಟಿನಿಂದ ಉರಿಯುತ್ತಿತ್ತು. ಎದ್ದು ಬಂದೆ.

ನ್ನ ಹಿಂದೆಯೇ ಲಂಕೇಶರ ಪತ್ರ ಬಂತು. ಅದರಲ್ಲಿ ನನ್ನನ್ನು ಪುಂಬಿಸುವ ಸಾಲುಗಳಲ್ಲದೆ, ಎಂಥವರಿಂದಲೂ ಬರೆಸುವ ಟಿಪ್ಪಣಿಗಳಿದ್ದವು. ೂ ಗೆಳೆಯರು ಆ ಪತ್ರವನ್ನು ಪಡೆದು ಮತ್ತೆ ಮರಳಿ ಕೊಡಲಿಲ್ಲ. ಮರೆತು ಬಿಟ್ಟೆ. ಲಂಕೇಶರ ಒತ್ತಾಯ ನನ್ನ ತಲೆ ತುಂಬಿದ್ದರಿಂದ ಸೂಚನೆಯಂತೆ ಕಾಲಂ ಶುರು ಮಾಡಿದೆ. "ಇನ್ನೊಂದು ಸ್ವಲ್ಪ ಜಾಸ್ತಿ ಅಂದ್ರೆ ಅರ್ಧ ಪುಟ ಆಗೋವಷ್ಟು ಬರಿ" ಎಂದು ಪತ್ರ ಬಂತು.

ಟ್ಟೆ ಪುರಾಣ ಕಾಲಂ ಶೂನ್ಯದಿಂದ ಸೃಷ್ಟಿಯಾದದ್ದಲ್ಲ. ನಾನು ಸಣ್ಣ ಗನಾಗಿದ್ದಾಗ ನಮ್ಮಪ್ಪ ಒಂದು ಹೋಟೆಲ್ ಮಡಗಿದ್ದ. ಮನೆಯಲ್ಲಿದ್ದ ಒಂದೂವರೆ ಸೇರು ಹಾಲು ಕೊಡುತ್ತಿತ್ತು. ಆ ಎಮ್ಮೆ ಕೋಣಗರುವನ್ನ ದ್ದರಿಂದ ಅದಕ್ಕೆ ಹಾಲು ಬಿಡದೆ ಅದು ಸತ್ತು ಹೋಯಿತು. ಆ ನ ನೋವಿನ ಕಣ್ಣು ಈಗಲೂ ನನ್ನ ಮನಸ್ಸಿನಲ್ಲಿದೆ. ಆ ಎಮ್ಮೆ ಂದ ಮಾಡುವ ಕಾಫಿ ಕುಡಿಯಲು ಅಪ್ಪನಂತವರೇ ಬಂದು ಕೂರುತ್ತಿದ್ದರು. ಬೆಂಚಿನಿಂದ ಸಜ್ಜುಗೊಂಡಿದ್ದ ಆ ಗುಡಿಸಲ ಹೋಟೆಲು ಮೊಟ್ಟೆ ಕಾವು ಕುಳಿತ ಕೋಳಿಯಂತೆ ಕಾಣುತ್ತಿತ್ತು. ಸಂತೆಯಿಂದ ತಂದ ರ್ವತಿ, ಗಣೇಶ, ಶ್ರೀರಾಮಾಂಜನೇಯರ ಕ್ಯಾಲೆಂಡರುಗಳು ಗೋಡೆ ರಿಸಿದ್ದವು. ಅಮರ ಶಿಲ್ಪಿ ಜಕಣಾಚಾರಿ ಸಿನಿಮಾದ ಪೋಸ್ಟರೂ ಇತ್ತು. ುಂದರಿಯಂತೆ ಕಾಣುವ ಸರೋಜಾದೇವಿ ಅವರನ್ನು ನೋಡಿದ್ದ ನಮ್ಮ ು ಅವರ ಸುತ್ತ ಕತೆಗಳನ್ನೆ ಹೆಣೆಯುತ್ತಿದ್ದರು. ಇದಿಷ್ಟೇ ಅಲ್ಲ ರಣದಲ್ಲಿ ನಿಜಲಿಂಗಪ್ಪ, ನೆಹರು, ಕೆಂಗಲ್ ಹನುಮಂತಯ್ಯ ಇವರೆಲ್ಲರ ಬಗ್ಗೆ ನನ್ನ ಮಾತನಾಡುತ್ತಿದ್ದರು. ಅವರೆಲ್ಲ ಕುಡಿದ ಕಾಫಿಲೋಟಗಳನ್ನ ತೊಳೆಯುತ್ತಿದ್ದ ನಾನು ಅವರ ಮಾತಿಗೆ ಕಿವಿಗೊಡಲಾಗಿ, ಅದೆಲ್ಲಾ ನಿಧಿಯಂತೆ ಸಂಗ್ರಹಗೊಳ್ಳುತ್ತಿತ್ತು.

ಗ ಊರಿನಲ್ಲಿ ಯಾರೂ ಕುಡಿಯುತ್ತಿರಲಿಲ್ಲ. ಅಕಸ್ಮಾತ್ ಸಂತೆಗೆ ಹೋದವರು ಕುಡಿದು ಬಂದರೆ ನಮ್ಮ ಹೋಟೆಲಿನಲ್ಲೇ ಮಲಗಿ ಅಮಲಿಳಿದ ಮೇಲೆ ಹೋಗುತ್ತಿದ್ದರು. ಕುಡುಕರಿಗೆ ಬೆಲೆಯಿಲ್ಲದ ಕಾಲ ಅದು. ಕುಡಿದವನನ್ನ ಮೈಮೇಲೆ ಬರುವ ಪ್ರಾಣಿಯಂತೆ ಹುಷಾರಾಗಿ ನೋಡುತ್ತ ಆರುಗಾಸಿ ಹೋಗುತ್ತಿದ್ದರು. ಕುಡುಕರೂ ಕೂಡ ಮಾಡಿದ ತಪ್ಪು ಕ್ಷಮಿಸುವಂತೆ ನಗುತ್ತ ನೋಡುತ್ತಿದ್ದರಿಂದ ಇನ್ನೂ ಭಯವಾಗುತ್ತಿತ್ತು!

ಆ ಹೋಟೆಲು ಎಂತಹ ತಾಣವಾಗಿತ್ತೆಂದರೆ, ಅಲ್ಲಿಗೆ ಬುಡುಬುಡಿಕೆಯವರು, ಗೊಂಬೆರಾಮರು, ಹಕ್ಕಿಪಿಕ್ಕರು, ಗಾಣಿಗರು, ಕಲ್ಲು ಮಣ್ಣು ವಡ್ಡರು... ಹೀಗೆ ಸಕಲಿಷ್ಟು ಜಾತಿಯವರು ಬಂದುಹೋಗುತ್ತಿದ್ದರು.

ಕೆಲವು ದಿನ ಇಡ್ಲಿ ಮಾಡಿದೆವು. ಆದರೆ ಬಡವರನ್ನು ಕಂಡು ಮರುಗುತಿದ್ದ ಅಪ್ಪ ಇಡ್ಲಿ ಕೊಟ್ಟು ಕಾಸನ್ನೆ ಈಸಿಕೊಳ್ಳುತ್ತಿರಲಿಲ್ಲ, ಅವ್ವ ಸರಿಯಾಗಿ ಬೈದು ಇಡ್ಲಿ ನಿಲ್ಲಿಸಿದಳು. ಶನಿವಾರ ಮಾತ್ರ ಉಪ್ಪಿಟ್ಟು ಮಾಡಿ ಮಡಗುತ್ತಿದ್ದೆವು. ಏಕೆಂದರೆ ಮಂಡ್ಯ ಜಿಲ್ಲೆಯಲ್ಲೇ ದೊಡ್ಡ ಸಂತೆಯಾದ ಕದಬಹಳ್ಳಿ ಸಂತೆಗೆ ನಡೆದು ಹೋಗುವವರು ಹೋಟೆಲಿಗೆ ಬಂದು ಉಪ್ಪಿಟ್ಟು ತಿಂದು ಹೋಗುತ್ತಿದ್ದರು. ಯಾವಾಗಲಾದರೊಮ್ಮೆ ವಡೆ ಮಾಡಿದರೆ ಮನೆಮಂದಿಯೆಲ್ಲಾ ತಿಂದು ಹಾಕಿದ ಬಂಡವಾಳವೇ ಹೊಟ್ಟೆ ಸೇರಿದ್ದರಿಂದ ಅದೂ ನಿಂತುಹೋಯ್ತು.

ಈ ನಡುವೆ ಊರ ಪಟೇಲರಿಗೆ ಬಿಟ್ಟಿ ಕಾಫಿ ಕೊಡಬೇಕಾಗಿತ್ತು. ಜಾಗ ಕೊಟ್ಟ ಕಾರಣಕ್ಕೆ ಛೇರ್ಮನ್ನರಿಗೂ ಬಿಟ್ಟಿ ಕಾಫಿ. ಅಷ್ಟೇ ಅಲ್ಲದೆ, 32 ಪೇಜಿನ ಎಕ್ಸೈಜ್ ಹಾಳೆಯಲ್ಲಿ ಹಣ ಬಾಕಿ ಕೊಡುವವರ ಹೆಸರು ತುಂಬಿಹೋಗಿದ್ದವು. ಹೊಲ ಉಳುವುದನ್ನು ಬಿಟ್ಟ ಅಪ್ಪ ಸಮಯದೂಡಲು ಒಂದು ಅದ್ಭುತ ಜಾಗ ಸಿಕ್ಕತ್ತೇ ಹೊರತು ಆ ಹೋಟೆಲಿನಿಂದ ಏನೂ ಸಿಕ್ಕಲಿಲ್ಲ.

ದಾನಶೂರ ಕರ್ಣ ನಾಟಕದ ಪ್ರಾಕ್ಟೀಸ್ ಆ ಹೋಟೆಲಿನಲ್ಲೇ ಶುರುವಾದಾಗ ಅಪ್ಪ ಮತ್ತು ಅಣ್ಣನಿಗೆ ಒಂದೆರಡು ಸಣ್ಣ ಪಾತ್ರ ಸಿಕ್ಕಿದವು. ನಮ್ಮಣ್ಣ ಅಪ್ಪ ಪಾತ್ರ ಮಾಡುವುದನ್ನು ವಿರೋಧಿಸಿದ್ದರಿಂದ ಬಿಟ್ಟಿ ಕೂಳಿನ ದ್ರೋಣನ ಪಾತ್ರ ಬಿಟ್ಟು ಕೊಡಬೇಕಾಯ್ತು, ಅಣ್ಣನಿಗೆ ಸೋಮಪ್ರಭೆಯ ಸಖಿ ಪಾತ್ರ ಸಿಕ್ಕಿತು. ನನಗೀಗಲೂ ಗುಡಿಸಲ ಹೋಟೆಲಿನ ರಚ್ಚಿನ ವಾಸನೆ ಬಂದರೆ, ದಾನ ಶೂರಕರ್ಣದ ಹಾಡು ಪ್ರಾಕ್ಟೀಸು ನೆನಪಾಗಿ ರಾಚುತ್ತವೆ.

ಈ ನೆನಪುಗಳೇ ಕಟ್ಟೆ ಪುರಾಣದ ಧರಿಯಾದದ್ದು, ಬಹಳ ಶೂಕವಾಗಿ ಜವಾಬ್ದಾರಿಯಾಗಿ ಮಾತನಾಡುತ್ತಿದ್ದ ಪಟೇಲರು ಕಾಳಮಾವನಾಗಿ, ಅವರ ಮಾತಿಗೆ ವಿಚಿತ್ರ ಮತ್ತು ವಿಭಿನ್ನ ದನಿಗೂಡಿಸುವ ಸೀರ, ಎಸ್ಸೆಸ್ಸೆಲ್ಸಿ ಫೇಲಾಗಿ ಕ್ರಮೇಣ ತಮ್ಮ ಹಿರೀಕರಂತಾಗುವ ಚಹರೆ ತೋರುವ ಉಗ್ರಿ, ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಹಳ್ಳಿ ಕಡೆ ಕಾಣಿಸಿಕೊಂಡ ಶರಾಪಿನಂಗಡಿ ಫಲವಾಗಿ ಉದ್ಭವಿಸಿದ ವಾಟಿಸ್ಸೆ, ಹೊಸದಾಗಿ ಅಸ್ತಿತ್ವಕ್ಕೆ ಬಂದ ಮಂಡಲ ಪಂಚಾಯ್ತಿ ಸದಸ್ಯೆ ಜುಮ್ಮಿ, ಸಿದ್ದಮ್ಮ, ಕಲಕಪ್ಪ ಮಾಸ್ಟರು, ಇವರೆಲ್ಲಾ ಬಂದು ತಾವಾಗಿಯೇ ಸೇರಿಕೊಂಡರಲ್ಲದೆ ಇಷ್ಟು ದಿನ ಕಾಲಂ ಬರೆಸಿದರು.

ಲಂಕೇಶರು ಇದ್ದಾಗಲೇ ಒಮ್ಮೆ "ಕಾಲಂ ನಿಲ್ಲುಸ್ತಿನಿ ಸಾರ್" ಎಂದಿದ್ದೆ. "ನಿಲ್ಸು ಅಂತ ಹೇಳಿದ್ನ ನಾನು?" ಎಂದು ದುರುಗುಟ್ಟಿ ನೋಡಿದರು. ಸುಮ್ಮನೆ ಬರೆಯುತ್ತಾ ಹೋದೆ.

ಈ ಕಾಲಂನಲ್ಲಿ ಬರುವ ಸೀರ ಎಂಬ ಪಾತ್ರವನ್ನು ಒಬ್ಬ ತನ್ನ ಮೇಲೆ ಎಳೆದುಕೊಂಡು ಖುಷಿಯಾಗಿ ಓಡಾಡಿದ್ದಿದೆ. ನಾನು ಸಿಕ್ಕಾಗ ಆತ ಹತ್ತು ರೂಪಾಯಿ ಕೇಳುತ್ತಿದ್ದ ಅಷ್ಟೆ. ಇನ್ನ ನಮ್ಮಣ್ಣನ ಹೆಸರು ಬಂದಾಗ ಆತ ಮನೆ ಬಳಿ ಬಂದು ಕೂಗಾಡಿ ಹೋದದ್ದೂ ಇದೆ. ಸಹಪಾಠಿಯೊಬ್ಬ ಅತ್ತು ಕರೆದು ತನ್ನ ಮಾನವೇ ಹೋಯ್ತೆಂದು ಗೋಳಾಡಿದ. ಸಖತ್ತಾಗಿ ಕುಡಿಸಿದ ನಂತರ ಆತ ಸುಮ್ಮನೆ ಹೋದ.

ಇಂತದೊಂದು ಕಾಲಂಗೆ ಪತ್ರಿಕಾ ಅಕಾಡೆಮಿ ಪ್ರಶಸ್ತಿ ಬಂದಾಗ ನನಗೇ ಅಚ್ಚರಿಯಾಗಿತ್ತು. ಲಂಕೇಶರು ಸೇಂಟ್ ಜಾನ್ ಆಸ್ಪತ್ರೆಯಲ್ಲಿ ಮಲಗಿಕೊಂಡೆ ದಿಂಬನ್ನ ಆಧಾರವಾಗಿಟ್ಟು ಮೆಚ್ಚುಗೆ ಟಿಪ್ಪಣಿ ಬರೆದು "ಈತನಿಗೆ ಆಗಿರುವಷ್ಟು ಸಂತೋಷ ನನಗೂ ಆಗಿದೆ" ಎಂದರು.

ಈ ಕಾಲಂ ಸಿಕ್ಕಿದ ಮೇಲೆ ಒಂದು ರೀತಿ ಮೈಗಳ್ಳನಂತಾದ ನಾನು ಕತೆ ಕಾದಂಬರಿ ಕಡೆ ಗಮನ ಹರಿಸಲಿಲ್ಲ. ಲಂಕೇಶರು ತೀರಿಕೊಳ್ಳುವ ಮುನ್ನ ಒಂದು ದಿನ ಅದೇನು ಗುರುತಿಸಿದರೊ ಏನೋ "ಚಂದ್ರೇಗೌಡ, ನೀನು ಇನ್ನೊಂದು ಕಾಲಂ ಬರಿಯಯ್ಯಾ. ಅದರೆಸರು 'ಥೂತ್ತೇರಿ' ಅಂತ. ಶುರು ಮಾಡು. ಮನಸು ಮಾಡಿದ್ರೆ ಹತ್ತು ಬರಕೊಡ್ತಿ ನೀನು" ಎಂದರು. ನಾನು ಶುರು ಮಾಡುವಷ್ಟರಲ್ಲಿ ಮೇಷ್ಟ್ರು ಕಣ್ಮರೆಯಾದರು. ಆದರೆ, ಈ ವಿಷಯ ತಿಳಿದುಕೊಂಡ ಗೌರಿ ತುಂಬ ಒತ್ತಾಯ ಮಾಡಿ 'ಥೂತ್ತೇರಿ' ಕಾಲಂ ಬರೆಸಿದರು. ಈ 'ಥೂತ್ತೇರಿ'ಗೆ ಈಗ ಹನ್ನೆರಡು ವರ್ಷವಾದರೆ, 'ಪುರಾಣ' ಇಪ್ಪತ್ತನೇ ವರ್ಷಕ್ಕೆ ಕಾಲಿಟ್ಟು ನನ್ನ ಭಾಗದ ಕಾಲ ಬೇಗ ಹೋದಂತೆ ಕಾಣುತ್ತದೆ. ಬರವಣಿಗೆ ನನ್ನ ಬದುಕಿನ ಕಾಲವನ್ನೇ ತಿಂದು ಹಾಕಿದಂತೆ ಕಾಣುತ್ತಿದೆ. ಹಳ್ಳಿಗಳಲ್ಲಾದರೆ ಸೂರ್ಯೋದಯದಿಂದ ಸೂರ್ಯಾಸ್ತಮಾನದವರೆಗೆ ಒಂದು ಯುಗ ಕಳೆದ ಅನುಭವವಾಗುತ್ತದೆ. ಆದರೆ ಪಟ್ಟಣದ ಜನ ಇದರಿಂದ ವಂಚಿತರಾದ್ದರಿಂದ ಬೇಗ ಕಾಲವೇ ಮುಗಿದಂತೆ ಕಾಣುತ್ತದೆ.

ಲಂಕೇಶರು ತೀರಿಕೊಂಡು ಈಗ ಹದಿಮೂರು ವರ್ಷಗಳಾಗುತ್ತ ಬಂದಿದೆ. ಅಮೆಜಾನ್ ನದಿ ಸಮುದ್ರ ಸೇರಿದ ನಂತರವೂ ಕಿಲೋಮೀಟರುಗಟ್ಟಲೆ ಸಮುದ್ರವನ್ನೇ ನೂಕಿಕೊಂಡು ಒಳಗೋಗುತ್ತದಂತೆ. ಹಾಗೆಯೇ ನಮ್ಮನ್ನು ಇನ್ನೂ ನೂಕುತ್ತಿರುವ ಶಕ್ತಿ ಲಂಕೇಶರು ಎಂದು ಭಾವಿಸಿದ್ದೇನೆ.

● ಬಿ. ಚಂದ್ರೇಗೌಡ

ಇವನೀಗ ಎಲ್ಲಿದ್ದಾನೆ

ುಷ್ಟೆ
ಗಿಗಳ ಮೆರವಣಿಗೆಯಲ್ಲಿ
ಘೋಷಣೆಗಳನ್ನು ಬರೆದು
ಧಿಕ್ಕಾರ ಕೂಗುತ್ತಿದ್ದ.
ಕೊಟ್ಟ
ರ್ವ ದೀಪಾವಳಿಯ
ಪತ್ರಿಕೆ ಹರಿದು
ಂದಿಗೆ ಕ್ರೈಸ್ತರೊಂದಿಗೆ
ಳಿಯೇ.. ಅಕಟಕಟಾ
ಹಲ್ಲು ಮಸೆದಿದ್ದ.

ಸಾಬರನ್ನು
ಪಾದ್ರಿಗಳನ್ನು
ದೇ ಗೇಲಿ ಮಾಡುತ್ತಿದ್ದ.
ರಿಯ ಸಾಬರ ಹುಡುಗ
ಸಕ್ಷದ ಮನೆಯ

ಡಿಂಪಲ್ ಗಲ್ಲದ ಸುಂದರಿಗೆ
ಲೈನ್ ಹೊಡೆದಿದ್ದಕ್ಕೆ ಇವನು
ಅವನ ಕಪಾಳಕ್ಕೆ ಹೊಡೆದಿದ್ದ.
ಇವನ ಜಾತಿಯ ರಾಧಿಕಳಿಗೂ
ಅವರ ಜಾತಿಯ ಸಾಧಿಕನಿಗೂ
ಪ್ಯಾರ್‌ಗೆ ಆಗ್ಬಿಟ್ಟಾಗ
ಮದುವೆಯಾಗದಂತೆ ತಡೆದಿದ್ದ.
'ಲವ್ ಜಿಹಾದ್' ನಿಲ್ಲಿಸಿದ
ಕೀರ್ತಿಯನೂ ಗಳಿಸಿದ್ದ.
ಹೀಗೆಲ್ಲ ತುಂಬಾನೇ ಹೆಸರು ಪಡೆದಿದ್ದ.

ಭಾರತದಲ್ಲಿ
ಬರಕ್ಕೆ ಬಾಬರನೂ
ಬಡತನಕ್ಕೆ ಅಕ್ಬರನೂ
ಕಾರಣ ಎಂದು ಭಾವಿಸಿದ್ದ.
ಕಾಪು ಮಸೀದಿಗೆ
ಕಲ್ಲು ಹೊಡೆದವರ ಪಟ್ಟಿಯಲ್ಲಿ
ಇವನಿದ್ದರೂ
ಪೊಲೀಸರಿಂದ ತಪ್ಪಿಸಿಕೊಂಡಿದ್ದ.
ಇಗರ್ಜಿಗೆ ಹೋಗುವ
ಮೇರಿಗೆ ಮೊಂಬತ್ತಿ ಬೆಳಗುವ
ಇವನ ಜಾತಿಯವರನ್ನು

ಕಂಡರೆ ಸಿಟ್ಟಾಗುತ್ತಿದ್ದ.
ಕ್ರೈಸ್ತರ ಮನೆಗೆ ಹೋದರೆ
ಮತಾಂತರ ಗ್ಯಾರಂಟಿ
ಎಂದು ಹೆದರಿಸಿದ್ದ.

ಕಲ್ಲಡ್ಕದ ಭಟ್ಟರೂ
ಕೆಂಪು ನಾಮದ ಶೆಟ್ಟರೂ
ತನಗೆ ಆದರ್ಶ ಎಂದು ನಂಬಿದ್ದ.
ಧರ್ಮ ರಕ್ಷಣೆಯ ಪಾಠವನು
ಗೆಳೆಯರಿಗೆ ಹೇಳಿದ್ದ.



ಪಾಠಶಾಲೆಗಿಂತ ಗೋಶಾಲೆಯೆ ಮುಖ್ಯ
ಎಂದು ವಾದಿಸಿದ್ದ.
ಅವರ ಜಾತಿಯ
ದುಷ್ಟರ ಶಿಕ್ಷೆಗೆ ಇವರ ರಕ್ಷೆಗೆ
ಸಂಗಾತಿಗಳ ಪಡೆಯನ್ನೇ ಕಟ್ಟಿದ್ದ
ಕೋಡೆಯನ್ನೂ ತಟ್ಟಿದ್ದ
ಗರ್ವದಿಂದ ಗರ್ಜಿಸಿ
ಹೂಂಕರಿಸಿದ್ದ.

ಮೊನ್ನೆ ಅಚಾನಕ್ ಆಗಿ
ಇವನ ಅಪ್ಪನ ಬಾಲ್ಯದ ಗೆಳೆಯ
ಇಮ್ಯಾನುಯೆಲ್ ಸಿಕ್ವೇರಾ
ಇವನಿಗೆ ವೀಸಾ ಕಳಿಸಿಕೊಟ್ಟರು.
ಸೌದಿ ಅರೇಬಿಯಾದಲ್ಲಿ ಉದ್ಯೋಗ
ಅರವತ್ತು ಸಾವಿರ ಸಂಬಳ
ಎರಡು ವರ್ಷಕ್ಕೆ ಮೂರು ತಿಂಗಳ ರಜೆ
ಹೋಗೋದು ಬರೋದು
ಎಲ್ಲ ಖರ್ಚು ಅವರದ್ದೆ
ಅದೂ ವಿಮಾನದಲ್ಲಿ!

ಈಗ ಇವನಿಗೆ
ಸೌದಿ ಅರೇಬಿಯಾದ ಸಾಬರ
ಮಾಂಸದಂಗಡಿಯಲ್ಲಿ ಕೆಲಸ.

ಪಣಂಬೂರಿನ ಬ್ಯಾರಿಗಳು
ಕಂಕನಾಡಿಯ ಕ್ರೈಸ್ತರ ಜೊತೆ
ಈಗ ಇವನ ವಾಸ
ಶುಕ್ರವಾರ ರಜೆ ರಮ್ಜಾನ್‌ನಲ್ಲಿ ಉಪವಾಸ.
ಮನೆಗೆ ಇಪ್ಪತ್ತು ಸಾವಿರ ಕಳಿಸುತ್ತಾನೆ
ಮಿಕ್ಕಿದ್ದನ್ನು ಉಳಿಸುತ್ತಾನೆ.
ಊರಿನಲ್ಲೀಗ ಇವನ ಅಪ್ಪ
ಹೊಸ ಮನೆಗೆ ಪಂಚಾಂಗ ಹಾಕಿದ್ದಾರೆ.
ತಮ್ಮ ಕನಸಿನ ಡಾಬರ್ಮನ್ ನಾಯಿಯನ್ನು
ಗೂಡು ಕಟ್ಟಿ ಸಾಕಿದ್ದಾರೆ.

ಇತ್ತ ಊರಲ್ಲಿ
ಇವನನ್ನು ನಂಬಿದ್ದ
ಕಲ್ಲು ಹೊಡೆದಿದ್ದ ಶಿಲುಬೆ ಮುರಿದಿದ್ದ
ಪೊಲೀಸರಿಂದ ಒದೆ ತಿಂದಿದ್ದ ಗೆಳೆಯರು
ಇವನ ಹೆಸರು ಎತ್ತಿದರೆ
ಮೋಸ ಮೋಸ
ಎಂದು ಊರೆಲ್ಲ ಹೇಳಿಕೊಂಡು
ಇವನಿಗೆ ಹಿಡಿಶಾಪ ಹಾಕುತ್ತಾ
ಉರಿಯುತ್ತಾ ಅಲೆಯುತ್ತಿದ್ದಾರೆ.

● ಶಶಿಧರ ಹೆಮ್ಮಾಡಿ.
ಕುಂದಾಪುರ

ನೇರ ನಗದು ಎಂಬ ಪ್ರಳಯಾಂತಕ ಕಾರ್ಯಾಚರಣೆ



ಭಾರತದ ಜನಸಾಮಾನ್ಯರಿಗೆ ಕೊಡಬಾರದ ತೊಂದರೆಗಳನ್ನು ನಿರಂತರವಾಗಿ ಕೊಡಲು ನಿಶ್ಚಯಿಸಿರುವ ಈ ದೇಶದ ಆಳುವ ಜನರು ಜನವರಿ 1ರಿಂದ ಹೊಸದೊಂದು 'ಕೊಡುಗೆ'ಯನ್ನು ಘೋಷಿಸಿದ್ದಾರೆ. ಅದೇ ನೇರ ನಗದು ವರ್ಗಾವಣೆ (ಡಿಸಿಟಿ - direct cash transfer). ದೇಶದ 16 ರಾಜ್ಯಗಳ 43 ಜಿಲ್ಲೆಗಳಲ್ಲಿ ಹೊಸ ವರ್ಷದ ಮೊದಲ ದಿನದಿಂದ ಇದು ಜಾರಿಗೆ ಬರುತ್ತಿದೆ. ಕರ್ನಾಟಕದಲ್ಲಿ ತುಮಕೂರು, ಧಾರವಾಡ ಮತ್ತು ಮೈಸೂರು ಜಿಲ್ಲೆಗಳಲ್ಲಿ ಆರಂಭವಾಗುತ್ತಿದೆ. ಮುಂದಿನ ಇನ್ನೆರಡು ತಿಂಗಳುಗಳಲ್ಲಿ ದೇಶದ ಜಿಲ್ಲೆಗಳನ್ನು ಆಕ್ರಮಿಸಿ, ವರ್ಷದ ಕೊನೆಯ ಹೊತ್ತಿಗೆ ದೇಶದೆಲ್ಲೆಡೆ ವ್ಯಾಪಿಸುವುದು ಉದ್ದೇಶಿತ ಯೋಜನೆಯಾಗಿದೆ.


ಚಿದಂಬರಂ ಎಂಬ ಕಾರ್ಪೊರೇಟ್ ಕಂಪೆನಿಗಳ ವಕೀಲ ವಿತ್ತ ಸಚಿವಾಲಯದಲ್ಲಿ ಮಂತ್ರಿ ಸ್ಥಾನದಲ್ಲೂ, ನಂದನ್ ನಿಲೇಕಣಿ ಎಂಬ ಮಾಜಿ ಕಾರ್ಪೊರೇಟ್ ಸಿಇಒ ಕ್ಯಾಬಿನೆಟ್ ಸಚಿವನ ಪೀಠದಲ್ಲೂ, ಮಾಂಟೆಕ್ ಸಿಂಗ್ ಅಹ್ಲುವಾಲಿಯಾ ಎಂಬ ದೊಡ್ಡ ಕಂಪೆನಿಗಳ ಮಿತ್ರ ಯೋಜನಾ ಆಯೋಗದ ಉಪಾಧ್ಯಕ್ಷ ಪದವಿಯಲ್ಲೂ ಇದ್ದು ಈ ಯೋಜನೆಯು ಬಂದಿದೆ. ಎಲ್ಲಕ್ಕೂ ತಿಲಕವಿಟ್ಟಂತೆ ಮನಮೋಹಕವಾಗಿ ಇನ್ನೊಬ್ಬ ಆರ್ಥಿಕ ತಜ್ಞ ಪ್ರಧಾನಿಯಾಗಿ ಕುಂತಿರುವುದು ನಮಗೆಲ್ಲರಿಗೂ ತಿಳಿದೇ ಇದೆ. ಈ ವಿಶೇಷ ವ್ಯಕ್ತಿಗಳು ಸೇರಿಕೊಂಡು ತಂದಿರುವ ಈ ಹೈಟೆಕ್ ಯೋಜನೆಯಲ್ಲಿ ದೇಶದ ಬಡವರ ಕುರಿತು ಮಾತೋ ಮಾತು.

ದೇಶಮಂಟೆ ಮಟ್ಟಿ ಕಾದು- ದೇಶಮಂಟೆ ಪ್ರಜಲು (ದೇಶವೆಂದರೆ ಮಣ್ಣಲ್ಲ - ದೇಶವೆಂದರೆ ಪ್ರಜೆಗಳು) ಎನ್ನುವ ತೆಲುಗು ಕವಿಯೊಬ್ಬರ ಮಾತನ್ನೇ ನಾವು ಆಧಾರವಾಗಿಟ್ಟುಕೊಳ್ಳುವುದಾದರೆ, ಈ ನಾಲ್ಕೂ ಜನರನ್ನೂ ದೇಶದ್ರೋಹದ ಆರೋಪದ ಮೇಲೆ ಬಂಧಿಸಬೇಕಿದೆ. ಏಕೆಂದರೆ ಇದುವರೆಗೂ ದೇಶದ 'ಸರ್ವೋನ್ನತ ಪ್ರಾತಿನಿಧಿಕ ಸಂಸ್ಥೆ' ಸಂಸತ್ತಿನಿಂದಲೂ ಒಪ್ಪಿಗೆ ಪಡೆಯದ ಆಧಾರ್ ಎಂಬ ಮತ್ತೊಂದು ಯೋಜನೆಯ ಸಹಯೋಗದಲ್ಲಿ ನೇರ ನಗದು ಕಾರ್ಯಾಚರಣೆಯನ್ನು ಇವರುಗಳು ನಡೆಸಿದ್ದಾರೆ. ಪ್ರತಿಯೊಂದು ಸಂಪುಟ ಸಭೆಯೂ ದೇಶದ ಜನರ ವಿರುದ್ಧದ ಸಂಚುಕೂಟ ಎಂದು ಹೇಳಬಹುದಾದ ರೀತಿಯಲ್ಲಿ ನೇರ ನಗದಿನಂತಹ ಪ್ರಳಯಾಂತಕ ಕಾರ್ಯಾಚರಣೆಗಳನ್ನು ಜಾರಿಗೆ ತರಲಾಗುತ್ತಿದೆ.

ಏನೀ ನೇರ ನಗದು ವರ್ಗಾವಣೆ ಯೋಜನೆ?

ದೇಶದ ಬಹುಸಂಖ್ಯಾತರನ್ನು ಬಡವರನ್ನಾಗಿ ಹೊಂದಿರುವ ಶ್ರೀಮಂತ ದೇಶ ಭಾರತದಲ್ಲಿ ಹಲವಾರು ಬಗೆಯ ಸಬ್ಸಿಡಿಗಳನ್ನು (ಅಕ್ಕಿ, ಗೋಧಿ, ಸೀಮೆಎಣ್ಣೆ, ಪೆಟ್ರೋಲ್, ಗೊಬ್ಬರ ಇತ್ಯಾದಿ) ನೀಡಲಾಗುತ್ತದೆ. ಇದಲ್ಲದೇ ದಮನಿತ ಸಮುದಾಯಗಳಿಗೆ ಸ್ಕಾಲರ್‌ಶಿಪ್, ಫ್ರೀಶಿಪ್, ಶುಲ್ಕ ವಿನಾಯಿತಿಗಳನ್ನು ಶಿಕ್ಷಣ, ಆರೋಗ್ಯ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ನೀಡಲಾಗುತ್ತಿದೆ. 120 ಕೋಟಿ ಜನಸಂಖ್ಯೆಯ ದೇಶದಲ್ಲಿ ಇವೆಲ್ಲಾ ಸಬ್ಸಿಡಿಗಳ ಒಟ್ಟು ಪ್ರಮಾಣ ಒಂದು ಅಂದಾಜಿನಂತೆ 10 ಟ್ರಿಲಿಯನ್‌ಗಳು. ಅಂದರೆ 10 ಲಕ್ಷ ಕೋಟಿ ರೂ.ಗಳು. ತೆರಿಗೆ ವಿನಾಯಿತಿ, ಸಬ್ಸಿಡಿ, ಭೂಮಿ ಈ ರೂಪಗಳಲ್ಲಿ ದೇಶದ ಮತ್ತು ವಿದೇಶದ ಬಹುರಾಷ್ಟ್ರೀಯ ಕಂಪೆನಿಗಳಿಗೆ ನೀಡುವ ಸೌಲಭ್ಯಗಳು ಕನಿಷ್ಠ ಇದರ 30 ಪಟ್ಟಿಗಿಂತ ಹೆಚ್ಚು.


ಆದರೆ ಮೇಲಿನ ದುಷ್ಟ ಚತುಷ್ಟಯರೂ, ಅವರ ಹಿಂ-ಮುಂಬಾಲಕರುಗಳಿಗೂ ಬಡವರ ಮೇಲೆ ಎಲ್ಲಿಲ್ಲದ ಪ್ರೀತಿ. ಹಾಗಾಗಿ ಬಡವರಿಗೆ ತಲುಪುತ್ತಿರುವ ಸಬ್ಸಿಡಿ ಎಲ್ಲೂ ಸೋರಿಕೆ (leakage ಎನ್ನುವ ಪದವನ್ನು ವಿವಿಧ ಹಂತಗಳ ಭ್ರಷ್ಟಾಚಾರಕ್ಕೆ ಬದಲಿಯಾಗಿ ಕೇಂದ್ರ ಸರ್ಕಾರವು ಬಳಸುತ್ತಿರುವ ಪದವೆಂದು ಓದಿಕೊಳ್ಳಬೇಕೆಂದು ವಾಚಕರಲ್ಲಿ ಮನವಿ)ಯಾಗದೇ ತಡೆಯಲು ಎರಡು ಉಪಾಯಗಳನ್ನು ಕಂಡು ಹಿಡಿದಿದ್ದಾರೆ. ಜನಸಾಮಾನ್ಯರಿಗೆ ಇದುವರೆಗೆ ತಲುಪುತ್ತಿದ್ದ ಸರಕು ಅಥವಾ ಸೇವೆಗಳ ಸಬ್ಸಿಡಿ ಹಣವನ್ನು



ನೇರವಾಗಿ ಅವರ ಬ್ಯಾಂಕ್ ಖಾತೆಗೆ ತಲುಪಿಸಲಾಗುವುದು. ಫಲಾನುಭವಿಗಳ ಗುರುತಿಸುವಿಕೆಗೆ ಮತ್ತು ಒಂದೇ ವ್ಯಕ್ತಿ ಎರಡು ಅಥವಾ ಮೂರು ಬಾರಿ ಸೌಲಭ್ಯವನ್ನು ಪಡೆದುಕೊಳ್ಳದೇ ಇರುವುದನ್ನು ಖಾತರಿಗೊಳಿಸಲು 'ಆಧಾರ್' ಗುರುತಿನ ಸಂಖ್ಯೆಯನ್ನು ಆಧಾರವಾಗಿಟ್ಟುಕೊಳ್ಳಲಾಗುವುದು.

ಇದನ್ನು ಒಂದು ಉದಾಹರಣೆಯ ಮೂಲಕ ವಿವರಿಸುವುದಾದರೆ, ಹಾಲಿ ಬಿಪಿಎಲ್ ಕಾರ್ಡುದಾರರು ಒಂದು ತಲೆಗೆ ನಾಲ್ಕು ಕೆ.ಜಿ. ಸಬ್ಸಿಡಿ ಅಕ್ಕಿಯನ್ನು (ಜೈಲಿನಲ್ಲಿ - ಯಾವುದೇ ವಯಸ್ಕ ಮನುಷ್ಯರಿಗೆ ಅಗತ್ಯವಾದ ಪ್ರಮಾಣ ಅಂದರೆ ದಿನಕ್ಕೆ 400 ಗ್ರಾಂ - 12 ಕೆ.ಜಿ. ಧಾನ್ಯವನ್ನು ನೀಡಲಾಗುತ್ತದೆ) ಪಡೆಯುತ್ತಿದ್ದಾರೆ. ಈ ಅಕ್ಕಿಯನ್ನು ಲೆವಿ ರೂಪದಲ್ಲಿ ಸರ್ಕಾರವು ಕೆ.ಜಿ.ಗೆ 10 ರೂ.ನಂತೆ ರೈಸ್ ಮಿಲ್‌ಗಳಿಂದ ಸಂಗ್ರಹ/ವಸೂಲಿ ಮಾಡುತ್ತದೆ. ಪಡಿತರ ಚೀಟಿ ಹೊಂದಿರುವವರು ಕೆ.ಜಿ.ಗೆ ಮೂರು ರೂ. ಪಾವತಿಸುತ್ತಾರೆ. ಅಂದರೆ ನಾಲ್ಕು ಜನರಿರುವ ಒಂದು ಕುಟುಂಬಕ್ಕೆ ಸರ್ಕಾರವು 4 X 4 X 7 ರೂ. = 112 ರೂ. ಖರ್ಚು ಮಾಡುತ್ತದೆ. ಹೊಸ ನಗದು ವರ್ಗಾವಣೆ ನೀತಿಯಡಿ 112 ರೂ.ಗಳನ್ನು ನೇರವಾಗಿ ಅದರ ಬ್ಯಾಂಕ್ ಖಾತೆಗೆ ವರ್ಗಾಯಿಸಿ ಅದರಿಂದ ಆ ಕುಟುಂಬಕ್ಕೆ ಇಡೀ ತಿಂಗಳಿಗೆ ಸಾಕಾಗುವಷ್ಟು ಅಕ್ಕಿಯನ್ನು ಕೊಂಡುಕೊಳ್ಳಿ ಎಂದು ಹೇಳುತ್ತದೆ.

ಇದರಿಂದ ಉಂಟಾಗುವ ಪರಿಣಾಮಗಳೇನೆಂಬುದನ್ನು ಜಾಣ-ಜಾಣೆಯರಾದ ನೀವು ಊಹಿಸಬಲ್ಲಿರಿ. 7 ರೂ.ಗೆ ಒಂದು ಕೆ.ಜಿ. ಅಕ್ಕಿ ಎಲ್ಲೂ ದೊರೆಯುವುದಿಲ್ಲ. ಮಾರುಕಟ್ಟೆಯಲ್ಲಿ ಕನಿಷ್ಠ 25 ರೂ. ತೆತ್ತು ಸುಮಾರಾದ ಅಕ್ಕಿಯನ್ನು ಕೊಳ್ಳಬಹುದು. ಅಕ್ಕಿಯ ಬೆಲೆ ಎಷ್ಟು ಹೆಚ್ಚಾಗುತ್ತಾ ಸಾಗಿದರೂ ಸರ್ಕಾರ ನೀಡುವ 112 ರೂ. ಹೆಚ್ಚಾಗುವುದಿಲ್ಲ. ಅಂದರೆ ವರ್ಷಗಳುರುಳುತ್ತಿದ್ದಂತೆ, ಹಣದುಬ್ಬರ ಹೆಚ್ಚಾಗುತ್ತಿದ್ದಂತೆ, ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳು ಹೆಚ್ಚಾಗುತ್ತಿದ್ದಂತೆ ಈ ಸಬ್ಸಿಡಿಗೆ ಅರ್ಥವೇ ಇರುವುದಿಲ್ಲ. ಇವತ್ತಿನ ಮಾರುಕಟ್ಟೆ ದರಗಳಲ್ಲೇ ಒಂದು ಲೆಕ್ಕಾಚಾರ ಮಾಡೋಣ. ಆರ್‌ಆರ್‌ಗಳಲ್ಲಿ (ಅಂದರೆ ರೋಡ್ ರೆಸ್ಟೋರೆಂಟ್ - ಗಾಡಿ ಹೋಟೆಲ್) ಬೆಳಗ್ಗೆ 2 ಇಡ್ಲಿ, ಅರ್ಧ ರೈಸ್ ಬಾತ್, ಮಧ್ಯಾಹ್ನ ಒಂದು ಮುದ್ದೆ ಒಂದು ಹಪ್ಪಳ ಮತ್ತು ಒಂದು ಅನ್ನ ಸಾಂಬಾರ್ ಹಾಗೂ ರಾತ್ರಿ ಡಿಟ್ಟೋ ತಿಂದರೆ 112 ರೂ. ಖರ್ಚಾಗುವಷ್ಟು ಬೆಲೆಗಳಿವೆ. ಇಷ್ಟು ಹಣದಲ್ಲಿ 4 ಜನರ ಇಡೀ ಕುಟುಂಬ ತಿಂಗಳಿಗೆ ಸಾಕಾಗುವಷ್ಟು ಅಕ್ಕಿಯನ್ನು ಕೊಂಡುಕೊಳ್ಳಲು ಸಾಧ್ಯ ಎಂದು ಇಬ್ಬರು ಸಿಂಗ್‌ಗಳು, ಒಬ್ಬ ನಿಲೇಕಣಿ ಮತ್ತು ಒಬ್ಬ ಚಿದಂಬರ



ಹೇಳುತ್ತಿದ್ದಾರೆಂದರೆ ಅವರಿಗೆ ಏನು ಮಾಡಬೇಕು ನೀವೇ ಹೇಳಿ.


ಇದರ ಪರಿಣಾಮ ಏನಾಗಬಹುದೆಂದು ನಿಮಗೆ ಸರಿಯಾಗಿ ಗೊತ್ತಾಗಬೇಕೆಂದರೆ ಶಿವಶಂಕರ ಮತ್ತು ಪದ್ಮರನ್ನೇ ಕೇಳಬೇಕು (ಬಾಕ್ಸ್ ನೋಡಿ). ದೇಶದ ಜನಸಾಮಾನ್ಯರ ಈ ವರ್ಷದ ಭವಿಷ್ಯ ಏನಿರಬಹುದೆಂಬುದಕ್ಕೆ ಇದು ಒಂದು ಸೂಚನೆ ಅಷ್ಟೇ. ಆದರೆ ದೇಶದ ಪುಣ್ಯಫಲದಿಂದ ವರ್ಷದ ಮೊದಲ ನಾಲ್ಕು ತಿಂಗಳು ಅಷ್ಟೊಂದು ಭಯವಿಲ್ಲ. ಈಗಲೇ ಪಡಿತರ ಧಾನ್ಯ, ಎಲ್‌ಪಿಜಿ ಗ್ಯಾಸ್, ಸೀಮೆಎಣ್ಣೆ, ಪೆಟ್ರೋಲ್, ಡೀಸೆಲ್‌ಗಳನ್ನು ಈ ನೇರ ನಗದು ಕಾರ್ಯಾಚರಣೆಯಡಿ ತರುವುದಿಲ್ಲವೆಂದು ಹೇಳಿದ್ದಾರೆ. ಚಿದಂಬರಂ ಪ್ರಕಾರ 'ಅವು ಸಂಕೀರ್ಣ ವಿಷಯಗಳು'. ಅಂದರೆ ನೇರವಾಗಿ ವೋಟಿನ ಜೊತೆ ಸಂಬಂಧ ಹೊಂದಿವೆ. ಏಪ್ರಿಲ್, ಮೇ ಹೊತ್ತಿಗೆ ನಾಲ್ಕೈದು ರಾಜ್ಯಗಳ ಚುನಾವಣೆಗಳು ಬರಲಿವೆ. ಅದಾದನಂತರ ಕೂಡಲೇ ಪಡಿತರ ವ್ಯವಸ್ಥೆಯನ್ನೂ, ಎಲ್‌ಪಿಜಿ ಗ್ಯಾಸ್ ವ್ಯವಸ್ಥೆಯನ್ನೂ ಇದರಡಿ ತಂದುಬಿಟ್ಟರೆ, ಒಂದು ವರ್ಷದ ನಂತರ ಬರುವ ಲೋಕಸಭಾ ಚುನಾವಣೆಯ ಹೊತ್ತಿಗೆ ಮರೆಗುಳಿ ಜನರು ಎಲ್ಲವನ್ನೂ ಮರೆತುಬಿಟ್ಟು ತಮಗೆ ಮತ ಗುದ್ದುತ್ತಾರೆ ಎಂದು ಯುಪಿಎ ಅಧ್ವರ್ಯುಗಳು ಭಾವಿಸಿರಲಿಕ್ಕೂ ಸಾಕು.

ಹಾಗೆ ನೋಡಿದರೆ ಇದರಿಂದ ಓಟು ಕಡಿಮೆಯಾಗುವುದಕ್ಕಿಂತ, ಹೆಚ್ಚಾಗುವ ಸಾಧ್ಯತೆಯೇ ಇದೆ ಎಂದು ರಾಜಕೀಯ ಪಕ್ಷಗಳು ಭಾವಿಸಿವೆ. ಏಕೆಂದರೆ ಗಂಡಸರ ಕೈಗೆ ಅಕ್ಕಿ, ಸೀಮೆಎಣ್ಣೆ ಗ್ಯಾಸ್‌ಗಿಂದ ನೇರವಾಗಿ ಕಾಸನ್ನೇ ತಲುಪಿಸಿಬಿಟ್ಟರೆ ಅವರು ಪರಮಾನಂದ ಹೊಂದುತ್ತಾರೆ; ತನ್ಮೂಲಕ ಕೊಟ್ಟ ದುಡ್ಡಿಗೆ ನಿಯತ್ತಾಗಿ ಓಟು ಹಾಕುತ್ತಾರೆ ಎಂಬುದು ಸರ್ಕಾರದ ಆಲೋಚನೆ. ಬಿಜೆಪಿ ಮತ್ತಿತರ ಪಕ್ಷಗಳು ಈ ನೇರ ನಗದಿಗೆ ವಿರೋಧ ಮಾಡುತ್ತಿರುವುದು ಈ ಕಾರಣಕ್ಕೆ ಮಾತ್ರ.

ಆದರೆ ಸರ್ಕಾರ ಈಗ ಸಬ್ಸಿಡಿ ನೀಡುತ್ತಿರುವ ಎಲ್ಲಾ ಸರಕುಗಳು/ಸೇವೆಗಳು (ಆರೋಗ್ಯ, ಶಿಕ್ಷಣ, ಸಾರಿಗೆ, ವಿದ್ಯುತ್, ಅಂಚೆ ಇತ್ಯಾದಿ) ಹಣದ ರೂಪದಲ್ಲಿ ಜನರನ್ನು ತಲುಪಿದರೆ ಆಗುವ ಪರಿಣಾಮ ಇನ್ನೂ ಹೆಚ್ಚಿನದ್ದಾಗಿದೆ. ಯಾವುದೇ ಸರಕು ಅಥವಾ ಸೇವೆಯ ಬೆಲೆ ಮಾರುಕಟ್ಟೆಯಲ್ಲಿ ಏರುತ್ತಲೇ ಹೋದರೂ, ಅವುಗಳಲ್ಲಿ ಕೆಲವನ್ನು ಜನರಿಗೆ ತಲುಪಿಸುತ್ತಿದ್ದ ಸರ್ಕಾರವು ಅದರ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಿತ್ತು. ಹಾಗಾಗಿ ಉಳಿದವಕ್ಕೆ ಮಾರುಕಟ್ಟೆ ದರವನ್ನು ಪಾವತಿಸಿ ಜನರು ಹೇಗೋ ಕಾಲ ನೂಕುತ್ತಿದ್ದರು. ಆದರೆ ಈಗ ನಿರ್ದಿಷ್ಟ ಮೊತ್ತದ ಹಣವನ್ನು ಜನರಿಗೆ ಕೊಡುವುದರಿಂದ (ಅಂದರೆ ಹಣದುಬ್ಬರದ ಏರಿಕೆಗೆ ತಕ್ಕುನಾಗಿ ಈ ಹಣದ ಪ್ರಮಾಣ ಏರದೇ ಇರುವುದರಿಂದ) ಸಮಸ್ಯೆಯಾಗುತ್ತದೆ. ಇಂದು ಕಾಯ್ದೆ ಪ್ರಕಾರ ನಿಗದಿಯಾಗಿರುವ ಯಾವ ಕನಿಷ್ಠ ವೇತನವೂ ಬದುಕುವ ವೇತನವಾಗಿಲ್ಲ, ಈ ಕನಿಷ್ಠ ವೇತನವೂ ಹಲವೆಡೆ ಜಾರಿಯಾಗಿಲ್ಲ. ಹೀಗಿರುವಾಗ ಅಸಂಘಟಿತ ವಲಯದ ಕಾರ್ಮಿಕರು, ರೈತ ಕೂಲಿಗಳು, ಸಣ್ಣ ಮತ್ತು ಮಧ್ಯಮ ರೈತರು ತೀವ್ರ ಸಂಕಷ್ಟಕ್ಕೀಡಾಗುತ್ತಾರೆ.

ಒಟ್ಟು ಸುಮಾರು 26 ಬಗೆಯ ಸಬ್ಸಿಡಿ, ಸ್ಕಾಲರ್‌ಶಿಪ್, ಮಾಸಾಶನಗಳನ್ನು ಆಧಾರ್ ಕಾರ್ಡ್‌ನ ಗುರುತಿನನ್ವಯ 'ನೇರ ನಗದು ವರ್ಗಾವಣೆ'ಯಡಿ ತರುವ ಆಲೋಚನೆ ಸರ್ಕಾರಕ್ಕಿದೆ. ಅದರ ಜೊತೆಯಲ್ಲೇ ಪಡಿತರ ಅಕ್ಕಿ/ಗೋಧಿ ಹಾಗೂ ಗೊಬ್ಬರಗಳೂ ಸೇರಿಕೊಳ್ಳುವ ದಿನಗಳು ದೂರವಿಲ್ಲ. ಏಕೆಂದರೆ ನೇರ ಹಣ ಪಾವತಿಯ ಯೋಜನೆಯನ್ನೇ ತರುವುದಿಲ್ಲ ಎಂದು ಹೇಳುತ್ತಿದ್ದ ಸರ್ಕಾರ, ಆಧಾರ್ ಕಾರ್ಡನ್ನು ಯಾವುದಕ್ಕೂ ಕಡ್ಡಾಯ ಮಾಡುವುದಿಲ್ಲ ಎನ್ನುತ್ತಿದ್ದ ಸರ್ಕಾರ ಈಗ ಅವೆರಡನ್ನೂ ಜಾರಿಗೊಳಿಸಿದೆ. ಹೀಗಿರುವಾಗ ಸರ್ಕಾರದ ಮುಂದೆ ಸ್ಪಷ್ಟ ಪ್ರಸ್ತಾಪಗಳಾಗಿ ಕೂತಿರುವ ಅಕ್ಕಿ, ಗೊಬ್ಬರದ ಸಬ್ಸಿಡಿ ವರ್ಗಾವಣೆ ಮಾತ್ರ ಸೇರಿಕೊಳ್ಳುವುದಿಲ್ಲ ಎನ್ನುವುದಕ್ಕೆ ಯಾವ ಗ್ಯಾರಂಟಿಯೂ ಇಲ್ಲ.

ಕಳೆದ ಒಂದು ದಶಕಕ್ಕೂ ಹೆಚ್ಚಿನ ಕಾಲದಿಂದ (ಸಾರಾಯಿ ಮತ್ತು ಹೆಂಡದ ನಿಷೇಧದ ನಂತರ) ಪ್ರತಿ ತಿಂಗಳೂ ಹೆಚ್ಚೆಚ್ಚು ಟಾರ್ಗೆಟ್ ನಿಗದಿ ಮಾಡಿ ಮದ್ಯ ಮಾರಾಟವನ್ನು ಐದಾರು ಪಟ್ಟು ಹೆಚ್ಚಳವಾಗುವಂತೆ ನೋಡಿಕೊಳ್ಳಲಾಗಿದೆ.



ಇದು ಸಾರಾಯಿ ಇದ್ದ ಕಾಲದಲ್ಲಿ ಜನರು ಖರ್ಚು ಮಾಡುತ್ತಿದ್ದುದಕ್ಕಿಂತ ಸುಮಾರು 20 ಪಟ್ಟು ಹೆಚ್ಚು. ಹೀಗಿರುವಾಗ ಬಡ ಮತ್ತು ಕೆಳ ಮಧ್ಯಮ ವರ್ಗಗಳ ಕುಟುಂಬದ ಗಂಡಸರ ಕೈಗೆ ಸಿಗುವ ಹಣವು ಮನೆ ಖರ್ಚಿಗೆ ಸಿಗಲು ಸಾಧ್ಯವೇ ಇಲ್ಲ. ಆರೋಗ್ಯ ಕ್ಷೇತ್ರದಲ್ಲಿ ಸರ್ಕಾರೀ ಆಸ್ಪತ್ರೆಗಳು ಅಸಡ್ಡೆಗೊಳಗಾಗಿರುವಾಗ ಒಂದೇ ಒಂದು ಸಣ್ಣ ಕಾಯಿಲೆ ಬಂದರೂ ದೊಡ್ಡ ಮೊತ್ತದ ಹಣವನ್ನು ತೆರಬೇಕಾಗುತ್ತದೆ. ಸರ್ಕಾರದಿಂದ ನೇರವಾಗಿ ಕೈಗೆ ಸಿಗುವ ಹಣವು ಒಂದೇ ಪೆಟ್ಟಿಗೆ ಖಾಸಗಿ ಲೂಟಿಕೋರ ಆಸ್ಪತ್ರೆಗಳು ಹಾಗೂ ಔಷಧಂಗಡಿಗಳ ಪಾಲಾಗಿಬಿಟ್ಟರೆ, ಅಕ್ಕಿ ಕೊಳ್ಳಲು ಉಳಿಯುವುದೇನು? ಇಂತಹ ಎಷ್ಟೋ ಸನ್ನಿವೇಶಗಳು ಎದುರಾಗಿ ಕುಟುಂಬಗಳು ಹಸಿವಿಗೆ, ಹತಾಶೆಗೆ, ಆತ್ಮಹತ್ಯೆಗೆ ಗುರಿಯಾಗುವುದರಲ್ಲಿ ಸಂದೇಹವಿಲ್ಲ.

ಇದರ ಜೊತೆಜೊತೆಗೇ ಎಲ್ಲಾ ಬಗೆಯ ಹಣಕಾಸು ವ್ಯವಹಾರಗಳು ಬ್ಯಾಂಕ್‌ನ ಮೂಲಕವೇ ನಡೆಯುವಂತೆ ಮಾಡಿ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ನಿರಂತರವಾಗಿ ಲಕ್ಷಾಂತರ ಕೋಟಿ ರೂ.ಗಳು ಇರುವಂತೆ ನೋಡಿಕೊಳ್ಳುವ ಉದ್ದೇಶವೂ ಸರ್ಕಾರಕ್ಕಿದೆ. ಆ ಹಣವನ್ನು ದೊಡ್ಡ ದೊಡ್ಡ ಕಂಪೆನಿಗಳಿಗೆ ಸಾಲವನ್ನು ನೀಡಲು ಬಳಸಬಹುದೆಂಬುದು ದೇಶದ್ರೋಹಿ ಸಚಿವ ಸಂಪುಟ ನಿರ್ಧಾರದ ಹಿಂದಿನ ಮತ್ತೊಂದು ಸಂಚಾಗಿದೆ.

ಈ ಸಂಚನ್ನು ವಿಫಲಗೊಳಿಸುವುದು ಮತ್ತು ಸಂಚುಕೋರರನ್ನು ಸೆರೆಮನೆಗೆ ತಳ್ಳುವ ಕರ್ತವ್ಯ ದೇಶಪ್ರೇಮಿ ಜನರದ್ದಾಗಿದೆ. ಹೊಸ ವರ್ಷದಲ್ಲಿ ಈ ಸಂಕಲ್ಪವನ್ನು ದೇಶಪ್ರೇಮಿ ಜನತೆ ಮಾಡಬೇಕಿದೆ.

ಶಿವಶಂಕರ ಮತ್ತು ಪದ್ಮ ಅವರ ಮುಂದಿನ ವರ್ಷ ಭವಿಷ್ಯ ಏನಿರಬಹುದು?

ಈ ಅಂಕಣವನ್ನು ಓದುತ್ತಿರುವವರಿಗೆ ಶಿವಶಂಕರ ಮತ್ತು ಪದ್ಮರ ಪರಿಚಯವಿದೆ. ಹರಪನಹಳ್ಳಿಯಿಂದ ಬೆಂಗಳೂರಿಗೆ ಕಟ್ಟಡ ಕಾರ್ಮಿಕ, ಗಾರ್ಮೆಂಟ್ಸ್ ಕಾರ್ಮಿಕಳಾಗಿ ಬಂದು, ಚೆನ್ನಾಗಿ ಬದುಕುತ್ತಿದ್ದವರು ಬಂಡವಾಳಶಾಹಿ ಆರ್ಥಿಕ ಬಿಕ್ಕಟ್ಟಿನ ಕಾರಣದಿಂದ ಸಮಸ್ಯೆಗೀಡಾದರು. ನಂತರ ಇಬ್ಬರೂ ಜಗಳವಾಡಿಕೊಂಡು, ಕೊನೆಗೆ ವಾಪಸ್ಸು ಊರಿಗೆ ಹೋಗುವುದೆಂದು ನಿರ್ಧರಿಸಿದರು. ಈಗ ಹಳ್ಳಿಯಲ್ಲಿದ್ದಾರೆ. ಮೊನ್ನೆ ಇಬ್ಬರೂ ಆಧಾರ್ ಕಾರ್ಡ್ ಮಾಡಿಸಿಕೊಂಡಿದ್ದಾರೆ. ಅವರು ಬೆಂಗಳೂರಿಗೆ ಹೋಗಿದ್ದರಿಂದ ರದ್ದಾಗಿದ್ದ ತಾತ್ಕಾಲಿಕ ರೇಷನ್ ಕಾರ್ಡ್‌ನ ಬದಲಿಗೆ ಈಗ ಪರ್ಮನೆಂಟ್ ಕಾರ್ಡ್ ಮಾಡಿಸಿಕೊಳ್ಳಬಯಸಿದ್ದಾರೆ. ಕಾರ್ಡೇನೋ ಸಿಕ್ಕುತ್ತದೆ. ಆದರೆ ಕಾರ್ಡ್ ಕೈಗೆ ಸಿಗುವ ಹೊತ್ತಿಗೆ ಕಾಳು ಸಿಗುತ್ತಾ ಅಥವಾ ಕೈಗೆ ಕಾಸು ಕೊಡ್ತಾರಾ ಗೊತ್ತಿಲ್ಲ. ಬೆಂಗಳೂರಿನ ಕಡೆಯ ದಿನಗಳಲ್ಲಿ ಶಿವಶಂಕರ ಕುಡಿಯುವುದನ್ನು ಕಲಿತಿದ್ದ. ಕಾಸನ್ನು ಪದ್ಮಳ ಕೈಗೇ ಕೊಟ್ಟರೂ, ಅದನ್ನು ಅವಳ ಕೈಗೇ ಬಿಡುವಷ್ಟು ಒಳ್ಳೆಯ ಗಂಡಸಾಗಿಯೂ ಅವನು ಉಳಿದಿಲ್ಲ.

ಬೆಂಗಳೂರಿಗೆ ಹೋಗುವ ಮುಂಚೆ ಕಟ್ಟಿದ್ದ ಎರಡು ಹಸುಗಳನ್ನು ನಂತರ ಮುದುಕರಾಗಿದ್ದ ಅಪ್ಪ-ಅಮ್ಮ ಮಾರಬೇಕಾಗಿ ಬಂದಿತ್ತು. ಈಗ ಹೊಸದಾಗಿ ಕೊಂಡುಕೊಳ್ಳಲು ಹಣವಿಲ್ಲ. ಸಾಲ ಮಾಡಿಕೊಂಡರೂ ಕೆಎಂಎಫ್‌ನವರು ಈಗಾಗಲೇ 6 ವಾರದಿಂದ ಹಾಲಿನ ಪೇಮೆಂಟ್ ಕೊಟ್ಟಿಲ್ಲ. ನಿನ್ನೆಯ ಬೆಳಗ್ಗೆ ಹೊಸದಾಗಿ ಎಂ.ಡಿ.ಯಾಗಿರುವ ದಕ್ಷ ಅಧಿಕಾರಿ ಹರ್ಷಗುಪ್ತ ಮ್ಯಾಜಿಕ್ ಮಾಡುವ ಸಾಧ್ಯತೆ ಅಷ್ಟಾಗಿ ಇಲ್ಲ.

ತನ್ನಂತೆಯೇ ಊರು ಬಿಟ್ಟು ಬೆಂಗಳೂರು ಸೇರಿರುವ ಮಂಜುನಾಥನ ಅರ್ಧ ಎಕರೆ ಗೇಣಿಗೆ ಸಿಗಬಹುದಾದರೂ, ಅದರ ಗೊಬ್ಬರಕ್ಕೆ ಬಂಡವಾಳ ಹಾಕುವ ಸ್ಥಿತಿಯಿಲ್ಲ. ಗೊಬ್ಬರದ ಸಬ್ಸಿಡಿ ನೇರ ಕೈಗೆ ಸಿಕ್ಕರೆ, ಅದು ಜಮೀನಿನ ತನಕ ಹೋಗುವ ಭರವಸೆಯಿಲ್ಲ.

ಈ ವರ್ಷ ಅವರ ಪಾಲಿಗೆ ಕಷ್ಟವಿದೆ. ಮಧ್ಯೆ ಬರುವ ವಿಧಾನಸಭೆ ಚುನಾವಣೆ ಸ್ವಲ್ಪ ಉಸಿರಾಡಲು ಅವಕಾಶ ಮಾಡಿಕೊಡಬಹುದು. ಕಾಂಗ್ರೆಸ್, ಬಿಜೆಪಿ, ಜೆಡಿಎಸ್, ಕೆಜೆಪಿ ಮತ್ತು ಬಿಎಸ್‌ಆರ್ ಪಕ್ಷಗಳಿಂದ ತಲಾ ಸಾವಿರ ಸಿಕ್ಕರೂ ಇಬ್ಬರ ಓಟಿನಿಂದ 10 ಸಾವಿರ ಗ್ಯಾರಂಟಿ. ಅಂದರೆ ಏಪ್ರಿಲ್ ಹೊತ್ತಿಗೆ ಧನಲಾಭದ ಯೋಗವಿದೆ.

ಎರಡು ತಮಾಷೆ (?) ಸಂಗತಿಗಳು

ಕರ್ನಾಟಕ ರಾಜ್ಯ ರೈತ ಸಂಘವೂ ಸೇರಿದಂತೆ ಹಲವು ಸಂಘಟನೆಗಳು 'ರೈತರಿಗೇ ನೇರವಾಗಿ ಸಬ್ಸಿಡಿ ಹಣವನ್ನು ನೀಡಿ' ಎಂದು ಒತ್ತಾಯಿಸುತ್ತಿದ್ದವು.

ಸಬ್ಸಿಡಿಯಲ್ಲಿ ಸೋರಿಕೆ ತಪ್ಪಿಸಲು ಆರ್ಥಿಕ ತಜ್ಞರು ಸರ್ಕಾರಕ್ಕೆ 2 ಸಲಹೆಗಳನ್ನು ನೀಡಿದ್ದಾರೆ. ಒಂದು, ಫಲಾನುಭವಿಗಳನ್ನು ಗುರುತಿಸಲು ಕಠಿಣವಾದ ಮಾನದಂಡಗಳನ್ನು ಮಾಡಿ ಫಲಾನುಭವಿಗಳ ಸಂಖ್ಯೆಯೇ ಅತ್ಯಂತ ಕಡಿಮೆ ಇರುವಂತೆ ಮಾಡಬೇಕಂತೆ. ಎರಡು, ಎಷ್ಟು ಕಡಿಮೆ ಸಬ್ಸಿಡಿ ನೀಡಬೇಕೆಂದರೆ ಅತ್ಯಂತ ಅಸಹಾಯಕ ಸ್ಥಿತಿಯಲ್ಲಿರುವವರು ಮಾತ್ರ ಅದನ್ನೂ ಬಿಡದೆ ತೆಗೆದುಕೊಳ್ಳುವಂತೆ ಇರಬೇಕಂತೆ.

ಸರ್ಕಾರದ ನೇರ ನಗದು ಕಾರ್ಯಾಚರಣೆ ಇವೆಲ್ಲವನ್ನೂ ಈಡೇರಿಸಲಿದೆ. ನಗಬೇಕೋ, ಅಳಬೇಕೋ ಗೊತ್ತಾಗುತ್ತಿಲ್ಲ ಅಷ್ಟೆ.

ಇವತ್ತು ಆಸ್ತಿ ಮಾಡಿದೋನ್ಯಾವನು ನೆಮ್ಮದಿಯಾಗಿದ್ದನೂ

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ಯೆಲ್ಲಾರಿಗೂ ಯಾಪಿ ನ್ಯೂ ಇಯರ್" ಎಂದ ಟಿಸ್ಸೆ.

"ವಸ ವರ್ಸ ಬಂದ ಮೂರು ದಿನಕೆ ಹೇಳ್ತಿಯಲ್ಲೊ ಟಿಸ್ಸೆ" ಎಂದ ಉಗ್ರಿ.

"ಈ ತಿಂಗಳ್ಯಲ್ಲ ಹೇಳಬವುದು ಗೊತ್ತಾ?"

"ಹೇಳಪ್ಪ ನಿನಿಗಿನ್ನೇನು ಕ್ಯಲಸ. ಒಂದು ಸ್ವಲಪ ದಿನಾದ ಮ್ಯಾಲೆ ಸಂಕ್ರಾಂತಿ ಸುಭಾಶಯ ಅಂತಿ. ಮ್ಯಾಲಿನ್ನೊಂದ್ಯಾವುದೊ ಸಿಗತದೆ. ಬ್ರಾಂಬ್ರು ಮನಿದ್ದಂಗೆ ಬಾಯಿ."

"ಯಾಕೊ ಉಗ್ರಿ ಅಂಗಂತಿ?"

"ಅವುರು ಅಂಗೆ ಅಲವೇನೊ. ಅವುರ ಪಂಚಾಂಗ ಮು ನೋಡಿದ್ರೆ ಹನ್ನೆರಡು ತಿಂಗಳೂ ಏನಾರ ಇರತವೆ. ಲ್ಲಾ ಊಟಕ್ಕೆ ಸಂಬಂಧಪಟ್ಟವು. ಅದ್ಕೆ ಅಂಗಂದೆ."

"ಬದುಕಿನ ಜೊತಿಗೆ ಊಟನೂ ಮಿಕ್ಸ್ ಡಿಕಂಡಿರೊ ಕಲಾನಿಧಿಗಳು ಕಣೊ ಅವುರು. ಘೋರನ ಆಡಿಕಳದಕ್ಕಿಂತ ಅವುರನ್ನ ಪಾಲೋ ಮಾಡಿದ್ರೆ ಳ ಜೂಟಿ ರೋಗರುಜಿನ ಇರದಿಲ್ಲ, ಗೊತ್ತಾ. ಒಂದು ರ ಬಂದ್ರೆ ಅದ ಯಂಗೆ ತಿನ್ನಬೇಕು ಅನ್ನದ ಅವುರತ್ರ ಕೊಬೇಕು. ಮೂರು ಜನ ಮುಖ್ಯಮಂತ್ರಿಗಳನ್ನು ಭಾಳ ನ್ನಾಗಿ ಉಪಯೋಗಿಸಿಗಂಡು ಬೀದಿಗೆ ಬಿಸಾಕಿ ಬುಟ್ರು ಗೆ. ಮುಂದೆ ಈಶ್ವರಪ್ಪನ್ನೂ ಅಂಗೆ ಬೀಸಾಕ್ತರೆ ಡಿವಿರು."

"ಅಷ್ಟು ಸುಲಬಕ್ಕೆ ಅವುನ್ನ ಬಿಸಾಕದಿಲ್ಲ ಕಣೊ. ಅವುನು ಆರೆಸೆಸ್ಸಿನೋನು."

"ಅದೇನೊ ನಿಜ. ಆರೆಸೆಸ್ಸಿನೋರ್ಯಲ್ಲ ಈಶ್ವರಪ್ಪನಂಗೆ ವೆ ಇರದು."

"ನನಿಗೇನೋ ಬಿ.ಜೆ.ಪಿ ಈಶ್ವರಪ್ಪನೂ, ಬೀದಿ ಗಿರಾಕಿ ರ್ಣಾರು ಪ್ರಕಾಶನೂ ಒಂದೇ ತಾಯಿ ಮಕ್ಕಳಂಗೆ ಕಾಣ್ತರೆ ವಾಟಿಸ್ಸೆ."

"ಎಜ್ಜಾಟ್ಲಿ ಕರಟ್ ಕಣೊ ಉಗ್ರಿ. ನನಿಗೂ ಭಾಳ ಅಂಗನ್ನಿಸಿತ್ತು, ವರ್ತೂರು ನೋಡಿದ್ರೆ ಜನ ಯಂಗೆ ಮನುಸುನ್ನ ಆರಿಸಿದ್ರು ಅಂತ ಡವುಟಾಗದು."

"ಏ, ಬಿ.ಜೆ.ಪಿ.ಲಿ ಅಂಥೋರು ಭಾಳ ಜನವುರೆ ಕಣೊ. ಮ್ಯ ಶೆಟ್ಟಿ, ಕಟ್ಟಾ, ಸುಬ್ಬಾ, ಕಿಸ್ಸಾಚಾರಿ..."

"ಕಿಸ್ಸಾಚಾರಿ ಅಂದ್ರೆ ಯಾರ್ಲ?"

"ಏ, ಕಿಸ್ಸು ಅಂದ್ರೆ ಮುತ್ತು, ಆ ಜಯಲಕ್ಷ್ಮಿಗೆ ಎಲ್ಲಿ ತ್ರಲ್ಲಿ ಮುತ್ತು ಕೊಡತಿದ್ದ ರೇಣುಕಾಚಾರಿನೆ ಕಿಸ್ಸಾಚಾರಿ . ಅವುರನ್ಯಲ್ಲ ನ್ಯನಿಸಿಗಂಡ್ರೆ ಆದಷ್ಟು ಬೇಗ ಈ ರ ತೊಲಗಿ ವಸ ವರಸಕ್ಕೆ ವಸ ಸರಕಾರ ಬರಬೇಕಾಗಿತ್ತು ಕಣೊ. ಅದ್ಕೆ ವಸ ವರುಸ ಬತ್ತಾ ಅದೆ ಅಂದೇಟಿಗೆ ಈ ಹಳಸೆಲು ಸರಕಾರ ನೆನೆಸಿಗೊಂಡು ಬೇಜಾರಾಯ್ತು."

"ನಿಜ ಕಣೊ 2013 ರ ಪ್ರಕಾರ ವಸದೊಂದು ಸರಕಾರ ಬಂದು ಮುಂದಿನ ಬರಗಾಲ ಎದುರಸಕ್ಕೆ ತಯಾರಿ ಮಾಡಿಕೊಬೇಕಾಗಿತ್ತು. ಏನ್ಮಾಡ್ತಿ, ಮುಂದೆ ಬರಗಾಲವ ನಾವೇ ಎದುರಸಬೇಕು, ಅಂಗಾಗ್ಯದೆ."

"ಯಲಕ್ಷನ್ ಯಾವಾಗ?" ಎಂದ ಕಾಳಮಾವ.

"ಅತ್ಯದಲ್ಲೇ ಅದೆ ಡೋಂಟ್ ವರಿ ದೊಡಪ್ಪ, ಸುಖತ್ತಾಗಿ ಬಾಡ ತಿನ್ನಿವೆ."


"ಬಾಡ ತಿಂದೋರು ಬಚಾವಾಗಿ ಹಾಕಿಸಿದೋನು ಜೈಲು ಪಾಲಾದನಲ್ಲೊ" ಎಂದು ಉಗ್ರಿ ನಕ್ಕ.

"ಅದ್ಯಾರ್ಲ ಜೈಲಿಗೊದೋರು."

"ನಮ್ಮ ಶಿವಲಿಂಗೇಗೌಡ ದೊಡಪ್ಪ, ಅವುನ್ನ ಮೊಟ್ಟಮೊದಲು ದ್ಯಾವೇಗೌಡ್ರು ಮನೇಲಿ ನೋಡಿದಾಗ, 'ಇದ್ಯಾವುದಪ್ಪ ತಲೆಬಾಡು, ತ್ರಿಬಲ್ಲೆಕ್ಸ್ ರಮ್ಮು' ಅಂತ ಆಡಿಕಂಡು ಪ್ರೆಂಡ್ಸತ್ರ ಬೈಸಿಗಂಡಿದ್ದೆ. ಆದ್ರೆ ಬೆಂಗಳೂರಲ್ಲಿ ಒಂದು ತಲೆಬಾಡಿನ ಹೋಟ್ಲದೆ. ಅಲ್ಲಿಗೆ ಶಿವಲಿಂಗೇಗೌಡನೂ ಬಂದಾಗ ನನ್ನ ಮಾತು ನಿಜ ಆಗಿತ್ತು, ಈಗ ನೋಡು ಬಾಡಿನ ದೆಸಿಂದ ಜೈಲಿಗೂ ಹೋಗಿ ದಂಡನೂ ಹಾಕಿಸಿಗಂಡವುನೆ."

"ಅದೇನು ಸರಿಯಾಗೇಳ್ಳ."

"ದ್ಯಾವೇಗೌಡ್ರು ಯಲಕ್ಷನ್ನಿಗೆ ನಿಂತಿದ್ರು ದೊಡಪ್ಪ, ದ್ಯಾವೇಗೌಡರಂಥಾ ಲೀಡ್ರಿಗೆ ಬಾಡಿನೂಟ ಹಾಕಿ ಓಟು ಕೇಳೋ ಅಗತ್ಯ ಇಲ್ಲ, ಆದ್ರು ಈ ಶಿವಲಿಂಗೇಗೌಡ



ಬೇಕಾದೋಟು ಮರಿ ಕೂದು, ಜನ ಕರದು, ಊಟ ಹಾಕಿ, ಚುನಾವಣಾ ಆಯೋಗದವುರ ಕೈಗೆ ಸಿಕ್ಕಿ ಬಿದ್ದ."

"ಚುನಾವಣಾ ಆಯೋಗದೋರಲ್ಲವಂತೆ ಕಣೊ. ಯಾವುದೋ ಬಾಡ ಬಕ್ಕನಿಗೆ ಸರಿಯಾಗಿ ಬಾಡಾಕಲಿಲವಂತೆ, ಅದು ಹೋಗಿ ದೂರೇಳತಂತೆ. ಆಗವುರು ಬಂದು ನೋಡಿ ಕೇಸು ಮಾಡಿದ್ರು."

"ಅದ್ನೆ ಕಣೊ ಉಗ್ರಿ ನಾನು ಹೇಳಿದ್ದೊ. ಕೇಸಾದ ವ್ಯಾಲೆ ದ್ಯಾವೇಗೌಡ್ರವುರೆ, ನೋಡಿಕತ್ತರೆ ಅಂತ ಕೋರ್ಟಿಗೂ ಹೋಗದಂಗೆ ಧೀಮಾಕ ಮಾಡತಿದ್ದ. ಚುನಾವಣೆ ನೀತಿಸಂಮಿತೆನೂ ಉಲ್ಲಂಘನೆ ಮಾಡಿ, ಕೋರ್ಟಿಗೂ ಕೇರ್ ಮಾಡಲಿಲ್ಲಾ ಅಂದ್ರೆ, ಜಡಜಿಗೆ ಸಿಟ್ಟು ಬರದಿಲ್ಲವೆ, ಅದ್ಕೆ ಅತ್ತಗೆ ದಂಡ ಬಿಗದು ಜೈಲಿಗಾಕಿದ್ರು."

"ವಳ್ಳೆ ಕ್ಯಲಸ ಮಾಡಿದ್ರು ಕಂಡ್ರ. ಮುಂದೆ ಮರಿಕೂದು ಬಾಡಾಕಿ ಓಟು ಕೇಳೋರಿಗ್ಯಲ್ಲ ಸರಿಯಾದ ಭಯ ತಂದಿಟ್ರು."

"ಏ, ರಾಜಕಾರಣಿಗಳು ಬ್ಯಾರೆ ದಾರಿ ಹುಡುಕ್ತರೆ ದೊಡಪ್ಪ. ಈ ನಮ್ಮ ಜುಮ್ಮಕ್ಕನಂಥೋರಿಗೆ ನಲವತ್ತೋರಸಾಯ್ತು ಅಂತ ಬರ್ತಡೇ ಮಾಡಕ್ಕೆ ಹಣ ಕೊಡ್ತರೆ. ಆಗ ಬಾಡೊಟ ನ್ಯಡಿತವೆ."

"ಜುಮ್ಮಿಗಾಗ್ಲೆ ನಲವತ್ತಾಯ್ತೆ?"

"ಊ ದೊಡಪ್ಪ ಇದೇ ನಮ್ಮ ಹೋಟ್ಲು ಚಿಕ್ಕಣ್ಣ ಹೋಟ್ಲು ಮಡಗಿದಾಗ ಅವುಳಿಗೆ ಇಪ್ಪತ್ತು, ಉಗ್ರಿಗೆ, ನನಿಗೆ ಹದುನೆಂಟು. ನಿನಿಗೆ ಅರವತ್ತು, ಸೀರ ಚಿಗಪ್ಪನಿಗೆ ಐವತ್ತು. ಈಗ ನೋಡಿದ್ರೆ ನೀವ್ಯಲ್ಲ ಮುದುಕ್ರು. ನಾವಾಗ್ಲೆ ಮಧ್ಯ ವಯುಸಿನೋರು. ದಿನ ಹೋದದ್ದೇ ಗೊತ್ತಾಗಲಿಲ್ಲ."

"ಚಿಕ್ಕಣ್ಣನಿಗೇಟಾಯ್ತುಲ?" ಎಂದಳು ಜುಮ್ಮಿ.

"ಅವುನಿಗಾಗ್ಲೆ ಅರ್ಧ ಶತಮಾನಾಯ್ತು, ಅವುನೋಟ್ಲಿಗೆ ಇಪ್ಪತ್ತಾಯ್ತಾ ಅದೆ."

"ಹೋಟ್ಲಲ್ಲೇನಾರ ಆದಾಯ ಬತ್ತೇನೊ ಚಿಕ್ಕಣ್ಣ" ಎಂದು ಜುಮ್ಮಿ ಚಿಕ್ಕಣ್ಣನನ್ನು ಕೆದಕಿದಳು.

"ಯಾವ ಆದಾಯನವ್ವ. ಬರೀ ನಿಮ್ಮ ಮಾತು ಕೇಳಿದ್ದೇ ಬತ್ತು. ಏನವ್ವ ಅಂದ್ರೆ ಈ ಹೋಟ್ಲಿಗೆ ಸ್ವಾಗೆ. ತಗದು ಹಂಚಾಕಿದೆ. ಇಲ್ಲಿಗೆ ಯಲ್ಲಾ ರಾಜಕಾರಣಿಗಳೂ ಬಂದ್ರು. ಅವತ್ತಿಂದ ಇಲ್ಲಿಗಂಟ ಆದ ಯಮ್ಮೆಲ್ಲೆಗಳ್ಯಲ್ಲಾ ಬಂದ್ರು. ಆಮ್ಯಾಲೆ ಸಿದ್ದರಾಮಯ್ಯನೂ ಬಂದ. ಇದಿಷ್ಟೇ ನೋಡವ್ವ ಈ ಹೋಟ್ಲಿಂದ ಬಂದ ಆದಾಯ" ಎಂದ ಚಿಕ್ಕಣ್ಣ.

"ಅದು ಒಂದಿದೆ ಬುಡು. ಅಂತ ರಾಜಕಾರಣಿಗಳು ಇಲ್ಯಾರ ಮನಿಗೋಗಿದ್ದರೂ? ನಿನ್ನ ಹೋಟ್ಲಿಗೆ ಬಂದೋದ್ರು. ಪೇಪ್ರಿನೋರು ಬಂದೊದ್ರು. ಇವತ್ತು ನೀನು ಸಂತಿಗೋದ್ರೆ ಚಿಕ್ಕಣ್ಣ ಅಂತ ಮಾತಾಡುಸ್ತರೆ. ಯಲ್ಲಾರ್ನು ಮಾತಾಡ್ಯಸರೆ?"

"ಅದೆ ಹೇಳಿದ್ನಲ್ಲಾ, ಜನ ಬಳಕೆ ಬುಟ್ರೆ ಇನ್ನ ಯಾವ ಆದಾಯನೂ ಈ ಹೋಟ್ಲಿಂದ ಹುಟ್ಟಲಿಲ್ಲ. ಅಂತ ಯಾಪುಲ್ಲಿ ಬದುಕು ನ್ಯಡದೋಯ್ತು ಅತ್ತಗೆ."


"ಬೇಜಾರಾಗಬ್ಯಾಡ ಚಿಕ್ಕಣ್ಣ, ನಾವ್ಯಾರು ಆಸ್ತಿ ಮಾಡಕ್ಕೆ ಬದುಕಿದೋರಲ್ಲ, ಮಾತಿನ ಸುಖಕ್ಕೇ ಬದುಕಿದೋರು. ಇವತ್ತು ಆಸ್ತಿ ಮಾಡಿದೋರ ಕತೆ ಏನಾಗ್ಯದೆ ಗೊತ್ತೆ, ನೋಡಾಗ್ಲೆ ಆ ಈಶ್ವರಪ್ಪ ರಾಜಾಸ್ತಾನದಲ್ಲಿ ಜಮೀನು ತಗದು ಸಿಗಾಯ್ಕಂಡು ಬಿದ್ದವುನೆ. ಅವುನ ಮಕ ನೋಡಕ್ಯಾಗದಿಲ್ಲ, ಅಂಗೆ ಹೆಂಡತಿ ಕಳಕಂಡ ಮೈಸಾಸುರನ ಮಕ ನೋಡಿದಂಗಾಯ್ತದೆ."

"ಅಂಗರೆ ರಾಜಾಸ್ತಾನಕೋಗಿ ಗದ್ದೆ ತಗದಿದ್ದನೆ?"

"ಗದ್ದೆ ಅಲ್ಲ ದೊಡಪ್ಪ ವಲ ಅಂತೆ ತಗಂಡನಂತೆ. ವಳಗೆ ಗ್ರಾನೈಟ್ ಕಲ್ಲದೆ."

"ಆ ಕಲ್ನ ತಗಂಡೇನು ಮಾಡ್ಯನೂ?"

"ಬ್ಯೂಟಿಪುಲ್ ಗೋರಿ ಮಾಡಿಸಿಗತ್ತನೆ!!" ■



...ಡುವುದು, ಸ್ವೀಕರಿಸುವುದು


ಇವನಿಗೀಗ ಮೂವತ್ತು ವರ್ಷ. ಮನುಷ್ಯನಿಗೆ ಬೇಕಾದ ಎಲ್ಲ ಇದೆ. ಸಂಪತ್ತು, ಸ್ನೇಹಿತರು, ಖ್ಯಾತಿ, ಪ್ರಭಾವ. ...ವುದೇ ಸ್ಪರ್ಧೆಯಲ್ಲಿ ಗೆಲುವು ಇವನಿಗೆ ಸುಲಭ. ಆದರೂ ಈತನ ವರ್ತನೆ ನನ್ನಲ್ಲಿ ಕುತೂಹಲ ಹುಟ್ಟಿಸುತ್ತದೆ. ...ಧ್ವನಿಯನ್ನು ಕೇಳಿಯೇ ಈತ ಖುಷಿಯಿಂದ ಮೈಮರೆಯುತ್ತಾನೆ; ಟಿವಿಯಲ್ಲಿ ತನ್ನ ಭಾಷಣ ಬಂದರೆ ಅದನ್ನು ...ಸುತ್ತಾ ಆನಂದಿಸುತ್ತಾನೆ. ಕನ್ನಡಿಯಲ್ಲಿ ತನ್ನ ಪ್ರತಿಬಿಂಬ ನೋಡಿಕೊಂಡು ಗಂಟೆಗಳನ್ನು ಕಳೆಯುತ್ತಾನೆ; ತನ್ನ ...ಟೋವನ್ನು ನೋಡುತ್ತಾ ಜಗತ್ತನ್ನು ಮರೆಯುತ್ತಾನೆ. "ಅಲ್ಲಯ್ಯ, ಈ ನಿನ್ನ ಸ್ವಪ್ರೇಮ ವಿಚಿತ್ರ ಅನ್ನಿಸುವುದಿಲ್ಲವೆ? ...ತ ಮೂವತ್ತು ವರ್ಷದಿಂದ ನಿನ್ನ ದೇಹದಲ್ಲಿ ಜೀವಿಸಿದ್ದೀ. ದಿನದ ಎಚ್ಚರದ ಗಂಟೆಗಳು, ರಾತ್ರಿಯ ನಿದ್ರೆಯ ...ಣಗಳು, ಗೆಳೆಯರ ಜೊತೆಗಿನ ನಿಮಿಷಗಳು, ಏಕಾಂಗಿಯಾಗಿದ್ದಾಗ ...ತನೆಗಳು-ಎಲ್ಲವನ್ನೂ ಈ ನಿನ್ನ ದೇಹದೊಂದಿಗೆ ಬದುಕಿ ಅನುಭವಿಸಿದ್ದೀ. ...ಿ ಬೇಸರವೇ ಆಗಿಲ್ಲವೆ?" ಎಂದು ಅವನಿಗೆ ತಮಾಷೆ ಮಾಡಿದೆ.

ಆತ ಆ ಬಗ್ಗೆ ಯೋಚಿಸಿಯೇ ಇರಲಿಲ್ಲ.

"ನಿನ್ನ ಪ್ರಕಾರ ನೀನೇ ಈ ಜಗತ್ತಿನ ಜೀವಂತ ಪ್ರಾಣಿ, ನಿನ್ನ ಆಸಕ್ತಿಗೆ ಯೋಗ್ಯವಾದ ...ನೀನೇ ಅಲ್ಲವೆ?" ಎಂದು ಮತ್ತೊಮ್ಮೆ ಛೇಡಿಸಿದೆ.

"ಹಾಗೇನಿಲ್ಲ, ಯಾಕೆ ನಾನು ನನ್ನ ಬಗ್ಗೆ ಇಷ್ಟು ಕಾಳಜಿ ವಹಿಸುತ್ತೇನೋ ...ತ್ತಿಲ್ಲ. ಆ ಬಗ್ಗೆ ನಾನು ಯೋಚಿಸಿಯೇ ಇರಲಿಲ್ಲ" ಅಂದ.

"ನಿನಗೆ ನಿನ್ನ ಬಗ್ಗೆ ಬೇಸರವಾದಾಗ ನನಗೆ ಹೇಳು. ಅದು ನಿಜಕ್ಕೂ ನಾನು ...ಬೇಕಾದ ಸುದ್ದಿ" ಎಂದು ನಕ್ಕೆ.



...ಆತನಿಗೆ ಗೆಳತಿ ಇದ್ದಳು. ಅವನಿಗೆ ಅದು ಮುಖ್ಯವಾದಂತಿರಲಿಲ್ಲ. ಆಕೆ ...ನೊಂದಿಗೆ ಮಾತಾಡಿ, ಮನೆಯ ಟೆನಿಸ್ ಕೋರ್ಟಿನಲ್ಲಿ ಒಂದೆರಡು ಸೆಟ್ ...ಆಡಿ ಹೊರಟುಹೋಗುತ್ತಿದ್ದಳು. ಅವಳ ಧ್ವನಿ, ನಡೆದಾಡುವ ಶೈಲಿ, ...ನ ಚೆಂದ ಯಾವುದೂ ಅವನ ಗಮನಕ್ಕೆ ಬಂದಂತಿರಲಿಲ್ಲ. ಒಂದು ದಿನ ಅವಳು ಟೆನಿಸ್ ಆಟಕ್ಕೆ ಬರಲಿಲ್ಲ. ...ನ್ನು ಕೂಡ ಅವನು ಗಮನಿಸಲಿಲ್ಲ. ಮಾರನೆಯ ದಿನ ಅವಳ ತಮ್ಮ ಬಂದು-'ಸುಮಾಳಿಗೆ ಜ್ವರ' ಎಂದು ಹೇಳಿ ...ರಟುಹೋದ. ನನ್ನ ಒತ್ತಾಯಕ್ಕೆ ಆತ ಅವಳನ್ನು ನೋಡಲು ಹೋದ. ಆದರೆ ಅವಳಿಗೆ ಜ್ವರ ಎಷ್ಟು ...ವಾಗಿತ್ತೆಂದರೆ ಅವಳು ಅವನು ಬಂದಿದ್ದನ್ನೇ ಗಮನಿಸಲಿಲ್ಲ. ಅವಳು ಪ್ರಜ್ಞಾಹೀನ ಸ್ಥಿತಿಯಲ್ಲಿರಬಹುದೆಂದೂ ...ಗೆ ಹೊಳೆಯಲಿಲ್ಲ. ಆದರೆ ಅದೇಕೋ ಮಂಕಾಗಿದ್ದ. ಸುಮಾಳ ಕಾಯಿಲೆ ಬೇಗ ಗುಣವಾಗಲಿಲ್ಲ. ಅವನಿಗೆ ...ದುಗುಡವಾಗಿತ್ತು.

"ಯಾಕಯ್ಯ, ತುಂಬ ಬೇಸರದಲ್ಲಿದ್ದೀ" ಎಂದು ಕೇಳಿದೆ.

"ನನಗೆ ಯಾರೂ ಕೆಟ್ಟದಾಗಿ ಮಾತಾಡಿಲ್ಲ, ಮನನೋಯಿಸಿಲ್ಲ. ಆದರೆ ಅದೇಕೋ ಎಲ್ಲೋ ಅವಮಾನವಾದಂತಿದೆ" ...ಅವನ ಕನ್ನಡಿಯನ್ನು ಎತ್ತಿಕೊಂಡು ದೂರದ ಕಂಬಕ್ಕೆ ಎಸೆದೆ. ಅದು ಹಳೇ ಮಡಿಕೆಯಂತೆ ಚೂರುಚೂರಾಯಿತು.

"ನೀನೊಬ್ಬ ಮೂರ್ಖ" ಅಂದೆ.

ಆತ ಶಾಕ್ ಆದವನಂತೆ ನೋಡುತ್ತಿದ್ದ.

"ನೀನು ಕೂಡಲೆ ನಿನ್ನ ಕಾಂಪೌಂಡ್‌ನಿಂದ ಎರಡು ಗುಲಾಬಿ ಹೂ ಕಿತ್ತುಕೊಂಡು ಸುಮಾಳನ್ನು ನೋಡು. ಆಕೆ ಕೋಮಾ ಸ್ಥಿತಿಯಲ್ಲಿದ್ದಾಳೆ. ಅವಳ ಕೈಹಿಡಿದು ಮಾತಾಡಿಸು" ಅಂದೆ.

ಆತ ಸುಮ್ಮನೇ ನೋಡುತ್ತಿದ್ದ. "ಕಣ್ಣುಬಿಟ್ಟು ನೋಡುತ್ತಾಳೆ, ಕೈಯಲ್ಲಿ ಹೂ ಇಟ್ಟು ಅವಳ ಕೆನ್ನೆಯನ್ನು ನೇವರಿಸು" ಅಂದೆ. "ಮರೆಯಬೇಡ, ನಿನ್ನ ಕೆನ್ನೆ ನೇವರಿಸಿಕೊಂಡು ಕೂತುಬಿಡಬೇಡ. ಆಕೆಯ ಕೆನ್ನೆ ನೇವರಿಸು. ಅವಳನ್ನು ನಿನ್ನೆಲ್ಲ ಅಂತರಂಗದ ಸಂಪತ್ತಿನಿಂದ ನೋಡು. ನಿನ್ನ ಕಣ್ಣು, ಕೈ, ಹೃದಯ ಮೊತ್ತಮೊದಲ ಬಾರಿಗೆ ಜೀವಂತವಾಗುತ್ತವೆ...." ಅಂದೆ.

ಅವನು ಚಿಕ್ಕ ಹುಡುಗಿಯಂತೆ ಹಿಂಜರಿದ. ಬೈದು ಒಳ್ಳೆಯ ಬಟ್ಟೆ ಹಾಕಿಕೊಳ್ಳಲು ಹೇಳಿ ಹೂಗಳನ್ನು ಅವನ ಕೈಗೆ ಕೊಟ್ಟು ರೆಡಿ ಮಾಡಿದೆ. ಅವನಿಗೆ ಕ್ರಮೇಣ ಜೀವ ಬರುತ್ತಿದ್ದಂತಿತ್ತು. ಒಳಗೆ ಹೋಗಿ ಒಂದು ಮರೂನ್ ಬಣ್ಣದ ಸ್ಕಾರ್ಫ್ ತಂದ. ನಾನು ಅದೇಕೆಂದು ಕೇಳಲಿಲ್ಲ. ತನ್ನ ಟೈ, ತೂಸ್‌ನೆಲ್ಲ ಕಿತ್ತುಹಾಕಿ ಸರಳವಾಗಿ ಹೂ, ಸ್ಕಾರ್ಫ್ ಹಿಡಿದು ನನ್ನೊಂದಿಗೆ ಬಂದ. ಆತನನ್ನು ಸುಮಾ ಹತ್ತಿರಕ್ಕೆ ಬಿಟ್ಟು ದೂರದಲ್ಲಿ ನಿಂತೆ.

ಅವನ ಸ್ಪರ್ಶಕ್ಕೆ ಸುಮಾ ಕಣ್ಣು ತೆರೆದಳು. ಅವಳ ತಲೆಯನ್ನು ತನ್ನ ತೋಳಲ್ಲಿ ಇಟ್ಟುಕೊಂಡು ತೂಗಿದ. ಹೂವುಗಳನ್ನು ಅವಳ ಎದುರು ಹಿಡಿದು ಸ್ಕಾರ್ಫ್ ತೋರಿಸಿದ.

ಸುಮಾ ನಕ್ಕಳು. ಅವನ ಗುಂಡಿ ತೆಗೆದು ತನ್ನ ದುರ್ಬಲ ಹಸ್ತವನ್ನು ಅವನ ಬೆನ್ನಿನವರೆಗೆ ಕಳಿಸಿ ನೇವರಿಸಿದಳು. ನಾನು ಅಲ್ಲಿಂದ ಬಂದೆ. ಶಾಕ್ ಆಗಿದ್ದ ಅವನನ್ನು ಮಾತಾಡಿಸಲಿಲ್ಲ.


"ನೀನು ಸುಂದರ. ಆದರೆ ನಿನ್ನ ಚೆಂದಕ್ಕೆ ಅರ್ಥ ಬರುವುದು ಜಗತ್ತಿನ ಅದ್ಭುತ ಜೀವಶಕ್ತಿಯಿಂದ. ಇಲ್ಲದಿದ್ದರೆ ನಿನ್ನ ಆರೋಗ್ಯ, ಚೆಂದ, ಸಂಪತ್ತು ಎಲ್ಲವೂ ವ್ಯರ್ಥ. ನಿನ್ನ ಜಗತ್ತು ಈಗ ಸುಮಾ. ಅವಳನ್ನು ಬಿಟ್ಟರೆ ನಿನಗೆ ಬೇರೆ ಪ್ರತಿಬಿಂಬ ಇಲ್ಲ. ಅತಿರೇಕಕ್ಕೆ ಹೋದರೆ ಅದೂ ದೋಷವಾಗುತ್ತದೆ. ನಿನ್ನಲ್ಲಿರುವ ಮೋಹಕ ಭಾವನೆಯೇ ಪ್ರೇಮ. ಅದು ಕೊಡುವುದರಿಂದ, ಸ್ವೀಕರಿಸುವುದರಿಂದ, ಸೂರ್ಯನಿಂದ, ಪಕ್ಷಿಗಳಿಂದ, ಪ್ರಾಣಿಗಳಿಂದ ಬರುತ್ತದೆ...." ಅಂದೆ.

ಆತ ನನ್ನನ್ನು ಅಪ್ಪಿಕೊಂಡು ನನ್ನಲ್ಲಿ ಸಂಕೋಚ ಮೂಡಿಸಿದ.

• ಏಪ್ರಿಲ್ 15, 1998

ಮಾನಸ್ಥರ ಕೆಲಸ ಕಣ್ರೀ...

ಕೋಳಿ ಕೇಳಿ ಮಸಾಲೆ ಅರೀರಿ ಅನ್ನುವ ಹಾಗಿದೆ ಈ ಮಾಧ್ಯಮದವರ ವರ್ತನೆ. ಅವರು ತಮ್ಮನ್ನು ತಾವೇ ಏನೆಂದುಕೊಂಡಿದ್ದಾರೆ ಅಂತೀನಿ. ಅಲ್ಲ ಕಣ್ರೀ. ಉಪಮುಖ್ಯಮಂತ್ರಿ ಹುದ್ದೆ ಅಂದರೆ ಭಾರೀ ಅಲ್ಲವಾ. ಪಟಿಪಾಟೂ ಹಂಗೇ ಇರ್ತದೆ. ಅವರು ಯಾವ ವ್ಯವಹಾರ ಕುದುರಿಸಬೇಕಾದರೂ ಮಾಧ್ಯಮದವರಿಗೆ ಮಾಹಿತಿ ನೀಡಿ ಕುದುರಿಸಬೇಕು ಅನ್ನೋ ಧಾಟೀಲಿ ಮಾತಾಡ್ತವಲ್ಲ ಅವರಿಗಿನ್ನೆಂತಹ ಧಿಮಾಕು ಅಂತೀನಿ. ಅವರು ದುಡ್ಯೋ ದಾರಿ ಕಂಡಿರೋರು. ದುಡೀತಾರೆ. ನೂರೆಂಟು ಕಡೆ ಆಸ್ತಿ ಮಾಡಿರ್ತಾರೆ ಅಂದ್ರೂ ಕೇಳೊಲ್ಲರು. ಯಾವ ಸೀಮೆ ದುಡಿತ ಅವುರ್ದು ಅಂತ ಕುಹಕ ಆಡ್ತವೆ. ಅಯ್ಯೋ ರಾಮನೆ. ಇವಕ್ಕೇನೋ ದುಡಿಯೋ ದಾರಿ ಗೊತ್ತಿಲ್ಲ, ಅದ ತಿಳಿದಿರೋರೂ ಇವರಂಗೇ ಇರಬೇಕಾ ಅಂತೀನಿ. ಅವರು ಬುದ್ಧಿ ಉಪಯೋಗಿಸಿ ದುಡಿಯೋದ ಇವಕ್ಕೆ ಮುಕ್ಕರಿತ ಆಗದಲ್ಲ ಇದಕ್ಕೇನು ಅನ್ನಾನ......



ಈ ಪಂಚಾಯ್ತಿಗೆ ಎಲ್ಲ ಯಾಕೆ ಬಂತು ಅಂದ್ರೆ ಈಶ್ವರಪ್ಪನವರನ್ನ ರಾಜಾಸ್ತಾನದಲ್ಲಿ ಜಮೀನು ಕೊಂಡಿರೋದು ನಿಜವಾ ಅಂತ ಕೇಳವೆ. ಅಲ್ಲಿ ಜಮೀನು ಇರೋದ ಪಾಪ ಅವರು ಕಾಣಿಕೆ ಕಾಣರಂತೆ. ಅವರ ಹೆಸರಲಿ ಒಂದೆಕ್ರೆ ಭೂಮೀನೂ ಇಲ್ವಂತೆ. ಯಾರ ಹೆಸರಿನಲ್ಲಿ ಇದೆಯೋ ಅವರನ್ನ ಈ ಪ್ರಶ್ನೆ ಕೇಳಬೇಕು ಅಲ್ಲವಾ. ಅದು ಬಟ್ಟು ನಿಮ್ಮ ಅಳಿಯ ಮಾಡವ್ನೆ, ನಿಮ್ಮ ಮಗನ ಹೆಸರಲ್ಲದೆ ನಿಜವಾ ಅಂತ ಈಶ್ವರಪ್ಪನವರನ್ನ ಕೇಳಿದರೆ ಅವರು ಏನು ಹೇಳಕ್ಕಾಗುತ್ತೆ ಹೇಳಿ. ಕೇಳಿಕೊಂಡು ಹಾಳಾಗಲಿ ಅಂದರೆ ಅದ ಅಷ್ಟಕ್ಕೇ ನಿಲ್ಲಿಸಿಲ್ಲ, ಅದರಲ್ಲಿ ಗ್ರಾನೈಟ್ ನಿಕ್ಷೇಪ ಇದ್ದತ್ತಂತೆ ನಿಜವಾ ಅಂತಾನೂ ಕೇಳ್ತಾ ಬಿದ್ದವೆ. ಅದರಲ್ಲಿ ಏನು ಇದ್ದತ್ತೋ, ಏನು ಇಲ್ಲವ್ತೊ ಬಲ್ಲವರು ಯಾರು ಅಂತೀನಿ. ಈಶ್ವರಪ್ಪನವರೇ ಹಾರೆ, ಪಿಕಾಸಿ ಹೊತ್ಕಂಡೋಗಿ ಅಗೆದು ನೋಡವ್ರೆ, ಡ್ರಿಲ್ಲಿಂಗ್ ಮಿಷನ್ನ ತಗೊಂಡೋಗಿ ಕೊರೆದು ನೋಡವ್ರೆ ಅನ್ನೋ ಹಾಗೆ ಮಾತಾಡ್ತವಲ್ಲಾ.... ಯಾರತ್ರ ಮಾತಾಡ್ತಾ ಇದೀವಿ ಅನ್ನೊ ಜ್ಞಾನ ಆದರೂ ಇರಬಾರದಾ ಅವ್ಕೆ.

ಈಶ್ವರಪ್ಪನವರು ಅಂದರೆ ಏನು ಅಂದುಕೊಂಡಿದ್ದೀರಿ. ಮಾನಸ್ಥರು ಕಣ್ರೀ ಮಾನಸ್ಥರು. ಯಡ್ಯೂರಪ್ಪ ಮನೆ ಮೇಲೆ ಲೋಕಾಯುಕ್ತ ದಾಳಿ ನಡೆದಾಗ ಏನು ಅಂದಿದ್ರು, ನೆನಪಿಸಿಕೊಳ್ಳಿ. 'ನಮ್ಮಂತೋರ ಮನೆ ಮೇಲೆ ಹಿಂಗೆ ಆಗಿದ್ದರೆ ಎದೆ ಹೊಡ್ಕಂಡು ಸಾಯುತ್ತಿದ್ವೊ. ಯಡ್ಯೂರಪ್ಪನವರ ಎದೆಗಟ್ಟಿ. ಹಂಗೇನೂ ಆಗಿಲ್ಲ, ಎಲ್ಲ ತಡಕೊಂಡವ್ರೆ. ಭಗವಂತ ಆ ಶಕ್ತಿ ನೀಡವ್ನೆ. ಅದ್ಕೇ ದಾಳಿ ಆದ ಮೇಲೂ ಆರೋಗ್ಯವಾಗೇ ಇದಾರೆ' ಅನ್ನುವ ಅರ್ಥದ ಮಾತುಗಳನ್ನು ಆಡಿದ್ದರು. ಅಂದ್ರೆ ಅವರು ಮಾನಸ್ಥರು ಅಂತ ಆಯಿತಲ್ಲವಾ ಅಂದರೆ 'ಅವರು ಯಾವ ಸೀಮೆ ಮಾನಸ್ಥರು ಬಿಡ್ರಿ. ಯಡ್ಯೂರಪ್ಪ ಮನೆ ಮೇಲೆ ದಾಳಿ ನಡೆದಾಗ ಹಂಗಂದಿದ್ರು, ನಿಜ. ಆದರೆ ಅವರ ಮನೆ ಮೇಲೇ ಲೋಕಾಯುಕ್ತರ ದಾಳಿ ನಡೆದಾಗ ಏನಂದವ್ರೆ ಅದ್ನೂ ತಿಳ್ಕಳಿ. ನನ್ನ ಜೀವಮಾನದ ಅತ್ಯಂತ ಸಂತೋಷದ ದಿನ ಇದು ಅಂದವ್ರೆ. ಅಲ್ಲ ಕಣ್ರೀ. "ತನ್ನ ಮನೆ ಮೇಲೇ ಲೋಕಾಯುಕ್ತರ ದಾಳಿ ನಡೆದಾಗ ಹಿಂಗಂದವನಲ್ಲಾ ಅವನೆಂತಾ ಮಾನಸ್ಥ ತಗೀರಿ' ಅನ್ನುವವವರೂ ಇದ್ದಾರೆ. ಅವರ ವಾದ ಒಪ್ಪುವುದಕ್ಕೆ ಬರೂದಿಲ್ಲ, ಬೇಕಾದರೆ ಬೆಳ್ಳುಬ್ಬಿ ಸಾಹೇಬರನ್ನ, ಅದೇ ಪಶುಸಂಗೋಪನಾ ಸಚಿವರು ಇದಾರಲ್ಲ ಅವರನ್ನ ಕೇಳಿ ನೋಡಿ. ಅವರೇನಂತಾರೆ ಗೊತ್ತಾ? ಅವರ ಮನೆ ಮೇಲೆ ದಾಳಿ ನಡೆದಾಗ ಸಿಕ್ಕಿದ್ದು ಏನ್ರಿ? ಹತ್ತು ಲಕ್ಷ ರೂಪಾಯಿ ನಗದು. ಈ ಕಾಲದಲ್ಲಿ ಅದು ಜುಜುಬಿ ಅಮೌಂಟಂತೆ ಕಣ್ರೀ. ತಳ್ಳೋಗಾಡಿಯೋನೂ ಇಷ್ಟು ಹಣ ಇಟ್ಟಿರ್ತಾನಂತೆ. ಅಂತಹದ್ದರಲ್ಲಿ ಉಪಮುಖ್ಯಮಂತ್ರಿ ಮನೇಲಿ ಇಷ್ಟು ಹಣಾನೂ ಇರಬಾರದಾ ಅಂತಾರೆ ಬೆಳ್ಳುಬ್ಬಿ ಸಾಹೇಬರು. 'ಹಣ ಹಾಳಾಗಲಿರೀ. ಅದೆಷ್ಟೋ ಚಿನ್ನಬೆಳ್ಳಿ ಇತ್ತಂತಲ್ಲ ಅದಕ್ಕೇನಂತೀರಿ' ಅಂತ ಯಾರೋ ಕೇಳಿದ್ದಕ್ಕೆ 'ಈಶ್ವರಪ್ಪನವರು ದೊಡ್ಡವರು ನೋಡ್ರಿ. ದೊಡ್ಡವರಿಗೆ ಅವರಿವರು ಗಿಫ್ಟ್ ಕೊಟ್ಟಿರ್ತಾರೆ' ಅಂದವ್ರೆ ಗೊತ್ತಾ....

ಬೆರ್ಕಪ್ಪ ಇದ್ದಂಗೆ ಅಷ್ಟೇಯ!

ಮಂತ್ರಿ ಮನೆ ಮೇಲೆ ಲೋಕಾಯುಕ್ತ ದಾಳಿ ಎಂಬುದನ್ನು ಕೇಳಿದರೆ ಜನರಲ್ಲಿ ಸಂಚಲನ ಮೂಡುವುದಿಲ್ಲ, ನಿರ್ಲಿಪ್ತರಾಗೇ ಇರುತ್ತಾರೆ. ಪತ್ರಿಕೆ ಓದುತ್ತಿರುವವರು ಇಂತಹ ಸುದ್ದಿಗಳಿಗೆ ಕುತೂಹಲಗೊಳ್ಳದೆ ಪುಟ ತಿರುವಿ ಹಾಕುತ್ತಾರೆ. ಅಂತಹದ್ದರಲ್ಲಿ ಈಶ್ವರಪ್ಪನವರ ಮನೆಯ ಮೇಲಿನ ಲೋಕಾಯುಕ್ತ ದಾಳಿ ಸುದ್ದಿಯೇ ಆಗಬೇಕಾಗಿರಲಿಲ್ಲ, ಆದರೆ ಸಿದ್ದರಾಮಯ್ಯನವರಿಗೆ ದಾಳಿಯಲ್ಲಿ ಸಿಕ್ಕ ಹಣ ಎಣಿಸುವ ಯಂತ್ರ ಗಮನ ಸೆಳೆದಿದೆಯಂತೆ. ಅವರ ಮನೆಯಲ್ಲಿ ಇದು ಯಾಕೆ ಇತ್ತು ಎನ್ನುವ ಪ್ರಶ್ನೆ ಎತ್ತಿದ್ದಾರೆ.

ಅಲ್ಲ ಸಿದ್ದರಾಮಯ್ಯನವರೆ ಎಂತಹ ಪೆದ್ದ ಪ್ರಶ್ನೆ ಕೇಳಿದ್ದೀರಿ? ಹಣ ಎಣಿಸುವ ಯಂತ್ರವನ್ನು ಮನೆಯಲ್ಲಿಟ್ಟುಕೊಳ್ಳಬಾರದು ಎಂಬ ಕಾನೂನು ಏನಾದರೂ ಇದೆಯಾ? ಇಲ್ಲವಲ್ಲ, ಇಟ್ಟುಕೊಂಡಿರುತ್ತಾರೆ. ಅದಕ್ಕೆ ಕಾರಣವೂ ಇದೆ.

ಕಾಲ ಕುಲಗೆಟ್ಟು ಹೋಗಿದೆ ಸಿದ್ದರಾಮಯ್ಯನವರೆ. ಉಪಮುಖ್ಯಮಂತ್ರಿಗಳ ಬಳಿಗೆ ಎಂತೆಂತಹವರೋ ಬರುತ್ತಾರೆ. ವ್ಯವಹಾರ ಕುದುರಿಸುತ್ತಾರೆ. ಹಣವನ್ನೂ ಸಂದಾಯ ಮಾಡುತ್ತಾರೆ. ಹೇಳಿದಷ್ಟು ಹಣ ಇದೆಯೋ ಇಲ್ಲವೋ ಎಂಬ ಸಂಶಯ ಕಾಡಲಾರಂಭಿಸುತ್ತದೆ. ನೋಟಿನ ಕಂತೆ ಗಮನಿಸುತ್ತಾರೆ. ಅದು ಸರಿಯಾಗಿಯೇ ಇರುತ್ತದೆ. ಆದರೆ ಕಂತೆ ಒಳಗಿನ ನೋಟುಗಳ ಸಂಖ್ಯೆ ಸರಿಯಾಗಿದೆ ಎನ್ನುವುದಕ್ಕೆ ಖಾತರಿ ಏನು? ಹೇಗಿದ್ದರೂ ಇದು ಹಡಬಿ ಹಣ. ಯಾರೂ ಎಣಿಸುವುದಕ್ಕೆ ಹೋಗುವುದಿಲ್ಲ, ಬಂದಷ್ಟು ಬರಲಿ ಬಂಡಳ್ಳಿ, ಸುಂಕ ಅಂತ ಬಾಚಿಕೊಳ್ತಾರೆ

ಅಣಕ



• ಎಚ್.ಎಲ್.ಕೇಶವಮೂರ್ತಿ

ಎಂದು ಒಂದೊಂದು ಕಂತೆಯಲ್ಲಿಯೂ ಒಂದಷ್ಟು ನೋಟುಗಳಿಗೆ ಕನ್ನ ಹಾಕಿದ್ದೂ ಹಾಕಿರಬಹುದು. ಹೀಗೆ ಮಾಡುವುದು ಮೋಸ ಅಲ್ಲವಾ. ಇಂತಹವೆಲ್ಲ ಮನಸ್ಸನ್ನು ಕಾಡುತ್ತೆ, ಈ ತೊಳಲಾಟ ಎಲ್ಲ ಯಾಕೆ ಬೇಕು ಅಂತ ಈಶ್ವರಪ್ಪನವರು ಹಣ ಎಣಿಸುವ ಯಂತ್ರ ಇಟ್ಟಿರಬಹುದು. ಹಾಗೆಂದಮಾತ್ರಕ್ಕೆ ಮನೆಬಾಗಿಲಿಗೆ ಬಂದ ಲಕ್ಷ್ಮಿಯರನ್ನೆಲ್ಲ ಅವರು ಎಣಿಸುತ್ತಾರೆ ಅಂತ ಅಲ್ಲ, ಈ ಮನುಷ್ಯ ಹಡಬಿ ದುಡ್ಡನ್ನೂ ಎಣಿಸುತ್ತಾನಂತೆ. ಅದಕ್ಕೆ ಮಿಷಿನ್ನೂ ಇಟ್ಟುಕೊಂಡಿದ್ದಾನಂತೆ ಅನ್ನೊ ಸುದ್ದಿ ಹರಡುತ್ತೆ, ಇದ ತಿಳಿದವರು ನಿಯತ್ತಾಗೇ ಹಣ ಸಂದಾಯ ಮಾಡ್ತಾರೆ. ಈ ಯಂತ್ರ ಇದೆಯಲ್ಲ ಅದು ಒಂದು ರೀತೀಲಿ ಬೆರ್ಕಪ್ಪ ಇದ್ದಂಗೆ ಕಣ್ರೀ ಅಷ್ಟೇಯ....!

ಜಟ್ಟಿ ಜಾರಿ ಬಿದ್ದರೂ.....

ಸಾಮೂಹಿಕ ಅತ್ಯಾಚಾರ ದೇಶಾದ್ಯಂತ ಸುದ್ದಿ ಆಗಿದೆ. ಅಪರಾಧಿಗಳನ್ನ ಗಲ್ಲಿಗೇರಿಸಿ ನಿರ್ವೀರ್ಯಗೊಳಿಸಿ, ಗೂಂಡಾ ಕಾಯ್ದೆ ಅಡಿ ಶಿಕ್ಷಿಸಿ ಅನ್ನೊ ಹಲವಾರು ಸಲಹೆಗಳು ಬಂದಿವೆ. ಇವೆಲ್ಲ ಆಗಬೇಕಾದರೆ ಕಾನೂನಿನ ತಿದ್ದುಪಡಿ ಆಗಬೇಕು. ಅದನ್ನ ಮಾಡಬೇಕಾದವರಲ್ಲಿ ಕೆಲವು ರೇಪಿಸ್ಟುಗಳಿದ್ದಾರಂತೆ. ಇನ್ನು ಕೆಲವರು ಉಬ್ಬುತಗ್ಗು ತಟ್ಟಿಸಿಕೊಂಡು, ಬಣ್ಣ ಬಳಿದುಕೊಂಡು ಚಳವಳಿ ಮಾಡ್ತೀರಿ ಅಂತ ಬರ್ತಾರೆ ಅಂತ ಚಳವಳಿಗಾರರನ್ನು ಗೇಲಿ ಮಾಡುವ ಪ್ರವೃತ್ತಿಯವರಂತೆ. ಮಮತಾ ಬ್ಯಾನರ್ಜಿ ರೇಪು ಮಾಡಿಸಿಕೊಳ್ಳಲು ಎಷ್ಟು ಕೊಡಬೇಕು ಎಂದು ಕೇಳುವ ಮಹಾನುಭಾವರೂ ಇದ್ದಾರಂತೆ. ಮಹಿಳಾ ಸುರಕ್ಷತೆ ಕುರಿತ ಕಾನೂನನ್ನು ತಂದೇ ಬಿಡಬಹುದು ಎನ್ನುವ ಕಾರಣಕ್ಕೋ ಏನೋ ಇನ್ನೂ ಶಾಸನಸಭೆಗಳಲ್ಲಿ ಮಹಿಳಾ ಮೀಸಲಾತಿ ಮಸೂದೆ ಗೆದ್ದಲು ಹಿಡಿಯುತ್ತಾ ಕುಳಿತಿರುವಂತೆ ಮಾಡಲಾಗುತ್ತಿರಬಹುದು. ಇರಲಿ. ಸಾಮೂಹಿಕ ಅತ್ಯಾಚಾರ ಕುರಿತು ಇಷ್ಟೆಲ್ಲ ಚಳವಳಿಗಳು ನಡೆಯುತ್ತಿದ್ದರೂ ಕೇಂದ್ರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮಂತ್ರಿಣಿ ಸುದ್ದೀನೇ ಇಲ್ಲವಲ್ಲಾ ಅಂದರೆ ಇಲ್ಲವಂತೆ ಸುದ್ದಿ ಮಾಡಿದ್ದರಂತೆ. ಘಟನೆ ನಡೆದ ಎರಡನೇ ದಿವಸ 'ನಾವು ಎಲ್ಲವನ್ನು ಗಮನಿಸುತ್ತಿದ್ದೇವೆ' ಎಂದು ಕೈತೊಳೆದುಕೊಂಡಿದ್ದರಂತೆ!

ಅಲ್ಲ ಅಲ್ಲ, ಅವರು ಹಾಗೆ ಮಾಡಲಿಲ್ಲವಂತೆ. ರೇಣುಕಾ ಚೌಧುರಿ ಹಾಗೆ ಮಾಡಿಸಿದರಂತೆ! ಇಂತಹ ಸಮಯದಲ್ಲಿ ಮಹಿಳಾ ಕಲ್ಯಾಣ ಸಚಿವೆಯಾದ ತಾನು ಮೂಲೆ ಸೇರಬಾರದು ಅಂತ ಅವರೇನು ಮಾಡಿದರಂತೆ ಅಂದ್ರೆ ಕೆಲವು ಮಾಧ್ಯಮದವರನ್ನು ಕರೆಸಿ ಅವರ ಮುಂದೆ ಮಹಿಳಾ ಕಲ್ಯಾಣ ಕುರಿತಂತೆ ದನಿ ಎತ್ತಿದರಂತೆ. ಆದರೆ ಅದು ಸುದ್ದಿಯಾಗಲೇ ಇಲ್ಲವಂತೆ! 'ಇದೇನ್ರಿ ಹಿಂಗಾಗೋಗದೆ ನಿಮ್ಮ ಮೇಡಂ ಕತೆ' ಅಂತ ಯಾರೋ ಕೇಳಿದ್ದಕ್ಕೆ ಅವರ ಸಿಬ್ಬಂದಿ 'ರೇಣುಕಾಜೀ ದಕ್ಷಿಣ ಭಾರತದವರು. ದೆಹಲಿಯಲ್ಲಿ ಅಷ್ಟು ಪರಿಚಯ ಸಾಲದು. ಅದಕ್ಕೆ ಪ್ರಚಾರ ಸಿಗಲಿ ಅಂತ ಹಿಂಗೆಲ್ಲ ಮಾಡ್ತಾ ಅವ್ರೆ. ನಮ್ಮ ಮೇಡಮ್ಮು ದೆಹಲಿಯೋರೆ ಅಲ್ಲವಾ.... ಎಲ್ಲರಿಗೂ ಪರಿಚಯ. ಪ್ರಚಾರದ ಅಗತ್ಯ ಇಲ್ಲ' ಅಂದರಂತೆ!

ಜಟ್ಟಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಅಂದ ಹಾಗಾಯಿತು! ■

ಧರ್ಮಸ್ಥಳಕ್ಕೆ ಮರ್ಮಾಘಾತ


ಧರ್ಮಸ್ಥಳದಲ್ಲಿ ನಡೆದ ಅನಾಚಾರಗಳಿಗೆ ಕೇವಲ ಧರ್ಮಸ್ಥಳದ ದೊರೆ ಪರಿವಾರದವರಷ್ಟೇ ಹೊಣೆಯಲ್ಲ, ಅಲ್ಲಿ ಏನೇ ನಡೆದರೂ ಜಾಣಕುರುಡರಾಗುವ ಜನತೆ ಹಾಗೂ ಮಾಧ್ಯಮಗಳು ಕೂಡ ಇದಕ್ಕೆ ಹೊಣೆ. ಈ ಕಾರಣಕ್ಕೆ ತಾವು ಏನೇ ಮಾಡಿದರೂ ದಕ್ಕಿಸಿಕೊಳ್ಳುತ್ತೇವೆಂಬ ಭ್ರಮೆಗೆ ಬಿದ್ದೇ ಧರ್ಮಸ್ಥಳದಲ್ಲಿ ಅಕ್ರಮಗಳು ಹೆಚ್ಚುತ್ತಿರುವುದು ಸತ್ಯ.

ಸಾರ್ವಜನಿಕರ ಕುತೂಹಲ ಕೆರಳಿಸಿದ 1987ರ ಪದ್ಮಲತಾ ಅತ್ಯಾಚಾರ ಕೊಲೆ ಕೇಸು ಯಾವುದೋ ಪಿಕ್‌ಪಾಕೆಟ್ ಕೇಸಿಗಿಂತಲೂ ಕಡೆಯಾಗಿ ಬಿದ್ದುಹೋದದ್ದರ ಹೊಣೆಯನ್ನು ಯಾರು ಹೊರಬೇಕು? ಈಗ ಸ್ಥಳೀಯವಾಗಿ "ಪದ್ಮಲತಾಳೇ ಸೇಡಿಗಾಗಿ ಸೌಜನ್ಯಳಾಗಿ ಬಂದು ಹಳೆ ಕೇಸಿಗೆ ಜೀವ ಕೊಡುತ್ತಿದ್ದಾಳೆ" ಎಂಬ ಗಾಳಿಮಾತು ಹರಡಿದೆ.

ಈ ಹಿಂದೆ ಆದಂತೆ ಈ ಬಾರಿಯೂ ಸೌಜನ್ಯಳ ಮೇಲಾದ ಅತ್ಯಾಚಾರ ಮತ್ತು ಕೊಲೆ ಕೇಸು ಹಳ್ಳ ಹಿಡಿಯಲು ತಯಾರಾಗಿತ್ತು. ಆಕೆಯ ಮೇಲೆ ಅತ್ಯಾಚಾರವೆಸಗಿದ ರೇಪಿಸ್ಟರು ಎಂತಹ ಕ್ರಿಮಿನಲ್ ಬುದ್ಧಿಯವರೆಂದರೆ ವೀರ್ಯಾಣುಗಳ ಪತ್ತೆಯಾಗದಂತೆ ಆಕೆಯ ಮರ್ಮಾಂಗಕ್ಕೆ ಮಣ್ಣು ತುಂಬಿದ್ದರು. ಮಾತ್ರವಲ್ಲ, ಈ ರೇಪ್ ಮತ್ತು ಕೊಲೆಯನ್ನು ಒಬ್ಬ ಮತಿವಿಕಲನ ತಲೆಗೆ ಕಟ್ಟಲು ನೋಡಿದರು. ಪೊಲೀಸರೂ ದುರುಳರ ಲೆಕ್ಕಾಚಾರದೊಂದಿಗೆ ಸಕಾರಾತ್ಮಕವಾಗಿ ಸ್ಪಂದಿಸಿ ಯಾವುದೇ ತನಿಖೆ, ಪರೀಕ್ಷೆಗಳಿಲ್ಲದೇ "ಆರೋಪಿ ಕೃತ್ಯವನ್ನು ಒಪ್ಪಿಕೊಂಡಿದ್ದಾನೆ. ಹಾಗಾಗಿ ಈತನೇ ಅಪರಾಧಿ" ಎಂದು ಕೇಸನ್ನು ಹಳ್ಳಕ್ಕೆ ದೂಡಲು ಅಣಿಯಾಗಿದ್ದರು. ಆದರೆ 'ಕರಾವಳಿ ಅಲೆ' ಪತ್ರಿಕೆಯ ಬಿ.ವಿ.ಸೀತಾರಾಮ್, ನಾಗರಿಕ ಸೇವಾ ಟ್ರಸ್ಟ್‌ನ ಸೋಮನಾಥ ನಾಯಕ್, ಕೇಮಾರು ಶ್ರೀಯಂತಹ ಬೆರಳೆಣಿಕೆಯ ವ್ಯಕ್ತಿಗಳು ತಾವುಗಳು ಕೊಳಕಮಂಡಲ ಹಾವಿನ ಹುತ್ತಕ್ಕೆ ಕೈ ಹಾಕುತ್ತಿದ್ದೇವೆಂಬುದನ್ನೂ ಲೆಕ್ಕಿಸದೆ ದುರುಳರ ವಿರುದ್ಧ ಸೆಟೆದು ನಿಂತರು. ಸ್ಥಳೀಯ ಜನ ಕೂಡ ಜಾಗೃತರಾದರು.

ರಾಜ್ಯದ ಹೆಚ್ಚಿನ ಪತ್ರಿಕೆಗಳು ಸೌಜನ್ಯಳ ರೇಪ್ ಮತ್ತು ಮರ್ಡರ್ ಕುರಿತು ಸುಮ್ಮನಿದ್ದರೆ ನಿಮ್ಮ ಪತ್ರಿಕೆ ಮಾತ್ರ ಇದರ ಬಗ್ಗೆ ಎರಡು ಬಾರಿ ಮುಖಪುಟ ಲೇಖನಗಳನ್ನು ಪ್ರಕಟಿಸಿ ಈ ಪ್ರಕರಣವನ್ನು ರಾಜ್ಯವ್ಯಾಪಿಗೊಳಿಸಿತು. ಇದು ಅಭಿನಂದನೀಯ.

ಸೌಜನ್ಯ ಧರ್ಮಸ್ಥಳದ ಯುವತಿ. ಅಲ್ಲದೇ ಇದೇ ಧರ್ಮಸ್ಥಳ ಕ್ಷೇತ್ರ ನಡೆಸುವ ಕ್ಷೇತ್ರದ ಹೆಸರಿನ ಕಾಲೇಜಿನ ವಿದ್ಯಾರ್ಥಿನಿ ಆಗಿದ್ದವಳು. ಆಕೆ ಕೊಲೆಯಾಗುವ ಮುನ್ನ



ಇದೇ ಕಾಲೇಜಿಗೆ ಹೋಗಿ ಮನೆತಲುಪುವ ಮೊದಲೇ ದುರುಳರಿಗೆ ಬಲಿಯಾದಳು. ಹೀಗಾಗಿ ಇದು ತಮಗಾದ ಅವಮಾನ ಎಂದು ದೊರೆಪರಿವಾರ ಚಿಂತಿಸುವ ಬದಲು ಸಿಬಿಐ ತನಿಖೆ ಆದರೆ ಕ್ಷೇತ್ರದ ಮಾನಹೋಗುತ್ತದೆ ಎಂದು ಗೋಳಾಡಿದ್ದು ಹೇಯವಾಗಿತ್ತು.

ಈಗ 'ಕರಾವಳಿ ಅಲೆ'ಯ ಬಿ.ವಿ.ಸೀತಾರಾಮ್ ವಿರುದ್ಧ ಪಿ.ಪಿ.ಹೆಗಡೆ ಎಂಬುವವರು ದೂರನ್ನು ನೀಡಿದ್ದಾರೆ. ಈ ಪಿ.ಪಿ.ಹೆಗಡೆ ಇತ್ತೀಚೆಗೆ ಉಜಿರೆಯಲ್ಲಿ ರಾಷ್ಟ್ರಧ್ವಜದ ಬಗ್ಗೆ ಸಂವಿಧಾನಬಾಹಿರವಾಗಿ ಕೀಳಾಗಿ ಮಾತಾಡಿ ಜನರಿಂದ




ಪತ್ರಿಕಾ ಬಳಗಕ್ಕೆ ಹೃತ್ಪೂರ್ವಕ ಅಭಿನಂದನೆಗಳು

ಡಿಸೆಂಬರ್ 12 ರಿಂದ ನಿಯತವಾಗಿ ನನಗೆ ಲಂಕೇಶ್ ಪತ್ರಿಕೆ ಬರುತ್ತಿದೆ. ಶ್ರೀನಿವಾಸ ಕಾರ್ಕಳ ಅವರು ನಾನು ಲಂಕೇಶ್ ಪತ್ರಿಕೆಯ ಅಭಿಮಾನಿಯಾಗಿರುವುದನ್ನು ಗಮನಿಸಿ ನಿಮಗೆ ಪತ್ರಿಕೆ ಕಳಿಸುವಂತೆ ಗೌರಿಯವರಲ್ಲಿ ವಿನಂತಿಸುತ್ತೇನೆ ಎಂದಿದ್ದರು. ಅದು ಸಾಂದರ್ಭಿಕವಾದ ಹಾರಿಕೆಯ ಮಾತಾಗಿರಬಹುದೆಂದೇ ನಾನು ಅದನ್ನು ಮರೆತುಬಿಟ್ಟಿದ್ದೆ. ಆದರೆ ಡಿಸೆಂಬರ್ 12 ರಂದು ನನ್ನ ವಿಳಾಸಕ್ಕೆ ಬಂದ ಪತ್ರಿಕೆಯನ್ನು ಕಂಡು ಆನಂದ ಮತ್ತು ಆಶ್ಚರ್ಯ ಎರಡೂ ಉಂಟಾದುವು.

ಓದುಗರ ಬಗ್ಗೆ ನಿಮ್ಮ ಕಾಳಜಿ ಮತ್ತು ಅಭಿಮಾನಕ್ಕೆ ನಾನು ಎಷ್ಟು ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೇ. ನಾನು ನಾಡಿನ ಹಲವು ಮಾಸಿಕ, ತ್ರೈಮಾಸಿಕ ಪತ್ರಿಕೆಗಳನ್ನು ಓದುತ್ತಿದ್ದೇನೆ. ಅವುಗಳಲ್ಲಿ ನಾಡಿನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ವಿಚಾರಗಳ ಬಗ್ಗೆ ಗಂಭೀರವಾದ ಸಂವಾದಗಳು, ಚರ್ಚೆಗಳು, ವಾಗ್ವಾದಗಳು ನಡೆಯುತ್ತಿವೆ. ಇವುಗಳು ನಮ್ಮ ಚಿಂತನೆಯನ್ನು ಹರಿತಗೊಳಿಸಿದ್ದು ಹೌದು. ಆದರೆ ನಿಮ್ಮ ಪತ್ರಿಕೆಯಲ್ಲಿ ಪ್ರಚಲಿತ ಸಮಸ್ಯೆಗಳ ಜಾಡು ಹಿಡಿದು ಶೋಧಿಸುವ, ಶೋಧಿಸಿದ ವಿಷಯಗಳನ್ನು ಯಾವುದೇ ಆಲಂಕಾರಿಕ ಪದ, ವಾಕ್ಯಗಳ ಹಂಗಿಲ್ಲದೆ ಜನಸಾಮಾನ್ಯರ ಆಡುಮಾತಿನಲ್ಲಿ ಪ್ರಸ್ತುತಪಡಿಸುವ ಗತ್ತು, ಗೈರತ್ತುಗಳೇ ವಿಶಿಷ್ಟವಾದುದು.

ಯಾರಿಂದಲೂ ಸ್ಪರ್ಶಿಸಲು ಅಸಾಧ್ಯವಾದ, ಸ್ಪರ್ಶಿಸಿದರೂ ಕಹಿಯಾದ ಸತ್ಯವನ್ನು ಮರೆಮಾಚಿ ಬರೆಯುವ ಪತ್ರಿಕಾ ಧರ್ಮ(?)ವನ್ನು ಪಾಲಿಸುವವರ ಮಧ್ಯೆ ನಿಮ್ಮ ಪತ್ರಿಕೆಗೊಂದು ಅನನ್ಯತೆ ಇದೆ. ಉದಾಹರಣೆ-ಸೌಜನ್ಯ ಕೊಲೆ ಪ್ರಕರಣ. ಇಂತಹ ವಸ್ತುನಿಷ್ಠ ಅಧ್ಯಯನಶೀಲವಾದ ಪತ್ರಿಕಾ ಬಳಗವಿರುವುದರಿಂದಲೇ ಇದು ಅಭಿಮಾನಿ ಓದುಗ ಬಳಗವನ್ನು ದಿನೇದಿನೇ ಹೆಚ್ಚಿಸಿಕೊಳ್ಳುತ್ತಿದೆ. ಸಮಾಜದಲ್ಲಿ ಬೇರುಬಿಟ್ಟ ಕೆಲವು ಅನಿಷ್ಟವಾದ ನಂಬಿಕೆಗಳನ್ನು, ಜನರ ಮನಸ್ಸಿನಲ್ಲಿ ಗಟ್ಟಿಯಾಗಿ ನಾಟಿಕೊಂಡಿರುವ ಹಲವು ಪೂರ್ವಾಗ್ರಹಗಳನ್ನು ಕಿತ್ತೆಸೆಯಲು ಈ ಪತ್ರಿಕೆ ಪ್ರಚೋದನೆ ನೀಡುತ್ತದೆ ಎಂದು ಭಾವಿಸಿದ್ದೇನೆ. ನಿಮಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

-ಬಿ.ಎಂ. ರೋಹಿಣಿ, ಮಂಗಳೂರು



ಫಿಫ್ಟಿ ನಂತರದ ಟೆನ್ಶನ್...

ಕ್ರಿಕೆಟ್ ಆಟಗಾರರು ಫಿಫ್ಟಿ ಅಥವಾ ಸೆಂಚುರಿ ಬಾರಿಸುವ ಸಂದರ್ಭದಲ್ಲಿ ...ಲ್ಪ ನರ್ವಸ್ ಆಗುವುದು ಸಹಜ. ಅದೇರೀತಿ ಸಿನಿಮಾದಲ್ಲೂ ಫಿಫ್ಟಿ ಅಥವಾ ...ಚುರಿ ಬಾರಿಸುವ ಘಟ್ಟದಲ್ಲಿ ಕಲಾವಿದರು ಒಂದಿಷ್ಟು ಟೆನ್ಷನ್ ಮಾಡಿಕೊಳ್ಳುತ್ತಾರೆ. ...ೀಗೆ ಫಿಫ್ಟಿ ದಾಟಿದ ನಂತರ ನರ್ವಸ್ ಆದ ನಿರ್ದೇಶಕರಲ್ಲಿ ಭಾರ್ಗವ ಮತ್ತು ...ರಾಜೇಂದ್ರ ಬಾಬು ಪ್ರಮುಖರು.

ಭಾರ್ಗವರವರ 50ನೇ ಚಿತ್ರವಾಗಿ ಶಿವರಾಜ್‌ಕುಮಾರ್ ಅಭಿನಯದ ...ಂಡುಗಲಿ ಕುಮಾರರಾಮ' ಬರೋಬ್ಬರಿ ಆರು ವರ್ಷಗಳ ಹಿಂದೆ ...ಡುಗಡೆಯಾಯಿತು. ಅದು ಬಾಕ್ಸ್ ಆಫೀಸ್‌ನಲ್ಲಿ ಮುಗ್ಗರಿಸಿದ್ದರಿಂದ ಭಾರ್ಗವಗೆ ...ತನಕ 51ನೇ ಸಿನಿಮಾ ಮಾಡುವ ಅವಕಾಶವೇ ಸಿಕ್ಕಿಲ್ಲ. ಹಾಗೆಯೇ ...ರಾಜೇಂದ್ರಬಾಬು ಅವರ 50ನೇ ನಿರ್ದೇಶನದ ಚಿತ್ರವಾದ 'ಬೊಂಬಾಟ್' ...ೂರು ವರ್ಷಗಳ ಹಿಂದೆ ಬಿಡುಗಡೆಯಾಗಿ ಬಾಕ್ಸ್ ಆಫೀಸ್‌ನಲ್ಲಿ ಪರಾಭವ ...ಡಿತ್ತು. ಗಣೇಶ್ ಅಭಿನಯದ ಆ ಚಿತ್ರ ನೆಲ ಕಚ್ಚಿದ ನಂತರ ಡಿ.ಬಾಬು ...ತೆಗೆ ಗಾಂಧಿನಗರದವರು ತಿರುಗಿಯೂ ನೋಡಿರಲಿಲ್ಲ.

ಆದರೆ ಈಗ ಸುಮಾರು ಮೂರು ವರ್ಷಗಳ ಗ್ಯಾಪ್ ನಂತರ ಡಿ. ...ಜೇಂದ್ರಬಾಬು ಅದ್ದೂರಿಯಾಗಿ ತನ್ನ 51ನೇ ಚಿತ್ರವನ್ನು ಮಾಡಲು ಹೊರಟಿದ್ದಾರೆ. 'ಆರ್ಯನ್' ಎಂದು ಹೆಸರಿಡಲಾಗಿರುವ ಈ ಚಿತ್ರದಲ್ಲಿ ಶಿವರಾಜ್‌ಕುಮಾರ್ ನಾಯಕ. ಅಂದಹಾಗೆ, ಈ ಹಿಂದೆ ರಾಜೇಂದ್ರಬಾಬು ಮತ್ತು ಶಿವರಾಜ್‌ಕುಮಾರ್ ಜೋಡಿಯ ಅನೇಕ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಸೂಪರ್ ಹಿಟ್ ಆಗಿದ್ದರೂ ಕಳೆದ ನಾಲ್ಕು ವರ್ಷಗಳಲ್ಲಿ ಈ ಜೋಡಿಯ ಚಿತ್ರ ಸೆಟ್ಟೇರಿರಲಿಲ್ಲ.




ಇಲ್ಲೊಂದು ವಿಶೇಷ ಎಂದರೆ ಭಾರ್ಗವ ಮತ್ತು ಡಿ. ರಾಜೇಂದ್ರಬಾಬು ನಂತರ ಚಿತ್ರರಂಗಕ್ಕೆ ಆಗಮಿಸಿದ ನಿರ್ದೇಶಕ ಸಾಯಿಪ್ರಕಾಶ್ ಈಗಾಗಲೇ ತೊಂಭತ್ತಾರು ...ತ್ರಗಳನ್ನು ನಿರ್ದೇಶಿಸಿ ಸಚಿನ್ ತೆಂಡೂಲ್ಕರ್ ತರಹ ನೂರರ ಗಡಿ ತಲುಪಲು ...ಣಗಾಡುತ್ತಿದ್ದಾರೆ. ಕಳೆದ ವಾರ ಬಿಡುಗಡೆಯಾದ 'ನಂದೀಶ' ಸಾಯಿಪ್ರಕಾಶರ ...ಂಭತ್ತಾರನೆಯ ಚಿತ್ರ.

ಕ್ರಿಕೆಟ್ ಭಾಷೆಯಲ್ಲಿ ಹೇಳುವುದಾದರೆ ಭಾರ್ಗವ ಮತ್ತು ಡಿ. ರಾಜೇಂದ್ರಬಾಬು ...ಂಭ ಆಟಗಾರರಾದರೆ ಸಾಯಿಪ್ರಕಾಶ್ ಮಧ್ಯಮ ವರ್ಗದ ಆಟಗಾರ. ...ನ್ನಡ ಚಿತ್ರರಂಗದ ಇತಿಹಾಸದಲ್ಲಿ ನೂರು ಚಿತ್ರಗಳನ್ನು ನಿರ್ದೇಶಿಸಿರುವ ...ೊದಲಿಗ ಎಂಬ ಹೆಗ್ಗಳಿಕೆ ಸಾಯಿಪ್ರಕಾಶರಿಗೆ ಸಲ್ಲುವ ಸಾಧ್ಯತೆ ಹೆಚ್ಚು ...ನಿಸುತ್ತಿದೆ.

ಡಿ. ರಾಜೇಂದ್ರಬಾಬು ನಿರ್ದೇಶನದ 'ಆರ್ಯನ್' ಚಿತ್ರ ಕ್ರೀಡಾಪಟುವಿನ ...ೀವನವನ್ನು ಕುರಿತದ್ದಾದ್ದರಿಂದ ಇದರ ಬಗ್ಗೆ ಬರೆಯುವಾಗ ಕ್ರೀಡಾಭಾಷೆಯೇ ...ಜಿಗೆ ಬಂದಿದ್ದು ಸಹಜ ಎನಿಸುತ್ತದೆ...

'ದೊಡ್ಡವರ' ಮಕ್ಕಳಾಟ

ಚಲನಚಿತ್ರ ವಾಣಿಜ್ಯ ಮಂಡಳಿಯ ಕಾರ್ಯಕಾರಿ ಸಮಿತಿ ಸದಸ್ಯ ಸ್ಥಾನಕ್ಕೆ ನಿರ್ಮಾಪಕ ದಿನೇಶ್‌ಗಾಂಧಿ ರಾಜೀನಾಮೆಯನ್ನು ನೀಡಿದ್ದಾರೆ. ಹೀಗಂತ ಮೊನ್ನೆ ಎಲ್ಲಾ ಚಾನೆಲ್‌ನವರು ಬ್ರೇಕಿಂಗ್ ನ್ಯೂಸನ್ನು ಸಾದರಪಡಿಸಿದರು. ಈ ಬಗ್ಗೆ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ವಿಜಯ್‌ಕುಮಾರ್ ಅವರನ್ನು ಸಂಪರ್ಕಿಸಿದಾಗ ಅವರು "ರಾಜೀನಾಮೆ ನೀಡಿದ್ದು ನಿಜ, ಆದರೆ ಅದನ್ನು ಇನ್ನೂ ನಾವು ಸ್ವೀಕರಿಸಿಲ್ಲ" ಎಂದು ಚುಟುಕಾಗಿ ಉತ್ತರಿಸಿದರು.



ಈ ರಾಜೀನಾಮೆಗೆ ಕಾರಣ ಏನೆಂದು ಹುಡುಕುತ್ತಾ ಹೋದಾಗ ಗೊತ್ತಾಗಿದ್ದು ಇಷ್ಟೇ: ಚಲನಚಿತ್ರ ವಾಣಿಜ್ಯ ಮಂಡಳಿಯ ಸಭೆಯಲ್ಲಿ ದಿನೇಶ್‌ಗಾಂಧಿಯನ್ನು ಮಾಜಿ ಅಧ್ಯಕ್ಷೆ ಜಯಮಾಲಾ ಅವರು "ಜೋಕರ್" ಎಂದು ಕರೆದರಂತೆ. ತನ್ನನ್ನು ಜೋಕರ್ ಎಂದು ಕರೆದುದಕ್ಕೆ ಬೇಸತ್ತ ದಿನೇಶ್ ಗಾಂಧಿ "ಜಯಮಾಲಾ ಅವರು ಬೇಷರತ್ತಾಗಿ ಕ್ಷಮೆ ಯಾಚಿಸಬೇಕು. ಏಕೆಂದರೆ ನಾನು ಮೂರು ಬಾರಿ ಮತದಾರರಿಂದ ಆಯ್ಕೆಯಾದವನು. ನನ್ನನ್ನು ಅವಮಾನಿಸಿದ್ದು ಎಂದರೆ ಎಲ್ಲ ಮತದಾರರನ್ನೂ ಅವಮಾನಿಸಿದಂತೆ" ಎಂದು ಜಯಮಾಲಾ ವಿರುದ್ಧ ಆರ್ಭಟಿಸಿದರಂತೆ.




ಅಷ್ಟೇ ಅಲ್ಲ, ಜಯಮಾಲಾರ ವರ್ತನೆಯನ್ನು ಖಂಡಿಸಿ ದಿನೇಶ್ ಗಾಂಧಿ ರಾಜೀನಾಮೆ ಪತ್ರವನ್ನು ಮಂಡಳಿಯ ಅಧ್ಯಕ್ಷರಿಗೆ ರವಾನಿಸಿದರಂತೆ.

ಮುಂದಿನ ವಾರ ನಡೆಯಲಿರುವ ವಾಣಿಜ್ಯ ಮಂಡಳಿಯ ಕಾರ್ಯಕಾರಿ ಸಭೆಯಲ್ಲಿ ಈ ಬಗ್ಗೆ ಚರ್ಚೆಯಾದ ನಂತರ ದಿನೇಶ್ ಗಾಂಧಿ ರಾಜೀನಾಮೆ ಪ್ರಕರಣ ಕೊನೆಗಾಣಬಹುದು. ಅಂದು ಜಯಮಾಲಾರವರು ತಾನು ಆಡಿದ ಮಾತಿಗೆ ಕ್ಷಮೆ ಕೇಳುತ್ತಾರೋ ಅಥವಾ ಅವರು ಹೇಳಿದ ಮಾತು ಸರಿ ಎಂದು ಉಳಿದವರು ಸುಮ್ಮನಿರುತ್ತಾರೋ ಎಂಬುದು ಇನ್ನೂ ಗೊತ್ತಿಲ್ಲ. ಅದೇನೇ ಇರಲಿ, ಫಿಲ್ಮ್ ಚೇಂಬರ್ ಸಭೆಯಲ್ಲೂ ದೊಡ್ಡ ದೊಡ್ಡ ಸ್ಥಾನಗಳನ್ನು ಅಲಂಕರಿಸಿರುವ ಜನ ಚಿಕ್ಕ ಮಕ್ಕಳಂತೆ ಮಾತಾಡುತ್ತಾರೆ, ಮುನಿಸಿಕೊಳ್ಳುತ್ತಾರೆ ಎಂಬುದೇ ಆಶ್ಚರ್ಯಕರ ಸಂಗತಿಯಾಗಿದೆ.



ಸಬ್ಸಿಡಿ ಮೇಲಿನ ಒಲವು

ಡಿಸೆಂಬರ್ ತಿಂಗಳಿನ ಚುಮುಚುಮು ಚಳಿಯಲ್ಲೂ ಬಿಸಿಯಾಗಿದ್ದವರೆಂದರೆ ಕಲಾತ್ಮಕ ಚಿತ್ರಗಳ ನಿರ್ದೇಶಕರು ಮತ್ತು ನಿರ್ಮಾಪಕರು. ಪ್ರಶಸ್ತಿಗಳಿಗಾಗಿ ಚಿತ್ರ ಮಾಡುವ ಈ ಜನ ಸರಕಾರದ ರೂಲ್ಸ್ ಪ್ರಕಾರ ಡಿಸೆಂಬರ್ 31ರೊಳಗೆ ತಮ್ಮ ಚಿತ್ರಗಳನ್ನು ಸೆನ್ಸಾರ್ ಮಾಡಿಸಿದರೆ ಮಾತ್ರ ಆ ವರ್ಷದ ಪ್ರಶಸ್ತಿಗೆ ಸ್ಪರ್ಧಿಸಲು ಅವರಿಗೆ ಅವಕಾಶವಿರುತ್ತದೆ. ಹೀಗಾಗಿ, ಉದ್ಯಮದ ಬೇರೆಯವರೆಲ್ಲಾ ಕ್ರಿಸ್ಮಸ್ ಮತ್ತು ಹೊಸ ವರ್ಷಾಚರಣೆಯ ಗುಂಗಿನಲ್ಲಿದ್ದರೆ ಈ ಜನ ಮಾತ್ರ ಹೇಗಾದರೂ ಮಾಡಿ ಸಿನಿಮಾ ಮುಗಿಸಿ ಸೆನ್ಸಾರ್ ಮಾಡಿಸುವ ಹರಿಬರಿಯಲ್ಲಿರುತ್ತಾರೆ.




ಈಗಾಗಲೇ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದರೂ ತೃಪ್ತರಾಗಿರದ ಶೇಷಾದ್ರಿ ಮತ್ತು ಬರಗೂರು ರಾಮಚಂದ್ರಪ್ಪ ಈ ವರ್ಷ ತಮ್ಮ ಚಿತ್ರಗಳನ್ನು ಸಮಯಕ್ಕಿಂತ ಮೊದಲೇ ಮಾಡಿ ಮುಗಿಸಿದ್ದಾರೆ. ಶೇಷಾದ್ರಿಯ 'ಭಾರತ್ ಸ್ಟೋರ್ಸ್' ಮತ್ತು ಬರಗೂರರ 'ಅಂಗೂಲಿಮಾಲಾ' ಈಗಾಗಲೇ ಸುದ್ದಿ ಮಾಡಿವೆ. ಈ ಬಾರಿ ಇವರ ಜೊತೆಗೆ ಪ್ರಶಸ್ತಿ ಪಡೆಯುವ ಸ್ಪರ್ಧೆಗೆ ಇಳಿದಿರುವವರಲ್ಲಿ ಹೊಸಬರೇ ಹೆಚ್ಚಾಗಿದ್ದಾರೆ.

ಈ ಮಧ್ಯೆ ರವಿ ಸಿರಿವರ ಎಂಬುವವರ 'ಗಾಂಧಿ ಜಯಂತಿ', ಉಮಾಶಂಕರರ 'ಮುನ್ಸಿಫ್', ಕೆ. ಮುದ್ದುರಾಜ್‌ರ 'ಗೆಳೆಯರ ಬಳಗ' ಮತ್ತು ಶ್ರೀನಗರ ಕಿಟ್ಟಿ ನಿರ್ಮಾಣದ 'ಬಾಲ್‌ಪೆನ್', ಶಿವರಾಮ್ ಕ್ರಿಸ್ತ್‌ರ 'ಲಿಟಲ್ ಮಾಸ್ಟರ್' ಮತ್ತು 'ನರಸಪ್ಪನ ನರ್ಸರಿ' ಎಂಬ ಮಕ್ಕಳ ಚಿತ್ರಗಳು ಹಲವರ ಗಮನ ಸೆಳೆದಿವೆ.

ವಿಶೇಷವೆಂದರೆ ಈ ಬಾರಿ ಏಳೆಂಟು ಮಕ್ಕಳ ಚಿತ್ರಗಳು ನಿರ್ಮಾಣಗೊಂಡಿವೆ. ಇದಕ್ಕೆ ಕಾರಣ ನಮ್ಮ ನಿರ್ಮಾಪಕರಿಗೆ ಇದ್ದಕ್ಕಿದ್ದಂತೆ ಮಕ್ಕಳ ಸಿನಿಮಾ ಬಗ್ಗೆ ಒಲವು ಹೆಚ್ಚಾಗಿರುವುದಲ್ಲ. ಬದಲಾಗಿ ಮಕ್ಕಳ ಚಿತ್ರಗಳಿಗೆ ಸರ್ಕಾರ 25 ಲಕ್ಷ ರೂಪಾಯಿ ಸಬ್ಸಿಡಿ ನೀಡಲು ನಿರ್ಧರಿಸಿರುವುದೇ ಆಗಿದೆ ಎಂಬುದನ್ನು ಓದುಗ ಮಹಾಶಯ ಅರ್ಥಮಾಡಿಕೊಳ್ಳಬೇಕು.

● ಶೆಣೈ

ಹೊಗಳಿಕೆ ತೆಗಳಿಕೆ



...ಗಿಸಿಕೊಂಡಿದ್ದಾತ. ಹಾಗೆಯೇ ...ೀಮನಾಥ ನಾಯಕರ ಮೊಬೈಲ್ ...ಸೇಜ್ ಬಗ್ಗೆಯೂ ಸುಖೇಶ್ ...ಬಾತ ದೂರನ್ನು ನೀಡಿದ್ದಾರೆ. ...ುವಾಯನಕೆರೆಯ ಸುಖೇಶ್ ಓರ್ವ ...ುನಲ್. ...ಧರ್ಮಸ್ಥಳದ ಮಾನ ಕಾಪಾಡಲು ...ತಹ ಕ್ರಿಮಿನಲ್‌ಗಳು ಮುಂದಾಗಿರುವುದು ದುರಂತವಲ್ಲದೆ ...ೇನು ಮಂಜುನಾಥಾ?

- ಎಸ್.ಎಸ್. ಗೇರುಕಟ್ಟೆ

...ಗೌರಿ ಮೇಡಂ, ಬಿಜೆಪಿ ಬಿಟ್ಟ ನಾಯಕಮಣಿಗಳೆಲ್ಲಾ ...ಮ್ಮ ಕನಸಿನ ಯಡಿಯೂರಪ್ಪನವರ ಹಾಗೆ ...ಲಾಗುವಂತಿದ್ದರೆ ಆರೆಸ್ಸೆಸ್ ಎಂದೋ ಎಕ್ಕುಟ್ಟಿ ...ೀಗಿರುತ್ತಿತ್ತು. ...ಏನೇ ಆಗಲಿ, ನಿಮ್ಮ ವ್ಯಂಗ್ಯದ ಕನಸು ಮೊನಚಾಗಿದೆ. ...ನ್ನು ಯಡಿಯೂರಪ್ಪ ಓದುವಂತಿದ್ದರೆ. . .

- ರವಿಕುಮಾರ್, ಹಾಸನ

...ಅಕ್ಕ, ಯಡಿಯೂರಪ್ಪನ ಸಂದರ್ಶನ ಓದಲಾರಂಭಿಸಿ ...ದಿಗಿಲಾಯಿತು. ಆದರೆ ಕಡೆಯ ಪ್ಯಾರಾ ಓದಿ ...ಾಧಾನವಾಯಿತು. ನಿಮ್ಮ ವಿಟ್ ಸೂಪರ್ ಆಗಿದೆ.

- ಕುಂಸಿ ಉಮೇಶ್, ಶಿವಮೊಗ್ಗ

...ಯಡಿಯೂರಪ್ಪನವರೊಂದಿಗೆ ನಿಮ್ಮ ಕ್ರಿಯಾಶೀಲ ...ಸ್ತು ಚಮತ್ಕಾರಿಕ ಸಂದರ್ಶನ ಇಷ್ಟವಾಯಿತು. ...ಅಂದಹಾಗೆ, ಇನ್ನು ಮುಂದೆ ಸಿ.ಟಿ.ರವಿಯನ್ನು ಸೀರೆ ...ಯೊಂದು ಕರೆಯಬಹುದಲ್ಲವೇ? ಮುಂದಿನ ...ಾವಣೆಯಲ್ಲಿ ಗೆಲ್ಲಲು ಮಹಿಳೆಯರಿಗೆ ಸೀರೆ ಹಂಚಿ ...ದ್ದ ರವಿಗೆ ಚಿಕ್ಕಮಗಳೂರಿನ ಮತದಾರರು ಸೀರೆಯನ್ನೇ ...ಸ್ ಉಡುಗೊರೆಯಾಗಿ ಕೊಡುತ್ತಾರೆಂದು ನಂಬಿರುವೆ.

-ಅಭಿನಂದನ್ ಬಳ್ಳಾರಿ. ಈ ಮೇಲ್ ಮೂಲಕ

...ಸಿದ್ದರಾಮಯ್ಯನವರನ್ನು ಕುರಿತು ಪಾರ್ವತೀಶ ಅವರು ಬರೆದ ಲೇಖನ ತುಂಬಾ ಚೆನ್ನಾಗಿತ್ತು.

-ರಹಮತ್ ತರೀಕೆರೆ, ಹಂಪಿ

ಸಿದ್ದರಾಮಯ್ಯನವರನ್ನು ಕುರಿತು ಜನವರಿ 9, 2013ರ ಸಂಚಿಕೆಯಲ್ಲಿ ಪಾರ್ವತೀಶ ಅವರು ಬರೆದ 'ಸಿದ್ದರಾಮಯ್ಯನವರೆ, ಸಮಸ್ಯೆಗಳಿಗೆ ಹತಾಶೆ ಪರಿಹಾರವಲ್ಲ' ಎಂಬ ಲೇಖನ ಓದಿ ಸಂತೋಷವಾಯಿತು. ಪಾರ್ವತೀಶ ಅವರಿಗೆ ಅಭಿನಂದನೆಗಳು.

- ಮೋಹನ್, ಮೈಸೂರು

ಗೌರಿ ಅಕ್ಕ, ಈ ವಾರದ ಪತ್ರಿಕೆ ಸಿಕ್ಕಿಲ್ಲ, ಕಾರಣ ಶುಕ್ರವಾರ ಬೆಳಗ್ಗೆಯೇ ಪತ್ರಿಕೆ ಬರುತ್ತಿದ್ದಂತೆ ರಾಮದಾಸ್ ಕಡೆಯವರು ಇಡೀ ಪತ್ರಿಕೆಯ ಬಂಡಲ್‌ಗಳನ್ನು ಖರೀದಿ ಮಾಡಿ ಬೇರೆಯವರಿಗೆ ಸಿಗದಂತೆ ಮಾಡಿದ್ದಾರೆ. ದಯಮಾಡಿ ಹೆಚ್ಚುವರಿಯಾಗಿ ಪತ್ರಿಕೆ ಕಳುಹಿಸಿಕೊಡಿ.

-ಅಂಜದ್, ಮೈಸೂರು

ಅತ್ಯಾಚಾರ: ಪ್ರತಿಭಟನೆಗೂ ಜಾತಿಯ ನಂಟು

ದೆಹಲಿಯಲ್ಲಿ ಪ್ಯಾರಾ ಮೆಡಿಕಲ್ ವಿದ್ಯಾರ್ಥಿನಿಯ ದೇಹ ಹಾಗೂ ಮನಸ್ಸಿನ ಮೇಲೆ ನಡೆಸಿದಂತಹ ಅಮಾನುಷ ಅತ್ಯಾಚಾರ ಭಾರತ ನೆಲಕ್ಕೆ ಚಿರಪರಿಚಿತವಾಗಿರುವಂತದ್ದು, ದೆಹಲಿಗೂ ಕೂಡ. ಅತ್ಯಾಚಾರಗಳು ದೇಶದ ಬಹುತೇಕ ರಾಜ್ಯಗಳಲ್ಲಿ ಸುದ್ದಿಯಾಗಿಯೋ ಸುದ್ದಿಯಾಗದೆಯೋ ನಡೆಯುತ್ತಿರುತ್ತದೆ.

'ಮಹಾಭಾರತ'ದಲ್ಲಿ 'ಧರ್ಮ'ರಾಯ ಹೆಂಡತಿ ದ್ರೌಪತಿಯನ್ನೇ ಜೂಜಾಟದಲ್ಲಿ ಪಣಕ್ಕಿಟ್ಟು ಸೋತಾಗ, ಜನರ ನಡುವೆ ದುಶ್ಯಾಸನ ದ್ರೌಪತಿಯ ಮಾನಭಂಗಕ್ಕೆ ಮುಂದಾದ ಅತ್ಯಾಚಾರದ ಕುರುಹು ನಮ್ಮಲ್ಲಿದೆ.

'ಹೆಣ್ಣೊಬ್ಬಳು ಅತ್ಯಾಚಾರಕ್ಕೆ ಒಳಗಾದಳು' ಎಂಬುವುದಕ್ಕಿಂತ ಅತ್ಯಾಚಾರಕ್ಕೆ ಒಳಗಾದ ಹೆಣ್ಣಿನ ಮೇಲುಜಾತಿತನ, ಓದು, ಅಂತಸ್ತು, ಸುಸಂಸ್ಕೃತಿ, ತೊಗಲಿನ ಬಿಳಿ ಬಣ್ಣ ಇವು ಈ ದೇಶದ ಮಾಧ್ಯಮಗಳಿಗೆ ಮುಖ್ಯವಾಗುತ್ತದೆ ಎಂಬಂಥ ಅಂಶವು ದೆಹಲಿ ಅತ್ಯಾಚಾರದಿಂದ ಸ್ಪಷ್ಟವಾಗುತ್ತದೆ. 'ಈ ಅತ್ಯಾಚಾರ' ದೇಶದ ಅವಮಾನವೆಂದು, ಈ ವಿಕೃತ ಕೃತ್ಯಕ್ಕೆ ದೇಶಕ್ಕೆ ದೇಶವೇ ದಂಗಾಗಿದೆ ಎಂದು, ಅಂಕಣಗಾರರು, ಸ್ತ್ರೀಪರ ಹೋರಾಟಗಾರರು, ಜನರೂ ತಮ್ಮ ಅಭಿಪ್ರಾಯವನ್ನು ಹೇಳಲೇಬೇಕೆಂಬ 'ಏಕತೆ'ಯನ್ನು ಮೂಡಿಸಿ ಒತ್ತಾಯ ಹೇರಿದ ಶಕ್ತಿಗಳು ದಲಿತ, ಹಿಂದುಳಿದ, ಆದಿವಾಸಿ, ಅಲ್ಪಸಂಖ್ಯಾತ ಹೆಣ್ಣು ಮಕ್ಕಳ ಮೇಲೆ ನಿರಂತರವಾಗಿ ಎಸಗಲ್ಪಡುವ ಅತ್ಯಾಚಾರಗಳು 'ದೇಶಕ್ಕಾದ ಅವಮಾನ'ವೆಂದು ಎಂದೂ ಭಾವಿಸಲಿಲ್ಲ. ಪ್ರತಿಭಟಿಸ ಬೇಕೆಂಬ ಮಾನವೀಯ ಕಳಕಳಿಯನ್ನು ಈ 'ಹಿಂದೂತ್ವ' ಶಕ್ತಿಗಳು ತೋರಿದ್ದೇ ಇಲ್ಲ...

ಸಂಘ ಪರಿವಾರ, ಅಖಿಲ ಭಾರತೀಯ (ಬ್ರಾಹ್ಮಣ) ವಿದ್ಯಾರ್ಥಿ ಪರಿಷತ್, ಭಜರಂಗದಳದಂಥ ಹಿಂಸಾಗುಂಪುಗಳು ಮತ್ತು ಬಿಜೆಪಿ ನಾಯಕಿ ಸುಷ್ಮಾ ಸ್ವರಾಜ್ 'ಬದುಕಿದ್ದರೂ ಆ ಹೆಣ್ಣುಮಕ್ಕಳು ಜೀವಂತ ಶವವಾಗಿ ಬಾಳುವಂತಹ ನರಕ ಸೃಷ್ಟಿಸಿದ ಅತ್ಯಾಚಾರಿಗಳನ್ನು ಗಲ್ಲಿಗೇರಿಸಬೇಕು' ಎಂದು ಪಾರ್ಲಿಮೆಂಟಿನಲ್ಲಿ ಕಣ್ಣೀರು ಮಿಡಿದರು. ಜಯ ಭಾದುರಿ ಕೂಡ. ಘಟಾನುಘಟಿಗಳು ಕೂಡ!

ಅತ್ಯಾಚಾರಿಗಳು ಕಣ್ಮುಂದೆಯೇ ಇದ್ದಾರೆ, ಇವರಿಗೆ ಶಿಕ್ಷೆಯಾಗಲೇ ಬೇಕಿದೆ. ಕೋರ್ಟ್-ಕಾನೂನಿನ 'ವೇಗ'ವನ್ನು ಹೆಚ್ಚಿಸಿ ಶಿಕ್ಷೆ ವಿಧಿಸಲ್ಪಡುತ್ತದೆ. ಇದರಲ್ಲಿ ಸಂಶಯವೇ ಇಲ್ಲ, ಆದರೆ ಮೇಲ್ಜಾತಿಗಳಲ್ಲದ, ರಾಜಕೀಯ ಧಾರ್ಮಿಕ ಶಕ್ತಿಯೂ ಪ್ರಭಾವವೂ ಇಲ್ಲದಂತಹ, ಬಡತನವನ್ನು ಪಡೆದಂತಹ ಜಾತಿಗಳ-ಧರ್ಮಗಳ ಹೆಣ್ಣುಮಕ್ಕಳು 'ಉಳ್ಳವರ' ಕಾಮುಕತೆಗೆ ಉದಿರುಹೋಗುವ ಸುದ್ದಿಗಳು ಪತ್ರಿಕೆಗಳಲ್ಲಿ ಬಂದರೂ ಭಾರತಕ್ಕೆ ಮುಖ್ಯವೆನಿಸುವುದೇ ಇಲ್ಲ.

ಹಳ್ಳಿಗಳಲ್ಲಿನ ಜಮೀನ್ದಾರರ ಲೈಂಗಿಕ ಕ್ರೌರ್ಯಕ್ಕೆ ಬಲಿಯಾಗುವ ನತದೃಷ್ಟ ಹೆಣ್ಣುಮಕ್ಕಳ ಸಂಖ್ಯೆ ಸಾವಿರಾರು ಸಂಖ್ಯೆಯಲ್ಲಿದ್ದರೂ ಆ ಶೋಷಿತ ಕುಟುಂಬಗಳು ಠಾಣೆಯ ಮೆಟ್ಟಿಲು ಹತ್ತಲಾರವು... ಇಂಥವರ ಬಳಿಗೆ ಯಾವ ದೃಶ್ಯಮಾಧ್ಯಮಗಳು ಅಕ್ಷರ ಮಾಧ್ಯಮಗಳು ಚಲಿಸಲಾರವು. ಅಂತಹ ನಲುಗಿದ ಹೆಣ್ಣುಜೀವಗಳು.... ಕುಂವೀ, ದೇವನೂರು, ಬಿ. ಕೃಷ್ಣಪ್ಪ ಬರಗೂರು, ಲಂಕೇಶ್, ಚಂಪಾ, ಮೊಗಳ್ಳಿ, ತೇಜಸ್ವಿ, ಚದುರಂಗ, ಲಲಿತಾ ನಾಯಕ್‌ರಂಥವರ ಕೃತಿಗಳಲ್ಲಿ ಕತೆಯಾಗಿ ಪದ್ಯವಾಗಿ ಆಕಾರ ಪಡೆಯಬಲ್ಲರು. ಶ್ರೇಣೀಕೃತ ವಿಕೃತ ಜಾತಿವ್ಯವಸ್ಥೆಯಂತೆ ಅತ್ಯಾಚಾರಕ್ಕೆ ಒಳಗಾದ ಹೆಣ್ಣಿನ ಜಾತಿ ಶ್ರೇಷ್ಠತೆಯ ಮೇಲೆ ಪ್ರತಿಭಟನೆ: ಭಾರತ್ ಬಂದ್, ರಾಜ್ಯ ಬಂದ್, ಹೊಸ ವರ್ಷ ಬಂದ್ ನಡೆಯಬಲ್ಲದು.

- ಮೂರ್ನಾಡು ರಾಮಸ್ವಾಮಿ, ಮಡಿಕೇರಿ

ಲಂಕೇಶರ 'ನೀಲು ಕಾವ್ಯ' 1 ನ್ನು ಓದುತ್ತಿದ್ದೇನೆ. ನಗು ಉಕ್ಕಿಸುವ ಜೊತೆಗೆ ಚಿಂತನೆಗೆ ಹಚ್ಚುವ ಬರಹಗಳು.

ಲಂಕೇಶ್ ಹೆಸರೇ ಹೇಳುವಂತೆ ಅವರೊಬ್ಬ ವಿಶಿಷ್ಟ ವಿಸ್ಮಯ ಲೇಖಕ. ತಮ್ಮ ಜೀವಿತಾವಧಿಯಲ್ಲಿ ಅನಿಸಿದ್ದನ್ನು ಸರಳವಾಗಿ ಹೇಳಿದರು.

ಅಲ್ಲಾಸ್ 'ನುಡಿಸಿರಿ' ಬಗೆಗಿನ ಡಾ. ಅನುಪಮಾ ಅವರ ನಿಲುವುಗಳು ಸರಿ ಇಲ್ಲ ಎಂಬುದು ನಮ್ಮ ಅನಿಸಿಕೆ.

ಸಾಹಿತ್ಯ ಪರಿಷತ್ತಿನ ಆಧ್ವಾನದ ಸಮ್ಮೇಳನಗಳನ್ನು ನೋಡಿದ್ದೇವೆ. ಪ್ರೈಕಮಾಂಡ್ ರೀತಿ ಕಾರ್ಯ ನಿರ್ವಹಿಸುವ ಮೋಹನ್ ಆಳ್ವರ ಸಂಘಟನೆಯ ರೀತಿ ಇಂದು ಬೇಕಾಗಿದೆ. ಇಲ್ಲದಿದ್ದಲ್ಲಿ ಶಿಸ್ತು ಬರುವುದಿಲ್ಲ.

- ಗುರು ಜಗಳೂರು, ಹರಿಹರ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 16-01-2013 RNI No. KARKAN2005/14648

ಮಕ್ಕಳ ಸಿನಿಮಾ ನಂಜುಂಡೇಗೌಡರ ಪರದಾಟ



ಚಲನಚಿತ್ರ ಅಕಾಡೆಮಿ ಮತ್ತು ನಂಜುಂಡೇಗೌಡರ ಅಧ್ಯಕ್ಷತೆಯ ಚಿಲ್ಡ್ರನ್ಸ್ ಸಿನಿಮಾ ನಡುವೆ ತೀವ್ರತರವಾದ ಭಿನ್ನಾಭಿಪ್ರಾಯವಾದ ಶುರುವಾಗಿದೆ. ವಿಷಯ ಇಷ್ಟೇ: ಬರುವ ಜನವರಿ 9ರಿಂದ ಆರಂಭವಾಗಲಿರುವ ಮಕ್ಕಳ ಚಿತ್ರೋತ್ಸವಕ್ಕೆ ಸರಕಾರದಿಂದ 50 ಲಕ್ಷ ರೂಪಾಯಿ ಅನುದಾನ ಬಿಡುಗಡೆಯಾಗಿದೆ. ನಿಯಮದಂತೆ ಈ ಹಣವನ್ನು ಸರಕಾರದ ವಾರ್ತಾ ಇಲಾಖೆ ಚಲನಚಿತ್ರ ಅಕಾಡೆಮಿಗೆ ಕಳುಹಿಸಿಕೊಟ್ಟಿದೆ.

ಆದರೆ ತಾನು ಮೊನ್ನೆ ಅಂತ್ಯಗೊಂಡ ಚಿತ್ರೋತ್ಸವದಲ್ಲಿ ಬ್ಯುಸಿಯಾಗಿದ್ದೇನೆ ಎಂದು ನೆಪ ಒಡ್ಡಿ ಹಣ ಬಿಡುಗಡೆ ಮಾಡದಿದ್ದ ಅಕಾಡೆಮಿ ಅಧ್ಯಕ್ಷೆ ತಾರಾ ಈಗ ತನ್ನ ಪತಿ ವೇಣು ಜೊತೆ ವಿದೇಶಕ್ಕೆ ಹಾರಿಹೋಗಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ನೋಡಿ ನಂಜುಂಡೇಗೌಡರಿಗೆ ದಿಗಿಲಾಗಿದೆ. "ತಾರಾ ವಿಶ್ರಾಂತಿ ಪಡೆದು ಬರುವಷ್ಟರಲ್ಲಿ ತಡವಾಗುತ್ತದೆ. ಅಷ್ಟೇ ಅಲ್ಲ, ಸರಿಯಾದ ಸಮಯಕ್ಕೆ ಹಣ ಬಿಡುಗಡೆಯಾಗದಿದ್ದರೆ ಮಕ್ಕಳ ಚಿತ್ರೋತ್ಸವವನ್ನು ನಡೆಸಲು ಸಾಧ್ಯವಿಲ್ಲ" ಎಂದು ನಂಜುಂಡೇಗೌಡರು ಆತಂಕಗೊಂಡಿದ್ದಾರೆ.

"ಕಳೆದ ವರ್ಷ ಅಕಾಡೆಮಿಯ ಅಧ್ಯಕ್ಷರಾಗಿದ್ದ ನಾಗಾಭರಣ ಕೂಡಾ ಹೀಗೆ ಮಾಡಿದ್ದರು. ಆದರೂ ಸರಕಾರದ ಹಣಕ್ಕೆ ಕಾದು ಕೂರದೇ ನಾನು ಚಿತ್ರೋತ್ಸವವನ್ನು ನಿಗದಿತ ಸಮಯದಲ್ಲೇ ಮಾಡಿ ಮುಗಿಸಿದೆ. ಇದರಿಂದಾಗಿ ನನಗೆ ಆರ್ಥಿಕವಾಗಿ ಬಹಳ ದೊಡ್ಡ ನಷ್ಟವಾಗಿತ್ತು. ಈ ವರ್ಷವೂ ಹಾಗೆ ಆದರೆ ತುಂಬಾ ಬೇಸರವಾಗುತ್ತದೆ" ಎಂದು ಗೌಡರು ಕಣ್ಣೀರಿಡುತ್ತಿದ್ದಾರೆ. ಈ ಕುರಿತು ಉದ್ಯಮದ ಗಣ್ಯರಾದ ಸಾ.ರಾ.ಗೋವಿಂದು, ಕೆ.ಸಿ.ಎನ್.ಚಂದ್ರಶೇಖರ್, ಮುರಳಿಧರ್ ಹಾಲಪ್ಪ, ಉಮೇಶ್ ಬಣಕಾರ್, ಚೇಂಬರ್ ಕಾರ್ಯದರ್ಶಿ ಕೆ.ಗಣೇಶ್ ಸೇರಿದಂತೆ ಅನೇಕರು ಈಗ ತಾರಾ ವಿರುದ್ಧ ತಿರುಗಿಬಿದ್ದಿದ್ದಾರೆ. ಅಷ್ಟೇ ಅಲ್ಲ, ಸರಕಾರ ಬಿಡುಗಡೆ ಮಾಡಿರುವ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಮೊನ್ನೆ ಪತ್ರಿಕಾಗೋಷ್ಠಿಯಲ್ಲಿ ತಾರಾಗೆ ಆಗ್ರಹಿಸಿದ್ದಾರೆ.

ಕಳೆದ ಎಂಟು ವರ್ಷಗಳಿಂದ ನಂಜುಂಡೇಗೌಡರು ಮಕ್ಕಳ ಚಿತ್ರೋತ್ಸವವನ್ನು ಯಶಸ್ವಿಯಾಗಿ ನಡೆಸುತ್ತಾ ಬಂದಿದ್ದಾರೆ. ರಾಜಧಾನಿ ಬೆಂಗಳೂರಿನಲ್ಲಿ ಮಾತ್ರವಲ್ಲ, ರಾಜ್ಯದ ಕೆಲವು ಜಿಲ್ಲಾ ಕೇಂದ್ರಗಳಲ್ಲೂ ಇದನ್ನು ನಡೆಸಿರುವುದು ಗಮನಾರ್ಹ. ಆದರೆ ನಂಜುಂಡೇಗೌಡರು ಇದನ್ನು ತಮ್ಮ ಸ್ವಂತ ಸಂಸ್ಥೆಯ ತರಹ ನಡೆಸುತ್ತಿದ್ದಾರೆ ಎಂಬುದು ಅವರ ವಿರುದ್ಧ ವ್ಯಕ್ತವಾಗಿರುವ ಆರೋಪ.


ಇದೀಗ ಬಂದ ಸುದ್ದಿಯ ಪ್ರಕಾರ ತಾರಾ ತಮ್ಮ ವಿಶ್ರಾಂತಿ ಕಾರ್ಯಕ್ರಮವನ್ನು ಮೊಟಕು ಗೊಳಿಸಿ ವಿದೇಶದಿಂದ ವಾಪಸಾಗಿದ್ದಾರಂತೆ. ಅವರು ತಕ್ಷಣವೇ ಮಕ್ಕಳ ಚಿತ್ರೋತ್ಸವಕ್ಕೆ ಹಣ ಬಿಡುಗಡೆ ಮಾಡುತ್ತಾರೋ ಅಥವಾ ಸಮರಕ್ಕೆ ನಿಲ್ಲುತ್ತಾರೋ ಕಾದು ನೋಡಬೇಕಿದೆ.



ಮಂಗನ ಕೈಯಲ್ಲಿ ಮಾಣಿಕ್ಯ

ರಮೇಶ್ ಅರವಿಂದ್ ಹರ್ಷಿಕಾ ಪೂಣಚ್ಚ

ನಂದೀಶನ ಮೀಸೆ ಮಣ್ಣಾಗಲಿಲ್ಲ!



ಕೋಮಲ್ ಅಭಿನಯದ 'ಗೋವಿಂದಾಯ ನಮಃ' ಚಿತ್ರ ಹೇಗೆ ಬಾಕ್ಸ್ ಆಫೀಸ್‌ನಲ್ಲಿ ಜಯಭೇರಿ ಭಾರಿಸಿತ್ತೋ ಹಾಗೆಯೇ ಕಳೆದ ವಾರ ಬಿಡುಗಡೆಯಾದ ಕೋಮಲ್ ಅವರೇ ನಟಿಸಿ-ನಿರ್ಮಿಸಿರುವ 'ನಂದೀಶ' ಚಿತ್ರ ಕೂಡ ಮಾರುಕಟ್ಟೆಯಲ್ಲಿ ಜಯಭೇರಿ ಭಾರಿಸುತ್ತದೆ ಎಂದು ಭವಿಷ್ಯ ನುಡಿದವರೆಲ್ಲ ಈಗ ದಂಗಾಗಿಬಿಟ್ಟಿದ್ದಾರೆ. ಏಕೆಂದರೆ ಈ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಮೊದಲ ವಾರವೇ ಮುಗ್ಗರಿಸಿದೆ.

ಈ ಚಿತ್ರ ಮುಗ್ಗರಿಸಿದ್ದಕ್ಕೆ ಉದ್ಯಮದಲ್ಲಿ ಮಿಶ್ರ ಪ್ರತಿಕ್ರಿಯೆ ದೊರೆತಿದೆ. ಒಂದೆಡೆ ಈ ಚಿತ್ರವನ್ನು ಖರೀದಿಸಿದವರೆಲ್ಲ ಕೈಸುಟ್ಟುಕೊಂಡು ಕುಳಿತುಕೊಂಡಿದ್ದರೆ, ಇನ್ನೊಂದೆಡೆ ಕೋಮಲ್ ಕಾಲ್‌ಶೀಟ್‌ಗಾಗಿ ಕಾಯುತ್ತಾ ಕುಳಿತಿದ್ದವರೆಲ್ಲಾ ಸಂತೋಷಪಡುತ್ತಿದ್ದಾರೆ. ಏಕೆಂದರೆ 'ಗೋವಿಂದಾಯನಮಃ' ಚಿತ್ರ ಗೆದ್ದ ತಕ್ಷಣ ಕೋಮಲ್ ತನ್ನ ಸಂಭಾವನೆಯನ್ನು ಒಂದು ಕೋಟಿ ರೂಪಾಯಿಗೆ ಏರಿಸಿದ್ದರು. 'ಗೋವಿಂದಾಯನಮಃ' ಚಿತ್ರದ ಬೆನ್ನಿಗೆ ಬಂದಿರುವ 'ನಂದೀಶ' ಚಿತ್ರ ಕೂಡ ಗೆದ್ದಿದ್ದರೆ ಕೋಮಲ್ ತನ್ನ ಸಂಭಾವನೆಯನ್ನು ಮತ್ತಷ್ಟು ಏರಿಸುವ ಸಾಧ್ಯತೆಯ ಮಾತು ಕೇಳಿಬರುತ್ತಿತ್ತು. ಹೀಗಾಗಿ 'ನಂದೀಶ' ಸೋತಿರುವುದರಿಂದ ಕೋಮಲ್ ತನ್ನ ಸಂಭಾವನೆಯನ್ನು ಇಳಿಸಬಹುದು ಎಂಬ ನಿರೀಕ್ಷೆಯಲ್ಲಿ ನಿರ್ಮಾಪಕರಿದ್ದಾರೆ.

ಆದರೆ ಈಗಾಗಲೇ ತನ್ನ ಸ್ವಂತ ನಿರ್ಮಾಣದಲ್ಲಿ ಚಿತ್ರ ಮಾಡುತ್ತಾ ತನ್ನ ತಾರಾ ವರ್ಚಸ್ಸನ್ನು ಮತ್ತು ಸಂಭಾವನೆಯನ್ನು ನಿಧಾನವಾಗಿ ಏರಿಸುತ್ತಿರುವ ಕೋಮಲ್ ಈ ಸೋಲಿನಿಂದ ಯಾವುದೇ ರೀತಿಯಲ್ಲಿ ಧೃತಿಗೆಟ್ಟಿಲ್ಲ. ಅಷ್ಟೇ ಅಲ್ಲ, ತನ್ನ ಹೀರೋ ಸ್ಥಾನಕ್ಕೆ ರಾಜೀನಾಮೆ ನೀಡಿ ಮತ್ತೆ ಹಾಸ್ಯನಟನಾಗಿ ಕಾಣಿಸಿಕೊಳ್ಳಬಹುದೆಂಬ ಉದ್ಯಮದವರ ಆಸೆಗೂ ಕೋಮಲ್ ತಣ್ಣೀರೆರಚಿದ್ದಾರೆ. ಏಕೆಂದರೆ ಕೋಮಲ್ ಕೈಯಲ್ಲಿ ಈಗಾಗಲೇ ನಾಲ್ಕು ಹೊಸ ಚಿತ್ರಗಳಿವೆ. ಹಾಗೆಯೇ ಕೋಮಲ್ ಕಾಲ್‌ಶೀಟ್‌ಗಾಗಿ ಕನಿಷ್ಠವೆಂದರೂ ಅರ್ಧ ಡಜನ್ ನಿರ್ಮಾಪಕರು ಕಾಯುತ್ತಲೇ ಇದ್ದಾರೆ. ಹೀಗೆ 'ನಂದೀಶ' ಸೋತರೂ ಕೋಮಲ್ ಮಾತ್ರ ಗಾಂಧಿನಗರದ ನಿರ್ಮಾಪಕರ ಪಾಲಿಗೆ ಕೈಗೆಟುಕದಂತಾಗಿದ್ದಾರೆ.

ನಮ್ಮಲ್ಲಿ ಅದು ಯಾಕೆ ಸಾಧ್ಯವಾಗುತ್ತಿಲ್ಲ?

ಮೊನ್ನೆ ಮೊನ್ನೆಯಷ್ಟೇ ಎಲ್ಲ ನಿರ್ಮಾಪಕರಿಗೆ ಇನ್ಶೂರೆನ್ಸ್ ಮಾಡಿಸುವ ಮೂಲಕ ಎಲ್ಲರಿಂದ ಭೇಷ್ ಎನಿಸಿಕೊಂಡಿರುವ ನಿರ್ಮಾಪಕರ ಸಂಘದ ಅಧ್ಯಕ್ಷರಾದ ಮುನಿರತ್ನಂ ನಾಯ್ಡು ಮತ್ತು ಪ್ರಧಾನ ಕಾರ್ಯದರ್ಶಿ ಸೂರಪ್ಪ ಬಾಬು ಮತ್ತೊಂದು ಹೊಸ ಸಾಹಸಕ್ಕೆ ಕೈಹಾಕುತ್ತಿದ್ದಾರೆ.

ನಿರ್ಮಾಪಕರ ಸಂಘವೇ ಒಂದು ಚಿತ್ರವನ್ನು ಏಕೆ ನಿರ್ಮಿಸಬಾರದು ಎಂಬುದು ಈ ನಿರ್ಮಾಪಕರ ಯೋಜನೆ. ಅಂತಹ ಸಿನಿಮಾದಲ್ಲಿ ಕನ್ನಡ ಚಿತ್ರರಂಗದ ಎಲ್ಲಾ ಕಲಾವಿದರೂ ನಟಿಸಬೇಕು, ಅದು ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನು ಸೃಷ್ಟಿಸಬೇಕು ಎಂಬುದು ಇವರಿಬ್ಬರ ಕನಸು. ಈ ಕನಸಿನ ಬೆನ್ನು ಹತ್ತಿರುವ ಇವರಿಬ್ಬರು ಈ ಕುರಿತು ಮೊದಲ ಸುತ್ತಿನ ಮಾತುಕತೆಯನ್ನು ವಜ್ರೇಶ್ವರಿ ಕಂಬೈನ್ಸ್‌ನ ರಾಘವೇಂದ್ರ ರಾಜ್‌ಕುಮಾರ್ ಜೊತೆ ಮಾಡಿದ್ದಾರೆ. ಹಾಗೆಯೇ ಚಿತ್ರರಂಗದ ಸದ್ಯದ ಗೆಲ್ಲುವ ಕುದುರೆ ಎನಿಸಿರುವ ಸುದೀಪ್ ತಂಡದ ಜೊತೆಗೂ ಒಂದು ಸುತ್ತಿನ ಮಾತುಕತೆಯನ್ನು ಮುಗಿಸಿದ್ದಾರಂತೆ. ಆದರೆ ಇವರಿಬ್ಬರೂ ನಿರ್ಮಾಪಕರ ಸಂಘದ ಈ ಹೊಸ ಯೋಜನೆಗೆ ಯಾವ ರೀತಿ ಸ್ಪಂದಿಸಿದ್ದಾರೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ನೆರೆಯ ಮಲಯಾಳಂ ಚಿತ್ರರಂಗದಲ್ಲಿ ಎಲ್ಲಾ ಕಲಾವಿದರೂ ಒಂದೇ ಚಿತ್ರದಲ್ಲಿ ನಟಿಸುವಂತಾಗುವುದಾದರೆ ನಮ್ಮಲ್ಲಿ ಅದು ಯಾಕೆ ಸಾಧ್ಯವಾಗುತ್ತಿಲ್ಲ? ಎಂದು ಮುನಿರತ್ನಂ ಆಶ್ಚರ್ಯ ವ್ಯಕ್ತಪಡಿಸುತ್ತಿದ್ದಾರೆ. ಈ ತರಹ ಒಂದೇ ಚಿತ್ರದಲ್ಲಿ ಎಲ್ಲರೂ ನಟಿಸುವುದರಿಂದ ಕನ್ನಡ ಚಿತ್ರರಂಗದ ಒಗ್ಗಟ್ಟನ್ನು ನಾವು ಇತರರಿಗೆ ತೋರಿಸಿದಂತಾಗುತ್ತದೆ ಮತ್ತು ಬಾಕ್ಸ್ ಆಫೀಸ್‌ನಲ್ಲಿ ಒಂದು ಹೊಸ ಅಧ್ಯಾಯವನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ ಎಂಬುದು ನಿರ್ಮಾಪಕರ ಸಂಘದ ಕಾರ್ಯದರ್ಶಿ ಸೂರಪ್ಪಬಾಬುರವರ ಆಶಯ. ನಿಮಗಿದು ಗೊತ್ತಿರಬೇಕು. ಚಿತ್ರರಂಗ 60 ವರ್ಷಕ್ಕೆ



ಕಾಲಿಟ್ಟಾಗ ಈ ತರಹ ಒಂದು ಚಿತ್ರ ಮಾಡಬೇಕೆಂಬ ಮಾತು ಅಲ್ಲಿ ಇಲ್ಲಿ ಕೇಳಿಬಂದಿತ್ತು. ಅದರ ನಿರ್ದೇಶನದ ಜವಾಬ್ದಾರಿಯನ್ನು ಕ್ರೇಜಿಸ್ಟಾರ್ ರವಿಚಂದ್ರನ್‌ರವರಿಗೆ ನೀಡಿದ್ದರು. ಅವರು ಚಿತ್ರದ ಕಥೆ ಮತ್ತು ಚಿತ್ರಕಥೆಯ ಬಗ್ಗೆ ಸಾಕಷ್ಟು ತಲೆ ಕೆಡಿಸಿಕೊಂಡು ಕೆಲಸ ಮಾಡಿದ್ದರು. ಕೊನೆಗೆ ಎಲ್ಲ ಕಲಾವಿದರನ್ನು ಒಂದೆಡೆ ಸೇರಿಸುವುದು ಅತ್ಯಂತ ಕಷ್ಟದ ಕೆಲಸ ಎಂದು ಅವರು ನಿಧಾನವಾಗಿ ಆ ಯೋಜನೆಯಿಂದ ಹಿಂದೆ ಸರಿದಿದ್ದರು.

ಈಗ ಮತ್ತೆ ಅಂತಹ ಒಂದು ಅಪರೂಪದ ಸಾಧನೆಗೆ ನಿರ್ಮಾಪಕರ ಸಂಘ ಮುಂದೆ ಬಂದಿರುವುದು ಸಂತೋಷದ ವಿಷಯ. ಆದರೆ ಕಲಾವಿದರು ಈ ವಿಷಯದಲ್ಲಿ ಹೇಳುವುದೇ ಬೇರೆ. ಎಲ್ಲರನ್ನೂ ಸೇರಿಸಿ ಅವರವರ ಇಮೇಜ್‌ಗೆ ತಕ್ಕಂತೆ ಕಥೆ ಮಾಡುವುದು ಕಷ್ಟದ ಕೆಲಸ. ಅದರ ಬದಲಿಗೆ ಯಾವುದಾದರೂ ಒಂದು ಸ್ಥಳದಲ್ಲಿ ಎಲ್ಲರೂ ಸೇರಿ ಒಂದು ರಸಮಂಜರಿ ಕಾರ್ಯಕ್ರಮ ನೀಡಬಹುದು ಎಂಬ ಒಲವನ್ನು ವ್ಯಕ್ತಪಡಿಸುತ್ತಿದ್ದಾರೆ. ಅದೇನೇ ಇರಲಿ, ಕನ್ನಡ ಚಿತ್ರರಂಗದ ಎಲ್ಲ ಕಲಾವಿದರನ್ನು ನಿರ್ಮಾಪಕ ಸಂಘದವರು ಒಂದೇ ವೇದಿಕೆಯಲ್ಲಿ ಸೇರಿಸಲು ಹೊರಟಿರುವುದೇ 2013ರ ಒಂದು ಶುಭ ಸುದ್ದಿ.

● ಶೆಣೈ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmai